₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 24.08.2025 ಸಂಪುಟ: 10 ಸಂಚಿಕೆ: 222 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ವಿಶ್ವ ಕುಸ್ತಿ: ಕಾಜಲ್‌ಗೆ ಚಿನ್ನ

ಬಲ್ಗೇರಿಯಾದ ಸಮೋಕೋವ್‌ನಲ್ಲಿ ನಡೆದ ಅಂಡರ್-20 ವಿಶ್ವ ಕುಸ್ತಿ ಚಾಂಪಿಯನ್‌ಶಿಪ್‌ನ 72 ಕೆ.ಜಿ ವಿಭಾಗದಲ್ಲಿ ಭಾರತದ 17ನೇ ವಯಸ್ಸಿನ ಕಾಜಲ್‌ನ ದೋಚಕ್, ಚೀನಾದ ಲಿಯು ಯುಕಿ ಅವರನ್ನು 8-6 ಅಂತರದಿಂದ ಸೋಲಿಸುವ ಮೂಲಕ ಚಿನ್ನದ ಪದಕ ಗೆದ್ದು, ಭಾರತಕ್ಕೆ ಕೀರ್ತಿ ತಂದಿದ್ದಾರೆ.

ಸೊಂಪಾದ ಪುಟಗಳು

ರಾಜನೇ ಅರಸೊತ್ತಿಗೆ ಕಿತ್ತೊಗೆದು ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ!

ಇದೇ ಅಂತರಂಗ ಸುದ್ದಿ ವಿಶ್ವೇಶ್ವರ ಭಟ್ 6



ಆತ್ಮಗೌರವವನ್ನೇ ಬಲಿಕೊಟ್ಟಮೇಲೆ, ಬದುಕಿದ್ದೂ ಸತ್ತಂತೆ

ವಿದ್ಯಮಾನ ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಸಮಯದ ಸದುಪಯೋಗ ಮಾಡಿಕೊಳ್ಳಬೇಕು ಎಂಬುದನ್ನು ಜೀವನ ನಮಗೆ ಕಲಿಸಿದರೆ, ಜೀವನದ ಮೌಲ್ಯದ ಮಹತ್ವವನ್ನು ಸಮಯವು ನಮಗೆ ಕಲಿಸುತ್ತದೆ. ಜೀವನ ಮತ್ತು ಸಮಯದ ಮಹತ್ವವನ್ನು ಅರ್ಥ ಮಾಡಿಕೊಂಡರೆ ಬದುಕು ನೆಮ್ಮದಿಯಾಗಿರುವುದರಲ್ಲಿ ಸಂದೇಹವಿಲ್ಲ.

ವಕ್ರತುಂಡೋಕ್ತಿ



ಪ್ಲಾನ್ ಬಿ ಇಲ್ಲದೇ ಯಾರು ಹೋರಾಡುತ್ತಾರೋ, ಅದು ಉತ್ತಮ ಹೋರಾಟ ಎನ್ನಬಹುದು.

ಹಳೆಯ ವಾಹನ ನೋಂದಣಿ ದುಬಾರಿ

ಬೆಂಗಳೂರು: ಕೇಂದ್ರ ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯವು 20 ವರ್ಷಕ್ಕೂ ಹಳೆಯದಾದ ವಾಹನಗಳ ನೋಂದಣಿ, ನವೀಕರಣ ಶುಲ್ಕವನ್ನು ದುಪ್ಪಟ್ಟುಗೊಳಿಸಿ ಆದೇಶ ಹೊರಡಿಸಿದೆ. ಕೇಂದ್ರ ಸರಕಾರದ ಹೊಸ ಆದೇಶದ ಪ್ರಕಾರ, ಲಘು ಮೋಟಾರು ವಾಹನಗಳ (ಎಲ್‌ಎಂ ವಿ) ನೋಂದಣಿ ನವೀಕರಣ ಶುಲ್ಕವನ್ನು 5 ಸಾವಿರ ರು.ನಿಂದ 10 ಸಾವಿರ ರುಗೆ ಹೆಚ್ಚಿಸಲಾಗಿದೆ. ಪರಿಸರ ಮಾಲಿನ್ಯ, ವಿದ್ಯುತ್ ಚಾಲಿತ ವಾಹನಗಳ ಪ್ರಮಾಣವನ್ನು ಹೆಚ್ಚಿಸುವ ದಿಸೆಯಲ್ಲಿ ಬೆಲೆಯನ್ನು ಏರಿಕೆ ಮಾಡಲಾಗಿದೆ.

ಸೆರ್ಗಿಯೊ ಗೋರ್ ಹೊಸ ರಾಯಭಾರಿ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಆಪ್ತ ರಾಜಕೀಯ ಸಹಾಯಕ ಮತ್ತು ಶ್ವೇತಭವನ ಸಿಬ್ಬಂದಿ ವಿಭಾಗ ನಿರ್ದೇಶಕ ಸೆರ್ಗಿಯೊ ಗೋರ್ ಅವರನ್ನು ಭಾರತಕ್ಕೆ ಹೊಸ ರಾಯಭಾರಿಯಾಗಿ ನೇಮಕ ಮಾಡಿ ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಜತೆಗೆ ಗೋರ್, ದಕ್ಷಿಣ ಮತ್ತು ಮಧ್ಯ ಏಷ್ಯಾ ವಲಯಕ್ಕೆ ಅಮೆರಿಕದ ವಿಶೇಷ ಪ್ರತಿನಿಧಿಯಾಗಿಯೂ ಜವಾಬ್ದಾರಿ ನಿರ್ವಹಿಸಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಹೆಚ್ಚಿನ ಪ್ರಮಾಣದ ಪ್ರತಿಸುಂಕ ಹೇರಿಕೆ ಕಾರಣದಿಂದಾಗಿ ಭಾರತ-ಅಮೆರಿಕ ಸಂಬಂಧ ಹದಗೆಟ್ಟಿರುವ ನಡುವೆ ಅಮೆರಿಕ ಹೊಸ ರಾಯಭಾರಿಯನ್ನು ನೇಮಕ ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಕ್ಷಣ ಕ್ಷಣಕ್ಕೂ ಟ್ವಿಸ್ಟ್, ಸುಜಾತಾ ಭಟ್ ಕಟ್ಟು ಕಥೆ ವಿವಾದ

ಸುದ್ದಿ



ಬುರುಡೆ ಬಿಟ್ಟ ಚಿನ್ನಯ್ಯ ಬಂಧನ, 10 ದಿನ ಎಸ್‌ಐಟಿ ವಶಕ್ಕೆ | ಬುರುಡೆ ಭೀಮನ ಬೆಂಗಾವಲು ಪಡೆಗೂ ಬಂಧನ ಭೀತಿ

ಸತ್ಯ ಹೊರಬಂದಿದೆ ಎಂದ ಹೆಗ್ಗಡೆ; ಧರ್ಮಸ್ಥಳದಲ್ಲಿ ಸಂಭ್ರಮ

ಮುಸುಕು ಕಳಚಿದ ಮಾಸ್ಕ್‌ಮ್ಯಾನ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಮಂಗಳೂರು

ರಾಷ್ಟ್ರಮಟ್ಟದಲ್ಲಿ ಭಾರಿ ಸದ್ದು ಮಾಡಿದ್ದ 'ಮಾಸ್ಕ್ ಮ್ಯಾನ್' ಬುರುಡೆ ಪ್ರಕರಣದ 'ಅಸಲಿಯತ್ತು' ಬಹಿರಂಗವಾಗಿದೆ. ನೂರಾರು ಶವಗಳನ್ನು ಹೂತ್ತಿಟ್ಟಿದ್ದೇನೆ ಎನ್ನುವ ಮೂಲಕ ಇಡೀ ವ್ಯವಸ್ಥೆ ದಿಕ್ಕು ತಪ್ಪಿಸಿದ್ದ ಮಾಸ್ಕ್ ಮ್ಯಾನ್ 'ಮುಸುಕು' ಕಳಚಿ, ಇದೀಗ ಎಸ್‌ಐಟಿ ವಶದಲ್ಲಿ ಕಂಬಿ ಎಣಿಸುತ್ತಿದ್ದಾರೆ. ಬಂಧಿತ ಈ ಹಿಂದೆ ಧರ್ಮಸ್ಥಳದಲ್ಲಿ ಸ್ವಚ್ಛತಾ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ಮಂಡ್ಯ ಮೂಲದ ಸಿ.ಎನ್ ಚಿನ್ನಯ್ಯ ಅಲಿಯಾಸ್ ಚಿನ್ನಪ್ಪ ಆಲಿಯಾಸ್ ಚೆನ್ನಯ್ಯ ಎಂದು ಅಧಿಕಾರಿಗಳು ಬಹಿರಂಗಪಡಿಸಿದ್ದಾರೆ. ಈತನ ಅಣ್ಣ ತಾನಾಸಿಯನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕಳೆದೊಂದು ತಿಂಗಳಿನಿಂದ ಭಾರಿ ಕುತೂಹಲಕ್ಕೆ ಕಾರಣವಾಗಿದ್ದ, ಮಾಸ್ಕ್ ಮ್ಯಾನ್ ವಿರುದ್ಧ ದೂರು ದಾಖಲಿಸಿಕೊಂಡಿರುವ ಎಸ್‌ಐಟಿ ಶನಿವಾರ ಆತನನ್ನು ವಶಕ್ಕೆ ಪಡೆದಿದೆ. ಆತನ ಹೇಳಿದ ಕಡೆಯಲ್ಲ ಗುಂಡಿ ಅಗೆದಿದ್ದ ಎಸ್‌ಐಟಿ ಆತನನ್ನೇ ವಿಚಾರಣೆಗೆ ಒಳಪಡಿಸಿದಾಗ, ಹೇಳಿಕೆಯಲ್ಲಿಯೇ ಹಲವು ಗೊಂದಲಗಳಿದ್ದವು. ದೂರು ನೀಡಿದ ವೇಳೆ ಮುಸುಕುದಾರಿ ತಲೆಬುರುಡೆಯೊಂದನ್ನು ನೀಡಿದ್ದನು. ಆ ತಲೆ ಬುರುಡೆ ಎಲ್ಲಿಂದ ತಂದಿದ್ದು, ಬುರುಡೆ ತೆಗೆದ ಸ್ಥಳದಲ್ಲಿ ನಿನ್ನ ಜೊತೆ ಇದ್ದವರು ಯಾರು, ಬುರುಡೆ ಎತ್ತಿದವರು ಯಾರು, ಸಮಾಧಿಯೊಳಗಿಂದ ನೀನು ಬುರುಡೆ ಅಗೆದು ತಂದಿರುವೆಯಾ, ಕಾಡಿನೊಳಗಿಂದ ಬುರುಡೆ ಎತ್ತಿದ ವಿಡಿಯೊದಲ್ಲಿ ಇರುವವರು ಯಾರು, ಕಾಡಿನ ಒಳಗೆ ಬುರುಡೆ ಸಿಕ್ಕಿದ್ದರೆ ಅದು ಅಸಹಜ ಸಾವಿನ ಪ್ರಕರಣವೋ ಅಥವಾ ಸಮಾಧಿಯಿಂದ ಬುರುಡೆ ಆಗೆದು ತಂದಿರುವಿರಾ, ನಿನ್ನ ಜೊತೆ ಕೈ ಜೋಡಿಸಿದವರು ಯಾರು ಎಂಬಿತ್ಯಾದಿ ಪ್ರಶ್ನೆಗಳನ್ನು ಹೇಳಿದಾಗ, ಸರಿಯಾದ ಉತ್ತರ ನೀಡಿಲ್ಲ. ಆದ್ದರಿಂದ ಆತನನ್ನು ಬಂಧಿಸಲಾಗಿದೆ.

ಶನಿವಾರ ಬೆಳಗ್ಗೆ ಆತನನ್ನು ಬಂಧಿಸಿದ ಬಳಿಕ ತಾಲೂಕು ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ನಡೆಸಿ, ಬಳಿಕ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಈ ವೇಳೆ 10 ದಿನ ಎಸ್‌ಐಟಿ ಕಸ್ಟಡಿಗೆ ನೀಡಿ ನ್ಯಾಯಾಲಯ ಆದೇಶ ಹೊರಡಿಸಿದೆ. ಈ ಮೂಲಕ ಕಳೆದ ಎರಡು ತಿಂಗಳಿಂದ ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಕುಟುಂಬದ ವಿರುದ್ಧ ನಡೆಯುತ್ತಿದ್ದ 'ಆರೋಪ'ವೆಲ್ಲ ಸುಳ್ಳು ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ.

ಆಪ್ತರಿಗೆ ಶುರುವಾದ ಬಂಧನ ಭೀತಿ: ಬುರುಡೆ ಪ್ರಕರಣದಲ್ಲಿ ಬುರುಡೆ ಬಿಟ್ಟುಕೊಂಡು ಓಡಾಡುತ್ತಿದ್ದ ಚಿನ್ನಯ್ಯನ ಬಂಧನಕ್ಕೂ ಮೊದಲು ಆತನಿಗೆ ಬೆಂಬಲವಾಗಿದ್ದ ನಿಂತಿದ್ದ ಮಹೇಶ್ ತಿಮರೋಡಿ ಬಂಧನ, ಜಾಮೀನಿನಲ್ಲಿ ಹೊರಗಿರುವ ಸಮೀರ್, ಸುಜಾತ ಭಟ್‌ಗೆ ನೋಟಿಸ್ ನೀಡಿದ್ದರಿಂದ ಇವರ ಬೆಂಬಲ ನೀಡುತ್ತಿದ್ದ ಹಲವರಿಗೆ ಆತಂಕ ಶುರುವಾಗಿದೆ. ಎಸ್‌ಐಟಿ ಮೂಲಗಳ ಪ್ರಕಾರ, ಶೀಘ್ರದಲ್ಲಿಯೇ ಗಿರೀಶ್ ಮಟ್ಟಣ್ಣನವರ್‌ನನ್ನು ಪೊಲೀಸರು ಬಂಧಿಸುವ ಸಾಧ್ಯತೆಯಿದೆ. ಆದ್ದರಿಂದ ಇದೀಗ ಅನೇಕರು, ಈ ಗ್ಯಾಂಗ್‌ನಿಂದ ಅಂತರ ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದರೊಂದಿಗೆ ಧರ್ಮಸ್ಥಳ ವಿರೋಧಿಸಿ, ಮಾಸ್ಕ್‌ಮ್ಯಾನ್ ಪರವಾಗಿ ಸಾಮಾಜಿಕ ಜಾಲತಾಣದಲ್ಲಿ ಮಾತನಾಡಿದ್ದ ಅನೇಕರು, ಪೋಸ್ಟ್‌ಗಳನ್ನು ಡಿಲಿಟ್ ಮಾಡುತ್ತಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಬೆಂಗಾವಲು ತಂಡಕ್ಕೆ ಬಂಧನ ಭೀತಿ: ಧರ್ಮಸ್ಥಳ ವಿರುದ್ಧ ಮಾಡಿದ್ದ ಸರಣಿ ಆರೋಪದಲ್ಲಿ ಹುರುಳಿಲ್ಲವೆಂದು ಚಿನ್ನಯ್ಯನನ್ನು ಬಂಧಿಸಿದ ಬೆನ್ನಲ್ಲೇ, ಈತನಿಗೆ ಸಹಾಯ ಮಾಡಿದ್ದ ತಂಡದಲ್ಲಿಯೇ ಭಿನ್ನಾಭಿಪ್ರಾಯ ಶುರುವಾಗಿದೆ. ಅದರಲ್ಲಿಯೂ ಅನನ್ಯ ಭಟ್ ತಾಯಿ ಎಂದು ಹೇಳಿಕೊಂಡಿದ್ದ ಸುಜತಾ ಭಟ್ ದಿನಕ್ಕೊಂದು ಹೇಳಿಕೆ ನೀಡುತ್ತಿರುವುದರಿಂದ, ತಿಮರೋಡಿ ತಂಡ ಆಕೆಯಿಂದ ಅಂತರ ಕಾಯ್ದುಕೊಳ್ಳಲು ಮುಂದಾಗಿದೆ. 'ಈ ಹಿಂದೆ ದೆಹಲಿಯಲ್ಲಿ ಸುಜಾತ ಭಟ್ ಅವರನ್ನು ಭೇಟಿಯಾಗಿದ್ದೆ. ಆಗ, ತಮ್ಮ ಮಗಳ ಮೇಲೆ ಅತ್ಯಾಚಾರ ನಡೆದಿದೆ. ನನಗೆ ನ್ಯಾಯ ಕೊಡಿಸಿ ಎಂದು ಆಕೆ ಹೇಳಿದ್ದರು. ಆದರೆ ಮಗಳ ಫೋಟೋ ಕೇಳಿದಾಗ ಮಾಡೆಲ್ ಫೋಟೋ ಕಳಿಸಿದ್ದಳು. ಬಳಿಕ ಇದನ್ನೂ ಫ್ಯಾಕ್ಟ್ ಚೆಕ್ ಮಾಡ್ದೆ, ಆಗ ಸುಳ್ಳು ಎಂದು ಗೊತ್ತಾಯ್ತು. ಅಲ್ಲಿಂದ ನಾನು ಈ ಪ್ರಕರಣದಿಂದ ಅಂತರ ಕಾಯ್ದುಕೊಂಡೆ ಎನ್ನುವ ಮೂಲಕ ಮಟ್ಟಣ್ಣನವರ್ ಇದಕ್ಕೂ ನನಗೂ ಸಂಬಂಧವಿಲ್ಲವೆಂದಿದ್ದಾರೆ. ಮಾಸ್ಕ್ ಮ್ಯಾನ್ ಚಿನ್ನಯ್ಯನ ಬಂಧನವನ್ನು ಸ್ವಾಗತಿಸಿರುವ ಮಟ್ಟಣ್ಣವರ್, ಆತನ ಮಂಪರು ಪರೀಕ್ಷೆ ಆಗಲಿ ಎಂದು ಸಲಹೆ ನೀಡಿದ್ದಾರೆ. ಮತ್ತೊಂದೆಡೆ ಧರ್ಮಸ್ಥಳ ವಿಚಾರವಾಗಿ ತಪ್ಪು ಮಾಹಿತಿಗಳನ್ನು ಹರಡಿದ ಆರೋಪದ ಮೇಲೆ ಯೂಟ್ಯೂಬರ್ ಧೂತ ಸಮೀರ್ ಎಂಡಿಗೂ ಸಂಕಷ್ಟ ಶುರುವಾಗಿದೆ. ಆತನ ಬಂಧನಕ್ಕೆ ಪೊಲೀಸರು ಬೆಂಗಳೂರಿನಲ್ಲಿ ಹುಡುಕಾಟ ನಡೆಸಿದ್ದಾರೆ. → 4

ಧರ್ಮಸ್ಥಳ ಅಧಿಕೃತ ಖಾತೆಯಲ್ಲಿ ಶಿವತಾಂಡವ

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಅಕ್ರಮವಾಗಿ ಹೂತಿದ್ದೆ ಎಂದು ಹೇಳಿದ್ದ ಮುಸುಕುಧಾರಿ ಚಿನ್ನಯ್ಯನ ವಾದ ಕಪೋಲಕಲ್ಪಿತವೆನ್ನುವುದು ಈಗ ಸಾಬೀತಾಗಿದ್ದು, ಬೆಳ್ತಂಗಡಿ ನ್ಯಾಯಾಲಯ ಈತನನ್ನು 10 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದೆ.

ಇತ್ತ ಧರ್ಮಸ್ಥಳ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಮಹೇಶ್ ಶೆಟ್ಟಿ ತಿಮರೋಡಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬುರುಡೆ ವೀರ ಬೆಂಬಲಕ್ಕೆ ನಿಂತ ಗಿರೀಶ್ ಮಟ್ಟಣ್ಣನವರ್, ಎಐ ವಿಡಿಯೊ ಮೂಲಕ ಜನರ ದಾರಿ ತಪ್ಪಿಸಿದ ಯೂಟ್ಯೂಬರ್ ಸಮೀರ್ ಎಂ.ಡಿ.ಗೂ ನೋಟಿಸ್ ನೀಡಲಾಗಿದೆ.



ಸುಜಾತಾ ಭಟ್ ಹೇಳಿದ ಅನನ್ಯಾ ಭಟ್ ಕಥೆಯೂ ಸತ್ಯಕ್ಕೆ ದೂರ ಎನ್ನುವುದೂ ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಧರ್ಮಸ್ಥಳ ಕ್ಷೇತ್ರದ ಸೋಶಿಯಲ್ ಮೀಡಿಯಾ ಪೇಜ್‌ನಲ್ಲಿ ಶಿವ ತಾಂಡವದ ಫೋಟೊ ಹಾಕಿ ಎಂದಿದ್ದರೂ ಸತ್ಯಕ್ಕೆ ಜಯ ಎನ್ನುವುದನ್ನು ಸೂಚ್ಯವಾಗಿ ತಿಳಿಸಲಾಗಿದೆ.

ಧರ್ಮಸ್ಥಳ ದೇವಸ್ಥಾನದ ಹಿನ್ನೆಲೆಯಲ್ಲಿ ಶಿವ ತಾಂಡವ ಮಾಡುತ್ತಿರುವ ಫೋಟೊ ಇದಾಗಿದೆ. 'ನಮೋ ಮಂಜುನಾಥ' ಎಂದು ಕ್ಯಾಪ್ಷನ್ ಬರೆಯಲಾಗಿದೆ. ಆ ಮೂಲಕ ವಿರೋಧಿಗಳಿಗೆ ಧರ್ಮಸ್ಥಳ ಭಕ್ತವೃಂದ ತಿರುಗೇಟು ನೀಡಿದೆ.



ಬುರುಡೆ ರಹಸ್ಯ

ಸುಜಾತ ನಿವಾಸಕ್ಕೆ ಭದ್ರತೆ

ಇನ್ನು ಅನನ್ಯ ಭಟ್ ಕಥೆ ಕಟ್ಟಿರುವ ಸುಜಾತ ಭಟ್ ನಿವಾಸಕ್ಕೆ ಭದ್ರತೆ ನೀಡಲಾಗಿದೆ. ನನಗೆ ಆರೋಗ್ಯ ಸರಿಯಿಲ್ಲ, ಬೆದರಿಕೆ ಇದೆ. ನನಗೆ ರಕ್ಷಣೆ ಕೊಡಿ ಎಂದು ಸುಜಾತ ಭಟ್ ಮನವಿ ಮಾಡಿದ್ದರಿಂದ ಬನಶಂಕರಿ ಪೊಲೀಸರು ಭದ್ರತೆ ನೀಡಿದ್ದಾರೆ. ಸುಜಾತ ಭಟ್ ಮನೆಯ ಬಳಿ ಮಾಧ್ಯಮದವರು, ಸಾರ್ವಜನಿಕರು ಬರದಂತೆ ನಿರ್ಬಂಧ ಹೇರಿ, ಯಾರೂ ಮನೆಯ ಹತ್ತಿರ ಬರದಂತೆ ನೋಡಿ ಕೊಳ್ಳಿ ಎಂದು ಸುಜಾತ ಭಟ್ ಪೊಲೀಸರಿಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಪಾಳಿ ಲೆಕ್ಕದಲ್ಲಿ ಪೊಲೀಸರು ಸುಜಾತ ಭಟ್‌ಗೆ ಭದ್ರತೆ ನೀಡುತ್ತಿದ್ದಾರೆ.

> ಈಗ ಒಂದೊಂದೇ ಸತ್ಯಗಳು ಹೊರಗೆ ಬರ್ತಾ ಇವೆ. ಸತ್ಯಗಳನ್ನು ತೊಳೆದು ಇಟ್ಟಂತಾಗಿದೆ. ಇದರ ಬಗ್ಗೆ ನಾನು ಈಗ ಹೆಚ್ಚು ಮಾತನಾಡಲ್ಲ. ಸತ್ಯಕ್ಕೆ ಜಯ ಸಿಕ್ಕಿದೆ. ಜನರ ಪ್ರೀತಿ ಕ್ಷೇತ್ರದ ಮೇಲೆ ಹೀಗೆಯೇ ಇರಲಿ. ಬೆಂಬಲಕ್ಕೆ ನಿಂತ ಎಲ್ಲರಿಗೂ ಧನ್ಯವಾದಗಳು. ಎಸ್‌ಐಟಿ ತನಿಖೆ ಹಂತದಲ್ಲಿರುವುದರಿಂದ ಈ ಬಗ್ಗೆ ನಾನು ಹೆಚ್ಚು ಮಾತನಾಡಲ್ಲ.
> **-ವೀರೇಂದ್ರ ಹೆಗ್ಗಡೆ,** ಧರ್ಮಸ್ಥಳ ಧರ್ಮಾಧಿಕಾರಿ

ತಿಮರೋಡಿಗೆ ಜಾಮೀನು ಮಂಜೂರು

ಇನ್ನು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಿರುದ್ಧ ಮಾಡಿದ್ದ ಅವಹೇಳನಕಾರಿ ಪ್ರಕರಣದಲ್ಲಿ ಮಹೇಶ್ ಶೆಟ್ಟಿ ತಿಪರೋಡಿಗೆ ಉಡುಪಿ ಜಿಲ್ಲಾ ನ್ಯಾಯಾಲಯ ಜಾಮೀನು ಮಂಜೂರು ಮಾಡುವ ಮೂಲಕ ರಿಲೀಫ್ ನೀಡಿದೆ. ಆದರೆ ಆತನ ವಿರುದ್ಧ ಇನ್ನು ಹತ್ತಾರು ಕೇಸ್‌ಗಳಿರುವುದರಿಂದ, ಈ ಪ್ರಕರಣದ ವಿಚಾರಣೆಯ ನೆಪದಲ್ಲಿ ಬೆಳ್ತಂಗಡಿ ಪೊಲೀಸರು ಮತ್ತೆ ವಶಕ್ಕೆ ಪಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಮಹೇಶ್ ಶೆಟ್ಟಿ ತಿಮರೋಡಿ ಪರ ವಾದ ಮಂಡಿಸಿದ ವಕೀಲರು, ಬಂಧಿಸಿದ ಪ್ರಕ್ರಿಯೆ ಕ್ರಮಬದ್ಧವಾಗಿಲ್ಲ. ಪ್ರಥಮ ನೋಟಿಸ್ ನೀಡಿ ಅದರ ಅವಧಿ ಮುಗಿಯುವ ಮುನ್ನವೇ ಎರಡನೇ ನೋಟಿಸ್ ನೀಡಿದ್ದಾರೆ. ತಿಮರೋಡಿಯವರ ಹೇಳಿಕೆಯಿಂದ ಯಾವುದೇ ಕೋಮು ಗಲಭೆಗಳು ಆಗಿಲ್ಲ. ತಿಮರೋಡಿ ಕೂಡ ಓರ್ವ ಹಿಂದೂ ನಾಯಕ. ಇನ್ನೊಂದು ಧರ್ಮವನ್ನು ಅವರು ದೂಷಿಸಿಲ್ಲ ಎಂದು ಹೇಳಿದರು. ವಾದ ವಿವಾದ ಆಲಿಸಿದ ನ್ಯಾಯಾಧೀಶ ನಾಗೇಶ್, ಮುಂದೆ ಈ ರೀತಿ ಮಾಡದಂತೆ ಎಚ್ಚರಿಕೆ ನೀಡಿ ಮಹೇಶ್ ಶೆಟ್ಟಿ ತಿಮರೋಡಿಗೆ ಷರತ್ತುಬದ್ಧ ಜಾಮೀನು ನೀಡಿ ಆದೇಶ ಹೊರಡಿಸಿದರು.

> ದೂರುದಾರನ ಆಧಾರದ ಮೇಲೆ ನಾವು ತನಿಖೆ ಪ್ರಾರಂಭ ಮಾಡಿದ್ದೇವೆ. ಈಗ ಅವನನ್ನು ಅರೆಸ್ಟ್ ಮಾಡಿ ಅವನ ಹೇಳಿಕೆ ಆಧಾರದ ಮೇಲೆ ತನಿಖೆಯನ್ನು ಮುಂದುವರಿಸಲಾಗುತ್ತದೆ. **-ಡಾ.ಜಿ. ಪರಮೇಶ್ವರ,** ಗೃಹ ಸಚಿವ

ಬಂಧಿತ ಶಾಸಕನ ಮನೆಯಿಂದ 10 ಕೆಜಿ ಬಂಗಾರ, 12 ಕೋಟಿ ರು. ನಗದು ವಶ

ಪಪ್ಪಿ ಬಂಗಾರದ ಮನುಷ್ಯ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಕ್ರಮ ಆನ್‌ಲೈನ್ ಬೆಟ್ಟಿಂಗ್ ಪ್ರಕರಣದಲ್ಲಿ ಬಂಧ ನಕ್ಕೆ ಒಳಗಾಗಿರುವ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಅವರಿಂದ ಅಪಾರ ಪ್ರಮಾಣದ ನಗದು ಹಾಗೂ ಚಿನ್ನಾಭರಣವನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ ಘೋಷಿಸಿದೆ. ಕ್ಯಾಸಿನೋವನ್ನು ಗುತ್ತಿಗೆ ಬಗ್ಗೆ ಚರ್ಚಿಸುವ ಸಂಬಂಧ ಸಿಕ್ಕಿಂನ ಗ್ಯಾಂಗ್ಟಕ್‌ಗೆ ತೆರಳಿದ್ದ ವೀರೇಂದ್ರ ಅವರನ್ನು ಬಂಧಿಸಲಾಗಿದ್ದು, ಸ್ಥಳೀಯ ಮ್ಯಾಜಿ ಸ್ಟ್ರೇಟ್ ಮುಂದೆ ಹಾಜರುಪಡಿಸಿ, ಟ್ರಾನ್ಸಿಟ್ ರಿಮಾಂಡ್ ಪಡೆಯಲಾಗಿದೆ ಎಂದು ಇ.ಡಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶುಕ್ರವಾರ ಚಿತ್ರದುರ್ಗ ಜಿಲ್ಲೆಯ 6, ಬೆಂಗಳೂರಿನ 10, ಗೋವಾದ 8, ಜೋದ್‌ಪುರದ ಮೂರು, ಮುಂಬೈನ ಎರಡು, ಸಿಕ್ಕಿಂನ ಗ್ಯಾಂಗ್ಟಕ್ ಹಾಗೂ ಹುಬ್ಬಳಿಯ ಒಂದು ಕಡೆ ಸೇರಿದಂತೆ 31 ಕಡೆಗಳಲ್ಲಿ ಎರಡನೇ ದಿನವೂ ಶೋಧ ಕಾರ್ಯ ಮುಂದುವರೆಸಲಾಗಿದೆ. → 4

ಸಿಕ್ಕಿದ್ದೇನು ?

- 10 ಕೆಜಿ ಬಂಗಾರ,
- 12 ಕೋಟಿ ನಗದು ವಶ
- 1 ಕೋಟಿ ವಿದೇಶಿ ಕರೆನ್ಸಿ
- 10 ಕೆ.ಜಿ ಬೆಳ್ಳಿ ಸಾಮಗ್ರಿ
- ನಾಲ್ಕು ವಾಹನಗಳು
- 17 ಬ್ಯಾಂಕ್ ಖಾತೆ

ರಾಜ್ಯದ ಜಾತಿ ಗಣತಿಗೆ ಚಾಲನೆ

ಬೆಂಗಳೂರು: ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ಹೆಸರಲ್ಲಿ ನಡೆಯುತ್ತಿರುವ ಬಹು ನಿರೀಕ್ಷಿತ ಜಾತಿಗಣತಿ ಶನಿವಾರದಿಂದ ಆರಂಭವಾಗಿದ್ದು, ಆರಂಭದಲ್ಲಿ ವಿದ್ಯುತ್ ಮೀಟರ್ ರೀಡರ್‌ಗಳ ಮಾಹಿತಿ ಪಡೆದು, ಎಲ್ಲ ಮನೆಗಳನ್ನು ಜಿಯೋಟ್ಯಾಗಿಂಗ್ ಮಾಡುವ ಕಾರ್ಯಾರಂಭ ಮಾಡಿದೆ.

ಮೊದಲ ಹಂತದಲ್ಲಿ ಮನೆ ಪಟ್ಟಿ ಮತ್ತು ಅವುಗಳ ನಕ್ಷೆ ಸಿದ್ಧ ಪಡಿಸುವ ಕಾರ್ಯ ನಡೆಯಲಿದೆ. ವಾಸದ ಮನೆಗಳಿಗೆ ವಿದ್ಯುತ್ ಸಂಪರ್ಕವಿರುವುದರಿಂದ ವಾಸದ ಮನೆಗಳ ಆರ್.ಆರ್. ಮೀಟರ್ ಆಧಾರದ ಮೇಲೆ ಮನೆಗಳನ್ನು ಗುರುತಿಸಿ ಅಲ್ಲಿರುವ ಜನರ ಸಮೀಕ್ಷೆ ಮಾಡುವುದರಿಂದ ಯಾವುದೇ ಮನೆಗಳು ಸಮೀಕ್ಷಾ ವ್ಯಾಪ್ತಿಯಿಂದ ತಪ್ಪಿ ಹೋಗುವುದಿಲ್ಲ ಎಂದು ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷ ಮಧುಸೂಧನ್ ನಾಯ್ಕ್, ತಿಳಿಸಿದ್ದಾರೆ. → 4

ಪಟ್ಟಿ ಅಂತಿಮವಾಗಿದ್ದರೂ ಸದ್ಯಕ್ಕೆ ಮುಕ್ತಿ ಇಲ್ಲ, ಎಐಸಿಸಿ ಅಧ್ಯಕ್ಷರಿಂದ ಮತ್ತೆ ಪರಿಶೀಲನೆ

ಪರಿಷತ್ ನಾಮಕರಣಕ್ಕೆ ಉಸ್ತುವಾರಿ ಗ್ರಹಣ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಅತಿ ವಿಳಂಬ ಎನಿಸಿರುವ ರಾಜ್ಯ ವಿಧಾನಪರಿಷತ್ ನಾಮಕರಣ ವಿಚಾರ ಮತ್ತೆ ಹೈಕಮಾಂಡ್ ಅಂಗಳದಲ್ಲಿ ಸಿಲುಕಿ ಒದ್ದಾಡುವಂತಾಗಿದೆ. ಪರಿಷತ್‌ನಲ್ಲಿ ತೆರವಾಗಿರುವ ನಾಲ್ಕು ನಾಮಕರಣ ಸದಸ್ಯರ ಸ್ಥಾನಕ್ಕೆ ರಾಜ್ಯ ಕಾಂಗ್ರೆಸ್ ಸಲ್ಲಿಸಿದ್ದ ಶಿಫಾರಸು ಪಟ್ಟಿ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜತೆ ಅನೇಕ ಬಾರಿ ಚರ್ಚಿಸಿ ಅಂತಿಮಗೊಳಿಸಿತ್ತು. ಈ ಪಟ್ಟಿ ಬಿಡುಗಡೆಯಾಗಬೇಕು ಎನ್ನುವಷ್ಟರಲ್ಲಿ ಈಗ ಪಟ್ಟಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತೆ ತಡೆಯೊಡ್ಡಿದ್ದಾರೆ ಎನ್ನಲಾಗಿದೆ. → 4

ಹೈಕಮಾಂಡ್ ಜತೆ ಹಗ್ಗಜಗ್ಗಾಟ ಏಕೆ?

ರಾಜ್ಯದಿಂದ ಶಿಫಾರಸು ಮಾಡಿರುವ ಪಟ್ಟಿಯಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗಿಂತ ಅನುಯಾಯಿಗಳೇ ಹೆಚ್ಚಾಗಿದ್ದಾರೆ ಎನ್ನುವುದು ಹೈಕಮಾಂಡ್ ಆಕ್ಷೇಪ. ಸದ್ಯ ಶಿಫಾರಸು ಪಟ್ಟಿಯಲ್ಲಿ ಡಿ.ಜಿ. ಸಾಗರ್, ವಿನಯ್ ಕಾರ್ತಿಕ್, ಆರತಿ ಕೃಷ್ಣ ಹಾಗೂ ದಿನೇಶ್ ಅಮೀನ್ ಮಟ್ಟು, ರಮೇಶ್ ಬಾಬು ಸೇರಿದಂತೆ ಕೆಲವರ ಹೆಸರಿದೆ. ಇವರಲ್ಲಿ ಡಿ.ಜಿ.ಸಾಗರ್ ಈ ಹಿಂದೆ ಖರ್ಗೆ ವಿರುದ್ಧವೇ ಸ್ಪರ್ಧಿಸಿದ್ದರು ಎನ್ನುವ ಕಾರಣಕ್ಕೆ ಆ ಹೆಸರಿನ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ ಎನ್ನಲಾಗಿದೆ. ಹೈಕಮಾಂಡ್ ಬೆಂಬಲ ಹೊಂದಿರುವ ಆರತಿ ಆಯ್ಕೆ ಬಹುತೇಕ ಅಂತಿಮಗೊಂಡಿದೆ. ಆದರೆ ಇವರೊಂದಿಗೆ ರಾಜ್ಯದಿಂದ ಶಿಫಾರಸ್ಸಾಗಿರುವ ವಿನಯ್ ಕಾರ್ತಿಕ್ ಅವರಿಗೂ ಅವಕಾಶ ನೀಡಿದರೆ, ಇಬ್ಬರು ಒಕ್ಕಲಿಗರಿಗೆ ನೀಡಿದಂತಾಗುತ್ತದೆ ಎನ್ನವ ಲೆಕ್ಕಾಚಾರವೂ ಇದೆ. ಇದೆಲ್ಲದರ ಮಧ್ಯೆ, ಹಿಂದುಳಿದ ವರ್ಗದ ಒಬ್ಬರಿಗೆ ಆದ್ಯತೆ ನೀಡಲೇಬೇಕೆನ್ನುವ ಒತ್ತಡ ಹೆಚ್ಚಾಗಿದ್ದು ಇದರಲ್ಲಿ ದಿನೇಶ್ ಅಮೀನ್ ಮಟ್ಟು ಅಥವಾ ರಮೇಶ್ ಬಾಬು ಅವರಲ್ಲಿ ಯಾರಿಗೇ ಅವಕಾಶ ನೀಡಬೇಕೆನ್ನುವುದು ನಿರ್ಧಾರ ವಾಗಬೇಕಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಪತ್ರಕರ್ತರ ಸಹಕಾರಿ ಸಂಘದ ಅಮೃತ ಮಹೋತ್ಸವ | ದುಡಿಯುವ ಜನರ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ನಡೆದದ್ದು ಸಹಕಾರ ಚಳವಳಿ: ಕೆ.ವಿ.ಪ್ರಭಾಕರ್

ರಾಷ್ಟ್ರೀಯ ಬ್ಯಾಂಕ್‌ಗಳ ಪಾಲಿಗೆ ಪತ್ರಕರ್ತರು ಹೊರಗಿನವರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ದೇಶದಲ್ಲಿ 2016ರಲ್ಲಿ ನೋಟು ನಿಷೇಧ ಜಾರಿ ಆದಾಗ ದೇಶದ ನಗರ ಆರ್ಥಿಕತೆ ಪಾತಾಳ ಸೇರಿತು. ಆದರೆ, ಗ್ರಾಮೀಣ ಭಾರತದ ಆರ್ಥಿಕತೆ ಕುಸಿಯದಂತೆ ತಡೆದದ್ದು ಸಹಕಾರಿ ತತ್ವ ಮತ್ತು ಸಹಕಾರಿ ಚಳವಳಿಯ ಮೌಲ್ಯ ಎನ್ನುವುದನ್ನು ನಾವು ಮರೆಯಬಾರದು ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

- **ದೇಶದಲ್ಲಿ ಸಂವಿಧಾನ ಜಾರಿ ಆಗುವ ಮೊದಲೇ ರಾಜ್ಯದಲ್ಲಿ ಸಹಕಾರ ಕಾಯ್ದೆ ಜಾರಿಯಾಗಿತ್ತು**
- **ನೋಟು ನಿಷೇಧವಾದಾಗ ಗ್ರಾಮೀಣ ಭಾರತವನ್ನು ಆರ್ಥಿಕ ಕುಸಿತದಿಂದ ಕಾಪಾಡಿದ್ದೇ ಸಹಕಾರಿ ಚಳವಳಿ**

ಪತ್ರಕರ್ತರ ಸಹಕಾರಿ ಸಂಘಕ್ಕೆ 75 ವರ್ಷಗಳು ತುಂಬಿದ ಸಂದರ್ಭದಲ್ಲಿ ಆಯೋಜಿಸಿದ್ದ ಅಮೃತ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ದೇಶದ ಸ್ವಾತಂತ್ರ್ಯ ಚಳವಳಿ ಜತೆ ಜತೆಗೇ ನಡೆದದ್ದು ನಮ್ಮ ದೇಶದ ಸಹಕಾರ ಚಳವಳಿ. ಮಹಾತ್ಮಗಾಂಧಿ ದೇಶದ ಸ್ವಾತಂತ್ರ್ಯಕ್ಕಾಗಿ 1920 ರಲ್ಲಿ ಅಸಹಾಕಾರ ಚಳವಳಿಗೆ ಕರೆ ಕೊಡುವ ಮೊದಲೇ ರಾಜ್ಯದಲ್ಲಿ 1904 ರಲ್ಲಿ ಸಹಕಾರ ಕಾಯ್ದೆ ಜಾರಿ ಆಗಿತ್ತು. ದುಡಿಯುವ ವರ್ಗಗಳ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ನಡೆದ ಸಹಕಾರ ಚಳವಳಿಯ ಭಾಗವಾಗಿ ಪತ್ರಕರ್ತರ ಸಹಕಾರ ಸಂಘವೂ ಜನ್ಮ ತಾಳಿದೆ. ಈ ಸಂಘದ ಸ್ಥಾಪನೆಗೆ ಮುನ್ನುಡಿ ಬರೆದ ಎಲ್ಲಾ ಹಿರಿಯರನ್ನೂ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ ಎಂದರು.

ಸಹಕಾರಿ ಸಂಘಗಳು, ಸ್ವ- ಸಹಾಯ ಸಂಘಗಳ ಚಳವಳಿಗಳು ಇಂದಿರಾ ಗಾಂಧಿಯವರ ಬ್ಯಾಂಕ್ ಗಳ ರಾಷ್ಟ್ರೀಕ ರಣಕ್ಕೆ ಪ್ರೇರಣೆ ಆಗಿದ್ದವು. ಪರಸ್ಪರ ಎನ್ನುವುದು ಸಹಕಾರ ತತ್ವದ ಮೂಲ ಮೌಲ್ಯ ಆಗಿರುವಂತೆಯೇ ಪತ್ರಿಕೋದ್ಯಮದ ಮೂಲ ಮಂತ್ರವೂ ಇದೇ ಆಗಿದೆ. ಪತ್ರಕರ್ತರು ಸಹಕಾರ ಸಂಘ ಸ್ಥಾಪಿಸುವ ಮೊದಲೇ ಕೃಷಿ, ಕೋಳಿ ಸಾಕಾಣಿಕೆ, ಹೈನು ಗಾರಿಕೆ, ಮೀನುಗಾರರ ಸಹಕಾರ ಸಂಘ ಗಳು ಸ್ಥಾಪನೆ ಆಗಿ ದ್ದವು. ದುಡಿಯುವ ವರ್ಗಗಳನ್ನು, ಶ್ರಮಿಕ ಸಮುದಾಯಗಳನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವ ಸಹಕಾರಿ ಮನೋ ಭಾವ ದಿಂದಲೇ ಪತ್ರಕರ್ತರ ಸಹಕಾರ ಸಂಘವನ್ನೂ ನಮ್ಮ ಹಿರಿಯರು ಸ್ಥಾಪಿಸಿದರು.

ರಾಷ್ಟ್ರೀಯ ಬ್ಯಾಂಕ್‌ಗೆ ನಾವು ಹೊರಗಿನವರು: ಪತ್ರಕರ್ತರು ಮತ್ತು ಪತ್ರಿಕಾ ಕಾರ್ಮಿಕರು ರಾಷ್ಟ್ರೀಯ ಬ್ಯಾಂಕ್‌ಗಳ ಪಾಲಿಗೆ ಹೊರಗಿನವರು. ನಾನೂ ಸಹ ಗೃಹ ಸಾಲ ಪಡೆಯುವಾಗ ಸಿಕ್ಕಾಪಟ್ಟೆ ರಗಳೆ ಅನುಭವಿಸಿದೆ. ಪತ್ರಕರ್ತರಿಗೆ ಖಾಸಗಿಯಾಗಿ ಸಾಲ ಕೊಡುವವರೂ ಇಲ್ಲ. ವಾಪಾಸ್ ಕೇಳೋದು ಕಷ್ಟ ಎನ್ನುವ ಭಯ ಖಾಸಗಿಯವರಿಗೆ ಇದ್ದೇ ಇದೆ.

ಹೀಗಾಗಿ ಈ ಸಂಘದಲ್ಲಿ ನಾವೇ ಪರಸ್ಪರ ಒಬ್ಬರಿಗೊಬ್ಬರು ಜಾಮೀನು ಆಗುವ ಮೂಲಕ ಪರಸ್ಪರರ ಅಗತ್ಯಗಳಿಗೆ ಸ್ಪಂದಿಸುತ್ತಿದ್ದೇವೆ. ಕಷ್ಟದಲ್ಲಿ ದ್ದಾಗ ಜಾಮೀನು ಹಾಕಿಸಿಕೊಂಡವರು, ಜಾಮೀನು ಕಾಪಾಡದಿದ್ದರೆ ಸಹಕಾರ ಬ್ಯಾಂಕ್ ಗಳು ಯಶಸ್ವಿಯಾಗುವುದು ಕಷ್ಟ ಎಂದರು. ಸಚಿವರಾದ ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಸಂಘದ ರಮೇಶ್ ಎಂ. ಪಾಳ್ಯ, ದೊಡ್ಡಬೊಮ್ಮಯ್ಯ, ಮೋಹನ್, ಆನಂದ್ ಬೈದನಮನೆ, ಧ್ಯಾನ್ ಪೂಣಚ್ಚ, ರಮೇಶ್ ಹಿರೇಜಂಬೂರ್, ಕೆ.ವಿ. ಪರಮೇಶ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಪತ್ರಕರ್ತರ ಸಹಕಾರಿ ಸಂಘದ ಅಮೃತ ಮಹೋತ್ಸವ ಕಾರ್ಯಕ್ರಮಕ್ಕೆ ಸಚಿವ ರಾಮಲಿಂಗಾರೆಡ್ಡಿ, ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಚಾಲನೆ ನೀಡಿದರು.

ಪಿಯುಸಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪತ್ರಕರ್ತರ ಮಕ್ಕಳನ್ನು ಪತ್ರಕರ್ತರ ಸಹಕಾರಿ ಸಂಘದ ಅಮೃತ ಮಹೋತ್ಸವದಲ್ಲಿ ಸನ್ಮಾನಿಸಲಾಯಿತು.

ಪತ್ರಕರ್ತರ ಸಹಕಾರ ಸಂಘಕ್ಕೆ ದುಪ್ಪಟ್ಟು ಲಾಭ

ಕರ್ನಾಟಕ ಪತ್ರಕರ್ತರ ಸಹಕಾರ ಸಂಘ ನಿಯಮಿತದ 75 ನೇ ವರ್ಷದ ಅಮೃತ ಮಹೋತ್ಸವ ಹಾಗೂ ಸರ್ವ ಸದಸ್ಯರ ಸಭೆ ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಸ್ಕೌಟ್ ಮತ್ತು ಗೈಡ್ಸ್ ಕಟ್ಟಡದ ಕೊಂಡಜ್ಜಿ ಬಸಪ್ಪ ಸಭಾಂಗಣ ಯಶಸ್ವಿಯಾಗಿ ಶನಿವಾರ ನಡೆದಿಯಿತು.

ಕರ್ನಾಟಕ ಪತ್ರಕರ್ತರ ಸಂಘ ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಲಾಭ ಗಳಿಕೆಯಲ್ಲಿ ಶೇ.201ರಷ್ಟು ಹೆಚ್ಚಳವಾಗಿದ್ದು, ಪ್ರಸಕ್ತ ಸಾಲಿನಲ್ಲಿ 65,14,533 ರು.ಗಳ ಲಾಭ ಗಳಿಸಿದ್ದು ಲೆಕ್ಕಪರಿಶೋಧಕರು ಆಡಿಟ್ ವರ್ಗೀಕರಣ ಆಡಿ 'ಎ' ದರ್ಜೆ ನೀಡಿದ್ದಾರೆ. ಸಾಲ ವಿತರಣೆ ಹಾಗೂ ವಸೂಲಾತಿಗೆ ಹೆಚ್ಚಿನ ಒತ್ತು ನೀಡಿರುವ ಈ ಬಾರಿಯ ಆಡಳಿತ ಮಂಡಳಿಯ ಕ್ರಮದಿಂದಾಗಿ ಸಂಘ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ರಮೇಶ್ ಎಂ.ಪಾಳ್ಯ ಅವರು ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಿಸಿದರು.

ಕಳೆದ ಬಾರಿಗಿಂತ ಬಡ್ಡಿಯಲ್ಲಿ 12 ಲಕ್ಷ ರು. ಹೆಚ್ಚಳವಾಗಿದ್ದು, ಬಂಡವಾಳ ಹೂಡಿಕೆ ಮೇಲೆ 3 ಲಕ್ಷ ರು. ಬಡ್ಡಿ ಹೆಚ್ಚಳವಾಗಿದೆ. ಸುಸ್ತಿ ಸಾಲ ವಸೂಲಿಯೂ ಕೂಡ ಕಳೆದ ಸಾಲಿಗಿಂತ 25ಲಕ್ಷ ರು. ಹೆಚ್ಚಿಗೆ ವಸೂಲಾತಿಯಾಗಿದ್ದು, ಕಳೆದ ಸಾಲಿಗಿಂತ ಸುಸ್ತಿ ಸಾಲದ ಪೈಕಿ ಶೇ.38 ರಷ್ಟು ವಸೂಲಿ ಮಾಡಲಾಗಿದೆ. ಪ್ರಸಕ್ತ ಸಾಲಿನ ಲಾಭದಲ್ಲಿ 25 ಲಕ್ಷ ರು. ಗಳ ಮೊತ್ತವನ್ನು ಕರಡು ಸಾಲ ನಿಧಿಗೆ ಕಾಯ್ದಿರಿಸಲಾಗಿದ್ದು, ಸಂಘದ ಇತಿಹಾಸದಲ್ಲೇ ಮೊದಲ ಬಾರಿಗೆ ಈ ಕ್ರಮ ಕೈಗೊಳ್ಳಲಾಗಿದೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದ್ದಲ್ಲಿ ಈ ವರ್ಷ ಹೆಚ್ಚಿನ ವಹಿವಾಟು ದಾಖಲಿಸಿದ್ದು, ಈ ಬಾರಿ ಸದಸ್ಯರಿಗೆ ಶೇ.7 ರಷ್ಟು ಡಿವಿಡೆಂಟ್ ನೀಡಲು ಸರ್ವ ಸದಸ್ಯರ ಸಭೆ ಘೋಷಿಸಲಾಯಿತು.



ಆರಾಧನಾ ಎಬಿತ್ ಗೆಜ್ಜೆಪೂಜೆ ಇಂದು

ಬೆಂಗಳೂರು: ಜಿಗಣಿಯ ಪುರಂದರ ಮಂಟಪದಲ್ಲಿ ಭಾನುವಾರ ಸಂಜೆ 5.15 ಗಂಟೆಗೆ ಆರಾಧನಾ ಎಬಿತ್‌ರ ನೂಪುರ ಪೂಜೆಯನ್ನು ಆಯೋಜಿಸಲಾಗಿದೆ. ಲಯಾಭಿನಯ ಕಲ್ಚರಲ್ ಫೌಂಡೇಶನ್ ನೃತ್ಯಸಂಸ್ಥೆಯ ಸ್ಥಾಪಕಿ ಡಾ.ಜಯಶ್ರೀ ರವಿ ಅವರ ಶಿಷ್ಯೆಯಾದ 10 ವರ್ಷದ ಆರಾಧನಾ ಎಬಿತ್ ಟಿ.ವಿ.ಎಬಿತ್ ಹಾಗೂ ವಿ.ವಸಂತಾರ ಪುತ್ರಿಯಾಗಿದ್ದಾರೆ. ಪುಣೆಯ ಅಖಿಲ ಭಾರತೀಯ ಗಂಧರ್ವ ಮಹಾಮಂಡಲದ ಎರಡು ಪರೀಕ್ಷೆಗಳಲ್ಲಿ ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣೆ. ಕಾರ್ಯಕ್ರಮಕ್ಕೆ ಲೇಖಕಿ ಡಾ. ವಿಜಯಲಕ್ಷ್ಮೀ ಬಾಳೇಕುಂದ್ರಿ, ಬಿಎಎಸ್‌ಇ ಪ್ರಾಂಶುಪಾಲಮ ಪ್ರೊ.ಆರ್.ಪಿ.ಉಮಾಶಂಕರ್, ವಿಮರ್ಶಕಿ ಸಂಧ್ಯಾ ಶರ್ಮ ಭಾಗವಹಿಸಲಿದ್ದಾರೆ.

ಅಕ್ಷರ ಆರಾಧನೆ ಕಾರ್ಯಕ್ರಮ ಇಂದು

ಬೆಂಗಳೂರು: ಸಾವಣ್ಣ ಪ್ರಕಾಶನದ ವತಿಯಿಂದ ಇಂದು ಅಕ್ಷರ ಆರಾಧನೆ 2025-3ನೇ ಆವೃತ್ತಿ ಕಾರ್ಯಕ್ರಮವನ್ನು ಬಿ.ಪಿ ವಾಡಿಯಾ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ.

ಕನ್ನಡಪ್ರಭ ಪುರವಣಿ ಸಂಪಾದಕ ಜೋಗಿ 16 ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದು, ಡಾ. ನಾ. ಸೋಮೇಶ್ವರ ಅವರ ಹೃದಯಾಘಾತ ಪುಸ್ತಕ, ಡಾ.ವಿರೂಪಾಕ್ಷ ಅವರ ದೇವರಮನೆ, ಓ ಮನಸೆ ತುಸು ನಿಧಾನಿಸು, ರಂಗಸ್ವಾಮಿ ಮೂಕನಹಳ್ಳಿ ಅವರ ಸಣ್ಣ ಉದ್ದಿಮೆಗಳನ್ನು ಕಟ್ಟುವುದು ಹೇಗೆ?, ಭಾರತಿ ಬಿ.ವಿ. ಅವರ ಸೊಂಟಕ್ ಬೆಲ್ಟು ಕಟ್ಟಿಕೊಂಡು, ಜಗದೀಶ ಶರ್ಮಾ ಸಂಪ ಅವರ ವ್ಯಾಸ ಸಂದರ್ಶನ, ದೀಪಾ ಹಿರೇಗುತ್ತಿ ಅವರ ನೊ ಎಕ್ಸ್‌ಕ್ಯೂಸ್ ಮಿ ಪ್ಲೀಸ್, ಶರತ್ ಭಟ್ ಸೇರಾಜೆ ಅವರ ಎಐ ಬರುತಿದೆ ದಾರಿ ಬಿಡಿ, ಡಾ.ಸರಸ್ವತಿ ಐತಾಳ ಅವರ ಅರವತ್ತರ ನಂತರ ಮರಳಿ ಅರಳಿ, ಸಂಯುಕ್ತಾ ಪುಲಿಗಲ್ ಅವರ ನಾನಿಲ್ಲೆ ಇರುವೆ, ಕಾಂಚನಾ ಹೆಗಡೆ ಅವರ ಮೈ ಮನಿ ಮ್ಯಾಪ್, ಗಿರ್ವಾಣಿ ಅವರ ಮನಸೇ, ಮನಸೇ ಥ್ಯಾಂಕ್ಯು, ಸವಿರಾಜ ಆನಂದೂರು ಅವರ ಪುರಾಣ ಗಿರಾಣ ಇತ್ಯಾದಿ, ಪದಚಿಹ್ನ ಅವರ ಮನಸು ಜೋಪಾನ, ಶ್ವೇತಾ ಭಿಡೆ ಅವರ ಭರವಸೆಯೆ ಬದುಕು, ಗಿರೀಶ ಶ್ರೀಪಾದ ಮೇವುಂಡಿ ಅವರ ಓಯಸಿಸ್, ಗುರುರಾಜ ಪಾಟಿಲ ಅವರ ಪಾಲಕತ್ವದ ತತ್ವ ಪುಸ್ತಕಗಳು ಬಿಡುಗಡೆಯಾಗಲಿದೆ.

ನವೆಂಬರ್‌ನಲ್ಲಿ ಕೆಸೆಟ್ ಪರೀಕ್ಷೆ

ಬೆಂಗಳೂರು: ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ ನ.2ರಂದು ನಡೆಯಲಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆ.28ರಿಂದ ಆರಂಭಗೊಳ್ಳಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ. ಕೆಸೆಟ್-25ರ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಸೆ.18 ಕೊನೆಯ ದಿನವಾಗಿದ್ದು, ಅರ್ಜಿ ಶುಲ್ಕ ಪಾವತಿಗೆ ಸೆ.19ರವರೆಗೆ ಅವಕಾಶವಿರುತ್ತದೆ. ಅ.24ರಂದು ಪ್ರವೇಶ ಪತ್ರ ಬಿಡುಗಡೆಯಾಗಲಿದೆ. ಆನ್ ಲೈನ್ ಮೂಲಕ ಮಾತ್ರವೇ ಅರ್ಜಿ ಸಲ್ಲಿಸಬಹುದಾಗಿದ್ದು, ಇತರ ಯಾವುದೇ ವಿಧದಲ್ಲಿ ಅರ್ಜಿ ಸ್ವಿಕರಿಸುವುದಿಲ್ಲ, ಒಟ್ಟು 33 ವಿಷಯಗಳಿಗೆ ಪರೀಕ್ಷೆ ನಡೆಯಲಿದೆ ಎಂದು ಕೆಇಎ ಪ್ರಕಟಣೆ ತಿಳಿಸಿದೆ.

ಎಂಡಿಎಸ್: ಅರ್ಜಿ ಸಲ್ಲಿಕೆಗೆ ಇಂದು ಕೊನೆ

ಬೆಂಗಳೂರು: ಸ್ನಾತಕೋತ್ತರ ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಲಭ್ಯವಿರುವ ಸೀಟುಗಳಿಗೆ ಸೀಟು ಹಂಚಿಕೆ ಮಾಡುತ್ತಿದ್ದು, ಅರ್ಹರು ಭಾನುವಾರದೊಳಗೆ ಅರ್ಜಿ ಸಲ್ಲಿಸಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ. ಎಂಸಿಸಿಯು ಕನಿಷ್ಠ ಅರ್ಹತೆಯ ಅಂಕಗಳನ್ನು ಕಡಿಮೆ ಮಾಡಿದ್ದು, ಅರ್ಹರಾಗುವ ಅಭ್ಯರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸಬಹುದು. ಈಗಾಗಲೇ ಅರ್ಜಿ ಸಲ್ಲಿಸಿರುವವರು ಕೂಡ ಭಾಗವಹಿಸಬಹುದು.ಮೂಲ ದಾಖಲೆಗಳ ಪರಿಶೀಲನೆ ಸಂಬಂಧ ನಂತರ ಮಾಹಿತಿ ನೀಡಲಾಗುವುದು ಎಂದು ಕೆಇಎ ಹೇಳಿದೆ.

ಗಾಂಜಾ ಮಾರಾಟ: ಆರು ಮಂದಿ ಸೆರೆ

ಬೆಂಗಳೂರು: ಜೆ.ಸಿ. ನಗರ ಹಾಗೂ ಮಲ್ಲೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಆರು ಮಂದಿಯನ್ನು ಬಂಧಿಸಿರುವ ಪೊಲೀಸರು, 1.60 ಲಕ್ಷ ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ. ಗಾಂಜಾ ಸಂಗ್ರಹಿಸಿಕೊಂಡು ನಿರ್ಜನ ಪ್ರದೇಶದಲ್ಲಿ ಮಾರಾಟ ಮಾಡುತ್ತಿದ್ದ ಮೂವರನ್ನು ಜೆ.ಸಿ.ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 1 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಿಕೊಂಡಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಮಲ್ಲೇಶ್ವರ ಠಾಣೆಯ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ. ಬಂಧಿತರಿಂದ 1 ಕೆ.ಜಿ 850 ಗ್ರಾಂ ಗಾಂಜಾ ಜಪ್ತಿ ಮಾಡಿದ್ದಾರೆ. ಪುಣೆ ಹಾಗೂ ಪೀಣ್ಯದ ನೆಲಗದರನಹಳ್ಳಿಯಲ್ಲಿ ಇರುವ ಮಧ್ಯವರ್ತಿಗಳಿಂದ ಆರೋಪಿಗಳು ಕಡಿಮೆ ಬೆಲೆಗೆ ಗಾಂಜಾ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಬೆಂಗಳೂರು ಪಶ್ಚಿಮ ವಿಭಾಗದ ಪೊಲೀಸ್ ಜಂಟಿ ಆಯುಕ್ತರಿಂದ ಹೊರಡಿಸಿದ್ದ ಆದೇಶ

ಡಿಜೆ ನಿರ್ಬಂಧ ಪ್ರಶ್ನಿಸಿದ್ದ ಅರ್ಜಿ ವಜಾ

ಬೆಂಗಳೂರು: ಗಣೇಶ್ ಚತುರ್ಥಿ ಮತ್ತು ಈದ್-ಮಿಲಾದ್ ಹಬ್ಬದ ಹಿನ್ನೆಲೆಯಲ್ಲಿ ಮೆರವಣಿಗೆ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಡಿಜೆ ಮತ್ತು ಅಬ್ಬರದ ಧ್ವನಿ ವರ್ಧಕಗಳ ಬಳಕೆ ನಿಷೇಧಿಸಿ ಬೆಂಗಳೂರು ಪಶ್ಚಿಮ ವಿಭಾಗದ ಪೊಲೀಸ್ ಜಂಟಿ ಆಯುಕ್ತರು ಹೊರಡಿಸಿರುವ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಕರ್ನಾಟಕ ಲಘು ಸಂಗೀತ ಮತ್ತು ಸಾಂಸ್ಕೃತಿಕ ಕಲಾವಿದರ ಸಂಘದ ಪದಾಧಿಕಾರಿಯಾಗಿದ್ದ ಶಂಕರ್ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರಿದ್ದ ನ್ಯಾಯಪೀಠ ಈ ಅರ್ಜಿ ವಜಾಗೊಳಿಸಿ ಆದೇಶಿಸಿದೆ. ಅಲ್ಲದೆ, ಜನ ವಸತಿ ಪ್ರದೇಶಗಳಲ್ಲಿ ಹಗಲಿನಲ್ಲಿ 55 ಡೆಸಿಬಲ್, ರಾತ್ರಿ ಸಂದರ್ಭದಲ್ಲಿ 45 ಡೆಸಿಬಲ್ ಮಾತ್ರ ಹೊಂದಿರಬೇಕು ಎಂಬ ನಿಯಮವಿದೆ. ಆದರೆ, ಸಾರ್ವಜನಿಕ ಸ್ಥಳಗಳಲ್ಲಿ ಡಿಜೆ ಮತ್ತು ಅಬ್ಬರದ ಧ್ವನಿ ವರ್ಧಕಗಳು ನಿಗದಿತ ಡೆಸಿಬಲ್‌ಗಳಿಗೆ ಅನುಗುಣವಾಗಿರಲಿದೆ ಎಂಬುದನ್ನು ಒಪ್ಪಿಕೊಳ್ಳುವುದು ಕಷ್ಟಸಾಧ್ಯವಾಗಲಿದೆ. ಆದ್ದರಿಂದ ಪೊಲೀಸ್ ಜಂಟಿ ಆಯುಕ್ತರು ಹೊರಡಿಸಿರುವ ಆದೇಶದಲ್ಲಿ ಯಾವುದೇ ದೋಷ ಕಂಡು ಬಂದಿಲ್ಲ ಎಂದು ಪೀಠ ಹೇಳಿದೆ.

ಡಿಜೆ ಬಳಕೆಗೆ ನಿರ್ಬಂಧವಿಲ್ಲ

ಅರ್ಜಿ ಕುರಿತ ದಾಖಲೆಗಳ ಪರಿಶೀಲಿಸಿದ ನ್ಯಾಯ ಪೀಠ, ಪೊಲೀಸ್ ಜಂಟಿ ಆಯುಕ್ತರು ಹೊರಡಿಸಿರುವ ಸುತ್ತೋಲೆ ಹಬ್ಬದ ಸಂದರ್ಭಗಳಿಗೆ ಮುಂಜಾಗ್ರತಾ ಕ್ರಮವಾಗಿ ತೆಗೆದುಕೊಂಡ ನಿರ್ಣಯವಾಗಿದೆ. ಹಬ್ಬಗಳ ಸಂದರ್ಭಗಳಲ್ಲಿ ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳ ಉದ್ದೇಶದಿಂದ ಈ ಸುತ್ತೋಲೆ ಹೊರಡಿಸಲಾಗಿದೆ. ಆದರೆ, ಕಾನೂನು ಪ್ರಕಾರ ಡಿಜೆ ಬಳಕೆಗೆ ಯಾವುದೇ ನಿರ್ಬಂಧವಿಲ್ಲ ಎಂದು ಪೀಠ ತಿಳಿಸಿದೆ. ಸಾರ್ವಜನಿಕ ಸ್ಥಳಗಳಲ್ಲಿ ಪೆಂಡಾಲ್‌ಗಳನ್ನು ಹಾಕಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡುವ ಸಂಘಟಕರಿಗೆ ಅನುಮತಿ ನೀಡುವ ಸಲುವಾಗಿ ಸುತ್ತೋಲೆ ಹೊರಡಿಸಲಾಗಿದೆ. ಜಂಟಿ ಪೊಲೀಸ್ ಆಯುಕ್ತರ ಆದೇಶದಲ್ಲಿ ಮಧ್ಯಪ್ರವೇಶ ಮಾಡಬೇಕಾದ ಅಗತ್ಯವಿಲ್ಲ. ಜತೆಗೆ, ಹೆಚ್ಚಿನ ಮಾರ್ಗಸೂಚಿಗಳು ರಚನೆ ಮಾಡಬೇಕಾದ ಅಗತ್ಯವೂ ಇಲ್ಲ ಎಂದು ಪೀಠ ಹೇಳಿದೆ.

ಸಮಾರೋಪ ಸಮಾರಂಭದಲ್ಲಿ ಜ್ಞಾನಪೀಠ ಮತ್ತು ಪದ್ಮ ವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಜಗದ್ಗುರು ರಾಮಾನಂದ ಸ್ವಾಮಿ ರಾಮ ಭದ್ರಾಚಾರ್ಯರಿಗೆ ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯಿಂದ ವಾಗ್ದೇವಿ ಜ್ಞಾನ ಭಾಸ್ಕರ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

2 ದಿನಗಳ ಕಾಲ ನಡೆದ ಉತ್ಸವದಲ್ಲಿ ಸಾವಿರಾರು ವಿದ್ಯಾರ್ಥಿಗಳು ಭಾಗಿ

ವಾಗ್ದೇವಿ ಕಲಾ ಉತ್ಸವಕ್ಕೆ ತೆರೆ

ಬೆಂಗಳೂರು: ಮಾರತಹಳ್ಳಿಯ ವಾಗ್ದೇವಿ ವಿಲಾಸ ಶಾಲೆಯಲ್ಲಿ ಎರಡು ದಿನಗಳ ಕಾಲ ಆಯೋಜಿಸಿದ್ದ ಕಲಾ ಉತ್ಸವ-2025 ಕಾರ್ಯಕ್ರಮದ ಸಮಾರೋಪ ಸಮಾರಂಭವು ಶನಿವಾರ ನಡೆಯಿತು.

ಸಮಾರೋಪ ಸಮಾರಂಭದಲ್ಲಿ ಜ್ಞಾನಪೀಠ ಮತ್ತು ಪದ್ಮ ವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಜಗದ್ಗುರು ರಾಮಾನಂದ ಸ್ವಾಮಿ ರಾಮ ಭದ್ರಾಚಾರ್ಯರಿಗೆ ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯಿಂದ ವಾಗ್ದೇವಿ ಜ್ಞಾನ ಭಾಸ್ಕರ ರತ್ನ ,ಯುವ ಅಂಕಣಕಾರ ಡಾ. ವಿಕ್ರಂ ಸಂಪತ್ ಅವರಿಗೆ ವಾಗ್ದೇವಿ ಇತಿಹಾಸ ರತ್ನಾಕರ ಎಂಬ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಎರಡು ದಿನಗಳ ಕಾಲ ನಡೆದ ಈ ಉತ್ಸವದಲ್ಲಿ ಸಾವಿರಾರು ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಉತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ಗಾಯನ, ನೃತ್ಯ, ಪ್ರಬಂಧ, ನಾಟಕ, ರಸಪ್ರಶ್ನೆ,ರಂಗೋಲಿ ಮುಂತಾದ ಹತ್ತು ಹಲವು ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಅಂತಾರಾಷ್ಟ್ರೀಯ ಖ್ಯಾತಿಯ ಮರಳು ಶಿಲ್ಪ ಕಲಾವಿದರಾದ ಪದ್ಮಶ್ರೀ ಸುದರ್ಶನ್ ಪಟ್ನಾಯಕ್ ಅವರಿಂದ ಶಾಲೆಯ ಆವರಣದಲ್ಲಿ ನಿರ್ಮಿಸಿದ್ದ ಮರಳುಶಿಲ್ಪ ಉತ್ಸವದ ಪ್ರಮುಖ ಆಕರ್ಷಣೆಯಾಗಿತ್ತು. ಕಾರ್ಯಕ್ರಮದಲ್ಲಿ ಶತಾವಧಾನಿ ಡಾ. ಆರ್ ಗಣೇಶ್ ಅವರು ಉಪಸ್ಥಿತರಿದ್ದರು.

ಭಾರತದ ಇತಿಹಾಸವು ಧೈರ್ಯ, ಸಾಹಸ ಹಾಗೂ ಶ್ರೇಷ್ಠ ಮೌಲ್ಯಗಳ ಆಗರವಾಗಿದೆ. ಇಂತಹ ಇತಿಹಾಸದ ಪರಿಚಯವನ್ನು ನಮ್ಮ ಭವಿಷ್ಯದ ಜನಾಂಗಕ್ಕೆ ಸೃಜನಶೀಲ ರೀತಿಯಲ್ಲಿ ಈ ಕಾರ್ಯಕ್ರಮದ ಮೂಲಕ ಪರಿಚಯಿಸುತಿದ್ದೇವೆ. -ಕೆ.ಹರೀಶ್, ಅಧ್ಯಕ್ಷ ವಾಗ್ದೇವಿ ವಿಲಾಸ ಸಂಸ್ಥೆ

ಲಾಲ್‌ಬಾಗ್ ಕೆರೆಯಲ್ಲಿ ಮಹಿಳೆ ಮೃತದೇಹ ಪತ್ತೆ

ಬೆಂಗಳೂರು: ನಗರದ ಲಾಲ್‌ಬಾಗ್‌ನ ಕೆರೆಯಲ್ಲಿ ಮಹಿಳೆಯ ಮೃತದೇಹ ಪತ್ತೆಯಾಗಿದ್ದು, ಆತ್ಮಹತ್ಯೆಯ ಶಂಕೆ ವ್ಯಕ್ತವಾಗಿದೆ. ಶನಿವಾರ ಬೆಳಿಗ್ಗೆ 6.30ರ ಸುಮಾರಿಗೆ ವಾಯುವಿಹಾರಕ್ಕೆ ತೆರಳಿದ್ದವರು, ಕೆರೆಯಲ್ಲಿ ಮೃತದೇಹ ಇರುವುದನ್ನು ಗಮನಿಸಿ ಮಾಹಿತಿ ನೀಡಿದ್ದರು. ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ, ಮೃತದೇಹವನ್ನು ಮೇಲಕ್ಕೆ ತರಲಾಯಿತು. ಆತ್ಮಹತ್ಯೆ ಮಾಡಿಕೊಂಡ ಮಹಿಳೆಯ ವಯಸ್ಸು 45 ವರ್ಷವೆಂದು ಅಂದಾಜಿಸಲಾಗಿದೆ. ಗುರುತು ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದರು. ಮಹಿಳೆಯ ದೇಹದ ಮೇಲೆ ಚಿಕಿತ್ಸೆ ಪಡೆಯುತ್ತಿದ್ದ ಗುರುತುಗಳು ಪತ್ತೆಯಾಗಿವೆ. ಆಸ್ಪತ್ರೆಯಿಂದ ತಪ್ಪಿಸಿಕೊಂಡು ಬಂದು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಂತೆ ಕಾಣಿಸುತ್ತಿದೆ. ತನಿಖೆ ಮುಂದುವರೆಸಲಾಗಿದೆ ಎಂದು ಪೊಲೀಸರು ಹೇಳಿದರು. ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೆ.9ರವರೆಗೆ ದರ್ಶನ್ ಗ್ಯಾಂಗ್‌ಗೆ ನ್ಯಾಯಾಂಗ ಬಂಧನ

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜಾಮೀನು ರದ್ದುಗೊಂಡು ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್, ಪವಿತ್ರಾಗೌಡ ಸೇರಿದಂತೆ ಏಳು ಮಂದಿ ಆರೋಪಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದ ವಿಚಾರಣೆಗೆ ಹಾಜರಾದರು. ಏಳು ಮಂದಿ ಆರೋಪಿಗಳನ್ನು ರಾಜ್ಯದ ವಿವಿಧ ಜೈಲುಗಳಿಗೆ ಸ್ಥಳಾಂತರಿಸಬೇಕೆಂದು ಸರಕಾರಿ ಪರ ವಕೀಲರು ಅರ್ಜಿ ಸಲ್ಲಿಸಿದ್ದರು. ಆರೋಪಿ ಪ್ರದೂಷ್ ಮಾತ್ರ ಇದಕ್ಕೆ ಆಕ್ಷೇಪಣಾ ಅರ್ಜಿ ಸಲ್ಲಿಸಿದರೆ ಇನ್ನುಳಿದ ಆರೋಪಿಗಳು ತಕರಾರು ಅರ್ಜಿ ಸಲ್ಲಿಸಲು ಸಮಯಾವಕಾಶಬೇಕೆಂದು ಮನವಿ ಮಾಡಿದರು.

ಈ ವೇಳೆ ಪವಿತ್ರಾಗೌಡ ಪರ ವಕೀಲ ಬಾಲನ್ ಅವರು, ತಮ್ಮ ಕಕ್ಷಿದಾರರಿಗೆ ಜಾಮೀನು ನೀಡಬೇಕು.

ಸಿಆರ್‌ಪಿಸಿಯಲ್ಲಿ ಪೊಲೀಸರು ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಕಾನೂನು ಪ್ರಕಾರ ಬಿಎನ್‌ಎಸ್‌ಎಸ್ ಅಡಿಯಲ್ಲಿ ದೋಷಾರೋಪ ಪಟ್ಟಿಯಲ್ಲಿ ಸಲ್ಲಿಸದೇ ನಿಯಮ ಉಲ್ಲಂಘಿಸಿದ್ದಾರೆ. ಹೀಗಾಗಿ ಪವಿತ್ರಾಗೌಡ ಅವರಿಗೆ ಜಾಮೀನು ಮಂಜೂರು ಮಾಡಬೇಕೆಂದು ಮನವಿ ಮಾಡಿದರು. ಆರೋಪಿಗಳ ಪರ ವಕೀಲರ ವಾದ ಆಲಿಸಿದ ನ್ಯಾಯಾಲಯ ಸೆ.9ರವರೆಗೆ ನ್ಯಾಯಾಂಗ ಬಂಧನ ವಿಧಿಸುವಂತೆ ಸೂಚಿಸಿತು.

ಅಲ್ಲದೇ, ವಿವಿಧ ಜೈಲುಗಳಿಗೆ ಆರೋಪಿಗಳ ಸ್ಥಳಾಂತರ ಅರ್ಜಿ ವಿಚಾರಣೆ ಸಂಬಂಧ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿ ಆಗಸ್ಟ್ 30ಕ್ಕೆ ವಿಚಾರಣೆ ಮುಂದೂಡಿತು.

ಕಳಪೆ ಫಲಿತಾಂಶದ ಹಿನ್ನೆಲೆ: 37 ಮಂದಿಯ ಗೌರವಧನಕ್ಕೆ ತಾತ್ಕಾಲಿಕ ತಡೆ

72 ಅತಿಥಿ ಶಿಕ್ಷಕರ, ಉಪನ್ಯಾಸಕರ ನಿಯೋಜನೆ ರದ್ದು

ಬೆಂಗಳೂರು: ಬಿಬಿಎಂಪಿಯ ಶಾಲಾ ಕಾಲೇಜುಗಳಲ್ಲಿ ಈ ಸಾಲಿಗೆ ನಿಯೋಜನೆ ಮಾಡಿಕೊಂಡಿರುವ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರಲ್ಲಿ 72 ಮಂದಿಯ ನಿಯೋಜನೆಯನ್ನು ರದ್ದುಗೊಳಿಸಲಾಗಿದೆ.

37 ಮಂದಿಯು ಕಳೆದ ಮೂರು ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.50ಕ್ಕಿಂತ ಕಡಿಮೆ ಫಲಿತಾಂಶವನ್ನು ನೀಡಿದ್ದು, ಹೀಗಾಗಿ ಅವರ ಗೌರವ ಧನವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ. ಇನ್ನು 35 ಅತಿಥಿ ಶಿಕ್ಷಕರ ಮತ್ತು ಉಪನ್ಯಾಸಕರು ನಿಗದಿತ ವಿದ್ಯಾರ್ಹತೆಯನ್ನು ಹೊಂದಿಲ್ಲ. ಕಳೆದ ಸಾಲಿನಲ್ಲಿ ಬಿಬಿಎಂಪಿಯ ಶಾಲಾ, ಕಾಲೇಜುಗಳಿಗೆ ಶಿಕ್ಷಣ ಇಲಾಖೆಯ ಮಾದರಿಯಲ್ಲಿ ಎಸ್‌ಡಿಎಂಸಿ ಹಾಗೂ ಸಿಡಿಸಿ ಮೂಲಕ ಅತಿಥಿ ಶಿಕ್ಷಕರು ಮತ್ತು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಪದ್ಧತಿ ಆರಂಭಿಸಲಾಗಿದೆ. ಆದೇ ರೀತಿ ಈ ಬಾರಿಯೂ 804 ಮಂದಿ ಅತಿಥಿ ಶಿಕ್ಷಕ ಮತ್ತು ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ನಿಯೋಜಿಸಲಾಗಿರುವ 804 ಮಂದಿಯಲ್ಲಿ 35 ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರು ವಿದ್ಯಾರ್ಹತೆ ಇಲ್ಲದಿರುವುದು ದಾಖಲಾತಿ ಪರಿಶೀಲನೆ ವೇಳೆ ಕಂಡು ಬಂದಿದೆ. ಹೀಗಾಗಿ, ವಿದ್ಯಾರ್ಹತೆ ಇಲ್ಲದೇ ನಿಯೋಜನೆ ಮಾಡಿಕೊಳ್ಳಲಾಗಿದೆ. ಈ ಪೈಕಿ 14 ಅತಿಥಿ ಶಿಕ್ಷಕರು ಪ್ರಾಥಮಿಕ ಶಾಲೆ ಶಿಕ್ಷಕರಾಗಿದ್ದಾರೆ, ಒಬ್ಬರು ಪ್ರೌಢಶಾಲೆ, ಪದವಿ ಪೂರ್ವ ಕಾಲೇಜಿನ 19 ಅತಿಥಿ ಉಪನ್ಯಾಸಕರಾಗಿದ್ದಾರೆ. ಕಳೆದ 3 ವರ್ಷದಲ್ಲಿ ಶೇ.50 ಕ್ಕಿಂತ ಫಲಿತಾಂಶ ನೀಡಿದ 37 ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರಲ್ಲಿ 34 ಮಂದಿ ಪ್ರೌಢಶಾಲೆಯ ಶಿಕ್ಷಕರಾಗಿದ್ದು, ಉಳಿದ 3 ಮಂದಿ ಪಿಯುಸಿ ಕಾಲೇಜಿನ ಅತಿಥಿ ಉಪನ್ಯಾಸಕರಾಗಿದ್ದಾರೆ ಎಂದು ಬಿಬಿಎಂಪಿಯ ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರು ಆದೇಶದಲ್ಲಿ ತಿಳಿಸಲಾಗಿದೆ

ಹೊಸ ನೇಮಕಾತಿವರೆಗೆ ಮುಂದುವರಿಕೆ

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿದ್ಯಾರ್ಹತೆ ಇಲ್ಲ ಹಾಗೂ ಶೇ.50 ಕ್ಕಿಂತ ಕಡಿಮೆ ಫಲಿತಾಂಶ ತಂದು ಕೊಟ್ಟ ಶಿಕ್ಷಕರು ಮತ್ತು ಉಪನ್ಯಾಸಕರನ್ನು ತಾತ್ಕಾಲಿಕವಾಗಿ ಮುಂದುವರಿಸಲಾಗುತ್ತಿದ್ದು, ಈಗಾಗಲೇ ಹೊಸ ನೇಮಕಾತಿಗೆ ಅರ್ಜಿ ಆಹ್ವಾನ ಮಾಡಲಾಗಿದೆ. ನೇಮಕಗೊಂಡಂತೆ ಈ ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆ ಮಾಡಲಾಗುವುದು ಎಂದು ಬಿಬಿಎಂಪಿ ಮೂಲಗಳು ತಿಳಿಸಿದೆ.

PUBLIC NOTICE

My client Sri. **A.C. Pradeep,** S/o. Late ChikkaKamaih, R/at No.59, 11th Cross, Maruthi Layout, Dasarahalli, Bangalore-560024, is the developer of the Sites bearing Nos.4, 6, 8, 14, 22, 24, 35, 34, 37, 40, 42, 44, 49 and 51, formed in Sy.No.5/1, measuring 3 acre 14 guntas, and land bearing Sy.No.6 measuring 6 guntas, situated at Harjenahalli Village, Vemgal Hobli, Kolar Taluk, Kolar District, and having right over the said properties. My client has executed Agreement of Sale dated 05.02.2025 with Sri. P. Muniraju, S/o Chinna Muniswamy, R/at No,35, Vaibhava Garden, Kallkere, K. Channasandra, Horamavu Post, Bengaluru-560043. The Agreement Holder P. Muniraju has not complied the terms and conditions of the agreement of sale, hence my client has issued legal notice dated 14/07/2025, to him and cancelled the agreement of sale dated 05.02.2025. In view of the aforesaid reasons, the agreement is stands cancelled.

The General public are hereby notified not to enter into any sale transactions with anybody to transacts regarding the aforesaid properties, and if any person/s enter to any transaction with Sri. P. Muniraju, is not binding on my client and same are illegal and unlawful.

V. Gangadhargowda, Advocate
No.13, 2nd Floor, Sri Maruthi House, RMV II Stage, Sanjay Nagar Main Road, Bengaluru-94.

FORM NO. URC-2

Advertisement giving notice about registration under Part I of Chapter XXI of the Act [Pursuant to section 374(b) of the companies Act, 2013 and rule 4(1) of the companies (Authorised to Register) Rules, 2014]

1. Notice is hereby given that in pursuance of sub-section (2) of section 366 of the Companies Act, 2013, an application is proposed to be made after fifteen days hereof but before the expiry of thirty days hereinafter to the **Registrar at Central Registration Centre (CRC) Indian Institute of Corporate Affairs (IICA), Plot No. 6, 7, 8, Sector 5, IMT Manesar, District Gurgaon (Haryana), Pin Code-122050** that **"TIGERTIGER GRAPHICS LLP (LLPIN: AAS-6760)"** a LLP may be registered under Part I of Chapter XXI of the Companies Act 2013, as a Company limited by shares.
2. **The principal objects of the company are as follows:**
   i. To carry on the business of buying, selling, reselling, importing, exporting, transporting, storing, developing, promoting, designing, making, printing, marketing or supplying, trading, dealing in any manner whatsoever in all type of images, photos, pictures, videos, any other photography in physical, online and digital or any other mode and arrangements and acting as agent in the field of above said objects in India or elsewhere in the world.
   ii. To carry on the business of manufacturing, converting, producing, processing, assembling, treating, making, taking on hire, otherwise acquiring, blending, formulating, packing, finishing, buying, selling, distributing, marketing, importing, exporting, fabricating or otherwise dealing in all types, grades, kinds, sizes and descriptions of photographic products like colour/black and white photographic papers, roll films, cinema film, X-ray film, graphic art film, other film and allied products like photographic chemicals, reagents, substances, equipments, instruments, accessories, raw materials and things for audiovisual communications, film production, image and document production, copying and information gathering, recording and processes related to photography, motion pictures and any other business in any other manner as may be decided by the majority of Partners.
3. A copy of the draft memorandum and articles of association of the proposed company may be inspected at the registered office at **No.172, 1st Floor, 5th Main, Defence Colony, Indiranagar, Bangalore, Bangalore, Karnataka, India, 560038.**
4. Notice is hereby given that any person objecting to this application may communicate their objection in writing to the **Registrar at Central Registration Centre (CRC), Indian Institute of Corporate Affairs (IICA), Plot No. 6, 7, 8, Sector 5, IMT Manesar, District Gurgaon (Haryana), Pin Code-122050**, within Twenty one days from the date of publication of this notice, with a copy to the company at its registered office.

For and on behalf of
Tigertiger Graphics LLP
Sd/-
PRADIPKUMARDAS SAMANTHEADASLAITFLANG
(Designated Partner)
JOSHUA W BARTON
(Designated Partner)

Date : 24.08.2025 | **Place :** Bangalore

IN THE COURT OF THE III ADDL SENIOR CIVIL JUDGE BENGALURU RURAL DISTRICT, BENGALURU
O.S.No. 1891/2023
BETWEEN : SRI RAMAMURTHY. ...Plaintiff
AND : SRI. H SURESH AND ANOTHER. ...Defendants

NOTICE TO DEFENDENT NO.1

SRI H. SURESH. S/o Late. Munihanumaiah @ Munivenkatahanuma Aged about 49 Years, R/at old No 36, New No. E226, Kamagondanahalli, Jalahalli West Bengaluru-560015 Mobile No.7892987605.

WHEREAS, the Plaintiff has filed the above case against you and another for Specific Performance and to enforce the Registered Sale Agreement dated 05/03/2018 in respect of suit schedule property, while you are trying to obtain the compensation amount from the Defendant No.2. Hence the present suit came to be filed. Therefore please take notice that the above case if posted to **14/10/2025 for your personal appearance or through an advocate at 11.0 Clock A.M.** failing which the Hon'ble Court will proceed with the case and decide the same in your absence.

SCHEUDLE PROPERTY

All that piece and parcel of agricultural land bearing Sy.No 52/7, of Kalatammanahalli Village. Hesaraghatta Hobli, Bengaluru North Taluk, presently Yelahanka Taluk. Bengaluru, measuring 9% guntas out of 19 guntas and bounded on: **East by:** Sy.No.52/3, **West by:** Property belongs to "A" Schedule H. Ramanjineya, **North by :** Land in Sy No.52/2 **West by:** Land in Sy.No.66.

Given under my hand and the Seal of this Court on this Day **19th day of August 2025.**

By order of the Court, Chief Ministerial Officer Senior Civil Judge Court Bengaluru Rural District Bengaluru

V. VIJAYASHEKHARA GOWDA & JAGADEESWAR.J Advocates, No.1, 2nd Floor, 10th Cross, Cubbonpet Main road, Bengaluru-560002

ಮಾನ್ಯ ಎರಡನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಧೀಶರ ನ್ಯಾಯಾಲಯ, ಕನಕಪುರ
ಸಿ.ಮಿಸ್ ನಂ. 360/2025

ಅರ್ಜಿದಾರರು: 1. ಪಾಪನಾಯ್ಕ ಬಿನ್ ಲೇಟ್ ಕಾಳುನಾಯ್ಕ @ ಬಸವಯ್ಯ ವಯಸ್ಸು 60 ವರ್ಷಗಳು ಕೋಣಾಳುದೊಡ್ಡಿ ಗ್ರಾಮ ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. & ಇತರರು

ವಿರುದ್ಧ

ಎದುರುದಾರರು: 1. ತಹಶೀಲ್ದಾರ್‌ರವರು ಮತ್ತು ಜನನ ಮತ್ತು ಮರಣ ನೊಂದಣಾಧಿಕಾರಿಗಳು, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಟೌನ್. 2. ಗ್ರಾಮಲೆಕ್ಕಾಧಿಕಾರಿಗಳು, ಎಂ.ಮಣಿಂಬಾಳು ವೃತ್ತ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ

ಪತ್ರಿಕಾ ಪ್ರಕಟಣೆ ಮೂಲಕ ತಿಳುವಳಿಕೆ ಪತ್ರ,

ಅರ್ಜಿದಾರರು, ಕನಕಪುರ 2ನೇ ಅಪರ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ 1,4,5, & 9ನೇ ಅರ್ಜಿದಾರರ ತಾಯಿಯಾದ, 3,7 & 8ನೇ ಅರ್ಜಿದಾರರ ತಾತನಾದ 2 ಮತ್ತು 6ನೇ ಅರ್ಜಿದಾರರ ಅತ್ತೆಯಾದ ಶ್ರೀಮತಿ. ರಾಮಿಬಾಯಿ ಕೋಂ. ಲೇಟ್ ಕಾಳುನಾಯ್ಕ ರವರು ದಿನಾಂಕ. 06-11-2011 ರಂದು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಕೋಣಾಳುದೊಡ್ಡಿ ಗ್ರಾಮದಲ್ಲಿ ಮರಣ ಹೊಂದಿದ್ದು, ಎದುರುದಾರರ ಕಛೇರಿಯಲ್ಲಿ ಮರಣ ನೊಂದಣಿ ಆಗದ ಕಾರಣ ಸದರಿ ಮರಣ ಪ್ರಮಾಣಪತ್ರ ಕೋರಿ ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು, ಈ ಸಂಬಂಧ ಘನನ್ಯಾಯಾಲಯವು ಸಾರ್ವಜನಿಕವಾಗಿ ಪತ್ರಿಕಾ ಪ್ರಕಟನೆ ನೀಡಲು ಆದೇಶಿಸಿದ್ದು, ಮೇಲ್ಕಂಡ ಶ್ರೀಮತಿ. ರಾಮಿಬಾಯಿ ಕೋಂ. ಲೇಟ್ ಕಾಳುನಾಯ್ಕ ರವರ ಮರಣ ಸಂಬಂಧ ಸಾರ್ವಜನಿಕವಾಗಿ ಯಾರಾದರೂ ತಮ್ಮ ತಕರಾರು ಮತ್ತು ಆಕ್ಷೇಪಣೆ ಇದ್ದರೆ, ಈ ಪ್ರಕರಣವು ದಿನಾಂಕ. 30-09-2025 ರಂದು ಈ ನ್ಯಾಯಾಲಯವು ವಿಚಾರಣೆಗಾಗಿ ಗೊತ್ತುಪಡಿಸಿದ್ದು, ಆದ ಕಾರಣ ಸದರಿ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು/ಆಕ್ಷೇಪಣೆ ಸಲ್ಲಿಸಲು ತಿಳಿಯಪಡಿಸಿದೆ. ತಪ್ಪಿದ್ದಲ್ಲಿ ಪ್ರಕರಣವನ್ನು ಯಾವುದೇ ತಕರಾರು ಇಲ್ಲವೆಂದೂ ಪರಿಗಣಿಸಿ ಲಬ್ಯವಿರುವ ದಾಖಲಾತಿಗಳ ಮೇಲೆ ತೀರ್ಮಾನ ಮಾಡಲಾಗುವುದು ಎಂದೂ ತಿಳಿಯುವುದು. ಈ ದಿನ ಅಂದರೆ 21ನೇ/ಆಗಸ್ಟ್/2025 ರಂದು ನ್ಯಾಯಾಲಯದ ಆದೇಶ ಮತ್ತು ಮೋಹರಿನೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು.

ವಿ.ನಾಗಾರ್ಜುನ ದೀಕ್ಷಿತ್
ಅರ್ಜಿದಾರರ ಪರ ವಕೀಲರು
ಕನಕಪುರ
ದಿನಾಂಕ. 21-08-2025

ಇ-ಹರಾಜು ಮಾರಾಟ ಸೂಚನೆ
ಐಡಿಇಬಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ (ಲಿಕ್ವಿಡೇಶನ್‌ನಲ್ಲಿ)
ನೋಂ. ಕಛೇರಿ: ಹೌಸ್ ನಂ. 15, 1ನೇ ಮಹಡಿ "ಮೃಣಾಲಿನಿ ಹೌಸ್", ತಿಮ್ಮಪ್ಪ ರೆಡ್ಡಿ ಲೇಔಟ್, ಹುಳಿಮಾವು ಗೇಟ್, ಬೆಂಗಳೂರು - 560 076

ಐಡಿಇಬಿ ಪ್ರಾಜೆಕ್ಟ್ಸ್ ಪ್ರೈ. ಲಿಮಿಟೆಡ್‌ನ ಲಿಕ್ವಿಡೇಶನ್ ಎಸ್ಟೇಟ್‌ನ ಭಾಗವಾಗಿರುವ ಐಡಿಇಬಿ ಪ್ರಾಜೆಕ್ಟ್ಸ್ ಪ್ರೈ. ಲಿಮಿಟೆಡ್‌ನ ಒಡೆತನದ ಆಸ್ತಿಗಳು ಮತ್ತು ಆಸ್ತಿಗಳ ಮಾರಾಟ (ಲಿಕ್ವಿಡೇಶನ್‌ನಲ್ಲಿ) ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠವು 08.11.2019ರ ಆದೇಶದ ಮೇರೆಗೆ ನೇಮಕ ಮಾಡಿದ ಲಿಕ್ವಿಡೇಟರ್‌ನ ಒಡೆತನದಲ್ಲಿದೆ. ಆಸ್ತಿಗಳನ್ನು ಕೆಳ ಸಹಿದಾರರು ಇ-ಹರಾಜು ಪ್ಲಾಟ್‌ಫಾರಂ: https://ibbi.baanknet.com/eauction-ibbi ಮೂಲಕ ಮಾರಾಟ ಮಾಡುತ್ತಾರೆ. ದಿವಾಳಿತನ ಮತ್ತು ದಿವಾಳಿತನ ಸಂಹಿತೆ, 2016 ಮತ್ತು ದಿವಾಳಿತನ ಮತ್ತು ದಿವಾಳಿತನ ಮಂಡಳಿ (ದಿವಾಳಿತನ ಪ್ರಕ್ರಿಯೆ) ನಿಯಮಗಳು, 2016 ರ ಪ್ರಕಾರ 'ಎಲ್ಲಿದೆಯೋ ಹಾಗೆಯೇ', 'ಏನಿದೆಯೋ ಹಾಗೆಯೇ' ಮತ್ತು 'ಹೇಗಿದೆಯೋ' ಅದರ ಆಧಾರದ ಮೇಲೆ ಆಸ್ತಿಯನ್ನು ಮಾರಾಟ ಮಾಡಲಾಗುತ್ತದೆ.

ಕ್ರ. ಸಂ.	ಆಸ್ತಿ	ಮೀಸಲು ಬೆಲೆ (INR)	ಮುಂಗಡ ಠೇವಣಿ ಹಣ (INR)	ಹೆಚ್ಚುತ್ತಿರುವ ಮೌಲ್ಯ (INR)	ಮಾನದಂಡ
1	ಪ್ಲಾಟ್ ಸಂಖ್ಯೆ 1378, ನಿಕೋಲ್‌ಸನ್ ರಸ್ತೆ, ರಿಟ್ಜ್ ಸಿನಿಮಾಸ್ ಎದುರು, ಇಂಟರ್ ಸ್ಟೇಟ್ ಬಸ್ ಟರ್ಮಿನಲ್, ಕಾಶ್ಮೀರಿ ಗೇಟ್, ನವದೆಹಲಿ - 110006, ಅಳತೆ 300 ಚದರ ಅಡಿ	60,00,000	6,00,000	50,000	1. ಕಳೆದ 3 ಹಣಕಾಸು ವರ್ಷಗಳಲ್ಲಿ ಲೆಕ್ಕಪರಿಶೋಧಿತ ಹಣಕಾಸು ಹೇಳಿಕೆಗಳ ಪ್ರಕಾರ ಬಿಡ್ದಾರರ ನಿವ್ವಳ ಮೌಲ್ಯ ಕನಿಷ್ಠ INR 30 ಲಕ್ಷಗಳಾಗಿರಬೇಕು. 2. ಬಿಡ್ಡರ್‌ರನ್ನು ಐಬಿಸಿ, 2016ರ ಸೆಕ್ಷನ್ 29ಎ ಅಡಿಯಲ್ಲಿ ಅನರ್ಹಗೊಳಿಸಬಾರದು.

ಹರಾಜಿನ ದಿನಾಂಕ ಮತ್ತು ಸಮಯ	26ನೇ ಸೆಪ್ಟಂಬರ್ 2025 ಮಧ್ಯಾಹ್ನ 2 ರಿಂದ ಸಂಜೆ 4 ರವರೆಗೆ
EOI ಮತ್ತು ಬಿಡ್ ಸಲ್ಲಿಕೆಯ ಅವಧಿ	25ನೇ ಆಗಸ್ಟ್ 2025 ಬೆಳಿಗ್ಗೆ 11:00 ರಿಂದ 24ನೇ ಸೆಪ್ಟಂಬರ್ 2025 ರವರೆಗೆ ರಾತ್ರಿ 11.59 ರವರೆಗೆ
ತಪಾಸಣೆ ದಿನಾಂಕ ಮತ್ತು ಸಮಯ (ಪೂರ್ವ ನೇಮಕಾತಿಯೊಂದಿಗೆ)	24ನೇ ಸೆಪ್ಟಂಬರ್ 2025 ರಂದು ಅಥವಾ ಅದಕ್ಕೂ ಮೊದಲು (ಕೆಲಸದ ದಿನಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ)
ಕೊನೆಯ (ನಿಮಿಷಗಳಲ್ಲಿ) ಮಾನ್ಯ ಬಿಡ್ ಸ್ವೀಕರಿಸಿದ ವಿಸ್ತೃತ ಸಮಯ	5 ನಿಮಿಷಗಳು

ಇ-ಹರಾಜಿನ ನಿಯಮಗಳು ಮತ್ತು ಷರತ್ತುಗಳು ಈ ಕೆಳಗಿನಂತಿವೆ:

1. ಆಸ್ತಿಗಳ ವಿವರಗಳು, ಆನ್‌ಲೈನ್ ಇ-ಹರಾಜು ಬಿಡ್ ಫಾರ್ಮ್, ಘೋಷಣೆ ಮತ್ತು ಅಂಡರ್‌ಟೇಕಿಂಗ್ ಫಾರ್ಮ್, ಆನ್‌ಲೈನ್ ಹರಾಜು ಮಾರಾಟದ ಸಾಮಾನ್ಯ ನಿಯಮಗಳು ಮತ್ತು ಷರತ್ತುಗಳನ್ನು ಒಳಗೊಂಡಿರುವ ಸಂಪೂರ್ಣ ಇ-ಹರಾಜು ಪ್ರಕ್ರಿಯೆ ದಾಖಲೆಯು https://ibbi.baanknet.com/eauction-ibbi ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಸಂಪರ್ಕಿಸಿ: ಶ್ರೀ ವೇಲಾಯುಧಂ ಜಯವೇಲ್ ಇ-ಮೇಲ್: idebliquidation@gmail.com
2. ಲಿಕ್ವಿಡೇಟರ್ ಯಾವುದೇ ಕಾರಣವನ್ನು ನೀಡದೆ, ಯಾವುದೇ ಸಮಯದಲ್ಲಿ ಮತ್ತು ಯಾವುದೇ ವಿಷಯದಲ್ಲಿ ಈ ಆಹ್ವಾನ ಪತ್ರಿಕೆಯನ್ನು ತಿದ್ದುಪಡಿ ಮಾಡುವ ಮತ್ತು/ಅಥವಾ ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿದ್ದಾರೆ. ಮೇಲೆ ತಿಳಿಸಲಾದ ಸಮಯ ಪತ್ರಿಕೆಯನ್ನು ಒಳಗೊಂಡಂತೆ ಆಹ್ವಾನ ಪತ್ರಿಕೆಯಲ್ಲಿನ ಯಾವುದೇ ತಿದ್ದುಪಡಿಯನ್ನು ಮಂಡಳಿಯ ವೆಬ್‌ಸೈಟ್ https://ibbi.gov.in/liquidation-auction-notices/lists ನಲ್ಲಿ ತಿಳಿಸಲಾಗುವುದು.
3. ಇಲ್ಲಿ ಒಳಗೊಂಡಿರುವ ಯಾವುದೂ ಕಾರ್ಪೊರೇಟ್ ಸಾಲಗಾರನ ಸ್ವತ್ತುಗಳನ್ನು ಮಾರಾಟ ಮಾಡುವ ಬದ್ಧತೆಯ ಕೊಡುಗೆ ಅಥವಾ ಬದ್ಧತೆಯನ್ನು ರೂಪಿಸುವುದಿಲ್ಲ. ಯಾವುದೇ ಕಾರಣವನ್ನು ನೀಡದೆ ಯಾವುದೇ ಬಿಡ್ ಅನ್ನು ತಿರಸ್ಕರಿಸುವ ಹಕ್ಕನ್ನು ಲಿಕ್ವಿಡೇಟರ್ ಸಹ ಹೊಂದಿರುತ್ತಾರೆ.
4. ಸಂಭಾವ್ಯ ಬಿಡ್ಡರ್‌ಗಳು ಎಲೆಕ್ಟ್ರಾನಿಕ್ ಹರಾಜು ವೇದಿಕೆಯ ಮೂಲಕ ದಿವಾಳಿತನ ಮತ್ತು ದಿವಾಳಿತನ ಸಂಹಿತೆಯ ಸೆಕ್ಷನ್ 29ಎ ಅಡಿಯಲ್ಲಿ ಅರ್ಹತೆಯ ಘೋಷಣೆ ಸೇರಿದಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು.
5. ಸಂಭಾವ್ಯ ಬಿಡ್ಡರ್‌ಗಳು ಬ್ಯಾಂಕ್‌ನೆಟ್ ಹರಾಜು ವೇದಿಕೆಯ ಮೂಲಕ ಮುಂಗಡ ಠೇವಣಿ ಹಣ (ಇಎಂಡಿ) ಠೇವಣಿ ಮಾಡಬೇಕು.
6. ಬಿಡ್ದಾರರು ಅನರ್ಹರೆಂದು ಕಂಡುಬಂದರೆ, ಅವರ ಇಎಂಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಸಹಿ/- ವೇಲಾಯುಧಂ ಜಯವೇಲ್, ಲಿಕ್ವಿಡೇಟರ್
IBBI/IPA-001/IP-P01012/2017-18/11663
ಇಮೇಲ್: idebliquidation@gmail.com

ದಿನಾಂಕ: 25/08/2025
ಸ್ಥಳ: ಚೆನ್ನೈ

ಜಯನಗರದಿಂದ ಸೋಮವಾರ 400 ವಾಹನಗಳಲ್ಲಿ ಯಾತ್ರೆ | ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುವ ಸೂತ್ರಧಾರಿಗಳನ್ನು ಬಂಧಿಸಿ: ಶಾಸಕ ಸಿ.ಕೆ.ರಾಮಮೂರ್ತಿ

ಬಿಜೆಪಿಯಿಂದ ಧರ್ಮಯಾತ್ರೆ

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವತಿಯಿಂದ ಧರ್ಮಸ್ಥಳಕ್ಕೆ ಧರ್ಮ ರಕ್ಷಣಾ ಯಾತ್ರೆ ಶಾಸಕ ಸತೀಶ್ ರೆಡ್ಡಿ ಅವರ ನೇತೃತ್ವದಲ್ಲಿ 200ಕ್ಕೂ ಹೆಚ್ಚು ಕಾರುಗಳಲ್ಲಿ ಶನಿವಾರ ಯಾತ್ರೆ ಆರಂಭಗೊಂಡಿತು.

ಬೆಂಗಳೂರು: ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುವ ಪಾತ್ರಧಾರಿಗಳು, ಸೂತ್ರಧಾರಿಗಳನ್ನು ಕೂಡಲೇ ಬಂಧಿಸಿ ಎಂದು ಶಾಸಕ ಸಿ.ಕೆ. ರಾಮಮೂರ್ತಿ ಆಗ್ರಹಿಸಿದರು.

ಬಿಜೆಪಿ ರಾಜ್ಯ ಕಾರ್ಯಾಲಯದದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಂಗಳೂರಿನ ಶಾಸಕರು, ಅನೇಕ ಭಕ್ತಾದಿಗಳು, ಧರ್ಮಸ್ಥಳಕ್ಕೆ ಹೋಗುತ್ತಿದ್ದಾರೆ. ಆನೇಕಲ್‌ನಿಂದ 400 ವಾಹನಗಳಲ್ಲಿ ತೆರಳುತ್ತಿದ್ದಾರೆ. 400 ಕಾರುಗಳಲ್ಲಿ 2 ಸಾವಿರ ಜನರು ಧರ್ಮಸ್ಥಳಕ್ಕೆ ತೆರಳುತ್ತೇವೆ ಎಂದು ಪ್ರಕಟಿಸಿದರು.

ಇನ್ನೊಂದು ಕಡೆ ಬಿಜೆಪಿಯ ಶಾಸಕ ಸತೀಶ್ ರೆಡ್ಡಿ ನೇತೃತ್ವದಲ್ಲಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವತಿಯಿಂದ ಧರ್ಮಸ್ಥಳಕ್ಕೆ ಧರ್ಮ ರಕ್ಷಣಾ ಯಾತ್ರೆಯ ಭಾಗವಾಗಿ 200ಕ್ಕೂ ಹೆಚ್ಚು ಕಾರುಗಳಲ್ಲಿ ಶನಿವಾರ ಯಾತ್ರೆ ಆರಂಭಗೊಂಡಿತು.

ಜಯನಗರ ರ‍್ಯಾಲಿಗೆ ಸಂಬಂಧಿಸಿದಂತೆ ಮಾತನಾಡಿದ ರಾಮಮೂರ್ತಿ, ಆರ್ ಎಸ್‌ಎಸ್ ಮುಖಂಡರು, ಸಂಸದ ತೇಜಸ್ವಿ ಸೂರ್ಯ, ವಿಶ್ವ ಹಿಂದೂ ಪರಿಷತ್ ಮುಖಂಡರು ಈ ಯಾತ್ರೆಗೆ ಚಾಲನೆ ನೀಡುತ್ತಾರೆ. ಮುಖ್ಯಮಂತ್ರಿ ಧರ್ಮಸ್ಥಳಕ್ಕೆ ಹೋಗಿ ಕೈ ಮುಗಿದು ಪೂಜೆ ಮಾಡಿದವರು. ಸನಾತನ ಧರ್ಮ, ಹಿಂದೂ ಧರ್ಮಕ್ಕೆ ಬೆಲೆ ಕೊಡಬೇಕೆಂದರೆ ನೀವು ತೆರೆಯ ಮರೆಯಲ್ಲಿ ಯಾರುಯಾರೆಲ್ಲ ಇದ್ದಾರೋ, ವಿದೇಶಿ ಹಣದ ಅಥವಾ ಒಂದು ಸಮುದಾಯದಿಂದ ಬರುತ್ತಿರುವ ಹಣದ ಕುರಿತು ತನಿಖೆ ಮಾಡಿಸಿ, ಬ್ಯಾಂಕ್ ಖಾತೆ ಚೆಕ್ ಮಾಡಿಸಬೇಕು ಎಂದರು.

ಅರ್ಧ ಕಿಮೀ ಪಾದಯಾತ್ರೆ: ಸೋಮವಾರ ಬೆಳಗ್ಗೆ 6 ಗಂಟೆಗೆ ಜಯನಗರ, ಬಿಟಿಎಂ ಲೇಔಟ್‌ನಿಂದ 200 ವಾಹನಗಳು ತೆರಳಲಿವೆ. 400 ಕಾರುಗಳಲ್ಲಿ 2 ಸಾವಿರ ಜನರು ಧರ್ಮಸ್ಥಳಕ್ಕೆ ತೆರಳುತ್ತೇವೆ. ಆರ್‌ಎಸ್‌ಎಸ್ ಮುಖಂಡರು, ಸಂಸದ ತೇಜಸ್ವಿ ಸೂರ್ಯ, ವಿಶ್ವ ಹಿಂದೂ ಪರಿಷತ್ ಮುಖಂಡರು ಈ ಯಾತ್ರೆಗೆ ಚಾಲನೆ ನೀಡುತ್ತಾರೆ ಎಂದು ತಿಳಿಸಿದರು. ಮಧ್ಯಾಹ್ನ ಧರ್ಮಸ್ಥಳ ತಲುಪಿ ಮಂಜುನಾಥ ಸ್ವಾಮಿಯ ದರ್ಶನ ಮಾಡಲಿದ್ದೇವೆ. ಅರ್ಧ ಕಿ.ಮೀ. ಪಾದಯಾತ್ರೆ ನಡೆಸುತ್ತೇವೆ. ಹಿಂದೂಗಳ ವಿರುದ್ಧ ಧರ್ಮನಿಂದನೆ ನಡೆಯುತ್ತಿದೆ. ಈ ಅಪಪ್ರಚಾರದ ವಿರುದ್ಧ ನಮ್ಮ ಸಂಸದರು, ಶಾಸಕರು ಹೋರಾಟ ಮಾಡಲಿದ್ದೇವೆ ಎಂದರು.

ಅವಹೇಳನ ಮಾಡಿದವರ ವಿರುದ್ಧ ಕ್ರಮವಿಲ್ಲ

ಬುರುಡೆ ಮನುಷ್ಯ ಮುಸುಕುಧಾರಿಯು 2 ಲಕ್ಷ ನೀಡಿ ನನ್ನನ್ನು ಕಳಿಸಿದ್ದಾರೆ ಎಂದು ಹೇಳಿದ್ದಾರೆ. ಅನನ್ಯಾ ಭಟ್ ಎಂಬುದೇ ಸುಳ್ಳು. ಆಸ್ತಿ ಕೇಳಲು ಹೀಗೆ ಮಾಡಿದ್ದಾಗಿ ಸುಜಾತಾ ಭಟ್ ಹೇಳಿದ್ದಾರೆ. ದೆಹಲಿಯಲ್ಲಿ ಕುಳಿತು ಒಂದು ಯೋಜನೆ ರೂಪಿಸಿದ್ದಾರೆ. ಬುರುಡೆ ಕಥೆ ಹೇಳಿದ್ದಾರೆ. ಒಂದು ಗುಂಡಿ ಅಗೆತದಿಂದ ಆರಂಭವಾಗಿ 15 ಗುಂಡಿ ಅಗೆದು ನಿಂತಿದೆ. ಈಗ ಆತ ನಿಜ ಒಪ್ಪಿಕೊಂಡಿದ್ದಾನೆ ಎಂದರು. ನೂರಾರು ಯೂಟ್ಯೂಬರ್‌ಗಳು ಧರ್ಮಸ್ಥಳದ ಅವಹೇಳನ ಮಾಡುತ್ತಿದ್ದರೂ ಸರಕಾರ ಅವರ ವಿರುದ್ಧ ಕ್ರಮ ಕೈಗೊಂಡಿಲ್ಲ. ಸರಕಾರ ಅವರನ್ನು ಸದೆಬಡಿಯದೇ ಇದ್ದರೆ ಕಾಂಗ್ರೆಸ್ ಸರಕಾರವೂ ಈ ವಿಚಾರದಲ್ಲಿ ಆರೋಪಿ ಎಂದು ಟೀಕಿಸಿದರು. ಬಿಜೆಪಿಯಿಂದ ಧರ್ಮಕ್ಕಾಗಿ ಧರ್ಮಯುದ್ಧ ನಡೆದಿದೆ. ನೀವು ದಕ್ಷಿಣ ಕನ್ನಡದಲ್ಲಿ ಹಿಂದೂ ಧರ್ಮದ ಕಾರ್ಯಕರ್ತರು, ಶಾಸಕರ ವಿರುದ್ಧ ಎಫ್ ಐಆರ್ ಹಾಕಿಸಿದ್ದೀರಿ. ರಾತ್ರಿ ಮನೆಗೆ ನುಗ್ಗಿಸಿದ್ದೀರಿ. ಹಲವರಿಗೆ ಗಡಿಪಾರು ಮಾಡಿಸಲು ಹೊರಟಿದ್ದೀರಿ. ಇಲ್ಲಿ ಅಪಪ್ರಚಾರ ಮಾಡಿದವರಿಗೆ ಏನು ಶಿಕ್ಷೆ ಕೊಡುತ್ತೀರಿ ಎಂದು ಪ್ರಶ್ನಿಸಿದರು.

ಮುಸುಕುಧಾರಿ ವ್ಯಕ್ತಿ, ಇನ್ನೋರ್ವ ವೃದ್ಧೆ ಹೇಳಿಕೆ ನೀಡುತ್ತಿದ್ದಾರೆ. ಕೋರ್ಟಿನಲ್ಲೂ ವಿಚಾರಣೆ ನಡೆಯುತ್ತಿದೆ. ಸಮೀರ್, ಗಿರೀಶ್ ಮಟ್ಟಣ್ಣನವರ್, ಮಹೇಶ್ ತಿಮರೋಡಿ ವಿರುದ್ಧ ಕೇಸು ದಾಖಲಾಗಿದೆ. ಬಂಧಿತರು, ತನಿಖೆಗೆ ಒಳಪಡುತ್ತಿರುವವರು ಕೇವಲ ಪಾತ್ರಧಾರಿಗಳು. ಸರಕಾರವು ಈ ಘಟನೆಯ ಹಿಂದಿನ ನಿರ್ಮಾಪಕರು, ನಿರ್ದೇಶಕರನ್ನು ಎಸ್ ಐಟಿ ತನಿಖೆಗೆ ಒಳಪಡಿಸಲಿ.

– ಸಿ.ಕೆ. ರಾಮಮೂರ್ತಿ ಶಾಸಕ

ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಬಿಹಾರದ ಕಟಿಯಾರ್‌ನಲ್ಲಿ ನಡೆಸುತ್ತಿರುವ ಪಾದಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ನೇತೃತ್ವದ ಕರ್ನಾಟಕ ಕಾಂಗ್ರೆಸ್ ಶಾಸಕರ ತಂಡ ಶನಿವಾರ ಭಾಗವಹಿಸಿತ್ತು.

ಸಮರೋಪಾದಿಯಲ್ಲಿ ರಸ್ತೆಗುಂಡಿಗೆ ಮುಕ್ತಿ

ಬೆಂಗಳೂರು: ಬಿಬಿಎಂಪಿ ವತಿಯಿಂದ ನಗರದ ಎಂಟು ವಲಯಗಳಲ್ಲಿ ರಸ್ತೆ ಗುಂಡಿಗಳು ಹಾಗೂ ಕೆಟ್ಟ ಸ್ಥಿತಿಯಲ್ಲಿರುವ ಭಾಗಗಳಿಗೆ ಡಾಂಬರು ಹಾಕುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ನಗರದಲ್ಲಿ ಪ್ರಮುಖ ರಸ್ತೆಗಳಾದ ಆರ್ಟಿರಿಯಲ್, ಸಬ್ ಆರ್ಟಿರಿಯಲ್ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಆದ್ಯತೆ ಮೇರೆಗೆ ಮುಚ್ಚಲಾಗುತ್ತಿದೆ. ಅದಲ್ಲದೆ ವಾರ್ಡ್ ರಸ್ತೆಗಳಲ್ಲಿಯೂ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನುಡಿಡಿ ಪರಿಣಾಮಕಾರಿಯಾಗಿ ಮಾಡಲಾಗುತ್ತಿದೆ. ಸಂಚಾರಿ ವಿಭಾಗದಿಂದ ಗುರುತಿಸಿರುವಂತಹ, ರಸ್ತೆ ಗುಂಡಿ ಗಮನ ತಂತ್ರಾಂಶದಲ್ಲಿ ಬಂದಿರುವ ದೂರುಗಳು ಹಾಗೂ ಸ್ಥಳೀಯ ಅಧಿಕಾರಿಗಳು ಹೊಸದಾಗಿ ಗುರುತಿಸಿರುವ ಗುಂಡಿಗಳನ್ನು ಗುರುತಿಸಿ ಮುಚ್ಚುವ ಕೆಲಸ ಮಾಡಲಾಗುತ್ತಿದೆ. ಆಯಾ ವಲಯಗಳ ಹಿರಿಯ ಅಧಿಕಾರಿಗಳು ರಸ್ತೆ ಗುಂಡಿಗಳನ್ನು ಮುಚ್ಚುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿದ್ದಾರೆ.

ವಾರ್ಡ್ ರಸ್ತೆ ಹಾಗೂ ಸಂಚಾರಿ ದಟ್ಟಣೆ ಕಡಿಮೆ ಇರುವ ಸ್ಥಳಗಳಲ್ಲಿ ಬೆಳಗಿನ ವೇಳೆಯಲ್ಲಿ ಮುಚ್ಚಲಾಗುತ್ತಿದ್ದು, ಸಂಚಾರ ದಟ್ಟಣೆ ಹೆಚ್ಚು ಇರುವ ಪ್ರಮುಖ ರಸ್ತೆಗಳಲ್ಲಿ ರಾತ್ರಿ ವೇಳೆಯಲ್ಲಿ ಮುಚ್ಚಲು ಯೋಜನೆ ರೂಪಿಸಲಾಗಿದೆ. ದೊಡ್ಡದಾದ ರಸ್ತೆ ಗುಂಡಿ ಹಾಗೂ ಕೆಟ್ಟ ಸ್ಥಿತಿಯಲ್ಲಿರುವ ಭಾಗಗಳಲ್ಲಿ ನಿಯಮಾನುಸಾರ ಡಾಂಬರೀಕಣರ ರೋಲಿಂಗ್ ಮಾಡಲಾಗುತ್ತಿದೆ.

ಮಹದೇವಪುರ ವಲಯದ ಮಾರತಹಳ್ಳಿ ರಸ್ತೆ, ಬೆಳ್ಳಂದೂರು ರಸ್ತೆ, ಕೆ.ಆರ್ ಪುರ. ದಕ್ಷಿಣ ವಲಯದ ಜಯನಗರ, ಬಿಟಿಎಂ ಲೇಔಟ್, ಈಜೀಪುರ ರಸ್ತೆ. ಬೊಮ್ಮನಹಳ್ಳಿ ವಲಯದ ಎಚ್‌ಎಸ್‌ಆರ್ ಬಡಾವಣೆ, ಮಣಿಪಾಲ್ ಕೌಂಟಿ ರಸ್ತೆ ಬೇಗೂರು ರಸ್ತೆ, ಬನ್ನೇರಘಟ್ಟ ರಸ್ತೆ, ಪೂರ್ವ ವಲಯದ ಶಿವಾಜಿನಗರ, ಸಿ.ವಿ ರಾಮನ್ ನಗರ, ಸರ್ವಜ್ಞನಗರ, ಆರ್‌ಆರ್ ನಗರ ವಲಯದ ಕೋಡಿ ಪಾಳ್ಯ ರಸ್ತೆ, ಉತ್ತರಹಳ್ಳಿ ರಸ್ತೆ, ಯಲಹಂಕ ವಲಯದ ಕೊಡಿಗೆಹಳ್ಳಿ ಮುಖ್ಯ ರಸ್ತೆ, ಎನ್.ಟಿ.ಐ ಲೇಔಟ್, ಯಲಹಂಕ ಪೊಲೀಸ್ ಠಾಣೆ ರಸ್ತೆ, ದಾಸರಹಳ್ಳಿ ರಸ್ತೆ, ಅಮೃತಹಳ್ಳಿ, ಸಂದೀಪ್ ಉನ್ನಿಕೃಷ್ಣನ್ ರಸ್ತೆ, ಶಾಂತಿವನ ಸಹಕಾರ ನಗರ, ದಾಸರಹಳ್ಳಿ ವಲಯದ ಚೊಕ್ಕಸಂದ್ರ, ಬಗಲಗುಂಟೆ, ಹೆಗ್ಗನಹಳ್ಳಿ, ಪಶ್ಚಿಮ ವಲಯದ ಗೋವಿಂದರಾಜ ನಗರ, ಮಲ್ಲೇಶ್ವರಂ, ಮೈಸೂರು ರಸ್ತೆ, ಸ್ಯಾಂಕಿ ರಸ್ತೆ ಸೇರಿದಂತೆ ಇನ್ನಿತರೆ ಪ್ರಮುಖ ರಸ್ತೆಗಳಲ್ಲಿ ಮುಚ್ಚಲಾಗಿದ್ದು, ಇಂದು ರಾತ್ರಿಯೂ ಪ್ರಮುಖ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಲಾಗುವುದು. ದಾಸರಹಳ್ಳಿ ವಲಯದ ಹೆಗ್ಗನಹಳ್ಳಿ ವ್ಯಾಪ್ತಿಯಲ್ಲಿ ಕಾಂಕ್ರೀಟ್ ರಸ್ತೆಯಲ್ಲಿ ಜಲಮಂಡಳಿ ವತಿಯಿಂದ ಕತ್ತರಿಸಿದ್ದ ಭಾಗಕ್ಕೆ ಕಾಂಕ್ರೀಟ್ ಹಾಕಿ ಕತ್ತರಿಸಿದ ಭಾಗವನ್ನು ಮುಚ್ಚಲಾಗಿದೆ. ಅಲ್ಲದೇ ಒಳಚರಂಡಿ ಕಾಮಗಾರಿಗಾಗಿ ಕತ್ತಿರಿಸದ ಭಾಗಗಳಿಗೆ ಡಾಂಬರು ಹಾಕಿ ಮುಚ್ಚುವ ಕಾರ್ಯವನ್ನು ಕೈಗೊಳ್ಳಲಾಗುವುದು.

ಅಧಿಕಾರಿಗಳಿಂದ ಪರಿಶೀಲನೆ: ರಸ್ತೆ ಗುಂಡಿಗಳನ್ನು ಪ್ರಮಾಣಿತ ಕಾರ್ಯಾಚರಣೆ ವಿಧಾನ (SOP)ದ ಪ್ರಕಾರ ರಸ್ತೆ ಗುಂಡಿಗಳನ್ನು ಮುಚ್ಚಿದರೆ ಹೆಚ್ಚು ಕಾಲ ಬಾಳಿಕೆ ಬರಲಿದೆ. ಈ ಸಂಬಂಧ ಗುಣನಿಯಂತ್ರಣ, ಟಿವಿಸಿಸಿ ವಿಭಾಗದ ಅಧಿಕಾರಿಗಳು ರ‍್ಯಾಂಡಮ್ ಆಗಿ ರಸ್ತೆ ಗುಂಡಿಗಳನ್ನು ಮುಚ್ಚುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ಗುಣಮಟ್ಟವನ್ನು ಪರಿಶೀಲನೆ ನಡೆಸುತ್ತಿದ್ದಾರೆ. ಎಸ್‌ಒಪಿ ಪ್ರಕಾರ ಮುಚ್ಚದ ಕಡೆ ಅದನ್ನು ಸರಿಪಡಿಸಿಕೊಳ್ಳಲು ಗುತ್ತಿಗೆದಾರರಿಗೆ ಸೂಚನೆ ನೀಡಿದ್ದಾರೆ.

ಪಾಲಿಕೆಯಿಂದ ಗುಂಡಿ ಮುಚ್ಚುತ್ತಿರುವುದು.

ವಿಜಯನಗರದ ಬಂಟರ ಸಂಘದ ಆವರಣದಲ್ಲಿ ಕರ್ನಾಟಕ ರಾಜ್ಯ ಬೇಕರಿ, ಕಾಂಡಿಮೆಂಟ್ ಮತ್ತು ಸಣ್ಣ ಉದ್ದಿಮೆದಾರರ ಒಕ್ಕೂಟದ ವತಿಯಿಂದ ಸಂಘ ಉದ್ಘಾಟನೆ, ಕಾರ್ಯಾಗಾರ, ಅಭಿನಂದನೆ, ಸಾಧಕರಿಗೆ ಸನ್ಮಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಸನ್ಮಾನಿಸಲಾಯಿತು.

ಹಳೆ ವಾಹನಗಳ ನವೀಕರಣ, ನೋಂದಣಿ ಶುಲ್ಕ ಹೆಚ್ಚಳ

ಬೆಂಗಳೂರು: ಕೇಂದ್ರ, ರಸ್ತೆ ಮತ್ತು ಹೆದ್ದಾರಿಗಳ ಸಚಿವಾಲಯವು 20ವರ್ಷಕ್ಕೂ ಹಳೆಯದಾದ ವಾಹನಗಳ ನೋಂದಣಿ, ನವೀಕರಣ ಶುಲ್ಕವನ್ನು ಹೆಚ್ಚಿಸಿ ಆದೇಶಿಸಿದೆ.

ಕೇಂದ್ರ ಸರಕಾರದ ಹೊಸ ಆದೇಶದ ಪ್ರಕಾರ, ಲಘು ಮೋಟಾರು ವಾಹನಗಳ(ಎಲ್ ಎಂ ವಿ) ನೋಂದಣಿ ನವೀಕರಣ ಶುಲ್ಕವನ್ನು 5 ಸಾವಿರ ರು.ನಿಂದ 10 ಸಾವಿರ ರುಗೆ ಹೆಚ್ಚಿಸಲಾಗಿದೆ. ಪರಿಸರ ಮಾಲಿನ್ಯ, ವಿದ್ಯುತ್ ಚಾಲಿತ ವಾಹನಗಳ ಪ್ರಮಾಣವನ್ನು ಹೆಚ್ಚಿಸುವ ದಿಸೆಯಲ್ಲಿ ಬೆಲೆಯನ್ನು ಏರಿಕೆ ಮಾಡಿದೆ. ಈ ಹಿನ್ನೆಲೆ ದ್ವಿಚಕ್ರ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು 1 ಸಾವಿರ ರುಪಾಯಿಯಿಂದ 2 ಸಾವಿರ ರುಪಾಯಿಗೆ, ತ್ರಿಚಕ್ರ ಹಾಗೂ ನಾಲ್ಕು ಚಕ್ರ ವಾಹನಗಳ ನವೀಕರಣ ಶುಲ್ಕವನ್ನು 3,500 ರುಪಾಯಿಯಿಂದ 5 ಸಾವಿರ ರುಪಾಯಿಗೆ ಏರಿಕೆ ಮಾಡಲಾಗಿದೆ.

ಆಮದು ಮಾಡಿಕೊಂಡಿರುವ ದ್ವಿಚಕ್ರ ಹಾಗೂ ತ್ರಿಚಕ್ರ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು 20 ಸಾವಿರ ರುಪಾಯಿಗೆ ಹೆಚ್ಚಿಸಲಾಗಿದೆ. ಅದೇ ರೀತಿ, ಆಮದು ಮಾಡಿಕೊಂಡಿರುವ ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಚಕ್ರಗಳ ವಾಹನಗಳ ನೋಂದಣಿ ನವೀಕರಣ ಶುಲ್ಕವನ್ನು 80 ಸಾವಿರ ರುಪಾಯಿಗೆ ಹೆಚ್ಚಿಸಲಾಗಿದೆ.

ಜನರು 20 ವರ್ಷಕ್ಕಿಂತ ಹೆಚ್ಚಿನ ವಾಹನಗಳನ್ನು ಇಟ್ಟುಕೊಳ್ಳಬಾರದು, ಹೊಸ ವಾಹನಗಳನ್ನು ಖರೀದಿಸಬೇಕು ಎಂಬುದು ಕೇಂದ್ರ ಸರಕಾರದ ಧೋರಣೆಯಾಗಿದೆ. ಇದೇ ಕಾರಣಕ್ಕಾಗಿ 2021ರ ಅಕ್ಟೋಬರ್‌ನಲ್ಲೂ ಹಳೆಯ ವಾಹನಗಳ ನೋಂದಣಿ ಶುಲ್ಕವನ್ನು ಏರಿಕೆ ಮಾಡಲಾಗಿತ್ತು. ಈಗ ಮತ್ತೆ ಏರಿಕೆ ಮಾಡಿದೆ.

ಅಡಿಗಾಸ್ ಯಾತ್ರಾ®
ಮೂರು ದಶಕಗಳ ಅನುಭವ, ಅದೇ ನಂಬಿಕೆ, ಅದೇ ವಿಶ್ವಾಸ
ನಾಡಿನ ಸಮಸ್ತ ಜನತೆಗೆ
ಗೌರಿ ಗಣೇಶ ಹಬ್ಬದ ಶುಭಾಶಯಗಳು

ಕೆ. ನಾಗರಾಜ ಅಡಿಗ
ಸಂಸ್ಥಾಪಕರು

9449478944
care@adigasyatra.com | www.adigasyatra.com

ಯೂರೋಪ್ ಪ್ರವಾಸಕ್ಕೆಸೂಕ್ತ ಆಯ್ಕೆ **ಅಡಿಗಾಸ್** ಏಕೆ?

- 30 ವರ್ಷಗಳ ಸಮಗ್ರ ಅನುಭವ ಹಾಗೂ ಜ್ಞಾನ → ಲಕ್ಷಾಂತರ ಪ್ರವಾಸಿಗರ ನಂಬಿಕೆ ಹಾಗೂ ವಿಶ್ವಾಸ
- ಪ್ರಖ್ಯಾತ ಬ್ರಾಂಡ್ ಹಾಗೂ 4* ಹೋಟೆಲ್ ಗಳ ವಾಸ್ತವ್ಯ → ಐಷಾರಾಮಿ ಸುಖಾಸೀನ ಬಸ್ಸುಗಳಲ್ಲಿ ಪ್ರಯಾಣ.
- ಆಯ್ದ ಹಾಗೂ ಕಾಯ್ದಿರಿಸಿದ ಉತ್ತಮ ರೆಸ್ಟೋರೆಂಟ್ ಗಳಲ್ಲಿ ಭಾರತೀಯ ಶೈಲಿಯ ಉಟೋಪಹಾರದ ವ್ಯವಸ್ಥೆ.
- ಅನುಭವಿ, ನುರಿತ ಟೂರ್ ಮ್ಯಾನೇಜರ್ ರಿಂದ ಮಾರ್ಗದರ್ಶನ.
- ಪ್ರಸಿದ್ಧ ತಾಣಗಳನ್ನು ಹಾಗೂ ನೋಡಲೇ ಬೇಕಾದ ಪ್ರವಾಸಿತಾಣ ಗಳ ವಿವರಗಳ ನ್ನೊಳಗೊಂಡ ಕಾರ್ಯಕ್ರಮ ಪಟ್ಟಿ.
- ವೀಸಾ, ವಿಮೆ, ವಿಖ್ಯಾತ ತಾಣಗಳ ಪ್ರವೇಶಾತಿ ಶುಲ್ಕ ಹಾಗೂ ಡ್ರೈವರ್ ಮತ್ತು ಗೈಡ್‌ಗಳ ಟಿಪ್ಸ್ ಎಲ್ಲವನ್ನೂ ಒಳಗೊಂಡಿದೆ.
- ಕನ್ನಡಿಗರೇ ಸಹ ಪ್ರಯಾಣಿಕರಾಗಿರುವುದರಿಂದ ಭಾಷೆ, ಸಂಸ್ಕೃತಿ, ಆಹಾರ ಸಾಮ್ಯತೆ ಪ್ರವಾಸವನ್ನು ಸ್ಮರಣೀಯವನ್ನಾಗಿಸುತ್ತದೆ.

ಇಂಗ್ಲೆಂಡ್ ಮತ್ತು ಯುರೋಪ್ → 16 ದಿನಗಳು
ಇಂಗ್ಲೆಂಡ್, ಫ್ರಾನ್ಸ್, ಬೆಲ್ಜಿಯಂ, ನೆದರ್ ಲ್ಯಾಂಡ್ಸ್, ಲಿಕ್ಟನ್ ಸ್ಟನ್, ಲಕ್ಸಮ್ ಬರ್ಗ್, ಆಸ್ಟ್ರಿಯ, ಜರ್ಮನಿ, ಸ್ವಿಝರ್ ಲ್ಯಾಂಡ್, ಇಟಲಿ, ವ್ಯಾಟಿಕನ್.
ದಿನಾಂಕಗಳು: OCT 8, 22. NOV 5, 12. 7022259008

ಯುರೋಪ್ → 13 ದಿನಗಳು
ಭೇಟಿ ನೀಡುವ ಸ್ಥಳಗಳು: ಫ್ರಾನ್ಸ್, ಬೆಲ್ಜಿಯಂ, ನೆದರ್ ಲ್ಯಾಂಡ್ಸ್, ಲಿಕ್ಟನ್ ಸ್ಟನ್, ಲಕ್ಸಮ್ ಬರ್ಗ್, ಆಸ್ಟ್ರಿಯ, ಜರ್ಮನಿ, ಸ್ವಿಝರ್ ಲ್ಯಾಂಡ್, ಇಟಲಿ, ವ್ಯಾಟಿಕನ್.
ದಿನಾಂಕಗಳು: OCT 11, 25. NOV 8, 15. 7022259008

ಕೈಲಾಸ ಮಾನಸ ಸರೋವರ ಯಾತ್ರಾ (ವಿಮಾನ & ಹೆಲಿಕಾಪ್ಟರ್‌ನಲ್ಲಿ) **→ 9 ದಿನಗಳು**
ಭೇಟಿ ನೀಡುವ ಸ್ಥಳಗಳು: ನೇಪಾಳ್ ಗಂಜ್, ಮಾನಸ ಸರೋವರ, ಕೈಲಾಸ ಪರ್ವತ.
ದಿನಾಂಕಗಳು: SEP 5, 10. 7022259008

ಆಸ್ಟ್ರೇಲಿಯಾ → 13 ದಿನಗಳು
ಭೇಟಿ ನೀಡುವ ಸ್ಥಳಗಳು: ಸಿಡ್ನಿ : ಬ್ಲೂ ಮೌಂಟೇನ್, ವೂ ಲಂಗಾಂಗ್, ಮೆಲ್ಬೋರ್ನ್ : ಗ್ರೇಟ್ ಓಷನ್ ರೋಡ್, ಪೆಂಗ್ವಿನ್ ಪರೇಡ್. ಕೇಂಝ: ಕುರಾಂಡಾ, ಗ್ರೇಟ್ ಬ್ಯಾರಿಯರ್ ರೀಫ್, ಗೋಲ್ಡ್ ಕೋಸ್ಟ್ : ಸೀ ವರ್ಲ್ಡ್, ಕ್ರಿಸ್ಟಲ್ ಕ್ಯಾಸಲ್, ಶಂಬಾಲಾ ಗಾರ್ಡನ್, ಬ್ರಿಸ್ಬೇನ್.
ದಿನಾಂಕಗಳು: OCT 19. NOV 2, 16, 23. DEC 7. 7483366378

ಸಿಂಗಾಪುರ್ - ಮಲೇಷಿಯಾ - ಥೈಲ್ಯಾಂಡ್ → 4 / 5 / 7 / 8 / 11 / 15 ದಿನಗಳು
ಭೇಟಿ ನೀಡುವ ಸ್ಥಳಗಳು: ಸಿಂಗಾಪುರ್: ಯೂನಿವರ್ಸಲ್ ಸ್ಟುಡಿಯೋ, ಸೆಂಟೋಸಾ ಐಲ್ಯಾಂಡ್, ವಿಂಗ್ಸ್ ಆಫ್ ಟೈಮ್, ಕೇಬಲ್ ಕಾರ್, ಸಿಂಗಾಪುರ್ ಸಿಟಿ ಟೂರ್, ಸೀ ಅಕ್ವೇರಿಯಂ, ಗಾರ್ಡನ್ಸ್ ಬೈ ದ ಬೇ. ಮಲೇಷಿಯಾ : ಕೌಲಾಲಂಪುರ್ ಸಿಟಿ ಟೂರ್, ಪುತ್ರಜಯ, ಜೆಂಟಿಂಗ್ ಹೈ ಲ್ಯಾಂಡ್. ಥೈಲ್ಯಾಂಡ್ : ಪಟ್ಟಾಯ, ಕೋರಲ್ ಐಲ್ಯಾಂಡ್, ಅಲ್ಕಝರ್ ಶೋ, ನೋಂಗ್ ನೂಚ್ ವಿಲೇಜ್, ಬ್ಯಾಂಕಾಕ್ ಸಿಟಿ ಟೂರ್, ಸಫಾರಿ ವರ್ಲ್ಡ್, ಮರೈನ್ ಪಾರ್ಕ್.
ದಿನಾಂಕಗಳು: SEP 19, 26. OCT 3, 17, 24. NOV 7, 21, 28. DEC 5, 12. 7483366378



ಶ್ರೀಲಂಕಾ ರಾಮಾಯಣ ಟೂರ್ → 5 / 7 / 8 ದಿನಗಳು
ಭೇಟಿ ನೀಡುವ ಸ್ಥಳಗಳು : ರಾಮಾಯಣ ದೇಗುಲಗಳು, ಮನಾವರಿ, ಮುನೇಶ್ವರಮ್, ಟ್ರಿನ್ಕೋಮಲಿ, ಸಿಗಿರಿಯಾ ರಾಕ್ (ಫೋಟೋ stop) ಕ್ಯಾಂಡಿ, ಟೂತ್ ರೆಲಿಕ್, ರಾಂಬೊಡಾ ಹನುಮಾನ್ ಮಂದಿರ, ಟೀ ಫ್ಯಾಕ್ಟರಿ, ನುವಾರಾ ಎಲಿಯ, ಅಶೋಕ ವಾಟಿಕಾ, ಸೀತಾ ಅಗ್ನಿ ಪರೀಕ್ಷಾ ಸ್ಥಳ, ಬೆಂಟೋಟಾ ಬೀಚ್, ಮಾಧು ರಿವರ್ ಸಫಾರಿ, ವಿಭೀ ಷಣ ಮಂದಿರ, ಕೊಲಂಬೊ ಸಿಟಿ ಟೂರ್.
ದಿನಾಂಕಗಳು: SEP 11, 18, 25. OCT 2, 16, 30. NOV 6, 20, 27. DEC 4, 11, 18. 9364104366

ದುಬೈ → 6 ದಿನಗಳು
ಭೇಟಿ ನೀಡುವ ಸ್ಥಳಗಳು : ಧೋ ಕ್ರೂಸ್, ದುಬೈ ಸಿಟಿ ಟೂರ್, ಅಬುದಾಬಿ ಸಿಟಿ ಟೂರ್, ಬುರ್ಜ್ ಕಲಿಫಾ, ಡೆಸರ್ಟ್ ಸಫಾರಿ, ದುಬೈ ಫ್ರೇಮ್, ಗ್ಲೋಬಲ್ ವಿಲೇಜ್.
ದಿನಾಂಕಗಳು: SEP 11, 18, 25. OCT 2, 16, 30. NOV 6, 20, 27. DEC 4, 11, 18. 9364104373

ನೇಪಾಳ - ಮುಕ್ತಿನಾಥ → 5/9 ದಿನಗಳು
ಭೇಟಿ ನೀಡುವ ಸ್ಥಳಗಳು : ಲುಂಬಿನಿ, ಪೋಕ್ರಾ, ಜೋಮ್ ಸಮ್, ಮುಕ್ತಿನಾಥ, ಫೀವಾ ಲೇಕ್, ಮನೋಕಾಮನ, ಕಟ್ಮಂಡು, ಭಕ್ತಪುರ, ಡೋಲೇಶ್ವರ ಮಹಾದೇವ, ಜನಕಪುರ ಇತ್ಯಾದಿ.
ದಿನಾಂಕಗಳು: SEP 11, 18. OCT 7, 16, 30. NOV 6, 20, 27. 7022259007

ಭೂತಾನ್ - ದ ಲ್ಯಾಂಡ್ ಆಫ್ ಹ್ಯಾಪಿನೆಸ್ → 8 ದಿನಗಳು
ಭೇಟಿ ನೀಡುವ ಸ್ಥಳಗಳು: ಫುನ್ ಶೋಲಿಂಗ್, ಪುನಾಖ, ಪಾರೋ,ಥಿಂಪು.
ದಿನಾಂಕಗಳು: SEP 11, 18. OCT 7, 16, 30. NOV 6, 20, 27. DEC 4, 11, 18. 7022259007

ಬಾಲಿ - ದ ಲ್ಯಾಂಡ್ ಆಫ್ ಗಾಡ್ಸ್ → 5 / 7 / 9 ದಿನಗಳು
ಭೇಟಿ ನೀಡುವ ಸ್ಥಳಗಳು: ಡೆನ್ ಪಸರ್, ನುಸಾ ಪೆನಿಡಾ ಐಲ್ಯಾಂಡ್, ಕಿಂತಾಮಣಿ, ಉಬುದ್, ಗರುಡ ವಿಷ್ಣು ಕಲ್ಚರಲ್ ಪಾರ್ಕ್, ತನಾಹ್ ಲಾಟ್, ಬೆರಾಟನ್ ಲೇಕ್, ಉಲಾನ್ ದಾನು, ತಮನ್ ಆಯುನ್, ತಂಜುಂಗ್ ಬೆನೋವಾ ಬೀಚ್, ಉಲು ವಾಟು, ಬೈಸಾಕಿ, ತೀರ್ಥ ಎಂಪುಲ್, ತೀರ್ಥ ಗಂಗಾ, ಕಿಂಗ್ ಪ್ಯಾಲೇಸ್, ಬ್ಯಾಟ್ ಕೇವ್ಸ್ ಟೆಂಪಲ್.
ದಿನಾಂಕಗಳು: SEP 15, 22. OCT 6, 20, 27. NOV 3, 17, 24. DEC 1, 15. 7022259008

ಕಾಂಬೋಡಿಯಾ- ವಿಯೆಟ್ನಾಮ್ → 6 / 7 / 10 / 12 ದಿನಗಳು
ಭೇಟಿ ನೀಡುವ ಸ್ಥಳಗಳು: ಕಾಂಬೋಡಿಯಾ: ನೊಮ್ ಫೆನ್, ಸಿಯಾಮ್ ರೀಪ್, ಅಂಕೋರ್ ವಾಟ್, ಟೋನ್ಲೆ ಸಾಪ್, ಥೌಸಂಡ್ ಲಿಂಗ ರಿವರ್. ವಿಯೆಟ್ನಾಮ್: ಹಾನೋಯ್, ನಿನ್ ಬಿನ್, ಹೊಲಾಂಗ್ ಬೇ, ದ ನಾಂಗ್, ಹೊಯ್ ಆನ್, ಬಾ ನಾ ಹಿಲ್ಸ್, ಮೆಕಾಂಗ್ ಡೆಲ್ಟಾ , ಹೊಚಿಮಿನ್ ಸಿಟಿ, ಕು ಚಿ ಟನಲ್ಸ್.
ದಿನಾಂಕಗಳು: SEP 11, 18, 25. OCT 2, 16, 30. NOV 6, 20, 27. DEC 4, 11. 7975001525

ರಷ್ಯಾ → 7 ದಿನಗಳು
ಭೇಟಿ ನೀಡುವ ಸ್ಥಳಗಳು: ಕ್ರೆಮ್ಲಿನ್, ರೆಡ್ ಸ್ಕ್ವೇರ್, ಕ್ಯಾತೆಡ್ರಲ್ ಆಫ್ ಕ್ರಿಸ್ಟ್ ದ ಸೇವಿಯರ್, ಸ್ಪಾರೋ ಹಿಲ್ಸ್, ಮೋಸ್ಕ್ವಾ ರಿವರ್ ಬೋಟ್ ರೈಡ್, ಪೀಟರ್ ಹೊಫ್ ಪ್ಯಾಲೇಸ್, ಸ್ಯಾಪ್ ಸನ್ ಟ್ರೈನ್, ವಾಸಿಲಿವಸ್ಕ್ಯ ಐಲ್ಯಾಂಡ್, ಅನಿಕೋವ್ ಬ್ರಿಡ್ಜ್, ಪೀಟರ್ ಅಂಡ್ ಪಾಲ್ಸ್ ಫೋರ್ಟ್ರೆಸ್, ಪ್ಯಾಲೇಸ್ ಸ್ಕ್ವೇರ್,ಪುಶ್ಕಿನ್, ಅಲೆಕ್ಸಂಡರ್ ಕಾಲಂ ಮೋನ್ಯೂಮೆಂಟ್.
ದಿನಾಂಕಗಳು: OCT 16, 30. 7975001525

ಮತಪಟ್ಟಿ ಪರಿಷ್ಕರಣೆಗೆ ಸೂಚನೆ?

ರಾಜ್ಯ ನಾಯಕರಿಗೆ ಸೂಚನೆ ನೀಡಿದ ಹೈಕಮಾಂಡ್ | ಪ್ರಮುಖರೊಂದಿಗೆ ಸಭೆ ನಡೆಸಿರುವ ಸುರ್ಜೇವಾಲ | ಸ್ಥಳೀಯ ಸಂಸ್ಥೆ ಚುನಾವಣೆ ಬಗ್ಗೆ ಗಮನಹರಿಸಿ; ಯುವ ನಾಯಕರನ್ನು ಸಿದ್ಧಪಡಿಸಿ

ಶುಕ್ರವಾರ ತಡರಾತ್ರಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಪ್ರಮುಖ ನಾಯಕರೊಂದಿಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಸಭೆ ನಡೆಸಿದರು.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಾಟಕದಲ್ಲಿ ಮುಂದಿನ ಆರು ತಿಂಗಳಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆ ನಡೆಸಲು ಮುಂದಾಗಿರುವ ಬೆನ್ನಲ್ಲೇ, ಮತಪಟ್ಟಿಯಲ್ಲಿನ ಲೋಪಗಳ ಬಗ್ಗೆ ತುರ್ತು ಪರಿಶೀಲನೆ ನಡೆಸಲು ರಾಜ್ಯ ಕಾಂಗ್ರೆಸ್ ನಾಯಕರಿಗೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೂಚನೆ ನೀಡಿದ್ದಾರೆ.

ಶುಕ್ರವಾರ ತಡರಾತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೇರಿದಂತೆ ಪ್ರಮುಖ ನಾಯಕರೊಂದಿಗೆ ಸಭೆ ನಡೆಸಿದ ಸುರ್ಜೇವಾಲ ಅವರು, ದೇಶಾದ್ಯಂತ ಮತಗಳ್ಳತನಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹೋರಾಟ ನಡೆಸುತ್ತಿದೆ. ಹಲವು ಭಾಗದಲ್ಲಿ ಮತಪಟ್ಟಿಯಲ್ಲಿ ಸಮಸ್ಯೆಯಿರುವುದು ಬಹಿರಂಗವಾಗಿದೆ. ಆದ್ದರಿಂದ ಮುಂದಿನ ಆರು ತಿಂಗಳಲ್ಲಿ ಎದುರಾಗಬಹುದಾದ ಬಿಬಿಎಂಪಿ, ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆ ವೇಳೆಗೆ ಮತದಾರರ ಪಟ್ಟಿಯಲ್ಲಿನ ಲೋಪಗಳನ್ನು ಸರಿಪಡಿಸುವಂತೆ ಸೂಚನೆ ನೀಡಿದ್ದಾರೆ.

ಈ ಹಿಂದೆ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಯಲ್ಲಿ ಮತಪಟ್ಟಿಯಲ್ಲಿ ಆಗಿರುವ ಅಕ್ರಮದ ಬಗ್ಗೆ ರಾಹುಲ್ ಗಾಂಧಿ ಅವರು ಈಗಾಗಲೇ ದಾಖಲೆ ಸಮೇತ ಹೇಳಿದ್ದಾರೆ. ಮತ ಪಟ್ಟಿಯಲ್ಲಿನ ಅಕ್ರಮಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದು ರಾಜ್ಯ ಚುನಾವಣಾ ಆಯೋಗದ ಜವಾಬ್ದಾರಿಯಾಗಿದ್ದು, ಮತದಾರರ ಪಟ್ಟಿ ಪರಿಷ್ಕರಣೆ ಸಂಪೂರ್ಣವಾಗಿ ರಾಜ್ಯ ವ್ಯಾಪ್ತಿಯ ಅಧಿಕಾರಿಗಳ ಹೊಣೆಯಾಗಿದೆ. ಆದ್ದರಿಂದ ಈ ಹಿಂದೆ ನಡೆದಿರುವ ಲೋಪಗಳನ್ನು ಸರಿಪಡಿಸುವ ಜತೆಗೆ ಕರಾರುವಾಕ್ಕಾದ ಮತದಾರರ ಪಟ್ಟಿ ಸಜ್ಜುಗೊಳ್ಳಬೇಕು. ಇದಕ್ಕೆ ಸಚಿವ ಸಂಪುಟದ ಸದಸ್ಯರು ಕಾಲಕಾಲಕ್ಕೆ ನಿಗಾವಹಿಸಬೇಕು ಎಂದು ಸಲಹೆ ನೀಡಿದ್ದಾರೆ.

ಕಾರ್ಯಕರ್ತರು ಎಚ್ಚರದಿಂದಿರಿ

ಪಕ್ಷದ ಬೂತ್‌ಮಟ್ಟದ ಕಾರ್ಯಕರ್ತರು ಮತದಾರರ ಪಟ್ಟಿಯಲ್ಲಿನ ಪರಿಷ್ಕರಣೆ ಬಗ್ಗೆ ಸದಾಕಾಲ ಎಚ್ಚರಿಕೆ ವಹಿಸಬೇಕು. ಈ ಹಿಂದೆ ಅಲ್ಪಸಂಖ್ಯಾತರ ಮತಗಳನ್ನು ಹಾಗೂ ಪರಿಶಿಷ್ಟರ ಮತಗಳನ್ನು ತೆಗೆದು ಹಾಕಿರುವುದು, ಅನ್ಯ ರಾಜ್ಯಗಳ ಮತದಾರರನ್ನು ಭಾರೀ ಪ್ರಮಾಣದಲ್ಲಿ ಸೇರ್ಪಡೆ ಮಾಡಿರುವುದು, ನಕಲಿ ಮತದಾರರ ಸಂಖ್ಯೆ ಹೆಚ್ಚಿರುವುದು ವ್ಯಾಪಕವಾಗಿತ್ತು. ಜತೆಗೆ ಒಬ್ಬ ವ್ಯಕ್ತಿ ಎರಡಕ್ಕಿಂತಲೂ ಹೆಚ್ಚಿನ ಸ್ಥಳಗಳಲ್ಲಿ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ನಮೂದಿಸಿಕೊಂಡಿರುವುದು ವ್ಯಾಪಕವಾಗಿ ಕಂಡು ಬಂದಿದೆ. ಈ ರೀತಿಯ ಪ್ರಕರಣಗಳನ್ನು ಸರಿಪಡಿಸಬೇಕು ಎಂದು ಸುರ್ಜೇವಾಲ ಚರ್ಚೆ ನಡೆಸಿರುವುದಾಗಿ ತಿಳಿದು ಬಂದಿದೆ.

ಭವಿಷ್ಯದ ನಾಯಕರನ್ನು ಸೃಷ್ಟಿಸಿ

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಭವಿಷ್ಯದ ನಾಯಕರನ್ನು ಸೃಷ್ಟಿಸಬೇಕು. ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಹೆಚ್ಚಿನ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲ್ಲುವಂತೆ ನೋಡಿಕೊಳ್ಳಬೇಕು. ಪಕ್ಷ ಸಂಘಟನೆ, ಚುನಾವಣಾ ತಯಾರಿ ಎಲ್ಲದರಲ್ಲೂ ಎಚ್ಚರಿಕೆಯ ಹೆಜ್ಜೆ ಇಡಬೇಕು. ಅಭ್ಯರ್ಥಿಗಳ ಆಯ್ಕೆಯಲ್ಲಿ ಪಕ್ಷನಿಷ್ಠರಿಗೆ ಆದ್ಯತೆ ನೀಡಬೇಕು. ವಲಸಿಗ ಅಭ್ಯರ್ಥಿ ಸಂಖ್ಯೆ ಶೇ. 10ಕ್ಕಿಂತ ಹೆಚ್ಚಿರಬಾರದು, ಅನಿವಾರ್ಯ ಸಂದರ್ಭದಲ್ಲಿ ಅನ್ಯ ಪಕ್ಷಗಳಿಂದ ಬಂದವರಿಗೆ ಟಿಕೆಟ್ ನೀಡಬೇಕಾದರೆ, ಸ್ಥಳೀಯ ನಾಯಕರ ಜತೆ ಸಮಾಲೋಚನೆ ನಡೆಸಿ, ಒಪ್ಪಿಗೆ ಪಡೆದುಕೊಳ್ಳುವುದು ಕಡ್ಡಾಯ ಎಂದು ರಣದೀಪ್ ಸಿಂಗ್ ಸುರ್ಜೇವಾಲ ತಾಕೀತು ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸಂಪನ್ಮೂಲ ಹೊಂದಾಣಿಕೆ ಹಾಗೂ ಕ್ಷೇತ್ರವಾರು ಚುನಾವಣಾ ಉಸ್ತುವಾರಿಗೆ ನಿಯೋಜನೆಗೊಳ್ಳುವ ಸಚಿವರ ಮತ್ತು ಶಾಸಕರ ಪಟ್ಟಿಯನ್ನು ಸಿದ್ಧಪಡಿಸಿ ಈ ತಿಂಗಳ ಅಂತ್ಯದಲ್ಲಿ ಎಐಸಿಸಿಗೆ ಸಲ್ಲಿಸುವಂತೆ ಸುರ್ಜೇವಾಲ ಸೂಚನೆ ನೀಡಿದ್ದಾರೆ.ಹಲವು ದಿನಗಳಿಂದ ನನೆಗುದಿಗೆ ಬಿದ್ದಿರುವ ಬಿಬಿಎಂಪಿ ಜಿಲ್ಲಾಪಂಚಾಯಿತಿ, ತಾಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ರಾಜ್ಯಸರಕಾರ ತಯಾರಿ ನಡೆಸುತ್ತಿದೆ.

ಸಮಾಚಾರ ಸಣ್ಣದಲ್ಲ

ಮಂಡ್ಯ: ಹತ್ಯೆ ಕೇಸ್ ಆರೋಪಿಗೆ ಗುಂಡೇಟು

ಮಂಡ್ಯ: ಚಿನ್ನದಂಗಡಿಯಲ್ಲಿ ಕಳ್ಳತನ ಮಾಡುವುದನ್ನು ನೋಡಿದ ಹೋಟೆಲ್ ಮಾಲೀಕನ ಹತ್ಯೆ ಮಾಡಿದ ಪ್ರಕರಣದ ಪ್ರಮುಖ ಆರೋಪಿಯ ಕಾಲಿಗೆ ಪೊಲೀಸರು ಫೈರಿಂಗ್ ಮಾಡಿದ್ದಾರೆ. ಈಚಗರೆ ಗ್ರಾಮದ ಕಿರಣ್ (24), ಕೊತ್ತತ್ತಿ ಗ್ರಾಮದ ಆನಂದ್, ಶರತ್, ಶ್ರೀನಿವಾಸ್, ಕೃಷ್ಣಾಚಾರಿ ಬಂಧಿತ ಆರೋಪಿಗಳು. ಪ್ರಕರಣದ ಪ್ರಮುಖ ಆರೋಪಿ ಕಿರಣನನ್ನು ಮಂಡ್ಯದ ಮಳವಳ್ಳಿ ತಾಲೂಕಿನ ಭೀಮನಹಳ್ಳಿ ಬಳಿ ಬಂಧಿಸುವ ವೇಳೆ ಪೊಲೀಸ್ ಪೇದೆಯ ಮೇಲೆ ಆತ ಚಾಕುವಿನಿಂದ ಹಲ್ಲೆಗೆ ಯತ್ನಿಸಿದ್ದ. ಈ ವೇಳೆ ಪ್ರಾಣ ರಕ್ಷಣೆಗಾಗಿ ಹಲಗೂರು ಠಾಣೆ ಸಿಪಿಐ ಶ್ರೀಧರ್ ಅವರು ಆರೋಪಿ ಕಾಲಿಗೆ ಫೈರಿಂಗ್ ಮಾಡಿದ್ದಾರೆ. ಆ.17ರಂದು ಕಿರುಗಾವಲು ಗ್ರಾಮದ ಮಹಾಲಕ್ಷ್ಮಿ ಜ್ಯುವೆಲರಿ ಶಾಪ್‌ಗೆ ಖದೀಮರು ಕನ್ನ ಹಾಕಿದ್ದರು. ಬೆಳಗಿನ ಜಾವ 3ಗಂಟೆ ಸಮಯದಲ್ಲಿ ಗ್ಯಾಸ್ ಕಟರ್‌ನಿಂದ ಶಾಪ್ ಶೆಟರ್ ಮುರಿದು ಕಳ್ಳತನ ಮಾಡಿದ್ದರು. 110ಗ್ರಾಂ ಚಿನ್ನ, 2 ಕೆಜಿಯಷ್ಟು ಬೆಳ್ಳಿಯನ್ನು ಐವರು ಖದೀಮರ ತಂಡ ದೋಚಿತ್ತು. ಕಳ್ಳತನ ಮಾಡುವುದನ್ನ ನೋಡಿದ ಪಕ್ಕದ ಹೋಟೆಲ್ ಮಾಲೀಕ ಮಾದಪ್ಪ ಅವರನ್ನು ಖದೀಮರು ಉಸಿರುಗಟ್ಟಿಸಿ ಹತ್ಯೆ ಮಾಡಿದ್ದರು.

ವಿರಾಮ
ಪ್ರತಿ ಭಾನುವಾರ

14 ಕೋಟಿಗೂ ಅಧಿಕ ವಂಚನೆ: ನಾಲ್ವರ ಸೆರೆ

ಲಕ್ಕಿ ಸ್ಕೀಮ್ ಹೆಸರಲ್ಲಿ ಜನರಿಗೆ ಕೋಟ್ಯಂತರ ರು. ವಂಚನೆ

ಮಂಗಳೂರು: ಲಕ್ಕಿ ಸ್ಕೀಮ್ ಮೂಲಕ ಗ್ರಾಹಕರಿಂದ ಕೋಟ್ಯಂತರ ರು. ಸಂಗ್ರಹಿಸಿ ವಂಚನೆ ಮಾಡಿದ ಎರಡು ಸಂಸ್ಥೆಗಳ ನಾಲ್ವರು ಆರೋಪಿಗಳನ್ನು ಮಂಗಳೂರು ನಗರ ಪೊಲೀಸರು ಬಂಧಿಸಿದ್ದಾರೆ ಎಂದು ಮಂಗಳೂರು ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ. ಅಹಮದ್ ಖುರೇಶಿ, ನಝೀರ್ ಯಾನೆ ನಾಸಿರ್, ಮುಹಮ್ಮದ್ ಅಶ್ರಫ್, ಮುಹಮ್ಮದ್ ಹನೀಫ್ ಬಂಧಿತ ಆರೋಪಿಗಳಾಗಿದ್ದಾರೆ.

ನ್ಯೂ ಶೈನ್ ಎಂಟರ್‌ಪ್ರೈಸಸ್ ಎಂಬ ಲಕ್ಕಿ ಸ್ಕೀಮ್‌ನಲ್ಲಿ 9 ತಿಂಗಳು 1,000 ರೂ. ಹಾಗೂ ಕೊನೆಯ 2 ತಿಂಗಳು 1,500 ರು. ಸೇರಿದಂತೆ ಒಟ್ಟು 11 ತಿಂಗಳ ಅವಧಿಗೆ ಆರೋಪಿಗಳು ಜನರಿಂದ ಹಣ ಸ್ವೀಕರಿಸಿದ್ದರು. ಅದರಂತೆ, ಲಕ್ಕಿ ಡ್ರಾನಲ್ಲಿ ಆಕರ್ಷಕ ಬಹುಮಾನ, ಬಂಪರ್ ಬಹುಮಾನಗಳಾದ ಕಾರು, ಬೈಕ್, ಫ್ಲಾಟ್, ಸೈಟ್, ಚಿನ್ನದ ಉಂಗುರಗಳು ಮತ್ತು ನಗದು ಸಿಕ್ಕಿದವರಿಗೆ ಅವುಗಳನ್ನು ಕೊಡುವುದಾಗಿ ನಂಬಿಸಿದ್ದರು. ಹೀಗೆ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಸುಮಾರು 3 ಸಾವಿರ ಜನರಿಂದ 4.20 ಕೋಟಿಗೂ ಮೀರಿ ಹಣ ಸಂಗ್ರಹ ಮಾಡಲಾಗಿತ್ತು. ಆದರೆ, ಲಕ್ಕಿ ಸ್ಕೀಮ್ ಕಂತು ಮುಗಿದ ನಂತರ ಡೆಪಾಸಿಟ್ ಮಾಡಿದ ಹಣ ಹಾಗೂ ಸರಿಯಾದ ಬಹುಮಾನಗಳನ್ನು ನೀಡದ ಆರೋಪಿಗಳು, ಕಾಟಿಪಳ್ಳ 2ನೇ ಬ್ಲಾಕ್ ಶಂಶುದ್ದೀನ್ ಸರ್ಕಲ್ ಬಳಿ ಇರುವ ನ್ಯೂ ಶೈನ್ ಎಂಟರ್‌ಪ್ರೈಸಸ್ ಕಚೇರಿಯನ್ನು ಏಕಾಏಕಿಯಾಗಿ ಬಂದ್ ಮಾಡಿದ್ದರು. ಈ ಸಂಬಂಧ ಆರೋಪಿಗಳಾದ ಅಹಮ್ಮದ್ ಖುರೇಶಿ (34) ಹಾಗೂ ನಝೀರ್ (39) ವಿರುದ್ಧ ಶಿವಪ್ರಸಾದ್ ಎಂಬವರು ದೂರು ನೀಡಿದ್ದರು.

ಸುರತ್ಕಲ್ ಠಾಣೆಯಲ್ಲಿ ಕೇಸ್ ದಾಖಲು

ಇದೊಂದು ಅನಿಯಂತ್ರಿತ ಠೇವಣಿ ಯೋಜನೆ ಆಗಿದ್ದು, ಆರೋಪಿಗಳು ಸಂಬಂಧಪಟ್ಟ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಇಲ್ಲದೇ ಸಾರ್ವಜನಿಕರಿಂದ ಸುಮಾರು 4 ಕೋಟಿ 20 ಲಕ್ಷಕ್ಕಿಂತ ಅಧಿಕ ಹಣ ಸಂಗ್ರಹಣೆ ಮಾಡಿ ವಂಚನೆ ಮಾಡಿದ್ದರು. ನಂಬಿಕೆ ದ್ರೋಹ, ವಂಚನೆಗೈದ ಬಗ್ಗೆ ಆ.16 ರಂದು ಸುರತ್ಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸದ್ಯ ಆರೋಪಿಗಳಾದ ಅಹಮ್ಮದ್ ಖುರೇಶಿ ಹಾಗೂ ನಜೀರ್ ಎಂಬವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಆ. 25ರವರೆಗೆ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ.

ಕಡಬ ಪಟ್ಟಣ ಪಂಚಾಯಿತಿ ಬಿಜೆಪಿ ಅಭ್ಯರ್ಥಿಗೆ ಸೊನ್ನೆ ಮತ

418 ಮತಗಳಲ್ಲಿ ಒಂದೇ ಒಂದು ಮತ ಪಡೆಯಲು ವಿಫಲ | ಕಾಂಗ್ರೆಸ್‌ಗೆ ಜಯ

ಮಂಗಳೂರು: ಕರಾವಳಿ ಕರ್ನಾಟಕವನ್ನು ಸಾಮಾನ್ಯವಾಗಿ ಬಿಜೆಪಿಯ ಭದ್ರಕೋಟೆಯೆಂದೇ ಹೇಳಲಾಗುತ್ತದೆ. ಆದರೆ, ಇದೀಗ ಬಿಜೆಪಿಗೆ ತೀವ್ರ ಮುಖಭಂಗ ಉಂಟಾಗಿದೆ. ಬಿಜೆಪಿ ಅಭ್ಯರ್ಥಿಯೊಬ್ಬರು ಒಂದೇ ಒಂದು ಮತವನ್ನು ಪಡೆಯದೆ ಅಪರೂಪದ ಮತ್ತು ಅವಮಾನಕರ ಸೋಲು ಕಂಡಿದ್ದಾರೆ. ಕಡಬ ಪಟ್ಟಣ ಪಂಚಾಯತ್ ಚುನಾವಣೆಯಲ್ಲಿ ಬಿಜೆಪಿ ಸೋಲು ಕಂಡಿದೆ.

ವಾರ್ಡ್ ಸಂಖ್ಯೆ 1 (ಕಳಾರ) ರ ಬಿಜೆಪಿ ಅಭ್ಯರ್ಥಿ ಪ್ರೇಮಾ, ವಾರ್ಡ್‌ನಲ್ಲಿನ 418 ಮತಗಳ ಪೈಕಿ ಒಂದೇ ಒಂದು ಮತವನ್ನು ಪಡೆಯಲು ವಿಫಲರಾಗಿದ್ದಾರೆ. ಈ ಸ್ಥಾನವನ್ನು ಕಾಂಗ್ರೆಸ್ ಅಭ್ಯರ್ಥಿ ತಮನ್ನಾ ಜಬೀನ್ 201 ಮತಗಳನ್ನು ಪಡೆದು, ಸ್ವತಂತ್ರ ಅಭ್ಯರ್ಥಿ ಜೈನಾಬಿ ಆಡಮ್ ಅವರನ್ನು 62 ಮತಗಳ ಅಂತರದಿಂದ ಸೋಲಿಸಿ ಗೆದ್ದರು. ಕಣದಲ್ಲಿದ್ದ ಎಸ್‌ಡಿಪಿಐ ಅಭ್ಯರ್ಥಿ 74 ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಬಿಸಿಎ (ಮಹಿಳೆ) ಗಾಗಿ ಮೀಸಲಾಗಿರುವ ಈ ವಾರ್ಡ್‌ನಲ್ಲಿ ನಾಲ್ಕು ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದರು.

ವಾರ್ಡ್ ಸಂಖ್ಯೆ 1ರ ಮತದಾರರಲ್ಲದ ಪ್ರೇಮಾ, ಅವರು ವಾಸಿಸುವ ವಾರ್ಡ್ ಸಂಖ್ಯೆ 6 ರಲ್ಲೂ ಕಣದಲ್ಲಿದ್ದರು. ಆದರೆ, ಅಲ್ಲಿಯೂ 177 ಮತಗಳನ್ನು ಗಳಿಸಿ ಕಾಂಗ್ರೆಸ್‌ನ ನೀಲಾವತಿ ಶಿವರಾಮ್ ಎಂ.ಎಸ್. ವಿರುದ್ಧ ಸೋತರು. ನೀಲಾವತಿ 314 ಮತಗಳನ್ನು ಗಳಿಸಿ ಗೆದ್ದು ಬೀಗಿದ್ದಾರೆ.

ವಾರ್ಡ್ ಸಂಖ್ಯೆ 1ರಲ್ಲಿ ತಮ್ಮ ಅಭ್ಯರ್ಥಿಗೆ ಶೂನ್ಯ ಮತಗಳು ಬಂದ ನಂತರ ಬಿಜೆಪಿ ನಾಯಕರು, ಈ ಪ್ರದೇಶವು ಮುಸ್ಲಿಂ ಬಹುಸಂಖ್ಯಾತರನ್ನು ಒಳಗೊಂಡಿರುವುದರಿಂದ ಅಲ್ಲಿ ಬಿಜೆಪಿಗೆ ಸಾಮಾನ್ಯವಾಗಿ ಕಡಿಮೆ ಬೆಂಬಲವಿದೆ ಎಂದು ಹೇಳಿದರು. ದಕ್ಷಿಣ ಕನ್ನಡ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲಾ ಅವರು, ಸ್ಥಳೀಯ ಪಕ್ಷದ ಘಟಕವು ನಾಮಪತ್ರ ಸಲ್ಲಿಸಿದ ನಂತರ ತಮ್ಮ ಅಭ್ಯರ್ಥಿಯ ಬದಲು ಸ್ವತಂತ್ರ ಅಭ್ಯರ್ಥಿ ಜೈನಾಬಿ ಆಡಮ್ ಅವರನ್ನು ಬೆಂಬಲಿಸಲು ನಿರ್ಧರಿಸಿತ್ತು. ಏಕೆಂದರೆ, ಆ ವಾರ್ಡ್‌ನಲ್ಲಿ ಬಿಜೆಪಿ ಗೆಲ್ಲುವ ಸಾಧ್ಯತೆ ಕಡಿಮೆ ಎಂದಿದ್ದಾರೆ.

ಬೆಳಗಾವಿ: ನದಿ ಪಾತ್ರದಲ್ಲಿ ಪ್ರವಾಹದ ಆತಂಕ

ಬೆಳಗಾವಿ: ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಅವಾಂತರ ಕಡಿಮೆಯಾಗಿದ್ದರೂ ಕೃಷ್ಣಾ, ವೇದಗಂಗಾ ಹಾಗೂ ದೂದಗಂಗಾ ನದಿ ಒಳ ಹರಿವು ಹೆಚ್ಚಾದ ಪರಿಣಾಮ ನದಿ ಪಾತ್ರದಲ್ಲಿ ಪ್ರವಾಹದ ಆತಂಕ ಮುಂದುವರಿದಿದೆ. ಈ ಕಾರಣಕ್ಕೆ ಪ್ರವಾಹ ಪೀಡಿತ ಗ್ರಾಮಗಳ ಜನರ ಬದುಕು ಸಂಕಷ್ಟಕ್ಕೆ ಸಿಲುಕಿದೆ.

ಮಹಾರಾಷ್ಟ್ರದ ಜಲಾಶಯಗಳಿಂದ ನೀರು ಹರಿದುಬರುತ್ತಿರುವ ಪರಿಣಾಮ,ದೂಧಗಂಗಾ ನದಿಗೆ ನೀರಿನ ಮಟ್ಟ ಹೆಚ್ಚಾಗಿ ಯಕ್ಸಂಬಾ ಪಟ್ಟಣದ ಕರ್ಲಹೊಂಡಲಿಂಗೇಶ್ವರ ದೇವಸ್ಥಾನ ಜಲಾವೃತಗೊಂಡಿದೆ. ಸಾರ್ವಜನಿಕರಿಗೆ ದೇವರ ದರ್ಶನ ನಿರ್ಬಂಧಿಸಲಾಗಿದೆ. ಅಷ್ಟೇ ಅಲ್ಲದೆ ಚಿಕ್ಕೋಡಿ ತಾಲೂಕಿನ ಕೃಷ್ಣಾ ನದಿ ಪಕ್ಕದಲ್ಲಿರುವ ಯಡೂರು ವೀರಭದ್ರೇಶ್ವರ ದೇವಸ್ಥಾನದ ಜಲಾವೃತಗೊಂಡಿದ್ದು ಜನ ಪ್ರವಾಹದ ಮಧ್ಯೆ ದರ್ಶನ ಪಡೆಯುತ್ತಿದ್ದಾರೆ. ಪ್ರವಾಹದ ಕುರಿತು ಮಾಹಿತಿ ನೀಡಿರುವ ಚಿಕ್ಕೋಡಿ ಉಪವಿಭಾಗಧಿಕಾರಿ ಸುಭಾಷ ಸಂಪಗಾವಿ, ಕೃಷ್ಣಾ ಸೇರಿದಂತೆ ದೂಧಗಂಗಾ, ವೇದಗಂಗಾ ನದಿಗಳ ಒಳಹರಿವು ಶನಿವಾರ ಕಡಿಮೆಯಾಗಿದ್ದು ಜನರು ಪ್ರವಾಹದ ಕುರಿತು ಆತಂಕ ಪಡುವ ಅಗತ್ಯ ಇಲ್ಲ ಎಂದರು. ಮಹಾರಾಷ್ಟ್ರದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದೆ. ಜನರು ನದಿ ಹತ್ತಿರ ಸ್ನಾನ, ಬಟ್ಟೆ, ವಾಹನ ತೊಳೆಯಲು ಹೋಗಬಾರದೆಂದು ಮನವಿ ಮಾಡಿದರು.

ಯಕ್ಸಂಬಾ ಪಟ್ಟಣದ ಕರ್ಲಹೊಂಡಲಿಂಗೇಶ್ವರ ದೇವಸ್ಥಾನ ಜಲಾವೃತಗೊಂಡಿರುವುದು.

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ

ಉರ್ವಾಸ್ಟೋರ್, ಅಶೋಕನಗರ ಅಂಚೆ, ಮಂಗಳೂರು.

ಸಂಖ್ಯೆ: MUDAMG-TPOCCTE/255/2025(32070) ದಿನಾಂಕ: 21.08.2025

ಪ್ರಕಟಣೆ

(ಕರ್ನಾಟಕ ಸರಕಾರ ಸುತ್ತೋಲೆ ನಂ. ನಅಇ/237/ಬೆಮಪ್ರಾ/2009 ದಿನಾಂಕ 19.09.2009)

ಮಂಗಳೂರು ತಾಲೂಕು ಪೆರ್ಮುದೆ ಗ್ರಾಮದ ಸ.ನಂ. 145/14ಬಿ3 ರಲ್ಲಿನ 26.25 ಸೆಂಟ್ಸ್ ಮತ್ತು 145/14ಬಿ3 ರಲ್ಲಿನ 11.50 ಸೆಂಟ್ಸ್ ಒಟ್ಟು 37.75 ಸೆಂಟ್ಸ್ ವಿಸ್ತೀರ್ಣದ ಜಮೀನಿನಲ್ಲಿ Place of Worship ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ಕೋರಿ ಮೊಹಿದ್ದೀನ್ ಜುಮ್ಮಾ ಮಸೀದಿ ಪರವಾಗಿ ಅಧ್ಯಕ್ಷರು, ಮಹಮ್ಮದೀಯ ಮಿನಾರ ಮಸೀದಿ, ಪೆರ್ಮುದೆ, ಮಂಗಳೂರು-ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಸರ್ಕಾರದಿಂದ ಅನುಮೋದಿತವಾಗಿರುವ ಅಂತಿಮ ಮಹಾಯೋಜನೆ (ಪ-II)ರಲ್ಲಿ ಪ್ರಸ್ತಾಪಿಸಿರುವ ಜಮೀನು "ಸಾರ್ವಜನಿಕ ಮತ್ತು ಅರೆಸಾರ್ವಜನಿಕ" ವಲಯದಲ್ಲಿದ್ದು, ಪ್ರಾಧಿಕಾರದಿಂದ Place of Worship ಉದ್ದೇಶಕ್ಕೆ ಏಕನಿವೇಶನ ವಿನ್ಯಾಸ ಅನುಮೋದನೆ ನೀಡಲಾಗಿದೆ. ಸದರಿ ಜಮೀನಿಗೆ ಪಶ್ಚಿಮದಲ್ಲಿ 30.0 ಮೀ. ಅಗಲದ ಸಂಪರ್ಕ ರಸ್ತೆ ಇದ್ದು, 30.0 ಮೀ ಪ್ರಸ್ತಾವನೆ ಇದೆ. ಉತ್ತರದಲ್ಲಿನ 10.70 ಮೀ. ಅಗಲದ ಸಂಪರ್ಕ ರಸ್ತೆಯನ್ನು 12.0 ಮೀ. ವಿಸ್ತರಿಸಲು ಪ್ರಸ್ತಾಪಿಸಲಾಗಿದೆ. ವಲಯ ನಿಯಮಾವಳಿ ಟೇಬಲ್-1 ರಂತೆ ವಸತಿ ವಲಯದಲ್ಲಿ ರಸ್ತೆ ಅಗಲದ ಮೇಲೆ Place of Worship (P & SP4) ಬೆಳವಣಿಗೆಗಳನ್ನು ಅನುಮತಿಸಲು ಅವಕಾಶವಿರುತ್ತದೆ. ಸರ್ಕಾರದ ಸುತ್ತೋಲೆ ಸಂಖ್ಯೆ/ನಅಇ/237/ಬೆಮಪ್ರಾ/2009 ದಿನಾಂಕ 19.09.2009 ರಂತೆ Place of Worship ಕಟ್ಟಡವನ್ನು ಅನುಮೋದಿಸುವಾಗ ಸ್ಥಳೀಯ 02 ದಿನಪತ್ರಿಕೆಯಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಪಡೆಯುವಂತೆ ತಿಳಿಸಲಾಗಿದೆ.

ಆದ್ದರಿಂದ ಈ ಮೇಲ್ಕಂಡ ಪ್ರಸ್ತಾವನೆ ಬಗ್ಗೆ ಸಾರ್ವಜನಿಕರಿಂದ/ಸಂಸ್ಥೆಗಳಿಂದ ಯಾವುದಾದರೂ ಆಕ್ಷೇಪಣೆ ಇದ್ದಲ್ಲಿ ಲಿಖಿತವಾಗಿ, ಮುದ್ದಾಂ/ನೋಂದಣಿ ಅಂಚೆ ಮೂಲಕ ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಈ ಕೆಳಗೆ ಸಹಿ ಮಾಡಿದವರ ಮೇಲ್ಕಂಡ ವಿಳಾಸಕ್ಕೆ ತಲುಪಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಸ್ವೀಕೃತವಾಗುವ ಯಾವುದೇ ಆಕ್ಷೇಪಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಮೊಹಮ್ಮದ್ ನಝೀರ್,
ಆಯುಕ್ತರು, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ,
ಮಂಗಳೂರು

DIPR / MNG / 675/ MPL / 25-26

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

49, 'ಪರಿಸರ ಭವನ', 1 ರಿಂದ 5ನೇ ಅಂತಸ್ತು, ಚರ್ಚ್ ರಸ್ತೆ,
ಬೆಂಗಳೂರು-560001, ಕರ್ನಾಟಕ, ಇಂಡಿಯಾ.
ದೂರವಾಣಿ ಸಂಖ್ಯೆ : 25581383, 25589112, 25586520, ಫ್ಯಾಕ್ಸ್: 080-25586321
E-mail: ho@kspcb.gov.in, Website: https://kspcb.karnataka.gov.in

ಸಂಖ್ಯೆ: ಪಿಸಿಬಿ/169/BLD/2023/2025-26/2033 ದಿನಾಂಕ: 16.08.2025

ಟೆಂಡರ್ ಆಹ್ವಾನ

(GOK ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ http://kppp.karnataka.gov.in ಮೂಲಕ)

ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) ಇವರು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ಮೂಲಕ ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: ಗದಗದಲ್ಲಿ ಕೆಎಸ್‌ಪಿಸಿಬಿ ಪ್ರಾದೇಶಿಕ ಕಚೇರಿ ಕಟ್ಟಡ ಕಾಮಗಾರಿ. **ಕಾಮಗಾರಿಯ ಅಂದಾಜು ಮೌಲ್ಯ : ರೂ.289.40 ಲಕ್ಷಗಳು,** ಟೆಂಡರ್ ವೆಚ್ಚ, ಇಎಂಡಿ ಇತ್ಯಾದಿ ಎಲ್ಲಾ ಪಾವತಿಗಳನ್ನು ಇ-ಪಾವತಿ ವಿಧಾನದಲ್ಲಿ ಮಾತ್ರ ಮಾಡಲಾಗುತ್ತದೆ.

ಟೆಂಡರ್ ಷೆಡ್ಯೂಲ್/ದಿನಾಂಕ: NIT ಪ್ರಕಟಿತ ದಿನಾಂಕ, ಬಿಡ್ ಪೂರ್ವ ಸಭೆಯ ದಿನಾಂಕ ಮತ್ತು ಸಮಯ, ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಪ್ರಕಾರ.

ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: http://kppp.karnataka.gov.in ನ್ನು ಸಂಪರ್ಕಿಸಿ.

ಸಹಿ/-
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ವಾಸಸಂಇ/ವಾಪ್ರ/2443/ಎಸ್‌ಎಸ್‌ಸಿ/2025-26

ಗಾಂಜಾ ಮಾರಾಟ: 9 ಆರೋಪಿಗಳು ಸೆರೆ

ಅತಿದೊಡ್ಡ ಕಾರ್ಯಾಚರಣೆ ಯಶಸ್ವಿಗೊಳಿಸಿದ ಇನ್‌ಸ್ಪೆಕ್ಟರ್ ಗಡ್ಡೇಕರ್ ತಂಡ

ಬೆಳಗಾವಿ: ನಗರದಲ್ಲಿ ಗಾಂಜಾ ಸೇರಿದಂತೆ ಮಾದಕವಸ್ತುಗಳ ಮಾರಾಟ ಹಾಗೂ ಸೇವನೆ ಜಾಲವನ್ನು ಮಟ್ಟ ಹಾಕುವ ಉದ್ದೇಶದಿಂದ ಬೆಳಗಾವಿ ನಗರದ ಪೊಲೀಸರು ಕಾರ್ಯಾಚರಣೆ ನಡೆಸಿದ್ದಾರೆ. ಇದರ ಮುಂದುವರಿದ ಭಾಗವಾಗಿ ನಗರ ಸಿಇಎನ್ ಅಪರಾಧ ಠಾಣೆ ಇನ್‌ಸ್ಪೆಕ್ಟರ್ ಬಿ.ಆರ್ ಗಡ್ಡೇಕರ್ ನೇತೃತ್ವದ ತಂಡ ನಡೆಸಿರುವ ಮಹತ್ವದ ಕಾರ್ಯಾಚರಣೆಯಲ್ಲಿ 9 ಜನ ಆರೋಪಿಗಳ ಜತೆ ಲಕ್ಷಾಂತರ ಮೌಲ್ಯದ ಗಾಂಜಾ ವಶಪಡಿಸಿಕೊಳ್ಳಲಾಗಿದೆ.

ಕಳೆದ ಜೂನ್ 29 ರಂದು ತಾಜಿಬ್ ಮುಲ್ಲಾ ಹಾಗೂ ಅನುರಾಗ ಯರನಾಳಕರ್ ಇಬ್ಬರನ್ನು ನಗರದ ಸಿಇಎನ್ ಠಾಣೆ ಪೊಲೀಸರು ಬಂಧಿಸಿ ಆರೋಪಿಗಳಿಂದ 5 ಕೆಜಿ ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿತ್ತು. ಇದೇ ಪ್ರಕರಣದ ಬೆನ್ನು ಬಿದ್ದ ಪೊಲೀಸರ ತಂಡ ಮುಂಬೈನಲ್ಲಿ ಸದ್ದಾಂ ಎಂಬಾತನ ಮನೆ ಮೇಲೆ ದಾಳಿ ನಡೆಸಿ ಆತನ ಮಾವ ಅಬ್ದುಲ್ ಮಾಜೀದ್ ಜತೆ 2 ಕೆಜಿ ಗಾಂಜಾ ಜತೆ ಬಂಧಿಸಿ ಬೆಳಗಾವಿಗೆ ಕರೆತಂದಿದ್ದರು. ಆರೋಪಿಗಳನ್ನು ಹಿಂಡಲಗಾ ಜೈಲಿನಲ್ಲಿ ಇಡಲಾಗಿತ್ತು. ಹಿಂಡಲಗಾ ಜೈಲಿನಲ್ಲಿದ್ದವರನ್ನು ನೋಡಲು ಬೆಳಗಾವಿಗೆ ಆರೋಪಿಗಳ ತಂಡ ಬರುತ್ತಿತ್ತು. ಚಂದಗಡ ರಸ್ತೆಯಲ್ಲಿ ಆರೋಪಿಗಳು ಬರುತ್ತಿದ್ದ ಕಾರು ಪರಿಶೀಲನೆ ಮಾಡಿರುವ ವೇಳೆ 50 ಕೆಜಿ ಗಾಂಜಾದೊಂದಿದೆ ಸಿಕ್ಕಿ ಬಿದ್ದಿದ್ದಾರೆ. ಅದಲ್ಲದೇ ಇವರ ಬಳಿಯಿದ್ದ 10 ಮೊಬೈಲ್ ಗಳು, ಒಂದು ಮಚ್ಚು, ಒಂದು ತೂಕದ ಮಷಿನ್, 4000 ರು. ನಗದು ವಶಕ್ಕೆ ಪಡೆದು ಕೃತ್ಯಕ್ಕೆ ಬಳಸಿದ ಮೂರು ಕಾರನ್ನು ಪೊಲೀಸರು ಜಪ್ತಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

50 ಕೆಜಿ ಗಾಂಜಾ ಜಪ್ತಿ ಮಾಡಿರುವ ಪೊಲೀಸರು.

ಇನ್‌ಸ್ಪೆಕ್ಟರ್ ಗಡ್ಡೇಕರ್ ತಂಡದ ಕಾರ್ಯ ಶ್ಲಾಘನೀಯ

ಮೊದಲು ದಾಖಲಾಗಿದ್ದ ಸಣ್ಣ ಪ್ರಕರಣದ ಬೆನ್ನು ಬಿದ್ದ ಕಾರಣಕ್ಕೆ ಇಷ್ಟು ದೊಡ್ಡ ಪ್ರಕರಣ ಬಯಲಾಗಲು ಸಾಧ್ಯವಾಗಿದೆ. ನಗರದ ಸಿಇಎನ್ ಠಾಣೆ ಇನ್‌ಸ್ಪೆಕ್ಟರ್ ಬಿ.ಆರ್ ಗಡ್ಡೇಕರ್ ನೇತೃತ್ವದ ತಂಡ ಸುಮಾರು ದಿನಗಳಿಂದ ಮುಂಬೈ ಸೇರಿದಂತೆ ವಿವಿಧ ನಗರಕ್ಕೆ ತೆರಳಿ ಮಾಹಿತಿ ಕಲೆಹಾಕುವಲ್ಲಿ ಯಶಸ್ವಿಯಾಗಿದೆ. ನಂತರ ಬೃಹತ್ ಕಾರ್ಯಾಚರಣೆ ನಡೆಸಿ ಗಾಂಜಾ ಮಾರಾಟದ ಜಾಲವನ್ನೇ ಭೇದಿಸಿದ್ದು ಇವರ ಕಾರ್ಯಕ್ಕೆ ಕಮಿಷನರ್ ಬಹುಮಾನ ಘೋಷಣೆ ಮಾಡಿದ್ದಾರೆ.

ಪಪ್ಪಿ ಬಂಗಾರದ ಮನುಷ್ಯ!

← ಮೊದಲಪುಟದಿಂದ ಈ ಸಮಯದಲ್ಲಿ ಸುಮಾರು ಒಂದು ಕೋಟಿ ರು. ವಿದೇಶಿ ಕರೆನ್ಸಿ, ಆರು ಕೋಟಿ ರು. ಮೌಲ್ಯದ ಚಿನ್ನಾಭರಣಗಳು, 10 ಕೆ.ಜಿ ಬೆಳ್ಳಿ ವಸ್ತುಗಳು ಸೇರಿ 12 ಕೋಟಿ ರು. ನಗದು ಹಾಗೂ ನಾಲ್ಕು ವಾಹನಗಳನ್ನು ಅಕ್ರಮ ಹಣ ವರ್ಗಾ ವಣೆ ಕಾಯಿದೆ 2002ರಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಭಾರಿ ಪ್ರಮಾಣದ ದಾಖಲೆಗಳು ವಶಕ್ಕೆ: ಇದರೊಂದಿಗೆ 17 ಬ್ಯಾಂಕ್ ಖಾತೆಗಳು, 2 ಬ್ಯಾಂಕ್ ಲಾಕರ್‌ಗಳನ್ನು ಸಹ ಸ್ಥಗಿತಗೊಳಿಸಲಾಗಿದೆ. ವೀರೇಂದ್ರ ಅವರ ಸಹೋದರ ಕೆ.ಸಿ.ನಾಗರಾಜ್, ಅವರ ಮಗ ಪೃಥ್ವಿ ಎನ್. ರಾಜ್ ಅವರಿಂದ ಆಸ್ತಿಗೆ ಸಂಬಂಧಿಸಿದ ಅನೇಕ ದಾಖಲೆಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ ಎಂದು ಇ.ಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ವೀರೇಂದ್ರ ಅವರ ಮತ್ತೋರ್ವ ಸಹೋದರ ಕೆ.ಸಿ.ತಿಪ್ಪೇಸ್ವಾಮಿ ಮತ್ತು ಪೃಥ್ವಿ ಎನ್. ರಾಜ್ ಅವರು ದುಬೈನಿಂದ ಆನ್‌ಲೈನ್ ಗೇಮಿಂಗ್ ಕಾರ್ಯಾಚರಣೆಗಳನ್ನು ನಿರ್ವಹಿಸುತ್ತಿದ್ದಾರೆ.

..ಸುಜಾತ ಭಟ್ ಗೊಂದಲ ಹೇಳಿಕೆ

← ಮೊದಲಪುಟದಿಂದ ಸುಜಾತ ಭಟ್, ಈ ನಡುವೆ ಶುಕ್ರವಾರ ಯೂಟ್ಯೂಬ್‌ಗೆ ನೀಡಿದ ಸಂದರ್ಶನದಲ್ಲಿ ಸುಜಾತಾ ಭಟ್ ತನಗೆ ಅನನ್ಯ ಭಟ್ ಎನ್ನುವ ಮಗಳು ಇರಲಿಲ್ಲ. ಒತ್ತಡಕ್ಕೆ ಮಣಿದು ಈ ರೀತಿ ಹೇಳಿದೆ ಎಂದು ಹೇಳಿದ್ದರು. ಆದರೆ ಈ ಹೇಳಿಕೆ ನೀಡಿದ ಕೆಲವೇ ಗಂಟೆಯಲ್ಲಿ, ಬೇರೆಯವರ ಒತ್ತಾಯಕ್ಕೆ ಮಣಿದು ಈ ರೀತಿಯ ಹೇಳಿಕೆ ನೀಡಿದ್ದೆ ಎಂದು ಉಲ್ಟಾ ಹೊಡೆದಿದ್ದರು. ಒಬ್ಬೊಬ್ಬರೊಂದಿಗೆ ಮಾತನಾಡುವಾಗ ಒಂದೊಂದು ಹೇಳಿಕೆ ನೀಡುತ್ತಲೇ ಇರುವ ಸುಜಾತ್ ಭಟ್ ಅನ್ನು ವಿಚಾರಣೆ ನಡೆಸಿ, ಬಳಿಕ ಪೊಲೀಸ್ ವಶಕ್ಕೆ ಶೀಘ್ರ ಪಡೆಯುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಹೆಣದ ಚಿನ್ನ ಎಗರಿಸುತ್ತಿದ್ದ 'ಚಿನ್ನಯ್ಯ': ಧರ್ಮಸ್ಥಳದಲ್ಲಿ ನೂರಾರು ಶವ ಹೂತಿಟ್ಟಿದ್ದೇನೆ ಎಂದು ಬುರುಡೆ ಬಿಟ್ಟಿದ್ದ ಚಿನ್ನಯ್ಯ ಅಸಲಿಗೆ, ನದಿಯಲ್ಲಿ ಮುಳುಗಿದ ಹೆಣಗಳಿಂದ ಚಿನ್ನ ಕದಿಯುತ್ತಿದ್ದನೆಂದು ಆತನ ಜತೆ ಕೆಲಸ ಮಾಡುತ್ತಿದ್ದ ಕಾರ್ಮಿಕರೇ ಹೇಳಿದ್ದಾರೆ. ಮಂಡ್ಯ ಜಿಲ್ಲೆಯ ಈತನ ಹುಟ್ಟೂರಿನಲ್ಲೂ ಗ್ರಾಮಸ್ಥರು ಈತನ ಬಗ್ಗೆ ಹಲವು ಆರೋಪಗಳನ್ನು ಮಾಡಿದ್ದಾರೆ.

ಜಾತಿ ಗಣತಿಗೆ ಚಾಲನೆ

← ಮೊದಲಪುಟದಿಂದ

ಸೆ.22ರಿಂದ ಎರಡನೇ ಹಂತ: ಆರಂಭದಲ್ಲಿ ಜಿಯೋ ಟ್ಯಾಗ್ ಮೂಲಕ ಸಮೀಕ್ಷೆ ಆರಂಭಿಸಿರುವ ಆಯೋಗ, ಎರಡನೇ ಹಂತದಲ್ಲಿ ಸಮೀಕ್ಷೆಯ ಕಾರ್ಯವನ್ನು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ಕಾರ್ಯಗತಗೊಳಿಸಲು ಅನುಕೂಲವಾಗುತ್ತದೆ. ಎರಡನೇಯ ಹಂತದ ಸಮೀಕ್ಷೆಯ ಕಾರ್ಯವನ್ನು ದಸರಾ ರಜೆಯ ಅವಧಿಯಲ್ಲಿ 22ನೇ ಸೆಪ್ಟೆಂಬರ್‌ನಿಂದ 7ನೇ ಅಕ್ಟೋಬರ್‌ರವರೆಗೆ ನಡೆಸಲು ಗುರಿ ಹೊಂದಲಾಗಿದೆ. ಈ ಸಮಯದಲ್ಲಿ ಶಾಲಾ ರಜಾದಿನಗಳು ಇರುವುದರಿಂದ ಸಮೀಕ್ಷೆ ಕಾರ್ಯಕ್ಕೆ ಪೂರಕವಾಗುತ್ತದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ತಿಳಿಸಿದ್ದಾರೆ. ಮೀಟರ್ ರೀಡರ್‌ಗಳು ಸೆರೆಹಿಡಿದ ಮನೆ ಪಟ್ಟಿ ಡೇಟಾವನ್ನು ಸರ್ವರ್‌ಗಳಲ್ಲಿ ಅಪ್ಲೋಡ್ ಮಾಡಲಾಗುವುದು. ಬಳಿಕ ಮನೆ ಪಟ್ಟಿ ಸಮೀಕ್ಷೆಯ ಉದ್ದೇಶಕ್ಕಾಗಿ ಮ್ಯಾಪಿಂಗ್ ಮಾಡಲಾಗುತ್ತದೆ. ಅಭಿವೃದ್ಧಿಪಡಿಸಲಾದ ಅಪ್ಲಿಕೇಶನ್‌ನಲ್ಲಿ ಮನೆಯ ಸ್ಥಳವನ್ನು ಸೆರೆಹಿಡಿಯಲಾಗುತ್ತದೆ. ಬಳಿಕ ಪ್ರತಿ ಮನೆಗೆ ಪ್ರತ್ಯೇಕ ಸಂಖ್ಯೆ ನೀಡಲಾಗುವುದು ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದ ಎಲ್ಲಾ ಮನೆಗಳನ್ನು ಒಳಗೊಂಡಂತೆ ವ್ಯವಸ್ಥಿತವಾಗಿ ಸಮೀಕ್ಷೆಯನ್ನು ನಡೆಸುವ ಉದ್ದೇಶಕ್ಕಾಗಿ ಇದು ಬಹಳ ಪ್ರಮುಖ ಕಾರ್ಯವಾಗಿದೆ. ಆದ್ದರಿಂದ, ಸಾರ್ವಜನಿಕರು ಮತ್ತು ಪ್ರತಿಯೊಂದು ಕುಟುಂಬದ ಸದಸ್ಯರು ವಿಶೇಷವಾಗಿ ಅಪಾರ್ಟ್‌ಮೆಂಟ್ ಮತ್ತು ಕ್ಲಸ್ಟರ್ ವಾಸಸ್ಥಳಗಳಲ್ಲಿ ವಾಸಿಸುವವರು ಮೀಟರ್ ರೀಡರ್‌ಗಳಿಗೆ ವಹಿಸಲಾಗಿರುವ ಮನೆ ಪಟ್ಟಿ ಕೆಲಸವನ್ನು ಸುಗಮವಾಗಿ ಪೂರ್ಣಗೊಳಿಸುವ ದಿಸೆಯಲ್ಲಿ ಸಹಕರಿಸಲು ಮತ್ತು ಅನುಕೂಲ ಮಾಡಿಕೊಡಿ.

- ಮಧುಸೂಧನ್ ನಾಯ್ಕ್ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷ

ಪರಿಷತ್ ನಾಮಕರಣಕ್ಕೆ ಉಸ್ತುವಾರಿ ಗ್ರಹಣ

← ಮೊದಲಪುಟದಿಂದ

ಅಂದರೆ ಪಟ್ಟಿಗೆ ಖರ್ಗೆ ಅವರ ಮೊಹರು ಬಿದ್ದರೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಟೇಬಲ್‌ನಲ್ಲಿ ಇರಿಸಿಕೊಳ್ಳುವಂತೆ ಖರ್ಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಮಧ್ಯೆ ರಾಜ್ಯದಿಂದ ಶಿಫಾರಸು ಮಾಡಿರುವ ಪಟ್ಟಿ ಬಗ್ಗೆ ಖರ್ಗೆ ಅವರಲ್ಲಿ ಇನ್ನೂ ಅಸಮಾಧಾನವಿದ್ದು, ಇದು ಸರಿಯಾಗದ ಹೊರತು ಪಟ್ಟಿಗೆ ಬಿಡುಗಡೆ ಭಾಗ್ಯ ಲಭಿಸದು ಎನ್ನಲಾಗಿದೆ. ಈ ಬೆಳವಣಿಗೆಯಿಂದ ಪರಿಷತ್ ನಾಮಕರಣ ಪ್ರಕ್ರಿಯೆ ಇನ್ನೂ ವಿಳಂಬವಾಗುವ ಸಾಧ್ಯತೆ ಕಾಣುತ್ತಿದ್ದು, ಆಕಾಂಕ್ಷಿಗಳಲ್ಲಿ ನಿರಾಶೆ ಹೆಚ್ಚಾಗಿದೆ. ವಿಚಿತ್ರ ಎಂದರೆ ತೆರವಾಗಿರುವ ನಾಲ್ಕು ಸ್ಥಾನಗಳ ಪೈಕಿ ಒಂದಕ್ಕೆ ಅಂದರೆ, ಸಿ.ಪಿ.ಯೋಗೇಶ್ವರ್ ರಾಜೀನಾಮೆಯಿಂದ ತೆರವಾಗಿರುವ ಸ್ಥಾನಕ್ಕೆ ನಾಮಕರಣ ಮಾಡುವ ಸದಸ್ಯರಿಗೆ ಇನ್ನು ಒಂದೆರಡು ಅಧಿವೇಶನದಲ್ಲಿ ಮಾತ್ರ ಭಾಗವಹಿಸುವ ಅವಕಾಶ ಮಾತ್ರ ಲಭಿಸಲಿದೆ. ಇದರೊಂದಿಗೆ ಅವರು ಅತ್ಯಂತ ಕಡಿಮೆ ಅವಧಿಗೆ ನಾಮಕರಣವಾಗುವ ಪರಿಷತ್ ಸದಸ್ಯರು ಎನ್ನುವ ಅನಪೇಕ್ಷಿತ ದಾಖಲೆಗೂ ಪಾತ್ರರಾಗುವ ಸಾಧ್ಯತೆ ಇದೆ.

ಇದೇ ರೀತಿ ವಿಳಂಬವಾದರೆ ಜೂನ್ ವೇಳೆಗೆ ಪರಿಷತ್‌ನಲ್ಲಿ ಇನ್ನೂ 8 ಸ್ಥಾನಗಳು ತೆರವಾಗಲಿದ್ದು, ಅದರೊಂದಿಗೇ ಒಟ್ಟಿಗೆ ನೇಮಕ ಮಾಡಿದರೆ ಹೇಗೆ ಎನ್ನುವ ಚರ್ಚೆಯೂ ಇದೆ. ಈ ಚರ್ಚೆ ಏನಾದರೂ ನಿಜವಾದರೆ ಆಕಾಂಕ್ಷಿಗಳು ತಮ್ಮ ಆಸೆಯನ್ನೇ ಕೈಬಿಡಬೇಕಾಗುತ್ತದೆ ಎಂದು ಕಾಂಗ್ರೆಸ್ ನ ಹಿರಿಯ ಮುಖಂಡರು ಹೇಳಿದ್ದಾರೆ.

ವಿಳಂಬದಲ್ಲಿ ಎರಡನೆಯದು

ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯರಾಗಿದ್ದ ಯು.ಬಿ.ವೆಂಕಟೇಶ್ ಹಾಗೂ ಪ್ರಕಾಶ್ ರಾಥೋಡ್ ಅವರ ಸ್ಥಾನಗಳು ತೆರವಾಗಿ ವರ್ಷವೇ ಆಗುತ್ತಿದೆ. ಜೆಡಿಎಸ್ ನಿಂದ ನಾಮಕರಣಗೊಂಡಿದ್ದ ತಿಪ್ಪೇಸ್ವಾಮಿ ಅವರ ಸ್ಥಾನ ತೆರವಾಗಿ ಈಗಾಗಲೇ 8 ತಿಂಗಳಿಗೂ ಹೆಚ್ಚಿನ ಅವಧಿಯಾಗಿದೆ.

ಬಿಜೆಪಿಯಿಂದ ನಾಮಕರಣಗೊಂಡಿದ್ದ ಸಿ.ಪಿ.ಯೋಗೇ ಶ್ವರ್ ಅವರ ಸ್ಥಾನಗಳು ತೆರವಾಗಿ 6 ತಿಂಗಳಿಗೂ ಹೆಚ್ಚಾಗಿದೆ. ಆದರೂ ಈ ಸ್ಥಾನಗಳಿಗೆ ಸರಕಾರ ವಿವಿಧ ಕ್ಷೇತ್ರಗಳ ತಜ್ಞರು, ವಿದ್ವಾಂಸರನ್ನು ನಾಮಕರಣ ಮಾಡುವ ವಿಚಾರದಲ್ಲಿ ತಿಣುಕಾಡುತ್ತಿದ್ದು, ನಾಮಕರಣಕ್ಕೆ ಹಿಡಿದ ಗ್ರಹಣ ಸದ್ಯಕ್ಕೆ ಬಿಡುವಂತೆ ಕಾಣುತ್ತಿಲ್ಲ.

ಹಾಗೆ ನೋಡಿದರೆ ಈ ಹಿಂದೆ ವೀರಪ್ಪ ಮೊಯ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಸುಮಾರು 13 ತಿಂಗಳವರೆಗೂ ಹೆಚ್ಚಿನ ಅವಧಿಗೆ ಸದಸ್ಯರನ್ನು ನಾಮಕರಣ ಮಾಡದೆ ವಿಳಂಬ ಮಾಡಲಾಗಿತ್ತು ಇದಾದ ನಂತರ ಎರಡೇ ದೊಡ್ಡ ವಿಳಂಬ ಇದಾಗಿದೆ ಎಂದು ಪರಿಷತ್ ಅಧಿಕಾರಿಗಳು ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ನಕ್ಷತ್ರ ಆಮೆ ಸಾಗಣೆ: ವ್ಯಕ್ತಿ ಬಂಧನ

ಕೊಳ್ಳೇಗಾಲ: ತಾಲೂಕಿನ ಮಧುವನಹಳ್ಳಿ ಗ್ರಾಮದ ಬೈಪಾಸ್ ರಸ್ತೆಯಲ್ಲಿ ಜೀವಂತ ನಕ್ಷತ್ರ ಆಮೆಯನ್ನು ಸಾಗಣೆ ಮಾಡುತ್ತಿದ್ದ ಆರೋಪಿಯನ್ನು ನಗರದ ಅರಣ್ಯ ಸಂಚಾರಿ ದಳದ ಪೊಲೀಸರು ಬಂಧಿಸಿದ್ದಾರೆ. ಮಲೆ ಮಹದೇಶ್ವರ ಬೆಟ್ಟದಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ನಾಗರಾಜು (35) ಬಂಧಿತ ಆರೋಪಿ. ನಕ್ಷತ್ರ ಆಮೆಯನ್ನು ಒಂದು ಚೀಲದಲ್ಲಿಟ್ಟು ಬೆಂಗಳೂರಿಗೆ ಸಾಗಣೆ ಮಾಡುತ್ತಿದ್ದ. ಖಚಿತ ಮಾಹಿತಿಯ ಮೇರೆಗೆ ಅರಣ್ಯ ಸಂಚಾರಿ ದಳದ ಪಿಎಸ್ಐ ವಿಜಯರಾಜು ತಮ್ಮ ಸಿಬ್ಬಂದಿಯೊಂದಿಗೆ ದಾಳಿ ನಡೆಸಿ ಆರೋಪಿಯನ್ನು ಮಾಲು ಸಮೇತ ಬಂಧಿಸಿದ್ದಾರೆ. ಈತನ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲು ಮಾಡಿದ್ದಾರೆ. ಈ ಸಂಬಂಧ ಠಾಣೆಯಲ್ಲಿ ದೂರು ದಾಖಲಾಗಿದ್ದು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ನದಿಯಲ್ಲಿ ರೈತನ ಎಳೆದೊಯ್ದ ಮೊಸಳೆ

ವಿಜಯಪುರ: ಅಮವಾಸ್ಯೆಯ ಪ್ರಯುಕ್ತ ಎತ್ತುಗಳನ್ನು ತೊಳೆಯಲು ಕೃಷ್ಣಾ ನದಿ ತೀರಕ್ಕೆ ತೆರಳಿದ್ದ ರೈತರೊಬ್ಬರನ್ನು ಮೊಸಳೆ ಎಳೆದುಕೊಂಡು ಹೋಗಿ

ರುವ ಘಟನೆ ಮುದ್ದೇಬಿಹಾಳ ತಾಲೂಕಿನ ಕುಮಚಗನೂರ ಗ್ರಾಮದಲ್ಲಿ ಶನಿವಾರ ನಡೆದಿದೆ. ಕುಂಚಗನೂರ ಗ್ರಾಮದ ಕಾಶೀನಾಥ ಹಣಮಂತ ಕಂಬಳಿ(38) ಎಂಬುವರೇ ಮೊಸಳೆ ದಾಳಿಗೆ ಒಳಗಾಗಿ ನಾಪತ್ತೆಯಾದವರು. ಕಾಶೀನಾಥ ಅಮವಾಸ್ಯೆಯ ಹಿನ್ನೆಲೆ ಎತ್ತುಗಳನ್ನು ತೊಳೆಯ ಲೆಂದು ಹೋದಾಗ ಮೊಸಳೆ ದಾಳಿ ಮಾಡಿ ಅವರನ್ನು ಹೊತ್ತೊಯ್ದಿದ್ದನ್ನು ನೋಡಿರುವುದಾಗಿ ಕುಂಚಗನೂರ ಗ್ರಾಮದ ಧರೆಪ್ಪ ಬಟಕುರ್ಕಿ ಎಂಬುವರು ತಿಳಿಸಿದ್ದಾರೆ.

ನೈತಿಕ ಪೊಲೀಸ್ ಗಿರಿ ನಾಲ್ವರ ಬಂಧನ

ಕಲಬುರಗಿ: ನಗರದ ಸಂತ್ರಸವಾಡಿ ಬಳಿ ನೈತಿಕ ಪೊಲೀಸ್ ಗಿರಿ ಪ್ರಕರಣ ನಡೆದಿದೆ. ಮುಸ್ಲಿಂ ಯುವತಿಯೊಬ್ಬಳನ್ನು ತನ್ನ ವಾಹನದಲ್ಲಿ ಡ್ರಾಪ್ ನೀಡುತ್ತಿದ್ದ ಸೈನಿಕನ ಮೇಲೆ ನಾಲ್ಕೈದು ಜನರು ಏಕಾಏಕಿ ಹಲ್ಲೆ ನಡೆಸಿದ ಘಟನೆ ಹೊರಬಿದ್ದಿದೆ. ಹಲ್ಲೆಯಿಂದ ಗಾಯಗೊಂಡ ಸೈನಿಕ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಆದರೆ, ಗಾಯಾಳು ಸೈನಿಕ ಯಾವುದೇ ದೂರು ನೀಡದೆ ತೆರಳಿದರು. ಘಟನೆಯ ಬಗ್ಗೆ ಮಾಹಿತಿ ಪಡೆದ ಎಮ್.ಬಿ.ನಗರ ಪೊಲೀಸರು ತಕ್ಷಣ ಕ್ರಮ ಕೈಗೊಂಡಿದ್ದಾರೆ. ಸೈನಿಕ ದೂರು ನೀಡದಿದ್ದರೂ, ಪೊಲೀಸರು ಆಫೆಖ 127 ಅಡಿಯಲ್ಲಿ ಸುಮೋಟೊ ಪ್ರಕರಣ ದಾಖಲಿಸಿಕೊಂಡು, ನಾಲ್ವರನ್ನು ಬಂಧಿಸಿದ್ದಾರೆ. ಬಂಧಿತರು ಅರ್ಬಾಜ್ ಖಾನ್, ಅಬ್ದುಲ್ ಕುರೇಶು, ಮೊಹಮ್ಮದ್ ಯಾಸೀನ್ ಹಾಗೂ ಅಮೀರ್ ಪಟೇಲ್ ಎಂದು ಗುರುತಿಸಲಾಗಿದ್ದು, ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ.

ರೇಣುಕಾಚಾರ್ಯರನ್ನು ಜೈಲಿಗೆ ಹಾಕಲು ಆಗ್ರಹ

ದಾವಣಗೆರೆ: ಗಣೇಶ ಹಬ್ಬ ಮುಗಿಯುವ ತನಕ ಮಾಜಿ ಸಚಿವ ರೇಣುಕಾಚಾರ್ಯ ಅವರನ್ನು ಜೈಲಿಗೆ ಹಾಕಿ ಎಂದು ಮಾಜಿ ಶಾಸಕ ಎಸ್.ರಾಮಪ್ಪ ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಗಣೇಶ ಹಬ್ಬದ ಮೆರವಣಿಗೆಯಲ್ಲಿ ಡಿಜೆ ಬಳಕೆ ನಿಷೇಧಿಸಿದ್ದಾರೆ. ಇದಕ್ಕೆ ನಮ್ಮ ಸ್ವಾಗತವಿದೆ. ಆದರೆ, ಜಿಲ್ಲಾಧಿಕಾರಿಗಳ ಅಧಿಕೃತ ಆದೇಶಕ್ಕೆ ರೇಣುಕಾಚಾರ್ಯ ಸವಾಲ್ ಹಾಕಿದ್ದಾರೆ. ಮಾಜಿ ಸಚಿವರಾಗಿ ರೇಣುಕಾಚಾರ್ಯ ಅವರಿಗೆ ಇಂತಹ ಹೇಳಿಕೆ ಗೌರವ ತರುವಂತಹದ್ದಲ್ಲ ಎಂದು ಕುಟುಕಿದ್ದಾರೆ. ರೇಣುಕಾಚಾರ್ಯ ಅವರು ಜಿಲ್ಲಾಧಿಕಾರಿಗಳು ತಾಕತ್ ಇದ್ದರೆ ಡಿಜೆ ಪರವಾನಿಗೆ ನಿಷೇಧಿಸಿ ಎನ್ನುತ್ತಿದ್ದಾರೆ. ಈ ರೀತಿ ಹೇಳಿಕೆ ಸರಿಯಲ್ಲ, ಡಿಜೆಯಿಂದ ಶಾಲಾ ಮಕ್ಕಳು ದಾರಿ ತಪ್ಪುತ್ತಿದ್ದಾರೆ. ಬಿಜೆಪಿಯವರು ವಿಶೇಷವಾಗಿ ರೇಣುಕಾಚಾರ್ಯ ಅಂತವರು ಇಂತಹ ವಿಚಾರ ಇಟ್ಟುಕೊಂಡು ಪರಸ್ಪರ ಜಗಳ ಹಚ್ಚುವ ರಾಜಕೀಯ ಮಾಡುತ್ತಿದ್ದಾರೆ ಎಂದರು.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಕೊಪ್ಪಳ**

ಸಮಸ್ಯೆಯೇನು..?: ಮರಳು ಹಾಗೂ ಕಂಕರ್ ಸರಿಯಾದ ಕ್ರಮದಲ್ಲಿ ಸಾಗಣೆ ಮಾಡದಿರುವ ಬಗ್ಗೆ

- **ಪರಿಹಾರ:** ಗಂಗಾವತಿ-ಕೊಪ್ಪಳ ವ್ಯಾಪ್ತಿಯಲ್ಲಿ ಮರಳು, ಜಲ್ಲಿಯನ್ನು ಸರಿಯಾದ ಕ್ರಮದಲ್ಲಿ ಟಾರ್ಪಲ್‌ಗಳನ್ನು ಮುಚ್ಚದೆ ಲಾರಿ ಹಾಗೂ ಟ್ರ್ಯಾಕ್ಟರ್‌ಗಳಲ್ಲಿ ಸಾಗಣೆ ಮಾಡಲಾಗುತ್ತಿದೆ. ಇದರಿಂದ ಹಿಂಬದಿ ವಾಹನ ಸವಾರರಿಗೆ ಕಿರಿಕಿರಿಯಾಗುತ್ತಿದೆ. ಗಾಳಿಗೆ ಮರಳು ಕಣಗಳು ಹಾರಿ ಕಣ್ಣಲ್ಲಿ ಬೀಳುತ್ತಿವೆ ಎಂದು ದೂರು ದಾಖಲಿಸಲಾಗಿದೆ. ಸದ್ಯ ಗಂಗಾವತಿ-ಕೊಪ್ಪಳ ವ್ಯಾಪ್ತಿಯಲ್ಲಿನ ಮರಳು ಸಾಗಣೆ ಟಿಪ್ಪರ್ ಲಾರಿ ಹಾಗೂ ಟ್ರ್ಯಾಕ್ಟರ್‌ಗಳನ್ನು ನಿಲ್ಲಿಸಿ ಸರಿಯಾದ ಕ್ರಮದಲ್ಲಿ ಟಾರ್ಪಲ್ ಮುಚ್ಚಿ ಮರಳು, ಜಲ್ಲಿ ಸಾಗಣೆ ಮಾಡುವಂತೆ ಪೊಲೀಸರು ಸೂಚನೆ ಕೊಟ್ಟಿದ್ದಾರೆ ಅಲ್ಲದೆ ನಿಯಮ ಮೀರಿರುವ ವಾಹನಗಳ ಮಾಲೀಕರಿಗೆ ನೋಟಿಸ್ ನೀಡಿದ್ದಾರೆ.

ಮುಸುಕುಧಾರಿ ಚಿನ್ನಯ್ಯ ಮುಖವಾಡ ಬಯಲು | ತನಿಖೆ ಹಂತದಲ್ಲಿ ಏನು ಹೇಳಲು ಆಗುವುದಿಲ್ಲ ಎಂದ ಪರಮೇಶ್ವರ್

ಧರ್ಮಸ್ಥಳ ಬುರುಡೆ ಪ್ರಕರಣ ಕ್ಷಣಕ್ಕೊಂದು ತಿರುವು

ಬೆಂಗಳೂರು: ಕಳೆದೊಂದು ತಿಂಗಳಿನಿಂದ ಭಾರಿ ಕುತೂಹಲಕ್ಕೆ ಕಾರಣವಾಗಿದ್ದ, ಮಾಸ್ಕ್ ಮ್ಯಾನ್ ವಿರುದ್ಧ ದೂರು ದಾಖಲಿಸಿಕೊಂಡಿರುವ ಎಸ್‌ಐಟಿ ಶನಿವಾರ ಆತನನ್ನು ವಶಕ್ಕೆ ಪಡೆದಿದೆ. ಆತನ ಹೇಳಿದ ಕಡೆಯಲ್ಲ ಗುಂಡಿ ಅಗೆದಿದ್ದ ಎಸ್‌ಐಟಿ ಆತನನ್ನೇ ವಿಚಾರಣೆಗೆ ಒಳಪಡಿಸಿದಾಗ, ಹೇಳಿಕೆಯಲ್ಲಿಯೇ ಹಲವು ಗೊಂದಲಗಳಿದ್ದವು. ದೂರು ನೀಡಿದ ವೇಳೆ ಮುಸುಕುದಾರಿ ತಲೆಬುರುಡೆಯೊಂದನ್ನು ನೀಡಿದ್ದನು. ಆ ತಲೆ ಬುರುಡೆ ಎಲ್ಲಿಂದ ತಂದಿದ್ದು, ಬುರುಡೆ ತೆಗೆದ ಸ್ಥಳದಲ್ಲಿ ನಿನ್ನ ಜೊತೆ ಇದ್ದವರು ಯಾರು, ಬುರುಡೆ ಎತ್ತಿದವರು ಯಾರು, ಸಮಾಧಿಯೊಳಗಿಂದ ನೀನು ಬುರುಡೆ ಅಗೆದು ತಂದಿರುವೆಯಾ, ಕಾಡಿನೊಳಗಿಂದ ಬುರುಡೆ ಎತ್ತಿದ ವಿಡಿಯೊದಲ್ಲಿ ಇರುವವರು ಯಾರು, ಕಾಡಿನ ಒಳಗೆ ಬುರುಡೆ ಸಿಕ್ಕಿದ್ದರೆ ಅದು ಅಸಹಜ ಸಾವಿನ ಪ್ರಕರಣವೋ ಅಥವಾ ಸಮಾಧಿಯಿಂದ ಬುರುಡೆ ಅಗೆದು ತಂದಿರುವಿರಾ, ನಿನ್ನ ಜೊತೆ ಕೈ ಜೋಡಿಸಿದವರು ಯಾರು ಎಂಬಿತ್ಯಾದಿ ಪ್ರಶ್ನೆಗಳನ್ನು ಹೇಳಿದಾಗ, ಸರಿಯಾದ ಉತ್ತಡ ನೀಡಿಲ್ಲ. ಆದ್ದರಿಂದ ಆತನನ್ನು ಬಂಧಿಸಲಾಗಿದೆ. ಶನಿವಾರ ಬೆಳಗ್ಗೆ ಆತನನ್ನು ಬಂಧಿಸಿದ ಬಳಿಕ ತಾಲೂಕು ಆಸ್ಪತ್ರೆಯಲ್ಲಿ ಆರೋಗ್ಯ ತಪಾಸಣೆ ನಡೆಸಿ, ಬಳಿಕ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು.

ಈ ನಡುವೆ ಅನಾಮಿಕ ದೂರುದಾರನ ವಿಳಾಸ, ನಿಜ ನಾಮ ಬಹಿರಂಗ ಪಡಿಸಲಾಗಿದೆ. ಮುಸುಕುಧಾರಿ ಚಿನ್ನಯ್ಯನನ್ನು ಎಸ್‌ಐಟಿ ಬಂಧಿಸಿದೆ. ಹೋರಾಟಗಾರ ಮಹೇಶ್ ತಿಮ್ಮರೋಡಿ, ಗಿರೀಶ್ ಮಟ್ಟಣ್ಣನವರ್ ಸೇರಿ ಹಲವರ ವಿಚಾರಣೆ ನಡೆಸಲಾಗುತ್ತಿದೆ. ವಿಚಾರಣೆಗೆ ಹಾಜರಾಗಲು ಯುಟ್ಯೂಬರ್ ಸಮೀರ್‌ಗೆ ನೋಟಿಸ್ ನೀಡಲಾಗಿದೆ. ಈ ಸಂಬಂಧ ಆರೋಪ-ಪ್ರತ್ಯಾರೋಪಗಳು ಕೇಳಿ ಬರುತ್ತಿವೆ. ಈ ಸಂಬಂಧ ಸಾಲು ಸಾಲು ಪ್ರಕರಣಗಳು ದಾಖಲಾಗುತ್ತಿದ್ದು, ಸುಜಾತಾ ಭಟ್ ಪರ ವಕೀಲ ಮಂಜುನಾಥ್.ಎನ್ ವಿರುದ್ಧವೂ ಬೆಳ್ತಂಗಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಕೀಲ ಮಂಜುನಾಥ್.ಎನ್ ಧರ್ಮಸ್ಥಳ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ತನಿಖೆ ವಿಚಾರಣೆ ವೇಳೆ ಜುಲೈ 30 ಮಾಧ್ಯಮ ಪ್ರಕಟಣೆ ಹೊರಡಿಸಿದ್ದರು. ಪಾಯಿಂಟ್ ನಂಬರ್ 1ರಲ್ಲಿ 2 ಹೆಣ, ಪಾಯಿಂಟ್ ನಂ 2, 3ರಲ್ಲಿ ತಲಾ 2 ಹೆಣ, ಪಾಯಿಂಟ್ ನಂಬರ್ 4 ಮತ್ತು 5ರಲ್ಲಿ ತಲಾ 6 ಹೆಣ, ಪಾಯಿಂಟ್ ನಂಬರ್ 6, 7ರಲ್ಲಿ ತಲಾ 8 ಹೆಣ, ಪಾಯಿಂಟ್ ನಂಬರ್ 9ರಲ್ಲಿ 6-7 ಹೆಣ, ಪಾಯಿಂಟ್ ನಂಬರ್ 10ರಲ್ಲಿ 3, 11ರಲ್ಲಿ 9 ಹೆಣ, ಪಾಯಿಂಟ್ ನಂಬರ್ 12ರಲ್ಲಿ 4-5 ಹೆಣ ಪಾಯಿಂಟ್ ನಂ 13ರಲ್ಲಿ ಯಥೇಚ್ಚವಾಗಿ ಹೆಣ ಹೂತಿದ್ದಾಗಿ ವಕೀಲ ಮಂಜುನಾಥ್ ಪ್ರಕಟಣೆ ಹೊರಡಿಸಿದ್ದರು. ಈ ಸಂಬಂಧ ಧರ್ಮಸ್ಥಳ ನಿವಾಸಿ ರಘುರಾಮ್ ಶೆಟ್ಟಿ (44) ದೂರು ನೀಡಿದ್ದರು.

ಮುಸುಕುಧಾರಿ ಚಿನ್ನಯ್ಯ

ಯಾವ ಜಾಲವಿದೆ ಎಂದು ಪತ್ತೆ ಮಾಡುತ್ತೇವೆ: ಪರಂ

ಉಡುಪಿ: ಧರ್ಮಸ್ಥಳ ಪ್ರಕರಣದ ದೂರುದಾರ ಮಾಸ್ಕ್ ಮ್ಯಾನ್ ಬಂಧನ ಆಗಿರುವುದು ನಿಜ. ಆತ ಪೊಲೀಸ್ ಕಸ್ಟಡಿಯಲ್ಲಿ ಇದ್ದಾನೆ. ತನಿಖೆ ನಡೆಯುವುದರಿಂದ ಯಾವುದೇ

ಮಾಹಿತಿ ನೀಡಲು ಸಾಧ್ಯವಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದರ ಹಿಂದೆ ಯಾವ ಜಾಲ ಇದೆ ಎನ್ನುವುದನ್ನು ಪತ್ತೆ ಮಾಡಲಾಗುವುದು. ಎಸ್‌ಐಟಿ ತನಿಖೆಯ ಮುಕ್ತಾಯವಾಗುತ್ತೆ ಎಂದು ಹೇಳಲು ಬರುವುದಿಲ್ಲ ಎಂದರು.ಎಸ್‌ಐಟಿ ತನ್ನ ಅಂತಿಮ ವರದಿ ಸಲ್ಲಿಸುವವರಿಗೆ ಏನು ಹೇಳಲಾಗದು. ಯಾವ ಸೆಕ್ಷನ್ ನಲ್ಲಿ ಬಂಧಿಸಲಾಗಿದೆ ಎನ್ನುವುದು ಎಸ್‌ಐಟಿಯವರಿಗೆ ಗೊತ್ತು. ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಹೆಚ್ಚಿನ ಮಾಹಿತಿ ಎಸ್‌ಐಟಿಯಿಂದ ಪಡೆಯುತ್ತೇನೆ. ತನಿಖೆ ಪೂರ್ಣಗೊಳ್ಳುವವರೆಗೆ ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ ಎಂದರು. ಸುಜಾತ ಭಟ್ ವಿಚಾರ ಕೂಡ ತನಿಖೆಯಲ್ಲಿದೆ. ತನಿಖೆಯ ವರದಿಗಳು ಬರುವವರೆಗೆ ಬಹಿರಂಗಪಡಿಸಲು ಸಾಧ್ಯವಿಲ್ಲ. ಯಾವುದೇ ವಿಚಾರ ಬಹಿರಂಗಗೊಂಡರೆ ಎಸ್‌ಐಟಿ ತನಿಖೆಗೆ ಅಡ್ಡಿಯಾಗುತ್ತದೆ ಎಂದು ಪರಮೇಶ್ವರ್ ಹೇಳಿದರು.

ಬುರುಡೆ ಪಾಪ ಕೃತ್ಯಕ್ಕೆ ಸಿಎಂ ಹೊಣೆ

ತುಮಕೂರು: ಕೋಟ್ಯಂತರ ಭಕ್ತರ ಪವಿತ್ರ ಕ್ಷೇತ್ರ ಧರ್ಮಸ್ಥಳ ದಲ್ಲಿ ಇತ್ತೀಚೆಗೆ ನಡೆದ ಪಾಪದ ಕೃತ್ಯಗಳಿಗೆ ರಾಜ್ಯದ ಮುಖ್ಯಮಂತ್ರಿಯಾದ



ಸಿದ್ದರಾಮಯ್ಯ ಕಾರಣ. ಅವರು ಇದಕ್ಕೆ ಬೆಲೆ ತೆರಬೇಕಾ ಗುತ್ತದೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ಅವರು ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೋಮು ವಾದಿ, ಎಡಪಂಥೀಯರ ಮಾತು ಕೇಳಿಕೊಂಡು ಸಿಎಂ ಸಿದ್ದರಾಮಯ್ಯ ಅವರು ಧರ್ಮಸ್ಥಳದ ವಿರುದ್ಧ ತನಿಖೆಗೆ ಸೂಚಿಸಿದರು. ಈ ಮೂಲಕ ದೇಶ-ವಿದೇಶದಲ್ಲಿನ ಮಂಜುನಾಥ ಸ್ವಾಮಿಯ ಭಕ್ತರ ಮನಸ್ಸಿಗೆ ಘಾಸಿ ಮಾಡಿದರು ಎಂದು ಆರೋಪಿಸಿದರು. ಐತಿಹ್ಯ ಕ್ಷೇತ್ರವಾದ ಧರ್ಮಸ್ಥಳ ಭಕ್ತರಿಗೆ ನೆಮ್ಮದಿ ಮತ್ತು ಶಾಂತಿಯನ್ನು ಕೊಟ್ಟ ಪವಿತ್ರ ಪ್ರದೇಶವಾಗಿದೆ. ಯಾರೋ ಮಾಡಿದ ಆರೋಪಗಳಿಗೆ ಕಿವಿಕೊಟ್ಟು, ಪಾವಿತ್ರ್ಯ ಕ್ಷೇತ್ರಕ್ಕೆ ಕಳಂಕ ತಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಕಶಾಸ್ತಿ ಅನುಭವಿಸಲಿದ್ದಾರೆ ಎಂದು ಕಿಡಿಕಾರಿದರು.

ವಾಸಂತಿ ಸಹೋದರ ವಿಜಯ್ ಒತ್ತಾಯ
ಸುಜಾತಾ ಭಟ್‌ನ ವಿಚಾರಣೆ ನಡೆಸಿ

ಮಡಿಕೇರಿ: ಸುಜಾತಾ ಭಟ್ ಅವರು ಕ್ಷಣಕ್ಷಣಕ್ಕೂ ಒಂದೊಂದು ಹೇಳಿಕೆ ನೀಡುತ್ತಿರುವುದರಿಂದ ಆಕೆಯ ಹೇಳಿಕೆ ಬಗ್ಗೆ ಸಾಕಷ್ಟು ಅನುಮಾನಗಳು ಮೂಡುತ್ತಿವೆ. ನನ್ನ ಸಹೋದರಿ ವಸಂತಿ ಎಷ್ಟು ತಾಯಂದಿರಿಗೆ ಮಗಳು ಆಗಲು ಸಾಧ್ಯ. ಮೊದಲು

ಸುಜಾತಾ ಭಟ್ ಅವರನ್ನು ಪೊಲೀಸರು ವಶಕ್ಕೆ ಪಡೆ ಯಬೇಕು ಎಂದು ವಾಸಂತಿ ಸಹೋದರ ಎಂ.ವಿಜಯ್ ಆಕ್ರೋಶ ಹೊರಹಾಕಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಜಾತಾ ಭಟ್ ದಿನಕ್ಕೊಂದು ಸುಳ್ಳು ಸೃಷ್ಟಿ ಮಾಡುತ್ತಿದ್ದಾರೆ. ರಾತ್ರಿ ಮಗಳು ಅಲ್ಲ ಅನ್ನುತ್ತಾರೆ, ಬೆಳಗ್ಗೆ ಮಗಳು ಎನ್ನುತ್ತಾರೆ. ಒಂದೊಂದು ಸಲ ಒಂದೊಂದು ರೀತಿಯ ಹೇಳಿಕೆ ನೀಡುತ್ತಾರೆ. ನನ್ನ ಸಹೋದರಿ ವಾಸಂತಿ ಎಷ್ಟು ಜನರಿಗೆ ಮಗಳು ಆಗಬೇಕು? ಎಲ್ಲರಿಗೂ ಮಗಳ ಇವಳು? ಎಲ್ಲಾ ಸುಳ್ಳು ಹೇಳುತ್ತ ಇದ್ದಾರೆ. ಈ ಹಿಂದೆ ಸುಜಾತಾ ಭಟ್ ಅವರು ವಿರಾಜಪೇಟೆಗೆ ಬಂದು ಡೆತ್‌ಸರ್ಟಿಫಿಕೇಟ್ ತೆಗೆದು ಕೊಂಡು ಹೋಗಿದ್ದಾರೆ. ಯಾವಾಗ ಬಂದು ತೆಗೆದುಕೊಂಡು ಹೋಗಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಸುಜಾತಾ ಭಟ್ ಅವರ ಬಾಯಿಯಿಂದಲೇ ಮಾಧ್ಯಮಗಳ ಮುಖಾಂತರ ಕೇಳಿದ್ದೇನೆ. ವಾಸಂತಿ ಅವರ ಪಾಸ್‌ಪೋರ್ಟ್ ಚಿನ್ನಾಭರಣಗಳನ್ನು ಕದ್ದುಕೊಂಡು ಹೋಗಿದ್ದಾರೆ. ಅವರ ಫೋಟೊ ಆಲ್ಬಮ್, ಬಟ್ಟೆಗಳು ಸೇರಿದಂತೆ ಸುಮಾರು 15 ಲಕ್ಷದಷ್ಟು ಮೌಲ್ಯದ ವಸ್ತುಗಳನ್ನು ಕದ್ದಿದ್ದಾರೆ ಎಂದು ಆರೋಪಿಸಿದ್ದಾರೆ.

ಮುಸುಕುಧಾರಿ ಬಂಧನಕ್ಕೆ ಹುಟ್ಟೂರಿನಲ್ಲಿ ಸಂತಸ

ಮಂಡ್ಯ: ಧರ್ಮಸ್ಥಳ ಪ್ರಕರಣದ ದೂರುದಾರ ಮುಸುಕುಧಾರಿ ಸಿ.ಎನ್. ಚಿನ್ನಯ್ಯ ಬಂಧನವಾಗುತ್ತಿದ್ದಂತೆ, ಆತನ ಹುಟ್ಟೂರು ಚಿಕ್ಕಬಳ್ಳಿ ಗ್ರಾಮದ ಜನರು ಸಂತಸ ವ್ಯಕ್ತಪಡಿಸಿದ್ದಾರೆ. ಶನಿವಾರ ಮುಸುಕುಧಾರಿಯ ಭಾವಚಿತ್ರವೂ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಧರ್ಮಾಧ ಮೇಲೆ ಆಪಾದನೆ ಮಾಡಲು ಹೋದವನಿಗೆ ತಕ್ಕ ಶಾಸ್ತಿಯಾಗಿದೆ. ಅದರಲ್ಲೂ ಮಂಜುನಾಥಸ್ವಾಮಿ ಮತ್ತು ಖಾವಂದರಿಗೆ ಕಳಂಕ ತರಲು ಹೊರಟ್ಟಿದ್ದ ಚಿನ್ನಯ್ಯ ತಾನೇ ಸೃಷ್ಟಿಸಿದ ಬಲೆಗೆ ಬಿದ್ದಿದ್ದಾನೆ' ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಇದೇ ರೀತಿ ಈತನ ಹಿಂದೆ ಇದ್ದು ಷಡ್ಯಂತ್ರ ರೂಪಿಸಿದವರಿಗೂ ತಕ್ಕ ಶಿಕ್ಷೆ ಆಗಬೇಕು. ಮನೆ-ಮನೆಯಲ್ಲೂ ಮಂಜುನಾಥಸ್ವಾಮಿಯ ಭಕ್ತರಿದ್ದಾರೆ. ಅವರ ಭಾವನೆಗೆ ಧಕ್ಕೆ ತಂದಿದ್ದಾನೆ. ಈತನ ಬಂಧನ ನಮ್ಮೆಲ್ಲರಿಗೂ ಸಂತಸ ತಂದಿದೆ ಎಂದು ಹೇಳಿದ್ದಾರೆ.

ಚಿನ್ನಯ್ಯನ ಬಂಧನಕ್ಕೆ ಮಟ್ಟಣ್ಣನವರ್ ಸ್ವಾಗತ

ಮಂಗಳೂರು: ಚಿನ್ನಯ್ಯನನ್ನು ಬಂಧಿಸಿದ್ದು ಒಳ್ಳೆದಾಯಿತು ನಾನು ಸ್ವಾಗತಿಸುತ್ತೇನೆ. ಆತನಿಗೆ ನಾರ್ಕೋ ಆನಾಲಿಸಿಸ್ ಪರೀಕ್ಷೆ

ಮಾಡಬೇಕು ಎಂದು ಗಿರೀಶ್ ಮಟ್ಟಣ್ಣನವರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಷಡ್ಯಂತ್ರ ಏನೇ ಇದ್ದರೂ ಎಸ್‌ಐಟಿಯವರೇ ಉತ್ತರ ಕೊಡುತ್ತಾರೆ. ಅರೆಸ್ಟ್ ಆಗಿದ್ದು ಒಳ್ಳೆಯ ಬೆಳವಣಿಗೆ. ಎಸ್‌ಐಟಿ ಕರೆದರೆ ನನಗೆ ಮತ್ತು ಆತನಿಗೆ ಏನು ಸಂಬಂಧ ಇದೆ ಎನ್ನುವುದನ್ನು ತಿಳಿಸುತ್ತೇನೆ. ಸುಜಾತ ಭಟ್ ಅವರು ಅವರಿಗೆ ಆಗಿರುವ ಅನ್ಯಾಯವನ್ನು ಮೊದಲ ಬಾರಿಗೆ ಹೇಳಿದ್ದಾರೆ. ಯಾಕೆ ಮಾಧ್ಯಮಗಳು ಈ ವಿಚಾರವನ್ನು ಪ್ರಶ್ನೆ ಮಾಡುತ್ತಿಲ್ಲ ಎಂದರು.

ಭಾವನೆಗಳಿಗೆ ಧಕ್ಕೆ ತಂದರೆ ತಕ್ಕ ಪಾಠ: ಮುತಾಲಿಕ್

ಧಾರವಾಡ: ಧರ್ಮಸ್ಥಳ ಹಿಂದೂಗಳ ಪವಿತ್ರ ಸ್ಥಳವಾಗಿದ್ದು, ಅದಕ್ಕೆ ಧಕ್ಕೆ ತರುವ ಕೆಲಸ ಮಾಡಲಾಗುತ್ತಿದೆ. ತನಿಖೆಯಾದ ಬಳಿಕ ಕಥೆ ಕಟ್ಟಿದವರು ಮತ್ತು ಅವರಿಗೆ ಬೆಂಬಲ ನೀಡಿದವರಿಗೆ ಗುಂಡು



ಹಾಕಬೇಕು ಎಂದು ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆಗ್ರಹಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಂದು ಧರ್ಮಸ್ಥಳ, ನಾಳೆ ತಿರುಪತಿ, ನಾಡಿದ್ದು ಮತ್ತೊಂದು. ಇಲ್ಲಿ ನಮ್ಮ ಶ್ರದ್ದೆ ಭಂಗ ಮಾಡುವ ಷಡ್ಯಂತ್ರ ನಡೆದಿದೆ. ಇದನ್ನು ನಾವು ವಿರೋಧಿಸುತ್ತೇವೆ. ಇದಲ್ಲದೇ ನಮ್ಮ ಭಾವನೆಗಳಿಗೆ ಧಕ್ಕೆ ತರುವಂತಹ ಜನರಿಗೆ ತಕ್ಕ ಪಾಠ ಕಲಿಸುತ್ತೇವೆ. ಸೌಜನ್ಯಳ ಮೇಲೆ ಕ್ರೌರ್ಯ, ಆಕೆಯ ಕೊಲೆ ಮಾಡಿದವರಿಗೆ ಉಗ್ರ ಶಿಕ್ಷೆ ಆಗಲೇಬೇಕು. ಆದರೆ, ಸೌಜನ್ಯಳ ಹೆಸರಿನಲ್ಲಿ ಹಿಂದೂಗಳನ್ನೇ ಗುರಿ ಮಾಡುತ್ತಿರುವುದು ಸರಿಯಲ್ಲ ಎಂದು ಕಿಡಿ ಕಾರಿದರು.

ಸಮೀರ್ ಮನೆಗೆ ನೋಟಿಸ್ ಅಂಟಿಸಿದ ಪೊಲೀಸರು

ಬಳ್ಳಾರಿ: ಮಂಗಳೂರು ಜಿಲನಿಕೋರ್ಟ್‌ನಿಂದ ಜಾಮೀನು ಸಿಕ್ಕರೂ ಧರ್ಮಸ್ಥಳ ಪೊಲೀಸ್ ಠಾಣೆಗೆ ವಿಚಾರಣೆಗೆ ಹಾಜರಾಗದ ಹಿನ್ನೆಲೆಯಲ್ಲಿ ಯೂಟ್ಯೂಬರ್ ಸಮೀರ್ ಎಂ.ಡಿ. ಮನೆಗೆ ಪೊಲೀ

ಸರು ನೋಟಿಸ್ ಅಂಟಿಸಿ ಬಂದಿದ್ದಾರೆ. ಸಮೀರ್ ಎಂ.ಡಿ. ಕೋರ್ಟ್‌ಗೆ ನೀಡಿದ ವಿಳಾಸ ಬಳ್ಳಾರಿ ಜಿಲ್ಲೆಯ ಕೌಲ್ ಬಜಾರ ಠಾಣೆ ವ್ಯಾಪ್ತಿಯಲ್ಲಿರುವ ಬಂಡಿಹಟ್ಟಿ ನಿವಾಸಕ್ಕೆ ಶುಕ್ರವಾರ ನೋಟಿಸ್ ನೀಡಲು ತೆರಳಿದಾಗ ಮನೆ ಬಾಗಿಲಿಗೆ ಬೀಗ ಹಾಕಲಾಗಿತ್ತು. ಈ ಹಿನ್ನೆಲೆಯಲ್ಲಿ ಪೊಲೀಸರು ಮನೆ ಗೋಡೆಗೆ ನೋಟಿಸ್ ಅಂಟಿಸಿದ್ದಾರೆ. ಇನ್ನೊಂದು ತಂಡ ಬೆಂಗಳೂರು ಹುಲ್ಲಹಳ್ಳಿಯಲ್ಲಿರುವ ಬಾಡಿಗೆ ಮನೆಗೆ ಹೋದಾಗ ಕೂಡ ಮನೆ ಬಾಗಿಲಿಗೆ ಬೀಗ ಹಾಕಿದ್ದ ಹಿನ್ನೆಲೆಯಲ್ಲಿ ಆ ಮನೆ ಗೋಡೆಗೂ ಪೊಲೀಸರು ನೋಟಿಸ್ ಅಂಟಿಸಿದ್ದಾರೆ.

ಸಮೀರ್‌ಗೆ ಖಡಕ್ ಎಚ್ಚರಿಕೆ

ಉಡುಪಿ: ನೀನು ಮಂಗಳೂರಲ್ಲಿ ಇದ್ದದ್ದಕ್ಕೆ ಬಚಾವಾದೆ, ಉಡುಪಿಯಲ್ಲಿ ಇದ್ದಿದ್ರೆ ಮಲ್ಪೆ ಬೀಚಿನಲ್ಲಿ ಫುಟ್ಬಾಲ್ ಆಡಿಸುತ್ತಿದ್ದೆ ಎಂದು ಶಾಸಕ ಯಶ್ಪಾಲ್ ಸುವರ್ಣ ಯೂಟ್ಯೂರ್‌ಗೆ ಸಮೀರ್‌ಗೆ ಖಡಕ್ ಎಚ್ಚರಿಕೆ ಕೊಟ್ಟಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾ ಡಿದ ಅವರು, ಯೂಟ್ಯೂಬರ್ ಸಮೀರ್‌ಗೆ ನೇರ ಎಚ್ಚರಿಕೆ ಕೊಡುತ್ತೇನೆ.



ನೀನು ಮಂಗಳೂ ರಲ್ಲಿ ಇದ್ದದ್ದಕ್ಕೆ ಬಚಾವಾದೆ. ಉಡುಪಿಯಲ್ಲಿ ಇರುತ್ತಿದ್ದರೆ ಮಲ್ಪೆ ಬೀಚಿನಲ್ಲಿ ಫುಟ್ಬಾಲ್ ಆಡಿಸುತ್ತಿದ್ದೆ. ನಿನ್ನನ್ನು ನಾವು ಫುಟ್ಬಾಲ್ ಮಾಡಿ ಆಡಿಸುತ್ತಿದ್ದೆವು. ಅಧಿವೇಶನ ಮುಗಿದ ಮೇಲೆ ಬರುತ್ತೇನೆ. ಸಮೀರ್ ಬಗ್ಗೆ ಒಳ್ಳೆಯ ಪ್ಲ್ಯಾನ್ ಮಾಡಿ, ಆತನನ್ನು ರಾಜ್ಯದಿಂದ ಓಡಿಸುತ್ತೇವೆ. ಕಾಂಗ್ರೆಸ್ ಹೈಕಮಾಂಡ್‌ನ ಒತ್ತಡದಿಂದ ಆತ ಬಂಧನವಾಗಿಲ್ಲ. ನಮ್ಮ ಸರಕಾರ ಇರಲಿ, ಇರದೇ ಇರಲಿ. ನಮ್ಮದು ಹಿಂದೂ ಸಮಾಜದ ಪರ ವಾದ. ನಮ್ಮದು ಹಿಂದುತ್ವದ ಫ್ಯಾಕ್ಟರಿ, ಹಿಂದು ಸಮಾಜವನ್ನು ಒಡೆಯಲು ಸಾಧ್ಯವಿಲ್ಲ ಎಂದು ಕಿಡಿಕಾರಿದರು.

ನಮಗೆಲ್ಲರಿಗೂ ನಿಜವಾಗಿ ಮಂಜುನಾಥನ ಮೇಲೆ ದೈವಭಕ್ತಿ ಇದೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಯಾರೋ ಒಬ್ಬ ಅನಾಮಿಕ ಮಾಡಿದ ದೂರಿಗೆ ಸರಕಾರ ಕೂಡ ಪ್ರೋತ್ಸಾಹ ಕೊಟ್ಟಿತು. ಈಗ ಸರಕಾರಕ್ಕೂ ಅರಿವಾಗಿ ಆತನನ್ನು ಬಂಧಿಸಲು ಕ್ರಮ ಕೈಗೊಂಡಿದೆ. ಷಡ್ಯಂತ್ರದ ಹಿಂದಿನವರ ಬಂಧನ ಕೂಡ ಆಗಬೇಕು.

-ಸಿ.ಎಸ್.ಪುಟ್ಟರಾಜು, ಮಾಜಿ ಸಚಿವ

ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಧ್ಯಮಗಳು ಪ್ರಚಾರ ಮಾಡಿದ್ದು ನೋಡಿದರೆ ತನಿಖೆ ವಿಚಾರ ಬಿಟ್ಟು ಧರ್ಮಸ್ಥಳದ ಬಗ್ಗೆ ಅಪಪ್ರಚಾರಕ್ಕೆ ಸರಕಾರ ಕಡಿವಾಣ ಹಾಕದಿರುವುದು ನೋಡಿದರೆ ಎಸ್‌ಐಟಿ ತನಿಖೆಯಿಂದ ಸತ್ಯ ಹೊರ ಬರುವ ನಂಬಿಕೆ ಇಲ್ಲ. ಧರ್ಮಸ್ಥಳ ಪ್ರಕರಣದಲ್ಲಿ ಷಡ್ಯಂತ್ರದ ಹಿಂದೆ ಯಾರಿದ್ದಾರೆ ಎಂದು ತಿಳಿಸಲು ರಾಜ್ಯ ಸರಕಾರ ತನಿಖೆಯನ್ನು ಎನ್‌ಐಎಗೆ ಕೊಡಬೇಕು. ಮುಸುಕುಧಾರಿ ಚಿನ್ನಯ್ಯ ಹೇಳಿರುವ ವ್ಯಕ್ತಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಬೇಕು. ಇಲ್ಲದಿದ್ದರೆ ರಾಜ್ಯ ಸರಕಾರ ಷಡ್ಯಂತ್ರದ ಒಂದು ಭಾಗ ಎಂದು ಜನರು ತೀರ್ಮಾನಿಸುವ ಸಾಧ್ಯತೆ ಇದೆ. ಇದನ್ನು ತಪ್ಪಿಸಲು ತನಿಖೆಯನ್ನು ಎನ್‌ಐಎಗೆ ಕೊಡಬೇಕು.

-ಬಸವರಾಜ ಬೊಮ್ಮಾಯಿ, ಸಂಸದ

ನಾವು ಅವರ (ಧರ್ಮಸ್ಥಳ) ಪರವೂ ಇಲ್ಲ, ಇವರ ಪರವೂ ಇಲ್ಲ. ನಾವು ನ್ಯಾಯದ ಪರ. ಧರ್ಮದ ವಿಚಾರದಲ್ಲಿ ರಾಜಕಾರಣ ಮಾಡಬೇಡಿ ಎಂದಷ್ಟೇ ನಾವು ಹೇಳುತ್ತಿದ್ದೇವೆ. ನಾನು 'ಷಡ್ಯಂತ್ರ' ವಿಚಾರ ಪ್ರಸ್ತಾವನೆ ಮಾಡಿದ ನಂತರ ಮಾತನಾಡುತ್ತಿದ್ದಾರೆ. ನೀವು ಎಸ್‌ಐಟಿ ರಚನೆ ಮಾಡಿರು ವುದು ಒಳ್ಳೆಯ ಕೆಲಸ ಎಂದು ಹೇಳಿದ್ದಾರೆ. ತನಿಖೆ ನಡೆಯು ತ್ತಿದೆ. ತಪ್ಪಿತಸ್ಥರು ಯಾರೇ ಇದ್ದರು ನಮ್ಮ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ.

- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹೇಳಿಕೆ

ಸ್ಪೃಶ್ಯ ಜಾತಿ ಬೇಡ, ವಿಮುಕ್ತ ಸಮುದಾಯ ಆಗಲಿ

ಬಾಗಲಕೋಟೆ: ಪರಿಶಿಷ್ಟ ಜಾತಿ ಒಳಮೀಸಲಾತಿಯಲ್ಲಿನ ಸಿ ಗುಂಪಿಗೆ ಅಸಾಂವಿಧಾನಿಕ ಪದ ಸ್ಪೃಶ್ಯ ಜಾತಿ ಎಂಬುವುದನ್ನು ಕಡತದಿಂದ ತೆಗೆದು, ವಿಮುಕ್ತ ಸಮುದಾಯಗಳೆಂದು ಗುರುತಿಸಬೇಕು ಎಂದು ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ರಾಜ್ಯ ಸರಕಾರಕ್ಕೆ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಗಸ್ಟ್ 19 ರಂದು ನಡೆದ ಸಚಿವ ಸಂಪುಟದಲ್ಲಿ ನ್ಯಾ.ನಾಗಮೋಹನ್ ದಾಸ್ ಅವರ ಶಿಫಾರಸುಗಳನ್ನು ಕೆಲವು ಮಾರ್ಪಾಡುಗಳೊಂದಿಗೆ ರಾಜಕೀಯ ಒತ್ತಡದಲ್ಲಿ ಅಂಗೀಕರಿಸಿದೆ ಎಂದು ಬೇಸರ ವ್ಯಕ್ತ ಪಡಿಸಿದರು.

ಸ್ವಾತಂತ್ರ್ಯ ನಂತರದಲ್ಲಿ 1952ರ ಕೇಂದ್ರ ಸರಕಾರದ ಅನಂತ ಶಯನಂ ಅಯ್ಯಂಗಾರ್ ಸಮಿತಿ ಶಿಫಾರಸ್ಸಿನಂತೆ ಕೊರಮ, ಕೊರಚ, ಭೋವಿ ಹಾಗೂ ಲಂಬಾಣಿ ಸಮುದಾಯಗಳನ್ನು ವಿಮುಕ್ತ ಸಮುದಾಯಗಳು ಎಂದು ಭಾರತ ಸರಕಾರ ಅಧಿಕೃತವಾಗಿ ಮತ್ತು ಕಾನೂನು ಬದ್ಧವಾಗಿ ಗುರುತಿಸಿದೆ. ಹಾಗಾಗಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಯಲ್ಲಿ ಬರುವ ಕೊರಮ, ಕೊರಚ, ಭೋವಿ (ವಡ್ಡ, ಒಡ್ಡ) ಸಮುದಾಯಗಳು ಸ್ಪೃಶ್ಯರಲ್ಲ. ಇದು ಅಸಂವಿಧಾನಿಕ ಪದ ಪ್ರಯೋಗವಾಗಿದೆ. ಮೀಸಲಾತಿ ಉಪವರ್ಗೀಕರಣದ ಕಡತದಿಂದ ಸ್ಪೃಶ್ಯ ಎಂಬ ಪದ ತೆಗೆದು ವಿಮುಕ್ತ ಜಾತಿಗಳು ಅಥವಾ ವಿಮುಕ್ತ ಸಮುದಾಯಗಳು ಎಂಬ ಪದ ಸೇರಿಸಬೇಕು ಎಂದು ಆಗ್ರಹಿಸಿದರು.

ಧ್ವನಿ ಇಲ್ಲದ ಸಮಾಜಗಳಿಗೆ ಅನ್ಯಾಯ

ಎಡಗೈ, ಬಲಗೈ ಸಂಘರ್ಷದಲ್ಲಿ ಧ್ವನಿ ಇಲ್ಲದ ಸಮಾಜಗಳಿಗೆ ಅನ್ಯಾಯವಾಗಿದೆ. ಪ್ರಬಲವಾಗಿರುವ ಸಮುದಾಯಗಳಿಗೆ ಸರಕಾರ ಮಣೆ ಹಾಕಿದೆ. ತರಾತುರಿಯಲ್ಲಿ, ಒತ್ತಡಕ್ಕೆ ಒಳಪಟ್ಟು ನಿರ್ಣಯ ಮಾಡಲಾಗಿದೆ. ನ್ಯಾಯಮೂರ್ತಿ ನಾಗಮೋಹನದಾಸ್ ಸಮೀಕ್ಷೆಯಲ್ಲಿ ಅತ್ಯಂತ ಹಿಂದುಳಿದ ಎಂದು ಗುರುತಿಸಲಾಗಿರುವ ಸಿ ಗುಂಪಿಗೆ ರೋಸ್ಟರ್ ಪದ್ಧತಿಯಲ್ಲಿ ಬಿಂದು 1 ನೀಡಬೇಕು. ಶಾಶ್ವತ ಪರಿಶಿಷ್ಟ ಜಾತಿ ಆಯೋಗ ರಚನೆ ಮಾಡುವುದಾಗಿ ಹೇಳಿದ್ದು, ಅದನ್ನು ಶೀಘ್ರ ಜಾರಿ ಮಾಡಬೇಕು. ಹೋರಾಟಗಾರರ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆಯುವುದು ಹಾಗೂ ಮುಂದಿನ ರಾಷ್ಟ್ರೀಯ ಜನಗಣತಿಯಲ್ಲಿ ಅಂಕಿ-ಅಂಶಗಳನ್ನು ಆಧರಿಸಿ ಬದಲಾವಣೆ ಒಳಪಡಿಸಲು ಬದ್ಧವಾಗಿರುವುದನ್ನು ಸ್ವಾಗತಿಸುತ್ತೇವೆ ಎಂದು ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹೇಳಿದರು.

ನ್ಯಾ.ನಾಗಮೋಹನ್ ದಾಸ್ ಆಯೋಗದ ಶಿಫಾರಸ್ಸನ್ನು ಕೆಲವು ಮಾರ್ಪಡುಗಳೊಂದಿಗೆ ಸಚಿವ ಸಂಪುಟವು ಎ, ಬಿ ಹಾಗೂ ಸಿ ಎಂದು ಮೂರು ಪ್ರವರ್ಗಗಳನ್ನಾಗಿ ವಿಭಾಗೀಕರಿಸಲು 6:6:5 ಅನುಪಾತದಲ್ಲಿ ಒಳಮೀಸಲಾತಿ ನೀಡಲು ತೀರ್ಮಾನಿಸಿದೆ. ಸಿ ಗುಂಪಿಗೆ ಶೇ.4 ನ್ಯಾಯ ಸಮ್ಮತವಲ್ಲದ ಶೇಖಡವಾರನ್ನು ಸಚಿವ ಶಿವರಾಜ ತಂಗಡಗಿ ಭೋವಿ, ಬಂಜಾರ, ಕೊರಮ, ಕೊರಚ ಸಮುದಾಯಗಳ ಧ್ವನಿಯಾಗಿ ಶೇ.5 ರಷ್ಟು ಮಾಡಿರುವುದು ಅಭಿನಂದನಾರ್ಹ. ಆದರೆ, ಈ ಗುಂಪಿಗೆ ಅಲೆಮಾರಿಗಳನ್ನು ಸೇರಿಸಿದಾಗ ಶೇ.6 ರಷ್ಟು ಹೆಚ್ಚಿಸಬೇಕಾದದ್ದು ಜವಾಬ್ದಾರಿ ಸ್ಥಾನದಲ್ಲಿದ್ದವರ ಕರ್ತವ್ಯವಾಗಿತ್ತು. ಧ್ವನಿಯಿಲ್ಲದವರ ದನಿಯಾಗಿ ಸಂಪುಟ ಕಾರ್ಯ ನಿರ್ವಹಿಸಬೇಕಿತ್ತು ಎಂದು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಎಡಗೈ, ಬಲಗೈ ಸಂಘರ್ಷದಲ್ಲಿ ಧ್ವನಿ ಇಲ್ಲದ ಸಮಾಜಗಳಿಗೆ ಅನ್ಯಾಯವಾಗಿದೆ. ಪ್ರಬಲವಾಗಿರುವ ಸಮುದಾಯಗಳಿಗೆ ಸರಕಾರ ಮಣೆ ಹಾಕಿದೆ. ತರಾತುರಿಯಲ್ಲಿ, ಒತ್ತಡಕ್ಕೆ ಒಳಪಟ್ಟು ನಿರ್ಣಯ ಮಾಡಲಾಗಿದೆ.ರಾಜ್ಯದಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆ ಶೇ.18ರಷ್ಟು ಇರುವುದರಿಂದ ರಾಜ್ಯ ಸರಕಾರ ಮೀಸಲಾತಿ ಪ್ರಮಾಣವನ್ನೂ ಶೇ.18ಕ್ಕೆ ಹೆಚ್ಚಿಸಬೇಕು.

-ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಭೋವಿ ಗುರುಪೀಠದ ಜಗದ್ಗುರುಗಳು

ಎನ್.ಎಸ್.ಬೋಸರಾಜು ಫೌಂಡೇಶನ್‌ನಿಂದ ಉದ್ಯೋಗ ಮೇಳ | ರವಿ ಬೋಸರಾಜು ಭಾಗಿ

ರಾಯಚೂರು: ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆಗೆ ಚಿಂತನೆ

ಪಂಡೀತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಎನ್.ಎಸ್.ಬೋಸರಾಜು ಫೌಂಡೇಶನ್‌ನಿಂದ ನಡೆದ ಉದ್ಯೋಗ ಮೇಳದಲ್ಲಿ ಯುವ ಕಾಂಗ್ರೆಸ್ ನಾಯಕ ರವಿ ಬೋಸರಾಜು ಪಾಲ್ಗೊಂಡರು.

ರಾಯಚೂರು: ಇಲ್ಲಿನ ವಿದ್ಯಾರ್ಥಿಗಳು, ಯುವಕರು ಹುಟ್ಟೂರಿನಲ್ಲಿಯೇ ಶಿಕ್ಷಣ ಪಡೆದು ಇಲ್ಲಿಯೇ ಉದ್ಯೋಗ ಮಾಡಬೇಕೆಂಬ ದೊಡ್ಡ ಕನಸಿದೆ. ಬೇರೆಡೆಗೆ ಹೋಗಿ ಉದ್ಯೋಗಕ್ಕಾಗಿ ಅಲೆದಾಟ ತಪ್ಪಿಸಲು ಜಿಲ್ಲೆಯಲ್ಲಿ ಉದ್ಯೋಗ ಸೃಷ್ಟಿಸುವ ಕೈಗಾರಿಕೋದ್ಯಮಗಳ ಸ್ಥಾಪನೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುತ್ತಿದೆ ಎಂದು ಕಾಂಗ್ರೆಸ್ ಯುವ ಮುಖಂಡ ರವಿ ಬೋಸರಾಜು ಹೇಳಿದರು.

ಪಂಡೀತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಾಗೂ ಡಾ. ಬಿ ಆರ್ ಅಂಬೇಡ್ಕರ್ ಭವನದಲ್ಲಿ ಎನ್.ಎಸ್.ಬೋಸರಾಜು ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿದ್ದ ಔದ್ಯೋಗಿಕ ತರಬೇತಿ ಕಾರ್ಯಗಾರ ಹಾಗೂ ಉದ್ಯೋಗ ಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಯುವಕ, ಯುವತಿಯರು ದೂರದ ಮಹಾ ನಗರ ಗಳಿಗೆ ಹೋಗಿ ಉದ್ಯೋಗ ಮಾಡುವಾಗ ಪಾಲಕರ ಕಷ್ಟ ನನಗೆ ಗೊತ್ತಿದೆ. ಯುವಕ, ಯುವತಿಯರ ಕಷ್ಟ ತಪ್ಪಿಸಲು ಇಲ್ಲಿಯೇ ಉದ್ಯೋಗ ಸೃಷ್ಠಿಯಾಗಬೇಕು ಹಾಗಾಗಿ ನಮ್ಮ ಫೌಂಡೇಷನ್ ನಿಂದ ಉದ್ಯೋಗ ಸೃಷ್ಠಿಗೆ ಮೊದಲ ಆದ್ಯತೆ ನೀಡುತ್ತಿದ್ದೇವೆ. ಈ ಉದ್ಯೋಗ ಮೇಳದಲ್ಲಿ ಉದ್ಯೋಗ ದೊರೆತ ಅಭ್ಯರ್ಥಿಗಳು ಸಂಸ್ಥೆಯೊಂದಿಗೆ ವಿಶ್ವಾಸರ್ಹತೆ ಗಳಿಸಿ ಉನ್ನತ ಮಟ್ಟದ ಸ್ಥಾನಕ್ಕೇರಲು ಪ್ರಮಾಣಿಕವಾಗಿ ನಿಮಗೆ ಕೆಲಸ ಮಾಡಿ ನಮಗೆ ಕೆಲಸ ನೀಡಿದ ಕಂಪನಿಯ ಘನತೆಯನ್ನು ಹೆಚ್ಚಿಸಬೇಕು ಎಂದರು.

ರಾಯಚೂರಿನಲ್ಲಿರುವ ಗಂಜ್, ಹತ್ತಿ ಮಾರುಕಟ್ಟೆ, ವೈಟಿಪಿಎಸ್, ಆರ್‌ಟಿಪಿಎಸ್ ಇನ್ನಿತರ ಕೈಗಾರಿಕೆಯ ಉದ್ಯಮಗಳಿಂದ ನೂರಾರು ಕೋಟಿಯ ವ್ಯವಹಾರವಾಗುತ್ತಿದೆ. ಇಂತಹ ಸಂಪತ್ತಿನ ನಡುವೆ ನಮ್ಮ ಯುವಕರು ಉದ್ಯೋಗಕ್ಕಾಗಿ ಬೇರೆಯೂರಿಗೆ ಹೋಗಬೇಕಾದ ಅಗತ್ಯವೇ ಇಲ್ಲ. ಬೋಸರಾಜು ಫೌಂಡೇಶನ್ ಸಹಯೋಗದಲ್ಲಿ ರಾಯಚೂರಿನಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪಿಸುವ ನಿಟ್ಟಿನಲ್ಲಿ ಚಿಂತನೆ ನಡೆಸುತ್ತಿದ್ದೇವೆ.

-ರವಿ ಬೋಸರಾಜು, ಕಾಂಗ್ರೆಸ್ ಯುವ ನಾಯಕ

ಪ್ರವಚನದಿಂದ ಪ್ರಭಾವಿತರಾಗಿ ದೇಹತ್ಯಾಗ ಘೋಷಣೆ

ಬೆಳಗಾವಿ: ಹರಿಯಾಣದ ವಿವಾದಿತ ಬಾಬಾ ರಾಮಪಾಲ್ ಪ್ರವಚನದಿಂದ ಪ್ರಭಾವಿತರಾಗಿ ಸೆ.8ರಂದು ದೇಹತ್ಯಾಗ ಮಾಡುವುದಾಗಿ ಒಂದೇ ಕುಟುಂಬದ ನಾಲ್ವರು ಘೋಷಣೆ ಮಾಡಿರುವ ಘಟನೆ ಅಥಣಿ ತಾಲೂಕಿನ ಅನಂತಪುರ ಗ್ರಾಮದಲ್ಲಿ ಬೆಳಕಿಗೆ ಬಂದಿದೆ.

ತಾಲೂಕಿನ ಅನಂತಪುರ ಹೊರವಲಯದ ಸಿಂಗಣಾಪುರ ರಸ್ತೆಯಲ್ಲಿರುವ ತುಕಾರಾಮ ಇರಕರ್ ಕುಟುಂಬದ ನಾಲ್ವರು ಸದಸ್ಯರು ಹಾಗೆಯೇ ವಿಜಯಪುರ ಮತ್ತು ಮಹಾರಾಷ್ಟ್ರದ ಪುಣೆ ಮೂಲದ ಒಟ್ಟು 21 ಜನ ದೇಹತ್ಯಾಗ ಮಾಡುವ ವದಂತಿ ಹಬ್ಬಿದೆ. ಬಾಬಾ ರಾಮಪಾಲ್ ಭಕ್ತರಾಗಿರುವ ಇವರು ಕೆಲ ದಿನಗಳ ಹಿಂದೆ ದೀಕ್ಷೆ ಪಡೆದಿದ್ದಾರೆ ಎನ್ನಲಾಗಿದೆ.

ಹರಿಯಾಣ ಸಂತ ಬಾಬಾ ರಾಮಪಾಲ್ ಪ್ರವಚನದಿಂದ ಪ್ರೇರಣೆ ಪಡೆದಿದ್ದ ಅನಂತಪುರ ಗ್ರಾಮದ ತುಕಾರಾಮ ಇರಕರ, ಪತ್ನಿ ಸಾವಿತ್ರಿ, ಪುತ್ರ ರಮೇಶ್, ಸೊಸೆ ವೈಷ್ಣವಿ



ದೇಹತ್ಯಾಗಕ್ಕೆ ನಿರ್ಧರಿಸಿದ್ದ ತುಕಾರಾಮ ಇರಕರ ಕುಟುಂಬದ ಮನವೊಲಿಸಲು ಅನಂತಪುರ ಗ್ರಾಮಕ್ಕೆ ಭೇಟಿ ನೀಡಿದ ಅಧಿಕಾರಿಗಳು.

ದೇಹತ್ಯಾಗಕ್ಕೆ ನಿರ್ಧರಿಸಿದ್ದರು. ನಾವು ಇಲ್ಲಿ ಇರಲ್ಲ, ಬಾಬಾ ನಮ್ಮನ್ನು ಕರೆದೊಯ್ಯುವರು. ನಮಗೆ ಮೋಕ್ಷ ಕೊಡಿಸುತ್ತಾರೆ ಎಂದು ಹೇಳುತ್ತಿದ್ದರು.

ಬುದ್ಧಿವಾದ ಹೇಳಿದ ಅಧಿಕಾರಿಗಳು

ಘಟನೆ ಬೆಳಕಿಗೆ ಬರುತ್ತಿದ್ದಂತೆ ಚಿಕ್ಕೋಡಿ ಉಪವಿಭಾಗಾಧಿಕಾರಿ ಸುಭಾಷ ಸಂಪಗಾವಿ, ಅಥಣಿ ಡಿವೈಎಸ್ಪಿ ಪ್ರಶಾಂತ ಮುನ್ನೋಳ್ಳಿ ಹಾಗೂ ಕವಲಗುಡ್ಡದ ಅಮರೇಶ್ವರ ಮಹಾರಾಜರು ತುಕಾರಾಮ ಇರಕರ್ ಕುಟುಂಬ ಭೇಟಿಮಾಡಿ ಬುದ್ಧಿವಾದ ಹೇಳಿದ್ದಾರೆ. ಬಾಬಾ ರಾಮಪಾಲ್ ಮಹಾರಾಷ್ಟ್ರ ಪೊಲೀಸರ ವಶದಲ್ಲಿದ್ದು ಮೌಢ್ಯಕ್ಕೆ ಬಲಿಯಾಗದೆ ಉತ್ತಮ ಜೀವನ ಸಾಗಿಸುವಂತೆ ತಿಳಿ ಹೇಳುವ ಪ್ರಯತ್ನ ಮಾಡಿದ್ದಾರೆ. ಇದರಿಂದ ದೇಹತ್ಯಾಗ ಮಾಡುವ ನಿರ್ಧಾರದಿಂದ ಕುಟುಂಬ ಹಿಂದೆ ಸರಿದಿದೆ ಎಂದು ತಿಳಿದುಬಂದಿದೆ.

ರಾಜನೇ ಅರಸೊತ್ತಿಗೆ ಕಿತ್ತೊಗೆದು ಪ್ರಜಾಪ್ರಭುತ್ವವನ್ನು ಸ್ಥಾಪಿಸಿದ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಅಧಿಕಾರದ ಮಹಿಮೆಯೇ ಅಂಥದ್ದು. ಸಾಮಾನ್ಯವಾಗಿ ಅಧಿಕಾರವನ್ನು ಯಾರೂ ಬಿಟ್ಟುಕೊಡುವುದಿಲ್ಲ. ಒಮ್ಮೆ ಗಿಟ್ಟಿಸಿಕೊಂಡ ಅಧಿಕಾರವನ್ನು ಬಿಟ್ಟುಕೊಟ್ಟ ನಿದರ್ಶನ ಜಾಗತಿಕ ಇತಿಹಾಸದಲ್ಲಿ ಅಪರೂಪ. ವರ್ಷಗಳವರೆಗೆ ಅಧಿಕಾರ ನಡೆಸಿದವರು ಸಹ ಅಧಿಕಾರವನ್ನು ಬೇರೆಯವರಿಗೆ ಹಸ್ತಾಂತರಿಸುವ ಸಮಯದಲ್ಲಿ ಅದನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು ಹೇಗೆ ಎಂದು ಯೋಚಿಸಿದ್ದೇ ಹೆಚ್ಚು. 58 ವರ್ಷಗಳ ಕಾಲ ಆಳಿದ ಅಕ್ಬರ್, 52 ವರ್ಷಗಳ ಕಾಲ ಕ್ಯೂಬಾವನ್ನು ಆಳಿದ ಫಿಡೆಲ್ ಕ್ಯಾಸ್ಟ್ರೋ ಹಾಗೂ ಇತ್ತೀಚಿನ ವರ್ಷಗಳಲ್ಲಿ 24 ವರ್ಷಗಳ ಕಾಲ ಪಶ್ಚಿಮ ಬಂಗಾಳದಲ್ಲಿ ಅಧಿಕಾರದಲ್ಲಿದ್ದ ಜ್ಯೋತಿ ಬಸು ಸಹ ಅಧಿಕಾರವನ್ನು ಬಿಟ್ಟುಕೊಡುವ ಸಂದರ್ಭದಲ್ಲಿ ಯಾವ ರೀತಿ ವರ್ತಿಸಿದರು ಎಂಬುದು ಗೊತ್ತೇ ಇದೆ.

ತಂದೆಯು ಮಗನಿಗೆ ಅಧಿಕಾರವನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಎಷ್ಟೊಂದು ನಿರ್ದಯವಾಗಿ, ಲಜ್ಜೆಗೇಡಿಯಾಗಿ ವರ್ತಿಸಿದ್ದನ್ನು ಮೊಘಲರ ಆಳ್ವಿಕೆಯಲ್ಲಿ ಜಹಾಂಗೀರ್ ಮತ್ತು ಷಹಜಹಾನ್ ಮಧ್ಯೆ ನೋಡಿದ್ದೇವೆ. ಅಧಿಕಾರದ ವಿಷಯದಲ್ಲಿ ಎಲ್ಲರೂ ಪರಮಸ್ವಾರ್ಥಿಗಳೇ. ತಾವು ಅನುಭವಿಸುತ್ತಿರುವ ಅಧಿಕಾರವನ್ನು ಪತ್ನಿಗೋ, ಮಗನಿಗೋ ಕೊಡುವ ಸಂದರ್ಭದಲ್ಲೂ ಪೂರ್ಣ ಮನಸ್ಸಿನಿಂದ ವರ್ತಿಸಿದವರ ನಿದರ್ಶನಗಳು ವಿರಳ. ಹೆಂಡತಿಗೆ ಅಧಿಕಾರವನ್ನು ಹಸ್ತಾಂತರಿಸಿದಾಗಲೂ, ಅದನ್ನು ತಾವೇ ಚಲಾಯಿಸುವ ಒಂದು ತಂತ್ರದಂತೆ ಪ್ರಯೋಗಿಸಿದವರು ಚರಿತ್ರೆಯಲ್ಲಿ ಸಿಗುತ್ತಾರೆ. ಹೀಗಿರುವಾಗ, ಸಿಕ್ಕಿದ ಅಧಿಕಾರವನ್ನು ಬೇರೆಯವರಿಗೆ ನೀಡುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಇಡೀ ಆಟ ಕೆಟ್ಟರೂ ಪರವಾಗಿಲ್ಲ, ಅಧಿಕಾರವನ್ನು ಬೇರೆಯವರಿಗೆ ನೀಡುವ ಪ್ರಶ್ನೆಯೇ ಇಲ್ಲ.

ಆದರೆ ಭೂತಾನ್‌ನಲ್ಲಿ ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವಕ್ಕೆ ಪರಿವರ್ತನೆಯಾದುದು ಪ್ರಪಂಚದಲ್ಲೇ ಒಂದು ಅನನ್ಯ ಘಟನೆಯಾಗಿದೆ. ಸಾಮಾನ್ಯವಾಗಿ, ಜನತಾ ಚಳವಳಿಗಳು, ಕ್ರಾಂತಿಗಳು ಅಥವಾ ಒತ್ತಡಗಳ ಮೂಲಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಲಾಗುತ್ತದೆ; ಆದರೆ ಭೂತಾನ್‌ನಲ್ಲಿ ಈ ಬದಲಾವಣೆಯನ್ನು ಸ್ವತಃ ಅಂದಿನ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಮುನ್ನಡೆಸಿದ್ದು ತೀರಾ ಅಪರೂಪದ ಘಟನೆಯೇ. ಅಷ್ಟಕ್ಕೂ ಭೂತಾನ್‌ನಲ್ಲಿ ರಾಜಪ್ರಭುತ್ವದಿಂದ ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ಪರಿವರ್ತನೆ ಒಂದು ಶಾಂತಿಯುತ ಮತ್ತು ಉದ್ದೇಶಪೂರ್ವಕ ಪ್ರಕ್ರಿಯೆಯಾಗಿತ್ತು.

2005ರಲ್ಲಿ, ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರು ಸ್ವಯಂಪ್ರೇರಿತವಾಗಿ ಅಧಿಕಾರವನ್ನು ತ್ಯಜಿಸಿ, ತಮ್ಮ ಮಗ ಯುವರಾಜ ಜಿಗ್ಮೆ ಖೇಸರ್ ನಮ್ಗ್ಯಾಲ್ ವಾಂಗ್‌ಚುಕ್ ಅವರಿಗೆ ಪಟ್ಟಾಭಿಷೇಕ ಮಾಡಿ, ದೇಶವನ್ನು ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ಪರಿವರ್ತಿಸುವುದಾಗಿ ಘೋಷಿಸಿದರು. ಇದು ವಿಶ್ವದಲ್ಲೇ ಕಂಡು ಬರದ ಒಂದು ಅಸಾಧಾರಣ ನಿರ್ಧಾರವಾಗಿತ್ತು. ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರು ದೇಶದ ಜನರಿಗೆ ಅಧಿಕಾರ ಹಸ್ತಾಂತರಿಸಲು ನಿರ್ಧರಿಸಿದಾಗ ಸ್ವತಃ ಜನರೇ ಅದನ್ನು ವಿರೋಧಿಸಿದರು. ''ನಮಗೆ ಅರಸೊತ್ತಿಗೆಯೇ ಇರಲಿ, ಪ್ರಜಾಪ್ರಭುತ್ವ ಬೇಡ'' ಎಂದು ಹೇಳಿದರು.

ಆದರೆ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ತಮ್ಮ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಅವರು ದೇಶವ್ಯಾಪಿ ಸಂಚರಿಸಿ ಜನಾಭಿಪ್ರಾಯವನ್ನು ಸಂಗ್ರಹಿಸಿ, ತಮ್ಮ ನಿರ್ಧಾರದ ಹಿಂದಿರುವ ಉತ್ತಮ ಆಶಯವನ್ನು ಜನರಿಗೆ ಮನವರಿಕೆ ಮಾಡಿಕೊಟ್ಟರು. ತಾವು ನಂಬಿದ್ದ ''ಒಬ್ಬ ರಾಜನಾಗಿ ನಾನು ಉತ್ತಮ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ, ಆದರೆ ಜನರು ತಮ್ಮ ಭವಿಷ್ಯದ ಬಗ್ಗೆ ಸ್ವತಃ ನಿರ್ಧರಿಸಬಹುದು. ಜನರಿಂದ ಚುನಾಯಿತವಾದ ಸರಕಾರದಿಂದ ಮಾತ್ರ ಉತ್ತಮ ಆಡಳಿತ ಸಾಧ್ಯ. ಆಗಲೇ ಸರಕಾರ ಪ್ರಜೆಗಳ ಸರಕಾರವಾಗುತ್ತದೆ'' ಎಂಬ ತತ್ವವನ್ನು ಅವರು ಬಲವಾಗಿ ಪ್ರತಿಪಾದಿಸಿದರು.

ಈ ಪ್ರಕ್ರಿಯೆಯ ಭಾಗವಾಗಿ, ರಾಜರು ಹಿರಿಯ ಸರಕಾರಿ ಅಧಿಕಾರಿಗಳ ಸಮಿತಿಯನ್ನು ರಚಿಸಿ, ಸಂವಿಧಾನದ ಕರಡನ್ನು ಸಿದ್ಧಪಡಿಸಿದರು. ಈ ಕರಡನ್ನು ಅಂತಿಮಗೊಳಿಸುವ ಮೊದಲು, ರಾಜರು ಜನರ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಸಂಗ್ರಹಿಸಿದರು. ಇದು ಜನಸಾಮಾನ್ಯರಿಗೆ ರಾಜಕೀಯ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಅವಕಾಶ ನೀಡಿತು. ಜನರ ಅಭಿಪ್ರಾಯಗಳನ್ನು ಒಳಗೊಂಡಂತೆ, ಜುಲೈ 18, 2008ರಂದು ಭೂತಾನ್ ಸಂವಿಧಾನವನ್ನು ಔಪಚಾರಿಕವಾಗಿ ಅಂಗೀಕರಿಸಿತು. ಇದು ಭೂತಾನ್‌ನ ಸರ್ವೋಚ್ಚ ಕಾನೂನಾಯಿತು. ಈ ದಿನದಿಂದ ಭೂತಾನ್ ಸಂಪೂರ್ಣ ರಾಜಪ್ರಭುತ್ವದಿಂದ ಸಾಂವಿಧಾನಿಕ ಪ್ರಜಾಪ್ರಭುತ್ವಕ್ಕೆ ಅಧಿಕೃತವಾಗಿ ಬದಲಾಯಿತು. ಇದೇ ವರ್ಷದಲ್ಲಿ, ಭೂತಾನ್ ತನ್ನ ಇತಿಹಾಸದಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಚುನಾವಣೆಯನ್ನು ನಡೆಸಿತು. ಎರಡು ಪ್ರಮುಖ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಭಾಗವಹಿಸಿದವು.

ಭೂತಾನಿನ ಇತಿಹಾಸದಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಚುನಾವಣೆಗಳು ಮಾರ್ಚ್ 24, 2008ರಂದು ನಡೆದವು. ಈ ಚುನಾವಣೆಗಳು ಪ್ರಜಾಪ್ರಭುತ್ವಕ್ಕೆ ಪರಿವರ್ತನೆಯ ಪ್ರಮುಖ ಹೆಜ್ಜೆಯಾಗಿದ್ದವು. ಚುನಾವಣೆಯಲ್ಲಿ ಎರಡು ಪ್ರಮುಖ ರಾಜಕೀಯ ಪಕ್ಷಗಳು ಭಾಗವಹಿಸಿದ್ದವು. ಭೂತಾನ್ ಪೀಸ್ ಆ್ಯಂಡ್ ಪ್ರಾಪರಿಟಿ ಪಾರ್ಟಿ (Druk Phuensum Tshogpa-DPT) ಆಗಿನ ಪ್ರಧಾನಮಂತ್ರಿ ಜಿಗ್ಮೆ ಥಿನ್ಲೆ ಅವರ ನಾಯಕತ್ವದಲ್ಲಿತ್ತು. ಈ ಪಕ್ಷವು ರಾಜಪ್ರಭುತ್ವ ಮತ್ತು ಸಂಪ್ರದಾಯಗಳಿಗೆ ಹತ್ತಿರವಾಗಿತ್ತು. ಇನ್ನೊಂದು ಪೀಪಲ್ಸ್ ಡೆಮೊಕ್ರಟಿಕ್ ಪಾರ್ಟಿ (PDP). ಇದು ಸಾಂಘೇ ನಿಗ್ದು ಅವರ ನಾಯಕತ್ವದಲ್ಲಿತ್ತು. ಡಿಪಿಟಿ ಪಕ್ಷವು ಪ್ರಚಂಡ ಬಹುಮತದೊಂದಿಗೆ ಗೆದ್ದಿತು. ಒಟ್ಟು 47 ಸ್ಥಾನಗಳಲ್ಲಿ 45 ಸ್ಥಾನಗಳನ್ನು ಡಿಪಿಟಿ ಪಡೆದುಕೊಂಡಿತು. ಪಿಡಿಪಿ ಕೇವಲ 2 ಸ್ಥಾನಗಳನ್ನು ಗೆಲ್ಲಲು ಶಕ್ತವಾಯಿತು.

ಈ ಚುನಾವಣೆಗಳು ಭೂತಾನಿನಲ್ಲಿ ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವಕ್ಕೆ ಶಾಂತಿಯುತ ಮತ್ತು ಯಶಸ್ವಿ ಪರಿವರ್ತನೆಯನ್ನು ಸೂಚಿಸುತ್ತವೆ. ಇದು ಭೂತಾನ್‌ನ ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರ ದೂರದೃಷ್ಟಿಯ ಫಲಿತಾಂಶವಾಗಿತ್ತು. ಜನರು ತಮ್ಮ ನಾಯಕರನ್ನು ಆಯ್ಕೆ ಮಾಡುವ ಹಕ್ಕನ್ನು ಪಡೆದರು. ಇದು ಭೂತಾನ್ ರಾಜಕೀಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ತೆರೆಯಿತು. ಈ ಚುನಾವಣೆಗಳು ಭೂತಾನಿನ ಪ್ರಜಾಪ್ರಭುತ್ವ ಪ್ರಯಾಣದ ಆರಂಭಕ್ಕೆ ಸಾಕ್ಷಿಯಾದವು. ಅಲ್ಲಿಂದೀಚೆಗೆ, ದೇಶವು ನಿಯತವಾಗಿ ಚುನಾವಣೆಗಳನ್ನು ನಡೆಸುತ್ತಿದೆ.

ಭೂತಾನಿನ ಹೆಸರುಗಳು

ಭೂತಾನಿಗೆ ಹೋದಾಗ ಅಲ್ಲಿನ ವ್ಯಕ್ತಿಗಳ ಹೆಸರುಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮತ್ತು ಹೇಳುವುದು ತುಸು ಕಷ್ಟ ಎಂದು ಅನಿಸಿದ್ದು ಸುಳ್ಳಲ್ಲ. ಆದರೆ ಅದರ ಹಿನ್ನೆಲೆಯನ್ನು ಅರ್ಥ ಮಾಡಿಕೊಂಡ ಬಳಿಕ, ಹೆಸರುಗಳನ್ನು ನೆನಪಿಟ್ಟುಕೊಳ್ಳಬಹುದು ಎಂದು ಅನಿಸಲಾರಂಭಿಸಿತು.

ಭೂತಾನಿಯರ ಹೆಸರುಗಳು ಭೂತಾನ್‌ನ ಸಂಸ್ಕೃತಿ, ಬೌದ್ಧ ಧರ್ಮ ಮತ್ತು ಟಿಬೆಟಿಯನ್ ಪ್ರಭಾವದಿಂದ ಆಳವಾಗಿ ಪ್ರಭಾವಿತವಾಗಿವೆ. ಇವುಗಳು ಆಧ್ಯಾತ್ಮಿಕ ಅರ್ಥ, ಸ್ಥಳೀಯ ಸಂಪ್ರದಾಯಗಳು ಮತ್ತು ಜ್ಯೋತಿಷ್ಯದ ಆಧಾರದ ಮೇಲೆ ರೂಪಿತವಾಗಿವೆ. ಭೂತಾನಿನಲ್ಲಿ ಹೆಸರಿನ ಜತೆಗೆ ಕುಟುಂಬದ ಹೆಸರು ಇರುವುದಿಲ್ಲ. ರಾಜವಂಶದವರನ್ನು (ಉದಾಹರಣೆಗೆ, ವಾಂಗ್‌ಚುಕ್ ಕುಟುಂಬ) ಹೊರತುಪಡಿಸಿ, ಕುಟುಂಬದ ಹೆಸರು ಅಥವಾ ಉಪನಾಮದ ಸಂಪ್ರದಾಯವಿಲ್ಲ. ಬದಲಿಗೆ, ಒಬ್ಬ ವ್ಯಕ್ತಿಯನ್ನು ಒಂದು ಅಥವಾ ಎರಡು ವೈಯಕ್ತಿಕ ಹೆಸರುಗಳಿಂದ ಗುರುತಿಸಲಾಗುತ್ತದೆ. ಉದಾಹರಣೆಗೆ, ಒಗ್ಯೆನ್ ವಾಂಗ್‌ಡು, ದೇಚೆನ್ ವಾಂಗ್‌ಮೋ.

ಭೂತಾನಿನಲ್ಲಿ ಎರಡು ಹೆಸರುಗಳ ಸಂಪ್ರದಾಯವಿದೆ. 1990ರ ದಶಕದವರೆಗೆ ಭೂತಾನಿಯರಿಗೆ ಒಂದೇ ಹೆಸರಿತ್ತು (ಉದಾ., ನಿಮಾ, ಕರ್ಮ). ಆದರೆ, ಗೊಂದಲವನ್ನು ತಪ್ಪಿಸಲು, ಎರಡು ಹೆಸರುಗಳ ಸಂಪ್ರದಾಯವು ಜನಪ್ರಿಯವಾಯಿತು. ಎರಡನೇ ಹೆಸರು ಕೆಲವೊಮ್ಮೆ ಲಿಂಗವನ್ನು ಸೂಚಿಸಬಹುದು. ಆದರೆ ಇದು ಯಾವಾಗಲೂ ಹಾಗೆಯೇ ಇರುತ್ತದೆ ಎಂದು ಹೇಳಲಾಗದು. ಹೆಚ್ಚಿನ ಭೂತಾನಿ ಹೆಸರುಗಳು (ಉದಾ., ಕರ್ಮ, ಸೋನಮ್, ತ್ಸೆರಿಂಗ್, ಪೆಮಾ) ಲಿಂಗ-ತಟಸ್ಥವಾಗಿರುತ್ತವೆ, ಅಂದರೆ ಗಂಡಸರು ಮತ್ತು ಹೆಂಗಸರಿಬ್ಬರಿಗೂ ಬಳಸಲ್ಪಡುತ್ತವೆ. ಕೆಲವು ಹೆಸರುಗಳು ಮಾತ್ರ (ಉದಾ., ವಾಂಗ್‌ಮೋ, ಲ್ಹಾಮೋ) ಸಾಮಾನ್ಯವಾಗಿ ಮಹಿಳೆಯರಿಗೆ ಸೀಮಿತವಾಗಿವೆ.

ಭೂತಾನಿ ಹೆಸರುಗಳು ಬೌದ್ಧ ಧರ್ಮ, ಟಿಬೆಟಿಯನ್ ಸಂಸ್ಕೃತಿ ಮತ್ತು ಸ್ಥಳೀಯ ಜ್ಯೋತಿಷ್ಯದಿಂದ ಗಾಢವಾಗಿ ಪ್ರಭಾವಿತವಾಗಿವೆ. ಈ ಹೆಸರುಗಳನ್ನು ಸಾಮಾನ್ಯವಾಗಿ ಲಾಮಾ (ಬೌದ್ಧ ಗುರು), ರಿನ್‌ಪೋಚೆ ಅಥವಾ ಜ್ಯೋತಿಷಿಗಳು ನೀಡುತ್ತಾರೆ, ಮಗುವಿನ ಜನ್ಮದಿನಾಂಕ ಮತ್ತು ಜಾತಕದ ಆಧಾರದ ಮೇಲೆ. ಹೆಚ್ಚಿನ ಹೆಸರುಗಳು ಬೌದ್ಧ ತತ್ವಗಳು ಅಥವಾ ಗುರುಗಳನ್ನು ಪ್ರತಿಬಿಂಬಿಸುತ್ತವೆ.

ಉದಾಹರಣೆಗೆ: ಸಾಂಗೇ (Sangay). ಇದು ಬುದ್ಧನನ್ನು ಸೂಚಿಸುತ್ತದೆ. ತ್ಸೆರಿಂಗ್ ದೀರ್ಘಾಯುಷ್ಯವನ್ನು ಸೂಚಿಸುತ್ತದೆ. ದೊರ್ಜಿ ವಜ್ರ (diamond) ಅಥವಾ ಒಂದು ಧಾರ್ಮಿಕ ಸಾಧನ. ಇದು ಶಕ್ತಿ ಮತ್ತು ಶಾಶ್ವತತೆಯನ್ನು ಸಂಕೇತಿಸುತ್ತದೆ. ಜಾಮ್‌ಯಾಂಗ್ ಎಂಬುದು 'ಗೌರವಾನ್ವಿತ ಧ್ವನಿ' ಅಥವಾ ಬೋಧಿಸತ್ವ ಮಂಜುಶ್ರೀಗೆ ಸಂಬಂಧಿಸಿದೆ. ಒಗ್ಯೆನ್ ಎಂಬುದು ಗುರು ಪದ್ಮಸಂಭವ (ಗುರು ರಿನ್‌ಪೋಚೆ) ಗೆ ಸಂಬಂಧಿಸಿದೆ.

ಜನನದ ಸಮಯ, ದಿನ ಮತ್ತು ಜಾತಕವನ್ನು ಆಧರಿಸಿ ಹೆಸರುಗಳನ್ನು ಆಯ್ಕೆ ಮಾಡಲಾಗುತ್ತದೆ. ಉದಾಹರಣೆಗೆ, ಭಾನುವಾರ ಜನಿಸಿದ ಮಗುವಿಗೆ 'ದಾವಾ' (ಅಂದರೆ ಚಂದ್ರ) ಎಂದು ಹೆಸರಿಡಬಹುದು. ಕೆಲವು ಹೆಸರುಗಳು ಸ್ಥಳೀಯ ದೇವತೆಗಳು, ಪ್ರಕೃತಿಯ ಅಂಶಗಳು ಅಥವಾ ಸ್ಥಳಗಳಿಂದ ಪಡೆದಿದ್ದಾಗಿರಬಹುದು. ಉದಾಹರಣೆಗೆ, ಯಾಂಗ್‌ಚೆನ್ ಎಂದರೆ 'ಗಾಯಕ' ಅಥವಾ ಸರಸ್ವತಿಯನ್ನು ಸೂಚಿಸುತ್ತದೆ.

ಭೂತಾನಿನಲ್ಲಿ, ಮಗುವಿನ ಜನನದ ನಂತರ ಕೆಲವು ದಿನಗಳು ಅಥವಾ ವಾರಗಳ ನಂತರ, ಒಂದು ಧಾರ್ಮಿಕ ಸಮಾರಂಭದಲ್ಲಿ ಲಾಮಾ ಅಥವಾ ಧಾರ್ಮಿಕ ವ್ಯಕ್ತಿಯಿಂದ ಹೆಸರನ್ನು ನೀಡಲಾಗುತ್ತದೆ. ಈ ಸಮಯದಲ್ಲಿ, ಜಾತಕವನ್ನು (ಕೀತ್ಸೆ) ರಚಿಸಲಾಗುತ್ತದೆ. ಇದು ಮಗುವಿನ ಹಿಂದಿನ ಜನ್ಮ, ಈ ಜನ್ಮದ ಗುಣಲಕ್ಷಣಗಳು ಮತ್ತು ಭವಿಷ್ಯದ ಸವಾಲುಗಳ ಬಗ್ಗೆ ಮಾಹಿತಿಯನ್ನು ಒಳಗೊಂಡಿರುತ್ತದೆ.

ಕೆಲವು ಗ್ರಾಮೀಣ ಪ್ರದೇಶಗಳಲ್ಲಿ, ತಾಯಿಯರು ಅಥವಾ ತಾಯಿಯ ಕಡೆಯ ಸಂಬಂಧಿಗಳು (ಅಜ್ಜ) ಹೆಸರನ್ನು ಆಯ್ಕೆ ಮಾಡುವ ಸಂಪ್ರದಾಯವಿದೆ, ಏಕೆಂದರೆ ಬೌದ್ಧ ಸಂಸ್ಕೃತಿಯಲ್ಲಿ ತಾಯಿಯನ್ನು 'ವಿಶ್ವದ ಮೂಲ' ಎಂದು ಪರಿಗಣಿಸಲಾಗುತ್ತದೆ. ಕೆಲವು ಗ್ರಾಮಗಳಲ್ಲಿ, ಮಗುವಿನ ಜನ್ಮದ ಸಂದರ್ಭ, ಸ್ಥಳ ಅಥವಾ ಗುಣಲಕ್ಷಣಗಳ ಆಧಾರದ ಮೇಲೆ ಹೆಸರುಗಳನ್ನು ನೀಡಲಾಗುತ್ತದೆ. ಉದಾಹರಣೆಗೆ, ಗುಹೆಯಲ್ಲಿ ಜನಿಸಿದ ಮಗುವಿಗೆ 'ಜಾಕು' ಅಥವಾ 'ಜಾಕುಮ್' ಎಂದು ಹೆಸರಿಡಬಹುದು.

ಭೂತಾನಿನಲ್ಲಿ ಸುಮಾರು 19,000 ವಿಶಿಷ್ಟ ಹೆಸರುಗಳಿವೆ. ಆದರೆ ಕೆಲವು ಹೆಸರುಗಳು ಬಹಳ ಜನಪ್ರಿಯವಾಗಿವೆ. ಕೆಲವು ಸಾಮಾನ್ಯ ಹೆಸರುಗಳು ಮತ್ತು ಅವುಗಳ ಅರ್ಥ: ತ್ಸೆರಿಂಗ್ ಅಂದ್ರೆ ದೀರ್ಘಾಯುಷ್ಯ. ಸೋನಮ್ ಅಂದ್ರೆ ಧಾರ್ಮಿಕ ಯೋಗ್ಯತೆ. ಕಿನ್ಲೇ ಅಂದ್ರೆ ಚಿಮಿಲಾಖಂಗ್ ದೇವಾಲಯಕ್ಕೆ ಸಂಬಂಧಿಸಿದ್ದು. ಸಾಂಗೇ ಅಂದ್ರೆ ಬುದ್ಧ. ವಾಂಗ್‌ಮೋ ಮಹಿಳೆಯರಿಗೆ ಸಾಮಾನ್ಯವಾಗಿ ಬಳಸಲಾಗುವ ಹೆಸರು. ಪೆಮಾ ಅಂದ್ರೆ ಕಮಲ, ಶಾಂತಿ ಮತ್ತು ಶುದ್ಧತೆ. ಜಿಗ್ಮೆ ಅಂದ್ರೆ ಭಯವಿಲ್ಲದವನು, ರಾಜವಂಶಕ್ಕೆ ಸೇರಿದವನು.

ಇತ್ತೀಚಿನ ವರ್ಷಗಳಲ್ಲಿ, ಕೆಲವು ಭೂತಾನಿಯರು ತಮ್ಮ ತಂದೆಯ ಅಥವಾ ಗಂಡನ ಹೆಸರನ್ನು ಉಪನಾಮವಾಗಿ ಸೇರಿಸುವ ಆಧುನಿಕ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ, ವಿಶೇಷವಾಗಿ ವಿದೇಶದಲ್ಲಿ. ಉದಾಹರಣೆಗೆ, ಒಗ್ಯೆನ್ ದೊರ್ಜಿಯನ್ನು ಒಗ್ಯೆನ್ ದೊರ್ಜಿ ವಾಂಗ್‌ಚುಕ್ ಎಂದು ಕರೆಯಬಹುದು. ಕೆಲವು ಆಧುನಿಕ ಭೂತಾನಿಯರು ತಮ್ಮ ಸಾಂಪ್ರದಾಯಿಕ ಹೆಸರುಗಳನ್ನು ವಿದೇಶಿ ಹೆಸರುಗಳೊಂದಿಗೆ ಸಂಯೋಜಿಸುತ್ತಾರೆ. ಆದರೆ ಭೂತಾನ್‌ನಲ್ಲಿ ಸಾಂಪ್ರದಾಯಿಕ ಹೆಸರಿನ ಸಂಪ್ರದಾಯವು ಬಹಳ ಪ್ರಬಲವಾಗಿದೆ. ಕೆಲವು ಹೆಸರುಗಳು, ಉದಾಹರಣೆಗೆ ಜಿಗ್ಮೆ, ಭೂತಾನ್‌ನ ರಾಜವಂಶದಿಂದ (ಜಿಗ್ಮೆ ಕೇಸರ್ ನಾಮ್‌ಗೇಲ್ ವಾಂಗ್‌ಚುಕ್) ಸ್ಫೂರ್ತಿಯಾಗಿವೆ.

ಭೂತಾನಿನಲ್ಲಿ ಕೇವಲ 50-60 ಮೂಲಭೂತ ಹೆಸರುಗಳಿವೆ, ಆದ್ದರಿಂದ ಒಂದೇ ಹೆಸರು ಹಲವಾರು ಜನರಿಗೆ ಸಾಮಾನ್ಯವಾಗಿದೆ. ಇದರಿಂದ ಗೊಂದಲವನ್ನು ತಪ್ಪಿಸಲು, ಕೆಲವೊಮ್ಮೆ ಸ್ಥಳದ ಹೆಸರು (ಉದಾ: ಪಾರೋ ಪೆಮಾ) ಅಥವಾ ಇತರ ವಿವರಣೆಯನ್ನು ಸೇರಿಸಲಾಗುತ್ತದೆ. ಕೆಲವು ಹೆಸರುಗಳು, ಉದಾಹರಣೆಗೆ ವಾಂಗ್‌ಮೋ, ಚೋಡೆನ್, ಕಿಬಾ, ಯಾಂಗ್‌ಕಿ, ಲ್ಹಾಮೋ, ಮಹಿಳೆಯರಿಗೆ ಸಾಮಾನ್ಯವಾಗಿವೆ. ಆದರೆ ಇವನ್ನು ಕೂಡ ಕೆಲವೊಮ್ಮೆ ಗಂಡಸರಿಗೂ ಬಳಸಬಹುದು. 'ಡ್ರುಕ್' ಎಂಬ ಹೆಸರು ಭೂತಾನ್‌ಗೆ ವಿಶಿಷ್ಟವಾದುದು, ಹೀಗಂದರೆ 'ಥಂಡರ್ ಡ್ರಾಗನ್' ಎಂದರ್ಥ. ಇದು ಭೂತಾನಿನ ರಾಷ್ಟ್ರೀಯ ಗುರುತನ್ನು ಪ್ರತಿಬಿಂಬಿಸುತ್ತದೆ (ಭೂತಾನಿನ ಆಧಿಕೃತ ಹೆಸರು ಡ್ರುಕ್ ಯುಲ್).

ಭೂತಾನಿ ಹೆಸರುಗಳು ಕೇವಲ ಗುರುತಿಗಾಗಿ ಮಾತ್ರವಲ್ಲ, ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಗುರುತನ್ನೂ ಪ್ರತಿಬಿಂಬಿಸುತ್ತವೆ. ಈ ಹೆಸರುಗಳನ್ನು ಒಬ್ಬ ವ್ಯಕ್ತಿಯ ಜೀವನದಲ್ಲಿ ಶುಭವನ್ನು ತರಲು ಮತ್ತು ಬೌದ್ಧ ತತ್ವಗಳನ್ನು ನೆನಪಿಸುವ ಉದ್ದೇಶದಿಂದ ಇಡಲಾಗುತ್ತದೆ. ಆಧುನಿಕ ಬದಲಾವಣೆಗಳ ಹೊರತಾಗಿಯೂ, ಭೂತಾನ್‌ನಲ್ಲಿ ಸಾಂಪ್ರದಾಯಿಕ ಹೆಸರಿನ ಪ್ರಭಾವ ಇನ್ನೂ ಬಲವಾಗಿದೆ. ಇದು ದೇಶದ ಅಸ್ಮಿತೆ ಮತ್ತು ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ.

ಇತರರಿಗೂ ಮಾದರಿ

ಭೂತಾನ್‌ನಲ್ಲಿ ಸಂಚರಿಸಿ, ಅಲ್ಲಿನ ವಿದ್ಯಮಾನಗಳನ್ನು ಅರ್ಥಮಾಡಿಕೊಂಡಾಗ ಗಮನಕ್ಕೆ ಬರುವ ಸಂಗತಿಯೆಂದರೆ, ಅಲ್ಲಿನ ಅನನ್ಯವಾದ ಆಡಳಿತ ತತ್ವಗಳು, ಪರಿಸರ ಸಂರಕ್ಷಣೆ ಮತ್ತು ಸಾಂಸ್ಕೃತಿಕ ಪರಂಪರೆ. ಇದರಿಂದ ಭೂತಾನ್ ಜಗತ್ತಿನಲ್ಲಿ ಒಂದು ವಿಶೇಷ ಸ್ಥಾನವನ್ನು ಗಳಿಸಿರುವುದು ಗಮನಾರ್ಹ. ಹಣಕಾಸಿನ ಬೆಳವಣಿಗೆಗಿಂತ ಜನರ ಸಂತೋಷ ಮತ್ತು ಯೋಗಕ್ಷೇಮಕ್ಕೆ ಆದ್ಯತೆ ನೀಡಿದ ಜಗತ್ತಿನ ಮೊದಲ ರಾಷ್ಟ್ರ ಭೂತಾನ್.

ಭೂತಾನಿನ ಯಶಸ್ಸಿನ ಹಿಂದಿನ ಮುಖ್ಯ ತತ್ವ ಒಟ್ಟು ರಾಷ್ಟ್ರೀಯ ಸಂತೋಷ (Gross National Happiness). ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ರೂಪಿಸಿದ ಈ ಪರಿಕಲ್ಪನೆಯು ಕೇವಲ ಆರ್ಥಿಕ ಪ್ರಗತಿ, ಅಂದರೆ ಒಟ್ಟು ದೇಶೀಯ ಉತ್ಪನ್ನ (GDP) ವನ್ನು ಮಾತ್ರವಲ್ಲದೆ, ಮಾನವನ ಸಂಪೂರ್ಣ ಸಂತೋಷ ಮತ್ತು ಯೋಗಕ್ಷೇಮವನ್ನು ಅಳೆಯುವ ಉದಾತ್ತ ಉದ್ದೇಶ ಹೊಂದಿರುವುದು ವಿಶೇಷ.

ಭೂತಾನ್ ಸರಕಾರವು ನೀತಿಗಳನ್ನು ರೂಪಿಸುವಾಗ, ಶಿಕ್ಷಣ, ಆರೋಗ್ಯ, ಜೀವನ ಗುಣಮಟ್ಟ ಮತ್ತು ಸಂಸ್ಕೃತಿ ಈ ನಾಲ್ಕು ಕ್ಷೇತ್ರಗಳ ಮೇಲೆ ಗಮನ ಹರಿಸುತ್ತದೆ. ಸುಧಾರಣೆ ತರಲು ಒಟ್ಟು ರಾಷ್ಟ್ರೀಯ ಸಂತೋಷ (GNH) ಸೂಚಕಗಳನ್ನು ಬಳಸುತ್ತದೆ. ಭೂತಾನ್‌ನ ಈ ತತ್ವವು ಬ್ರಿಟನ್, ಫ್ರಾನ್ಸ್, ಬ್ರೆಜಿಲ್ ಮುಂತಾದ ದೇಶಗಳಿಗೆ ಹಾಗೂ ವಿಶ್ವಬ್ಯಾಂಕ್‌ನಂಥ ಸಂಸ್ಥೆಗಳಿಗೆ ಸ್ಫೂರ್ತಿ ನೀಡಿದೆ. ಭೂತಾನ್ ಪರಿಸರ ಸಂರಕ್ಷಣೆಯಲ್ಲಿ ವಿಶ್ವಕ್ಕೇ ಒಂದು ಮಾದರಿಯಾಗಿದೆ. ರಾಜರ ಆಡಳಿತದಲ್ಲಿ ಪ್ರಕೃತಿ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗಿತ್ತು. ಭೂತಾನ್ ವಿಶ್ವದ ಏಕೈಕ ಕಾರ್ಬನ್ ನೆಗೆಟಿವ್ ರಾಷ್ಟ್ರವಾಗಿದೆ. ಅಂದರೆ, ಅದು ಉತ್ಪಾದಿಸುವುದಕ್ಕಿಂತ ಹೆಚ್ಚು ಇಂಗಾಲವನ್ನು ಹೀರಿಕೊಳ್ಳುತ್ತದೆ. ಇದು ಶೇ. 70ಕ್ಕಿಂತ ಹೆಚ್ಚು ಅರಣ್ಯ ಪ್ರದೇಶ ಕಾಪಾಡಿಕೊಂಡಿರುವುದರಿಂದ ಸಾಧ್ಯವಾಗಿದೆ. ಇಲ್ಲಿನ ದಟ್ಟವಾದ ಅರಣ್ಯಗಳು ಮತ್ತು ರಾಷ್ಟ್ರೀಯ ಉದ್ಯಾನಗಳು ಅಪಾಯದಲ್ಲಿರುವ ಅನೇಕ ಪ್ರಾಣಿಗಳಿಗೆ ಸುರಕ್ಷಿತ ಆವಾಸಸ್ಥಾನವನ್ನು ಒದಗಿಸಿವೆ. ಉದಾಹರಣೆಗೆ ಹಿಮ ಚಿರತೆ (snow leopard) ಮತ್ತು ಬಂಗಾಳ ಹುಲಿ (Bengal tiger). ಪ್ಲಾಸ್ಟಿಕ್ ಚೀಲಗಳ ನಿಷೇಧ, ಹೈಡ್ರೊಇಲೆಕ್ಟ್ರಿಸಿಟಿ ಉತ್ಪಾದನೆಗೆ ಒತ್ತು ನೀಡುವುದು ಮತ್ತು ಮರಗಳ ನಾಶವನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವುದು ಭೂತಾನ್‌ನ ಕೆಲವು ಪರಿಸರ ಸ್ನೇಹಿ ನೀತಿಗಳಾಗಿವೆ.

ಬೌದ್ಧ ಧರ್ಮವು ಭೂತಾನ್ ಸಂಸ್ಕೃತಿಯ ಅವಿಭಾಜ್ಯ ಅಂಗ. ಇಲ್ಲಿನ ಅನೇಕ ಸ್ಮಾರಕಗಳು, ದೇವಸ್ಥಾನಗಳು ಮತ್ತು ಉತ್ಸವಗಳು ಧಾರ್ಮಿಕ ಮಹತ್ವವನ್ನು ಹೊಂದಿವೆ. ಟಿಬೆಟಿಯನ್ ಬೌದ್ಧ ಧರ್ಮದ ಶಾಖೆ ಇಲ್ಲಿ ಪ್ರಮುಖವಾಗಿದೆ. ಯಾವುದೇ ಒತ್ತಡವಿಲ್ಲದೇ, ಇಲ್ಲಿನ ಜನ ನೆಮ್ಮದಿಯಿಂದ ಜೀವನ ಸಾಗಿಸುವ ವಿಧಾನ ಉಳಿದವರಿಗೆ ಒಂದು ಆದರ್ಶವೇ.

ರಾಜಮನೆತನ ಮತ್ತು ಜನರ ಸಂಬಂಧ

ಈಗ ಭೂತಾನಿನಲ್ಲಿ ರಾಜಮನೆತನದವರ ದರ್ಬಾರು ಇಲ್ಲ. ಪ್ರಜಾಪ್ರಭುತ್ವ ನೆಲೆಸಿ 18 ವರ್ಷಗಳಾದರೂ, ಅಲ್ಲಿನ ಜನರಿಗೆ ರಾಜಮನೆತನದ ಮೇಲಿನ ಪ್ರೀತಿ, ಗೌರವ ಮತ್ತು ಅಭಿಮಾನ ಸ್ವಲ್ಪವೂ ಕಮ್ಮಿಯಾಗಿಲ್ಲ.

ಭೂತಾನಿನ ಜನರ ಮತ್ತು ರಾಜಮನೆತನದ ನಡುವಿನ ಸಂಬಂಧವು ಕೇವಲ ಆಡಳಿತಾತ್ಮಕವಾದದ್ದಲ್ಲ. ಅದು ಭಾವನಾತ್ಮಕ ಮತ್ತು ಆಳವಾದದ್ದು. ರಾಜಮನೆತನದವರನ್ನು ಅವರು ಕೇವಲ ಆಡಳಿತಗಾರರಂತೆ ನೋಡುವುದಿಲ್ಲ, ಬದಲಾಗಿ ತಮ್ಮ ಕುಟುಂಬದ ಸದಸ್ಯರಂತೆ ಮತ್ತು ಪೂಜನೀಯ ವ್ಯಕ್ತಿಗಳಂತೆ ನೋಡುತ್ತಾರೆ ಎಂಬುದು ಎಂಥವರಿಗಾದರೂ ಗಮನಕ್ಕೆ ಬರದೇ ಹೋಗುವುದಿಲ್ಲ. ಭೂತಾನಿನ ಬಹುತೇಕ ಮನೆಗಳಲ್ಲಿ, ವಿಶೇಷವಾಗಿ ಲಿವಿಂಗ್ ರೂಮ್‌ಗಳಲ್ಲಿ ಮತ್ತು ಪೂಜಾ ಕೋಣೆಗಳಲ್ಲಿ, ರಾಜ, ರಾಣಿ ಮತ್ತು ರಾಜಮನೆತನದ ಇತರ ಸದಸ್ಯರ ದೊಡ್ಡ ಚಿತ್ರಗಳನ್ನು ಇರಿಸಲಾಗುತ್ತದೆ. ಈ ಚಿತ್ರಗಳನ್ನು ಬುದ್ಧನ ವಿಗ್ರಹಗಳ ಪಕ್ಕದಲ್ಲಿಯೇ ಇಡುವುದು, ಅವರು ರಾಜಮನೆತನವನ್ನು ದೈವಿಕ ವ್ಯಕ್ತಿಗಳಂತೆ ಗೌರವಿಸುತ್ತಾರೆ ಎಂಬುದನ್ನು ತೋರಿಸುತ್ತದೆ. ಇದು ಕೇವಲ ಪ್ರದರ್ಶನಕ್ಕಲ್ಲ, ಬದಲಾಗಿ ರಾಜನ ಆಶೀರ್ವಾದ ತಮ್ಮ ಕುಟುಂಬದ ಮೇಲೆ ಸದಾ ಇರಲಿ ಎಂಬ ನಂಬಿಕೆಯ ಪ್ರತೀಕವಾಗಿದೆ. ಅಂಗಡಿ, ಹೋಟೆಲು ಸೇರಿದಂತೆ ಎಲ್ಲಿಯೇ ಹೋದರೂ ರಾಜಮನೆತನದವರ ಫೋಟೋಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕೆಲವರು ತಮ್ಮ ಮನೆಯ ಪೂಜಾಮಂದಿರಗಳಲ್ಲಿ ದೇವರ ಪಕ್ಕದಲ್ಲಿ ರಾಜಮನೆತನದವರ ಫೋಟೋಗಳನ್ನಿಡುವುದು ಸಾಮಾನ್ಯ.

ಕಳೆದ ಒಂದು ಶತಮಾನದಿಂದ ರಾಜಮನೆತನವು ಭೂತಾನಿಗೆ ತಂದಿರುವ ಪ್ರಗತಿ, ಶಾಂತಿ ಮತ್ತು ಸ್ಥಿರತೆಯ ಬಗ್ಗೆ ಜನರು ಈಗಲೂ ಹೆಮ್ಮೆಯಿಂದ ಮಾತನಾಡುತ್ತಾರೆ. ನಾಲ್ಕನೇ ರಾಜ ಜಿಗ್ಮೆ ಸಿಂಗ್ಯೆ ವಾಂಗ್‌ಚುಕ್ ಅವರು ದೇಶವನ್ನು ಪ್ರಜಾಪ್ರಭುತ್ವಕ್ಕೆ ಪರಿವರ್ತಿಸಿದ ಐತಿಹಾಸಿಕ ನಿರ್ಧಾರವು, ರಾಜನ ಮೇಲಿನ ಜನರ ವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸಿದೆ. ಅವರ ಈ ದೂರದೃಷ್ಟಿಯು ದೇಶದ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿದೆ ಎಂದು ಜನರು ನಂಬಿದ್ದಾರೆ.

ರಾಜ ಮತ್ತು ರಾಜಮನೆತನದ ಸದಸ್ಯರು ಜನರೊಂದಿಗೆ ಬೆರೆಯುವ ಮತ್ತು ಅವರ ಕಷ್ಟ-ಸುಖಗಳಲ್ಲಿ ಭಾಗವಹಿಸುವ ಸಂಪ್ರದಾಯವು ಈ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿದೆ. ಭೂತಾನಿನ ರಾಷ್ಟ್ರೀಯ ದಿನಾಚರಣೆ (ಡಿಸೆಂಬರ್ 17) ಜನರ ಪಾಲಿಗೆ ಒಂದು ವಿಶೇಷ ಹಬ್ಬ. ಈ ದಿನ, ರಾಜರು ಪ್ರತಿ ವರ್ಷ ದೇಶದ ಬೇರೆ ಬೇರೆ ಜಿಲ್ಲೆಗಳಿಗೆ ಪ್ರಯಾಣಿಸಿ ಅಲ್ಲಿನ ಜನರೊಂದಿಗೆ ಉತ್ಸವದಲ್ಲಿ ಭಾಗವಹಿಸುತ್ತಾರೆ. ಇದು ರಾಜ ಮತ್ತು ಜನರ ನಡುವಿನ ನೇರ ಸಂಪರ್ಕಕ್ಕೆ ಅವಕಾಶ ನೀಡುತ್ತದೆ.

ಈ ರಾಷ್ಟ್ರೀಯ ದಿನಾಚರಣೆಯನ್ನು ನೋಡಲು ಮತ್ತು ವಿಶೇಷವಾಗಿ ರಾಜರನ್ನು ಖುದ್ದಾಗಿ ಭೇಟಿಯಾಗಲು, ದೂರದ ಊರುಗಳಿಂದ ಮತ್ತು ಗ್ರಾಮೀಣ ಪ್ರದೇಶಗಳಿಂದ ಜನರು ಬರುತ್ತಾರೆ. ರಾಜರು ಅವರೊಂದಿಗೆ ಬೆರೆತು, ಅವರ ಕಷ್ಟಗಳನ್ನು ಆಲಿಸುತ್ತಾರೆ. ಈ ನಿಕಟ ಸಂಪರ್ಕವು ಪ್ರಪಂಚದ ಬೇರೆಡೆ ಎಲ್ಲೂ ನೋಡಲು ಸಾಧ್ಯವಿಲ್ಲವೇನೋ?

ಭೂತಾನಿನ ರಾಜಮನೆತನ ಮತ್ತು ಜನರು ಪರಸ್ಪರ ನಂಬಿಕೆ, ಪ್ರೀತಿ ಮತ್ತು ಗೌರವದ ಆಧಾರದ ಮೇಲೆ ಒಂದು ಅನನ್ಯ ಸಂಬಂಧವನ್ನು ಹಂಚಿಕೊಳ್ಳುವ ಪರಿಯೇ ಒಂದು ಉಜ್ವಲ ಪರಂಪರೆ ಇನ್ನೂ ಜೀವಂತವಾಗಿರುವುದರ ದ್ಯೋತಕ.

ಅಡಿಕೆಮರದಿಂದ ಬಿದ್ದು ಡಿಪ್ಲೊಮಾ ಓದುತ್ತಿದ್ದ ಯುವಕನ ಸಾವು!

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಸ್ತವ್ಯಸ್ತ ಪರಿವರ್ತಕಗಳು ಎಂದರೇನಂತ ನಿಮಗೆ ಗೊತ್ತೇ? ಬೇಡ, ಅಂಥ ಸಂಸ್ಕೃತಭೂಯಿಷ್ಠ ದೊಡ್ಡ ದೊಡ್ಡ ಶಬ್ದಗಳನ್ನು ಬಳಸಿ ಕೇಳಿದರೆ ಫಕ್ಕನೆ ಅರ್ಥವಾಗಲಿಕ್ಕಿಲ್ಲ. ಅದಕ್ಕಿಂತ, ಇಂಗ್ಲಿಷ್‌ನಲ್ಲಿ Misplaced modifiers ಎಂದರೆ ಸುಲಭದಲ್ಲಿ ಗೊತ್ತಾಗುತ್ತದೆ. ಒಂದು ವಾಕ್ಯದಲ್ಲಿ ಯಾವ ಪದ ಅಥವಾ ಪದಪುಂಜಗಳು ಎಲ್ಲಿರಬೇಕೋ ಅಲ್ಲಿರದೆ ಎಲ್ಲೆಲ್ಲೋ ಇದ್ದರೆ ವಾಕ್ಯದ ಅರ್ಥ ಅನರ್ಥವಾಗುವುದು. ಅದರಿಂದಾಗಿ ಓದುಗರಿಗೆ/ಕೇಳುಗರಿಗೆ ಗೊಂದಲ ಉಂಟಾಗುವುದು. 'ಸರಕಾರಿ ಗಂಡುಮಕ್ಕಳ ಶಾಲೆ'ಯಲ್ಲಿ ಶಾಲೆ ಸರಕಾರಿಯೋ ಗಂಡುಮಕ್ಕಳು ಸರಕಾರಿಯೋ ಎಂಬಂತೆ. ಅಥವಾ, 'ಶುದ್ಧ ಹಸುವಿನ ತುಪ್ಪ'ದಲ್ಲಿ ಹಸು ಶುದ್ಧವೋ ತುಪ್ಪ ಶುದ್ಧವೋ ಎಂಬಂತೆ. ಇಂಗ್ಲಿಷ್‌ನಲ್ಲಿ ಇದರ ದಾಂಧಲೆ ವಿಪರೀತ. ಮೊದಲಿಗೆ ಇಂಗ್ಲಿಷ್‌ನದೇ ಕೆಲವು ತಮಾಷೆ ಉದಾಹರಣೆಗಳನ್ನು ನೋಡೋಣ.

ಪಾದರಕ್ಷೆಗಳ ದೊಡ್ಡ ಅಂಗಡಿಯಲ್ಲಿ ಒಂದು ಕಡೆ Purple women's shoes ಎಂಬ ಫಲಕ ಇರುತ್ತದೆಂದುಕೊಳ್ಳಿ. ಮಹಿಳೆಯರು ಧರಿಸುವ ಪಾದರಕ್ಷೆಗಳು, ನೇರಳೆ ಬಣ್ಣದವು ಅಲ್ಲಿರುವವು. ಆದರೆ ಆ ವಾಕ್ಯವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಪಾದರಕ್ಷೆಗಳು ನೇರಳೆ ಬಣ್ಣದವೋ ಅಥವಾ ಧರಿಸುವ ಮಹಿಳೆಯರು ನೇರಳೆ ಬಣ್ಣದವರೋ ಎಂಬ ಪ್ರಶ್ನೆ ಮೂಡಬಹುದು! ಕಾರಣ Purple ಎಂಬ ಪದ ಆ ವಾಕ್ಯದಲ್ಲಿ ಪರಿವರ್ತಕ (modifier) ಮತ್ತು ಅದು ಕರಾರುವಾಕ್ಕಾದ ಸ್ಥಾನದಲ್ಲಿ ಇಲ್ಲ, misplace ಆಗಿದೆ, ಅಂದರೆ ಅಸ್ತವ್ಯಸ್ತವಾಗಿದೆ. ಆದ್ದರಿಂದಲೇ ಗೊಂದಲಕ್ಕೆ ಅವಕಾಶ. ಗೊಂದಲಕ್ಕಿಂತ ಹೆಚ್ಚಾಗಿ ಇಂಥ ಅಸ್ತವ್ಯಸ್ತ ಪರಿವರ್ತಕಗಳು ತಮಾಷೆಯನ್ನೂ ಉಂಟುಮಾಡುತ್ತವೆ. ಉದಾಹರಣೆಗೆ- One morning I shot an elephant in my pajamas ಎಂಬ ವಾಕ್ಯವನ್ನು ಗಮನಿಸಿ. ಇಲ್ಲಿ ಹೇಳಹೊರಟಿದ್ದು, ಒಂದುದಿನ ಬೆಳಗ್ಗೆ ನಾನಿನ್ನೂ ನೈಟ್‌ಡ್ರೆಸ್ ಪಜಾಮಾ ಧರಿಸಿದ್ದಾಗಲೇ ಆನೆಯೊಂದು ಎದುರಾಯಿತು, ಹತ್ತಿರದಲ್ಲೇ ಇದ್ದ ಕೋವಿಯನ್ನೆತ್ತಿಕೊಂಡು ಆನೆಗೆ 'ಢಿಷುಂ' ಮಾಡಿದೆ ಎಂದು. ಆದರೆ, ವಾಕ್ಯವನ್ನು ಕೂಲಂಕಷ ಗಮನಿಸಿದರೆ- ನನ್ನ ಪಜಾಮಾದೊಳಗೇ ಆನೆ ಬಂದಿತ್ತೇನೋ, ಅಥವಾ ಆನೆ ನನ್ನ ಪಜಾಮಾ ಧರಿಸಿಕೊಂಡು ಬಂದಿತ್ತೇನೋ ಎಂಬ ಅರ್ಥವೂ ಸ್ಫುರಿಸುತ್ತದೆ. ಊಹಿಸಿದರೆ ಬೇಡವೆಂದರೂ ನಗು ಬರುತ್ತದೆ. ಅಮೆರಿಕದ ಖ್ಯಾತ ಕಾಮೆಡಿಯನ್ ಗ್ರೌಚೊ ಮಾರ್ಕ್ಸ್ ಇದನ್ನೇ ಇನ್ನಷ್ಟು ವಿಸ್ತರಿಸಿ One morning I shot an elephant in my pajamas. How he got in my pajamas, I don't know! ಎಂದದ್ದು ವರ್ಲ್ಡ್‌ಫೇಮಸ್ ಆಗಿದೆ.

ಪರಿವರ್ತಕಗಳ ಅಸ್ತವ್ಯಸ್ತತೆಯನ್ನು ಇಂಗ್ಲಿಷ್ ವ್ಯಾಕರಣತಜ್ಞರು ನಾಲ್ಕು ವಿಧಗಳಾಗಿ ವಿಂಗಡಿಸುತ್ತಾರೆ. ಮೊದಲನೆಯದು- ಮೇಲೆ ವಿವರಿಸಿದಂತೆ Misplaced modifiers. ಪದಪುಂಜವು ಯಾವ ವಸ್ತು/ವಿಷಯವನ್ನು ಬಣ್ಣಿಸಬೇಕಿತ್ತೋ ಅದಕ್ಕೆ ತಾಗಿಕೊಂಡಿರದೆ ದೂರದಲ್ಲಿರುವುದು. ಉದಾಹರಣೆಗೆ We found the contact lens during dinner on the carpet. ಹೇಳಹೊರಟಿದ್ದು ಕಳೆದುಹೋಗಿದ್ದ ಕಾಂಟಾಕ್ಟ್ ಲೆನ್ಸ್ ಸಂಜೆ ಡಿನ್ನರ್ ಟೈಮಲ್ಲಿ ಕಾರ್ಪೆಟ್ ಮೇಲೆ ಸಿಕ್ಕಿತು ಅಂತ. ಆದರೆ ಡಿನ್ನರ್ ಏರ್ಪಡಿಸಿದ್ದೇ ಕಾರ್ಪೆಟ್ ಮೇಲೆಯೋ ಎಂಬ ಸಂದೇಹ ಬರುವಂತಿದೆ ವಾಕ್ಯರಚನೆ. ಹಾಗಾಗಬಾರದು ಅಂತಿದ್ದರೆ During dinner we found the contact lens on the carpet ಎಂದು ಬರೆಯಬೇಕು. ಇನ್ನೊಂದು ಉದಾಹರಣೆ: I saw an accident walking down the street. ಅಪಘಾತವೇ ಬೀದಿಯಲ್ಲಿ ನಡೆದುಕೊಂಡು ಹೋಗುತ್ತಿತ್ತೇ ಅಥವಾ ನಾನು ಬೀದಿಯಲ್ಲಿ ನಡೆದುಕೊಂಡು ಹೋಗುವಾಗ ಒಂದು ಅಪಘಾತವನ್ನು ನೋಡಿದ್ದೇ? ಗೊಂದಲದ ಪರಿಸ್ಥಿತಿ. Walking down the street I saw an accident ಎಂದು ಬರೆದರೆ ಗೊಂದಲವಿಲ್ಲ. ಅಸ್ತವ್ಯಸ್ತತೆಯ ಎರಡನೆಯ ವಿಧ Squinting modifiers. ಇದು ಓರೆಗಣ್ಣಿನ ಥರ, ಲಂಡನ್ನತ್ತ ನೋಡುತ್ತ ಟೋಕಿಯೋದವರೊಡನೆ ಮಾತನಾಡಿದಂತೆ. ಉದಾಹರಣೆಗೆ: Hiking up hills quickly strengthens your muscles. ಇದರಲ್ಲಿ quickly ಎಂಬ ಕ್ರಿಯಾವಿಶೇಷಣವನ್ನು ಹೈಕಿಂಗ್‌ಗೆ ಅನ್ವಯಿಸಬೇಕೇ ಅಥವಾ ಸ್ನಾಯುಗಳ ಬಲವರ್ಧನೆಗೆ ಅನ್ವಯಿಸಬೇಕೇ? ಹಾಗೆಯೇ, The politician discussed the high cost of living with several women. ಇದರಲ್ಲಿ of living ಎಂಬ ಪದಪುಂಜವನ್ನು ಹೆಚ್ಚು ತುಟ್ಟಿ ಎಂಬುದಕ್ಕೆ ಲಗತ್ತಿಸಬೇಕೇ ಅಥವಾ ಅನೇಕ ಮಹಿಳೆಯರೊಡನೆ ವಾಸಿಸುವುದಕ್ಕೆಂದು ತಿಳಿಯಬೇಕೇ? ಮೂರನೆಯ ವಿಧ Limiting modifiers. ವಾಕ್ಯದಲ್ಲಿ only, just, even, exactly ರೀತಿಯ ಪದಗಳ ಸ್ಥಾನಪಲ್ಲಟದಿಂದಾಗುವ ಆಭಾಸ. ಉದಾಹರಣೆಗೆ- Only I want him to marry me ಎಂದ ಹುಡುಗಿಯು only ಪದವನ್ನು ವಾಕ್ಯದಲ್ಲಿ ಬೇರೆಬೇರೆ ಕಡೆ ಬರೆದಿದ್ದೇ ಆದರೆ ಬೇರೆಬೇರೆ ಅರ್ಥಗಳು! ನಾಲ್ಕನೆಯ ವಿಧ Dangling modifiers. ಉದಾಹರಣೆಗೆ- Running to catch the bus, my hat flew off. ಬಸ್ ಹಿಡಿಯಲು ಓಡಿದ್ದು ಯಾರು? ನಾನೋ ನನ್ನ ಟೊಪ್ಪಿಯೋ? Completely engulfed in flames, I was unable to identify the building. ಬೆಂಕಿ ಹೊತ್ತಿಕೊಂಡಿದ್ದರಿಂದಾಗಿ ಕಟ್ಟಡವನ್ನು ಗುರುತಿಸುವುದು ನನ್ನಿಂದಾಗಲಿಲ್ಲ. ಬೆಂಕಿಯಿಂದ ಆವೃತವಾದದ್ದು ಕಟ್ಟಡವೋ ನಾನೋ?

ಇದಿಷ್ಟು ಇಂಗ್ಲಿಷ್ ಹಿನ್ನೆಲೆಯೊಂದಿಗೆ ಈಗ ನಮ್ಮ ಕಸ್ತೂರಿ ಕನ್ನಡದತ್ತ ದೃಷ್ಟಿ ಹಾಯಿಸೋಣ. ಅಸ್ತವ್ಯಸ್ತ ಪರಿವರ್ತಕಗಳು ಕನ್ನಡದಲ್ಲೂ ದಾಂಧಲೆ ಎಬ್ಬಿಸುತ್ತವೆ. ಈಗೀಗಂತೂ ಪತ್ರಿಕೆಗಳ ತಲೆಬರಹಗಳಲ್ಲಿ, ಸುದ್ದಿವಿವರದ ವಾಕ್ಯಗಳಲ್ಲಿ ಇವುಗಳ ಹಾವಳಿ ವಿಪರೀತವಾಗಿದೆ. ಈ ವಿಷಯವನ್ನು ಸ್ನೇಹಿತರೊಡನೆ ಚರ್ಚಿಸುವಾಗಲೆಲ್ಲ ನಾನು ನೆನಪಿಸಿಕೊಳ್ಳುವ ತಲೆಬರಹ 'ಅಡಿಕೆಮರದಿಂದ ಬಿದ್ದು ಡಿಪ್ಲೊಮಾ ಓದುತ್ತಿದ್ದ ಯುವಕನ ಸಾವು'! ಕನ್ನಡದಲ್ಲಿ ಅಸ್ತವ್ಯಸ್ತ ಪರಿವರ್ತಕಕ್ಕೆ ಇದಕ್ಕಿಂತ ಒಳ್ಳೆಯ ಉದಾಹರಣೆ ಬೇರೆ ಸಿಗಲಿಕ್ಕಿಲ್ಲ. ಏಕೆಂದರೆ, ಯುವಕನ ಸಾವಿಗೆ ಕಾರಣವೇನೆಂದು ಇದರಲ್ಲಿ ಗೊತ್ತಾಗುತ್ತಿಲ್ಲ. 'ಅಡಿಕೆಮರದಿಂದ ಬಿದ್ದು ಡಿಪ್ಲೊಮಾ ಓದುತ್ತಿದ್ದ' ಎಂಬ ಅಂಶ ಮಾತ್ರ ಸ್ಪಷ್ಟವಾಗಿ ಗೋಚರಿಸುತ್ತಿದೆ! ಅಷ್ಟಕ್ಕೂ ಆ ಯುವಕ ಅಡಿಕೆಮರದಿಂದ ಬಿದ್ದ ಕೂಡಲೇ ಡಿಪ್ಲೊಮಾ ಓದಿದ್ದೇಕಿರಬಹುದು? ಡಿಪ್ಲೊಮಾ ಓದತೊಡಗುವವರೆಗೆ ಅಂದರೆ ಎಸ್ಸೆಸ್ಸೆಲ್ಸಿವರೆಗೆ ಆತ ಅಡಿಕೆಮರದ ಮೇಲೆಯೇ ವಾಸಿಸುತ್ತಿದ್ದನೇ? ಹೌದಾದರೆ ಕಾರಣವೇನಿರಬಹುದು? ಅಡಿಕೆ ತೋಟಗಳಿರುವ ಹಳ್ಳಿಯಲ್ಲಿ ಹುಟ್ಟಿ ಬೆಳೆದ ನನಗಿದು ಭಯಂಕರ ವಿಚಿತ್ರವಾಗಿ ಕಾಣುತ್ತದೆ. ಅಂದಹಾಗೆ ಈ ತಲೆಬರಹ 'ಅಡಿಕೆ ಮರದಿಂದ ಬಿದ್ದು ಯುವಕನ ಸಾವು' ಎಂದಷ್ಟೇ ಇರುತ್ತಿದ್ದರೆ ಸಾಕಿತ್ತು. ಸತ್ತ ಯುವಕ ಡಿಪ್ಲೊಮಾ ಓದುತ್ತಿದ್ದನು ಎಂಬ ಅಂಶವನ್ನು ತಲೆಬರಹದಲ್ಲೇ ಹೇಳಬೇಕಂತೇನಿಲ್ಲ. ಸುದ್ದಿಯ ವಿವರದಲ್ಲಿ ಸೇರಿಸಿದರಾಯ್ತು. ಅಲ್ಲೂ ಅಸ್ತವ್ಯಸ್ತ ಪರಿವರ್ತಕಗಳು ಕಾಟ ಕೊಡುವುದಿಲ್ಲವೆಂಬ ಗ್ಯಾರಂಟಿಯಿಲ್ಲವೆನ್ನಿ. ಆದರೂ ತಲೆಬರಹದಲ್ಲೇ ಕಣ್ಣಿಗೆ ರಾಚುವುದಕ್ಕಿಂತ ವಾಸಿ. ಉದಾಹರಣೆಗೆ 'ಕುಮಾರಧಾರಾ ನದಿ ತೀರದಲ್ಲಿ ನದಿಗೆ ಅಳವಡಿಸಲಾದ ಪಂಪ್‌ನ ವಿದ್ಯುತ್ ತಂತಿ ಸ್ಪರ್ಶಿಸಿ ದ್ವಿತೀಯ ಪಿಯುಸಿ ಉತ್ತೀರ್ಣನಾಗಿದ್ದ ಯುವಕ ಮೃತಪಟ್ಟಿದ್ದಾನೆ' ಅಂತೊಂದು ಸುದ್ದಿವಿವರ ಒಮ್ಮೆ ಪ್ರಕಟವಾಗಿತ್ತು. ಯುವಕ ವಿದ್ಯುತ್ ತಂತಿ ಸ್ಪರ್ಶಿಸುತ್ತ ಇದ್ದುಕೊಂಡೇ ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿದ್ದನೇ? ತಂತಿ ಸ್ಪರ್ಶಿಸುವುದಲ್ಲದಿದ್ದರೆ ಆತ ಪಿಯುಸಿಯಲ್ಲಿ ಉತ್ತೀರ್ಣನಾಗುತ್ತಿರಲಿಲ್ಲವೇ?

'ಸಿಡಿಲು ಬಡಿದು ಮನೆಯಲ್ಲಿ ಕುಳಿತಿದ್ದ ಯುವಕ ಸಾವು' ಎಂದು ಇನ್ನೊಂದು ತಲೆಬರಹ. ಕರೋನಾ ಲಾಕ್‌ಡೌನ್ ಸಮಯದಲ್ಲಿ ಬಂದದ್ದು. ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ- ಯುವಕ ಮನೆಯಲ್ಲಿ ಕುಳಿತಿದ್ದು ಲಾಕ್‌ಡೌನ್ ಘೋಷಣೆಯಿಂದ ಅಲ್ಲ, ಸಿಡಿಲು ಬಡಿದಿದ್ದರಿಂದ ಮನೆಯಲ್ಲಿ ಕುಳಿತಿದ್ದ. ಇಲ್ಲವಾದರೆ ಊರೆಲ್ಲ ಸುತ್ತುತ್ತಿದ್ದ ಎಂಬ ಅರ್ಥ ಬರುತ್ತದೆ! ಅದಕ್ಕಿಂತ, 'ಮನೆಯಲ್ಲಿ ಕುಳಿತಿದ್ದ ಯುವಕನಿಗೆ ಸಿಡಿಲು ಬಡಿದು ಸಾವು' ಎಂದಿದ್ದರೆ ಒಂದೇ ನಿರ್ದಿಷ್ಟ ಅರ್ಥದ ವಾಕ್ಯ ಆಗುತ್ತಿತ್ತು. 'ಪ್ಯಾಂಟ್ ಕದ್ದು ಟೀ ಮಾರುತ್ತಿದ್ದವನ ಅಂಗಡಿ ಒಳಗೆ ಎಸೆದು ಹೋದ ಕೋತಿ' ಕಥೆಯೂ ಅಂಥದ್ದೇ. ಟೀ ಮಾರುತ್ತಿದ್ದವನೇ ಪ್ಯಾಂಟ್ ಕದ್ದವನೇನೋ ಎಂಬ ಅನುಮಾನ ಕಾಡುತ್ತದೆ. ನಿಜವಾಗಿ ನಡೆದಿದ್ದೇನೆಂದರೆ ಕೋತಿಯೊಂದು ಹತ್ತಿರದ ಬಟ್ಟೆಯಂಗಡಿಯಿಂದ ಪ್ಯಾಂಟ್ ಕದ್ದುಕೊಂಡು ಬಂದು, ಟೀ ಅಂಗಡಿಯ ಒಳಗೆ ಎಸೆದಿದೆ. ತನಗೆ ಪ್ರತಿದಿನವೂ ಬನ್ ತಿನ್ನಲು ಕೊಡುತ್ತಿದ್ದ ಟೀ ಅಂಗಡಿಯವನ ಮೇಲೆ ಕೃತಜ್ಞತೆಯಿಂದ ಇರಬಹುದು. ಆದರೆ ಈ ರಸವಾರ್ತೆಯನ್ನು ನಿರೂಪಿಸಿದವರು ಮಾತ್ರ ಟೀ ಮಾರುವವನು ಈ ಮೊದಲು ಪ್ಯಾಂಟ್ ಕದಿಯುವವನಾಗಿದ್ದನೇನೋ ಎಂಬ ಸಂದೇಹ ಬರುವಂತೆ ವಾಕ್ಯ ರಚಿಸಿದ್ದಾರೆ. ಇಂಥವು ಪತ್ರಿಕೆಗಳಲ್ಲಿ ಆಗಾಗ ಕಾಣಸುತ್ತಿರುತ್ತವೆ. 'ಹಾವು ಕಚ್ಚಿ ಮಠದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಇಮ್ಮಡಿ ಗುರುಮಲ್ಲ ಸ್ವಾಮೀಜಿ ಸಾವು' ಅಂತೆ. ಅಂದರೆ ಸ್ವಾಮೀಜಿಯವರು ಸತ್ತದ್ದು ಹಾವು ಕಚ್ಚಿದ್ದರಿಂದ ಅಲ್ಲ, ಮಠದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದದ್ದೇ ಹಾವು ಕಚ್ಚಿದ್ದರಿಂದ ಅಂತಾಯ್ತು! 'ಯಂತ್ರ ಕುತ್ತಿಗೆಗೆ ತಾಗಿ ಮರ ಕಡಿಯುವಾಗ ದುರ್ಮರಣ'- ಯಂತ್ರ ಕುತ್ತಿಗೆಗೆ ತಾಗಿದ್ದರಿಂದಲೇ ಮರ ಕಡಿಯುವುದು ಸಾಧ್ಯವಾಯ್ತು! 'ಕಾರು ಡಿಕ್ಕಿಯಾಗಿ ರಸ್ತೆ ದಾಟುತ್ತಿದ್ದ 2 ವರ್ಷದ ಹುಲಿ ಸಾವು'- ರಸ್ತೆ ದಾಟುವುದು ಹುಲಿಗೆ ಸಾಧ್ಯವಾದದ್ದು ಕಾರು ಡಿಕ್ಕಿ ಹೊಡೆದಿದ್ದರಿಂದಲೇ! ಇಲ್ಲವಾದರೆ ಅದು ನಿಂತಲ್ಲೇ ನಿಂತಿರುತ್ತಿತ್ತು. 'ರಸ್ತೆಗೆ ಬಿದ್ದ ಲಕ್ಷಾಂತರ ಜನರು ಊಟ ಮಾಡುವ ಚಿಕನ್ ಬಿರ್ಯಾನಿ!' ಲಕ್ಷಾಂತರ ಜನರು ರಸ್ತೆಗೆ ಬಿದ್ದದ್ದೇಕೆ? ಅವರಿಗೇನಾದರೂ ನಿಂತಲ್ಲೇ ಲಕ್ವ ಹೊಡೆಯಿತೇ? ಇನ್ನೊಂದು ಆಲ್‌ಟೈಮ್ ಗ್ರೇಟ್ ಆಣಿಮುತ್ತು- 'ಮುಖ್ಯಮಂತ್ರಿಯಿಂದ ಅತ್ಯಾಚಾರಕ್ಕೊಳಗಾದ ಮಹಿಳೆಗೆ ಸಾಂತ್ವನ' ಇದಕ್ಕೆ ಹೆಚ್ಚಿನ ವ್ಯಾಖ್ಯಾನವೇನೂ ಬೇಕಾಗಿಲ್ಲ.

ಹೀಗೆಯೇ ಇನ್ನೂ ಕೆಲವು ಚಿರಸ್ಮರಣೀಯ ಆಣಿಮುತ್ತುಗಳು ಇಲ್ಲಿವೆ ನೋಡಿ: 'ಮುಖಕ್ಕೆ ಬಟ್ಟೆ ಕಟ್ಟಿಕೊಂಡು ರಸ್ತೆ ಬದಿ ಮಲಗಿದ್ದ ದನ ಕಳವು: ಇಬ್ಬರ ಬಂಧನ'. ದನ ಏಕೆ ಮುಖಕ್ಕೆ ಬಟ್ಟೆ ಕಟ್ಟಿಕೊಂಡು ರಸ್ತೆ ಬದಿ ಮಲಗಿದ್ದು? ವಿದ್ಯುದ್ದೀಪಗಳ ಬೆಳಕಿನ ಪ್ರಖರತೆಯಿಂದ ತಪ್ಪಿಸಿಕೊಳ್ಳಲಿಕ್ಕೆ ಇರಬಹುದೇ? 'ಕಾಡಿಗೆ ಓಡಿಸುವಾಗ ದಾಳಿ ನಡೆಸಿ ರೈತನ ಕೊಂದ ಆನೆ' ಇದರಲ್ಲಿ ಕಾಡಿಗೆ ಓಡಿಸಿದ್ದು ಯಾರು ಯಾರನ್ನು? 'ಹಳ್ಳಕ್ಕೆ ಬಿದ್ದ ಬೆಳಗಾವಿಯಿಂದ ಮಂಗಳೂರಿಗೆ ಬರುತ್ತಿದ್ದ ಬಸ್'- ಬೆಳಗಾವಿ ಯಾವಾಗ ಹಳ್ಳಕ್ಕೆ ಬಿದ್ದದ್ದು? ಬೆಳಗಾವಿಯಿಂದ ಮಂಗಳೂರಿಗೆ ಬರುತ್ತಿದ್ದ ಬಸ್ಸು ಹಳ್ಳಕ್ಕೆ ಬಿತ್ತೆಂದು ಹೇಳುವುದಕ್ಕೆ ಬೆಳಗಾವಿಯನ್ನೇ ಹಳ್ಳಕ್ಕೆ ಬೀಳಿಸುವುದು ನ್ಯಾಯವೇ? 'ಗೂಗಲ್ ಪೇ ಮಾಡಿ ಸಿಕ್ಕಿಬಿದ್ದ ನಟ ಸೈಫ್‌ಗೆ ಇರಿದಿದ್ದ ಆರೋಪಿ'- ಗೂಗಲ್ ಪೇ ಮಾಡಿ ಸಿಕ್ಕಿಬಿದ್ದವನು ನಟ ಸೈಫ್ ಅಲ್ಲ ಮಾರಾಯ್ರೆ! 'ಸೀರೆ ಉಟ್ಟ ಆಮೀರ್ ಖಾನ್ ಮಗಳು ಇರಾಗೆ ಬಾಯ್‌ಫ್ರೆಂಡ್‌ನಿಂದ ಮುತ್ತಿನ ಮಳೆ'- ಆಮೀರ್‌ಖಾನ್ ಸೀರೆ ಉಟ್ಟಿಲ್ಲ, ಹೆಡ್‌ಲೈನ್ ಓದತೊಡಗುತ್ತಿದ್ದಂತೆ ಹಾಗನಿಸುತ್ತದೆ ಅಷ್ಟೇ! 'ವಿಜ್ಞಾನದ ಸಹಾಯದಿಂದ ಬಂಜೆಯಾಗಿದ್ದ ಬಾಲಿವುಡ್ ನಟಿ ಕಾಜೋಲ್ ತಂಗಿ ಮಗು ಮಾಡಿಕೊಂಡದ್ದು ಹೇಗೆ?'- ಬಂಜೆಯಾಗಿದ್ದದ್ದು ಬಾಲಿವುಡ್ ನಟಿ ಕಾಜೋಲ್ ಅಲ್ಲ, ಆಕೆಯ ತಂಗಿ. ಅಲ್ಲದೇ ವಿಜ್ಞಾನದ ಸಹಾಯದಿಂದ ಬಂಜೆಯಾಗುವುದು ಎಂದರೇನು? 'ಯುಪಿಎಸ್‌ಸಿ ಪರೀಕ್ಷೆಯಲ್ಲಿ 177ನೇ ರ‍್ಯಾಂಕ್ ಪಡೆದ ಏಳು ವರ್ಷದ ಬಾಲಕಿ ತಾಯಿ!' ಗಾಬರಿಯಾಗಬೇಡಿ, 177ನೇ ರ‍್ಯಾಂಕ್ ಪಡೆದದ್ದು ಏಳು ವರ್ಷದ ಬಾಲಕಿ ಅಲ್ಲ, ಆ ಏಳು ವರ್ಷದ ಬಾಲಕಿ ಆಗಲೇ ತಾಯಿ ಆಗಿರುವುದೂ ಅಲ್ಲ, ಏಳು ವರ್ಷದ ಹೆಣ್ಣುಮಗಳಿರುವ ತಾಯಿಯೊಬ್ಬಳು ಯುಪಿಎಸ್‌ಸಿ ಪರೀಕ್ಷೆಯಲ್ಲಿ 177ನೇ ರ‍್ಯಾಂಕ್ ಪಡೆದಳೆಂಬ ಸುದ್ದಿಯ ತಲೆಬರಹ ಇದು. 'ಶವವಾದ ಗದ್ದೆಯತ್ತ ಹೋಗಿದ್ದ ತಾಯಿ, ಮಗಳು'- ಶವವಾದ ಗದ್ದೆ ಎಂದರೇನು? ಗದ್ದೆ ಶವವಾಗುವುದು ಹೇಗೆ? ಆದದ್ದೇನೆಂದರೆ ಗದ್ದೆಗೆ ಹೋಗಿಬರುತ್ತೇವೆಂದ ತಾಯಿ-ಮಗಳು ಅಲ್ಲೇ ಪಕ್ಕದ ಕೆರೆಯೊಂದರಲ್ಲಿ ಶವಗಳಾಗಿ ಸಿಕ್ಕಿದರಂತೆ. ಅವರಿಬ್ಬರು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಮೊದಲಿಗೆ ನಂಬಲಾಗಿತ್ತಾದರೂ ಆಮೇಲೆ ಅದೊಂದು ಕೊಲೆ ಎಂದು ಗೊತ್ತಾಗಿದೆಯಂತೆ. 'ಅನುಮಾನಾಸ್ಪದ ರೀತಿಯಲ್ಲಿ ತಾಯಿ-ಮಗಳ ಸಾವು' ಎಂದು ಬರೆದಿದ್ದರೂ ಸಾಕಿತ್ತು, ಗದ್ದೆಯನ್ನು ಶವವಾಗಿಸುವ ಅಗತ್ಯವಿರಲಿಲ್ಲ. 'ಕೈಯಲ್ಲಿ ಮದುವೆಯಾದ ಮರುದಿನವೇ ಬಂದೂಕು'- ಕೈ ಹಿಡಿದು ಮದುವೆಯಾಗುವುದು ಗೊತ್ತು, ಪಾಣಿಗ್ರಹಣ ಎನ್ನುವುದು ಅದನ್ನೇ. ಆದರೆ 'ಕೈಯಲ್ಲಿ ಮದುವೆಯಾಗುವುದು' ಅಂದರೆ ಏನರ್ಥ? 'ಮದುವೆಯಾದ ಮರುದಿನವೇ ಕೈಯಲ್ಲಿ ಬಂದೂಕು' ಎಂದಿರಬೇಕಾಗಿದ್ದ ತಲೆಬರಹ ಅಸ್ತವ್ಯಸ್ತ ಪರಿವರ್ತಕದಿಂದ ಹೀಗಾಗಿದೆ. 'ಪದ್ಮನಾಭನಗರದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ನಿವಾಸಕ್ಕೆ ಪೇಜಾವರ ಮಠದ ಸ್ವಾಮೀಜಿ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದರು'. ಹಾಗಾದರೆ ಪದ್ಮನಾಭನಗರದ ಈಗಿನ ಪ್ರಧಾನಿ ಯಾರಿರಬಹುದು!? 'ಹವಾನಿಯಂತ್ರಿತ ಕಾಂಚಿ ಸೀರೆಗಳ ಶೋ ರೂಮ್'ಗೆ ಭೇಟಿ ಕೊಡಿ. ಅಲ್ಲಿರುವ ಕಾಂಚಿ ಸೀರೆಗಳೇ ಹವಾನಿಯಂತ್ರಿತವೇ ಅಥವಾ ಶೋ ರೂಮ್ ಹವಾನಿಯಂತ್ರಿತವೇ ಎಂದು ಮಾತ್ರ ಕೇಳಬೇಡಿ!

ಇನ್ನೊಂದು ನಮೂನೆಯ ಅಸ್ತವ್ಯಸ್ತತೆ ರಾಥೆಯಿಂದ, ಅಲ್ಲ 'ರಾದ' ಪ್ರತ್ಯಯದಿಂದ, ಆಗುತ್ತದೆ. ಉದಾಹರಣೆಗೆ 'ಮಿದುಳಿನ ನಿಷ್ಕ್ರಿಯತೆಯಿಂದ ನಟರಾದ ಸಂಚಾರಿ ವಿಜಯ್ ನಿಧನ'. ಅವರು ನಟರಾದದ್ದು ಮಿದುಳಿನ ನಿಷ್ಕ್ರಿಯತೆಯಿಂದಲೇ? 'ಶಾಲೆಯಲ್ಲಿ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು'. ಅವರು ಶಿಕ್ಷಣಸಚಿವರಾದದ್ದು ಶಾಲೆಯಲ್ಲೇ? ವಿಧಾನಸೌಧದೆದುರು ಪ್ರತಿಜ್ಞಾವಿಧಿ ಸಮಾರಂಭದಲ್ಲಿ ಅಲ್ಲವೇ? 'ಪುಸ್ತಕ ಬಿಡುಗಡೆ ಸಮಾರಂಭದ ವೇದಿಕೆಯಲ್ಲಿ ವಿಶ್ವವಾಣಿ ಸಂಪಾದಕರಾದ ವಿಶ್ವೇಶ್ವರ ಭಟ್ಟರು ಈಗಿನ ಸಾಹಿತ್ಯಲೋಕದ ಸಂಕುಚಿತತೆಯ ಬಗ್ಗೆ ಮಾತನಾಡಿದರು'. ಭಟ್ಟರು ವಿಶ್ವವಾಣಿ ಸಂಪಾದಕರಾದದ್ದು ಪುಸ್ತಕ ಬಿಡುಗಡೆ ಸಮಾರಂಭದ ವೇದಿಕೆಯಲ್ಲೇ? 'ಇಂದು ರಷ್ಯಾದ ಅಧ್ಯಕ್ಷರಾದ ವ್ಲಾದಿಮಿರ್ ಪುಟಿನ್ ಜತೆಗೆ ಅಮೆರಿಕ ಅಧ್ಯಕ್ಷರಾದ ಟ್ರಂಪ್ ಮಾತುಕತೆ'. ವ್ಲಾದಿಮಿರ್ ಪುಟಿನ್ ಇಂದು ರಷ್ಯಾದ ಅಧ್ಯಕ್ಷರಾದದ್ದೇ? ಟ್ರಂಪ್ ಅಮೆರಿಕದ ಅಧ್ಯಕ್ಷರಾದದ್ದು ವ್ಲಾದಿಮಿರ್ ಪುಟಿನ್ ಜತೆಗೇ? 'ಬೆಳಿಗ್ಗೆಬೆಳಿಗ್ಗೆ ತುಮಕೂರಿನಲ್ಲಿ ಪ್ರಿಯ ಮಿತ್ರರಾದ ರಾಮು ಮತ್ತು ಸೋಮು ಜೊತೆಗೆ ಉಪಾಹಾರ ಚರ್ಚೆ ಹರಟೆ' ಎಂದು ಫೇಸ್‌ಬುಕ್‌ನಲ್ಲಿ ಪತ್ರಕರ್ತರೊಬ್ಬರು ಫೋಟೊ ಹಾಕಿಕೊಂಡಿದ್ದರು. ಬೆಳಿಗ್ಗೆಬೆಳಿಗ್ಗೆ ತುಮಕೂರಿನಲ್ಲಿ ಪ್ರಿಯ ಮಿತ್ರ ಆಗುವುದೆಂದರೇನು? ಬೆಳಿಗ್ಗೆಬೆಳಿಗ್ಗೆ ಆದದ್ದು ಅವರ ಭೇಟಿ ಮಾತ್ರ. ಈ ಎಲ್ಲ ವಾಕ್ಯಗಳಲ್ಲಿ 'ರಾದ' ತೆಗೆದರೆ ಗೊಂದಲ ನಿವಾರಣೆಯಾಗುತ್ತದೆ. ವ್ಯಕ್ತಿಗಳ ಹೆಸರಿನೆದುರಿಗೆ 'ಶ್ರೀಯುತರಾದ' ಎಂದು ಸೇರಿಸುವ ವಾಕ್ಯಗಳಲ್ಲೂ ಅಷ್ಟೇ. ರಾದ ಬೇಕಿಲ್ಲ.

ತಲೆಬರಹಗಳಲ್ಲಿ ಶೀಘ್ರ ಎಂಬ ಪದ soon, shortly ಎಂಬರ್ಥದಲ್ಲಿ ಬಳಕೆಯಾಗುತ್ತದೆ. ಹೆಚ್ಚಾಗಿ ಅದು 'ಶೀಘ್ರದಲ್ಲೇ' ಎಂಬುದರ ಹ್ರಸ್ವ ರೂಪವಾಗಿರುತ್ತದೆ. ಆದರೆ ಕೆಲವೊಮ್ಮೆ ಅದು ಯಾವ ಪದಕ್ಕೆ ವಿಶೇಷಣವಾಗಿ ಇರಬೇಕಿತ್ತೋ ಅಲ್ಲಿರದೆ, ಬೇರೆಯೇ ಒಂದು ಪದದ ಪಕ್ಕದಲ್ಲಿ ವಿರಾಜಿಸಿ ಆಭಾಸಕ್ಕೆ ಎಡೆಮಾಡುತ್ತದೆ. 'ಕಡತಗಳ ಶೀಘ್ರ ವಿಲೇವಾರಿ'ಗೂ 'ಶೀಘ್ರ ಕಡತಗಳ ವಿಲೇವಾರಿ'ಗೂ ವ್ಯತ್ಯಾಸ ಇದೆಯಲ್ಲವೇ? ಇನ್ನೊಂದು ಉದಾಹರಣೆ: 'ಶೀಘ್ರ ಅಕಾಡೆಮಿ ಅಧ್ಯಕ್ಷರ ನೇಮಕ'. ಅಕಾಡೆಮಿಗಳಲ್ಲಿ ಶೀಘ್ರ ಅಕಾಡೆಮಿ ಮತ್ತು ಮಂದ ಅಕಾಡೆಮಿ ಎಂಬ ಎರಡು ವಿಧಗಳಿವೆಯೇ? ಈಗ ಅಧ್ಯಕ್ಷರ ನೇಮಕ ಆಗುತ್ತಿರುವ ಅಕಾಡೆಮಿಯು ಶೀಘ್ರ ವಿಧದ್ದೇ? ಹಾಗೆ ಅನುಮಾನಕ್ಕೆ ಆಸ್ಪದವಿಲ್ಲದಂತೆ, 'ಶೀಘ್ರದಲ್ಲೇ ಅಕಾಡೆಮಿ ಅಧ್ಯಕ್ಷರ ನೇಮಕ' ಎಂದು ಬರೆಯುವುದೊಳ್ಳೆಯದು. 'ಶೀಘ್ರ ಮಕ್ಕಳಿಗೂ ಕೋವಿಡ್ ಲಸಿಕೆ' ಎಂಬ ತಲೆಬರಹ. 'ಶೀಘ್ರ ಮಕ್ಕಳು' ಅಂದರೆ ತಾಯಿಯ ಗರ್ಭದಲ್ಲಿ ಒಂಬತ್ತು ತಿಂಗಳ ವಾಸ ಮುಗಿಯುವ ಮೊದಲೇ ಹುಟ್ಟಿದವರು? ಈ ತಲೆಬರಹವನ್ನು 'ಮಕ್ಕಳಿಗೂ ಶೀಘ್ರ ಕೋವಿಡ್ ಲಸಿಕೆ' ಎಂದು ಬರೆದರೂ ಸಮಂಜಸವೆನಿಸದು. 'ಶೀಘ್ರದಲ್ಲೇ ಮಕ್ಕಳಿಗೂ ಕೋವಿಡ್ ಲಸಿಕೆ' ಎಂದು ಬರೆಯುವುದೇ ಒಳ್ಳೆಯದು. ಹಿಂದೊಮ್ಮೆ 'ಲಾರಾ ಮಡಿಲಿಗೂ ಶೀಘ್ರ ಮಗು ಎಂಟ್ರಿ' ಎಂಬ ತಲೆಬರಹ ಬಂದಿತ್ತು. ಶೀಘ್ರ ಮಗು ಅಂದರೆ ಪ್ರಿಮೆಚ್ಯೂರ್ ಬೇಬಿ? ಅಥವಾ, ದೊಡ್ಡವನಾಗಿ ಉಸೇನ್ ಬೋಲ್ಟ್‌ನಂತಾಗುವ ಬೇಬಿ? 'ಶೀಘ್ರ ತೋಟಗಾರಿಕಾ ಸಚಿವರ ಜತೆ ಸಭೆ'- ಶೀಘ್ರ ತೋಟಗಾರಿಕೆ ಎಂದರೇನು? 'ಹಿರಿಯ ನಟಿ ಲೀಲಾವತಿ ಸ್ಥಿತಿ ಗಂಭೀರ! ದಿಢೀರ್ ವೈದ್ಯರಿಂದ ಶಾಕಿಂಗ್ ನ್ಯೂಸ್!'- ಎಂಬಿಬಿಎಸ್ ಓದಿ ಸ್ನಾತಕೋತ್ತರ ಶಿಕ್ಷಣವನ್ನೂ ಪಡೆದು ವೈದ್ಯರಾದವರು ದಿಢೀರ್ ವೈದ್ಯರಲ್ಲ. ಶಾಕಿಂಗ್ ನ್ಯೂಸ್ ಕೊಟ್ಟದ್ದು ಮಾತ್ರ ದಿಢೀರ್ ಆಗಿ.

ಇವೆಲ್ಲ ಘೋರಪ್ರಮಾದಗಳೇನಲ್ಲ. ಕೆಲವೊಮ್ಮೆ ಭಾಷೆಯ ಪರಿಮಿತಿ, ಕೆಲವೊಮ್ಮೆ ಅಸಡ್ಡೆಯ ರೀತಿ. ಬರೆದಿದ್ದನ್ನು ಒಂದೆರಡು ಸಲ ಓದಿನೋಡಿದರೆ ಸರಿಪಡಿಸುವುದಕ್ಕಾಗುತ್ತದೆ. ಹಾಗೇ ಬಿಟ್ಟರೆ ಹಾಸ್ಯಾಸ್ಪದ ಆಗುತ್ತದೆ ಅಷ್ಟೇ. ಕೊನೆಯಲ್ಲಿ ನಿಮಗೊಂದು ಪ್ರಶ್ನೆ: 'ಮಹಿಳೆಯರ ಭಾರ ಎತ್ತುವ ಸ್ಪರ್ಧೆ'ಯನ್ನು ನೀವು ಹೇಗೆ ಅರ್ಥೈಸುತ್ತೀರಿ?

ಆತ್ಮಗೌರವವನ್ನೇ ಬಲಿಕೊಟ್ಟಮೇಲೆ, ಬದುಕಿದ್ದೂ ಸತ್ತಂತೆ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com
vinayakavbhat@autoaxle.com

ಕೆಲವು ದಿನಗಳಿಂದ ಕರ್ನಾಟಕದಲ್ಲಿ ವಿಧಾನಸಭೆಯ ಮಳೆಗಾಲದ ಅಧಿವೇಶನ ನಡೆಯುತ್ತಿದೆ. ನಾವು ಬೇಡವೆಂದರೂ ವಾರ್ತೆಗಳನ್ನು ನೋಡುವಾಗ ಸದನದ ಕಲಾಪದ ತುಣುಕುಗಳು ನಮಗೆ ಸಿಕ್ಕಿಬಿಡುತ್ತವೆ. ಹಾಗೆ ನೋಡುವಾಗ ಈ ಬಾರಿಯ ಕಲಾಪದಲ್ಲಿ ನನಗೆ ವಿಶೇಷವಾಗಿ ಗೋಚರಿಸಿದ್ದು ಅಂದರೆ, ಬಹುತೇಕ ಎಲ್ಲರೂ ಹತ್ತಿರದ ನೆಂಟರ ಮನೆಯ ಮದುವೆಯಲ್ಲಿ ಮಾತಾಡಿಕೊಳ್ಳುವಂತೆ, ಪರಸ್ಪರ ಏಕವಚನದಲ್ಲಿ ಮಾತನಾಡಿಕೊಳ್ಳುತ್ತಿದ್ದುದು. ಮೊದಲೆಲ್ಲ, ರಾಜ್ಯದ ಜನಪ್ರತಿನಿಧಿಗಳಲ್ಲಿ ಹಿರಿಯರು ಎಂದುಕೊಂಡ ಒಬ್ಬರಿಗೋ ಅಥವಾ ಇಬ್ಬರಿಗೋ ಈ ವ್ಯಾಧಿ ಇರುತ್ತಿತ್ತು. ಈಗ ಹಾಗಲ್ಲ, ಈ ವ್ಯಾಧಿ ಸಾಂಕ್ರಾಮಿಕವಾಗಿ ಸರ್ವರನ್ನೂ ಆವರಿಸಿಬಿಟ್ಟಿದೆ ಅಂತ ಅನಿಸಿತು. ಹಿರಿಕಿರಿಯರೆನ್ನದೇ ಪರಸ್ಪರ ಎಲ್ಲರೂ ಏಕವಚನದಲ್ಲೇ ಮಾತನಾಡುವುದು ರಾಜ್ಯದ ರಾಜಕಾರಣಿಗಳಿಗೆ New normal ಆಗಿಬಿಟ್ಟಂತೆ ಕಂಡಿತು. 'ಸಂಸರ್ಗಜಾಃ ದೋಷ ಗುಣಾಃ ಭವಂತಿ' ಎನ್ನುವ ಮಾತು ನಿಜವೇ ಆಯಿತು. ಅಂದರೆ, ಗುಣ-ದೋಷಗಳೆರಡೂ ಸಹವಾಸದಿಂದ ಉಂಟಾಗುತ್ತವೆ ಅಂತ ಅರ್ಥ.

ನಾವು ಯಾರನ್ನು ಪ್ರತಿನಿಧಿಸಿ ಇಲ್ಲಿ ಕುಳಿತುಕೊಂಡಿದ್ದೇವೆ, ನಮ್ಮ ಸ್ಥಾನಮಾನ ಏನು? ನೇರ ಪ್ರಸಾರದಿಂದಾಗಿ ಸಾರ್ವಜನಿಕರು ನಮ್ಮನ್ನು ಪರಾಂಬರಿಸುತ್ತಿರುತ್ತಾರೆ ಎನ್ನುವ ಯಾವ ಕಲ್ಪನೆಯೂ ಇಲ್ಲದೇ ವರ್ತಿಸುವುದನ್ನು ನೋಡುವಾಗ ಅವರಲ್ಲಿ ಮೌಲ್ಯಗಳು ಯಾವ ವೇಗದಲ್ಲಿ ಜಾರುತ್ತಿವೆ ಎನ್ನುವುದು ತಿಳಿಯುತ್ತದೆ. 'ವಿದ್ಯಾರ್ಥಿಗಳು ಮೌಲ್ಯವನ್ನು ಉಳಿಸಿಕೊಳ್ಳಬೇಕು' ಎಂದು ಭಾಷಣಮಾಡುವ ಮಂತ್ರಿಮಹೋದಯರುಗಳು, ಸದನದ ಕಲಾಪವನ್ನು ವೀಕ್ಷಿಸಲು ಶಾಲಾ ಕಾಲೇಜುಗಳ ಅದೇ ವಿದ್ಯಾರ್ಥಿಗಳು ಪ್ರೇಕ್ಷಕರ ಗ್ಯಾಲರಿಯಲ್ಲಿ ಬಂದು ಕುಳಿತಿರುತ್ತಾರೆ ಎನ್ನುವುದನ್ನೂ ಮರೆತು ಬೇಜವಾಬ್ದಾರಿಯಿಂದ ವರ್ತಿಸುವುದು ನಿಜಕ್ಕೂ ಖೇದಕರ. ಖಾಸಗಿಯಾಗಿ ಇವರುಗಳು ಹೇಗೆ ಬೇಕಾದರೂ ಇರಲಿ, ಸಾರ್ವಜನಿಕವಾಗಿ ಅಗೌರವಸೂಚಕವಾದ ಏಕವಚನದ ಪದಪ್ರಯೋಗ ಮಾಡುವುದು ಸೌಜನ್ಯವಲ್ಲ ಎನ್ನುವ ಸಾಮಾನ್ಯ ಜ್ಞಾನವಾದರೂ ಬೇಕಲ್ಲ ಇವರುಗಳಿಗೆ. ಆಶ್ಚರ್ಯವೆಂದರೆ, ಹಾಗೆ ಏಕವಚನದಲ್ಲಿ ಕರೆಸಿಕೊಳ್ಳುವವರಿಗಾದರೂ ಆತ್ಮಗೌರವದ ಕಡೆಗೆ ಕಿಂಚಿತ್ತೂ ಗಮನವಿದ್ದಂತೆ ಕಾಣುವುದಿಲ್ಲ.

ಸದನದಲ್ಲಿ ಮಾತನಾಡಲು ಅನೇಕ ನಿಯಮಗಳಿರುತ್ತವೆ. ಯಾರಾದರೂ ಸದಸ್ಯರುಗಳು ಸದನದಲ್ಲಿ ಅಸಾಂವಿಧಾನಿಕ ಪದಗಳ ಬಳಕೆ ಮಾಡಿದರೆ ಅದನ್ನು ಕಡತದಿಂದ ತೆಗೆದುಹಾಕಲಾಗುತ್ತದೆ. ಆದರೆ, ಸದಭಿರುಚಿಯಿಂದ ಕೂಡಿರದ ಹಾಗೂ ಸಮಾಜಕ್ಕೆ ಕೆಟ್ಟ ಸಂದೇಶ ಕೊಡುವ ಸದಸ್ಯರ ಏಕವಚನದ ಸಂಭಾಷಣೆಯ ಕುರಿತು ಸದನದ ನಿಯಮಗಳು ಏನು ಹೇಳುತ್ತವೆಯೋ ಗೊತ್ತಿಲ್ಲ. ಸಭಾನಾಯಕರು ಇದಕ್ಕೆಲ್ಲಾ ಮಾದರಿಯಾಗಿರಬೇಕು ಅಥವಾ ಸಭಾಪತಿಗಳಾದರೂ ಮಧ್ಯಪ್ರವೇಶಿಸಿ ಸದಸ್ಯರ ಭಾಷೆಯಲ್ಲಿ ಸುಸಂಸ್ಕಾರವನ್ನು ಮೂಡಿಸಬೇಕು. ದೊಡ್ಡವರೆನಿಸಿಕೊಂಡವರ ನಡವಳಿಕೆಯಂತೆ ಲೋಕವೂ ವರ್ತಿಸುತ್ತದೆ (ಯದ್ಯದಾಚರತಿ ಶ್ರೇಷ್ಠಃ... ಲೋಕಸ್ತದನುವರ್ತತೇ) ಎನ್ನುವ ತಿಳಿವಳಿಕೆಯನ್ನು ಹಿರಿಯರಾದರೂ ಅರಿಯಬೇಕು. ಅದಾವುದೂ ಇತ್ತೀಚಿನ ಸದನ ಕಲಾಪಗಳಲ್ಲಿ ಕಂಡುಬರುತ್ತಿಲ್ಲ. ಈ 'ನೀನು...ತಾನು' ಎನ್ನುವ ಭಾಷಾಪ್ರಯೋಗವು ಮಾಡುವವರಿಗೂ ಮಾಡಿಸಿಕೊಳ್ಳುವವರಿಗೂ ಒಪ್ಪಿತವಾದಂತೆ ಕಂಡುಬರುತ್ತಿದೆ. ಭಾಷೆಯಲ್ಲಿನ ವಚನವೈವಿಧ್ಯ ಎನ್ನುವುದು ರಾಜಕಾರಣಿಗಳಿಗೆ ಗೊತ್ತಿಲ್ಲವೆಂತಲ್ಲ, ತಮ್ಮ ಮಕ್ಕಳ ಕುರಿತು ಮಾತನಾಡುವಾಗ ಬಹುವಚನವನ್ನು ಬಳಸಿಯೇ ಅವರುಗಳು ಮಾತನಾಡುವುದು. ಆದರೆ 'ಬೇರೆಯವರ ವಿಷಯದಲ್ಲಿ ಅಗೌರವ ತೋರುವ ಏಕವಚನಗಳ ಪದಪ್ರಯೋಗ ನಡೆಯುತ್ತೆ' ಎನ್ನುವ ಭಾವನೆ ಇವರದ್ದು, ಅಷ್ಟೇ!

ಬಹುಶಃ ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದ ಕಾಲವದು. ಸದನದಲ್ಲಿ ರಾಮಕೃಷ್ಣ ಹೆಗಡೆಯವರು ಮತ್ತು ಕಾಂಗ್ರೆಸ್ಸಿನ ರಮೇಶ್ ಎಂಬ ಮಂತ್ರಿಯ ಮಧ್ಯೆ, ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲರಿಗೆ ಸಂಬಂಧಿಸಿದ ಯಾವುದೋ ವಿಷಯದ ಕುರಿತು ಏರಿದ ಧ್ವನಿಯಲ್ಲಿ ತಾಸುಗಟ್ಟಲೆ ವಾದ ವಿವಾದವಾಗುತ್ತಿತ್ತು. ನಾನೂ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಕುತೂಹಲದಿಂದ ಇವರ ವಾದ ವಿವಾದಗಳನ್ನು ಕೇಳಿಸಿಕೊಳ್ಳುತ್ತಿದ್ದೆ. ಆದರೆ ಒಂದೇ ಒಂದು ಅಪಶಬ್ದ ಆ ವಾದದಲ್ಲಿ ನನಗೆ ಕೇಳಿಬರಲಿಲ್ಲ. ಪರಸ್ಪರ ಬಹುವಚನದ ಪದಪ್ರಯೋಗವೇ ವಾದದುದ್ದಕ್ಕೂ ಕೇಳಿಬಂತು. ಈಗ ಹಾಗಲ್ಲ, ಎಲ್ಲರೂ 'ನೀನು.. ತಾನು' ಎಂದೇ ಮಾತನಾಡುತ್ತಾರೆ.

ನಾನು ಹಾಸನದಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥನಾಗಿ ಕೆಲಸ ಮಾಡುತ್ತಿದ್ದಾಗ ಒಮ್ಮೆ, ಇದ್ದಕ್ಕಿದ್ದ ಹಾಗೆ ದೂರವಾಣಿ ಕರೆಯೊಂದು ಬಂತು. ನೋಡಿದರೆ, ಅತ್ತಕಡೆಯಿಂದ ಮಾಜಿ ಪ್ರಧಾನಿ ದೇವೇಗೌಡರಿದ್ದರು. ಸಾಮಾನ್ಯವಾಗಿ, ಮುಖ ಸಿಂಡರಿಸಿಕೊಂಡು, ಸಿಡುಕುತ್ತ ಅಸಹನೆಯಿಂದಲೇ ಮಾತನಾಡುವ ದೇವೇಗೌಡರನ್ನು ದೂರದರ್ಶನದಲ್ಲಿ ನಾವು ನೋಡಿದ್ದೇ ಹೆಚ್ಚು. ''ವಿನಾಯಕ ಭಟ್ಟರೇ ನಮಸ್ಕಾರ, ನಾನು ಮಾಜಿ ಪ್ರಧಾನಿ ದೇವೇಗೌಡ ಮಾತನಾಡುತ್ತಿರುವುದು. ನನ್ನ ಮಗ ರಾಜ್ಯದ ಮುಖ್ಯಮಂತ್ರಿಯಿದ್ದಾರೆ, ಇನ್ನೊಬ್ಬ ಮಗ ಮಂತ್ರಿಯಿದ್ದಾರೆ, ಹಾಗಾಗಿ ನಮ್ಮ ಊರಿನ ಜನ ಬಂದು ಏನಾದರೂ ಸಹಾಯ ಕೇಳುತ್ತಿರುತ್ತಾರೆ. ಹಾಗೆಯೇ ಒಬ್ಬಾತ ಹಾಸನದಿಂದ ನನ್ನಲ್ಲಿಗೆ ಬಂದುಬಿಟ್ಟಿದ್ದಾನೆ, ಅವನ ಮೊಮ್ಮಗನಿಗೆ ನಿಮ್ಮ ಕಂಪನಿಯಲ್ಲಿ ಕೆಲಸಕೊಡಿಸಿ ಎಂದು ಕೇಳುತ್ತಿದ್ದಾನೆ. ಅನ್ಯಥಾ ಭಾವಿಸಬೇಡಿ, ಸಾಧ್ಯವಾದರೆ ಆತನಿಗೊಂದು ಸಹಾಯ ಮಾಡಿ'' ಎಂದು ಹೇಳಿ ಸಂಭಾಷಣೆ ಮುಗಿಸಿದ್ದರು. ದೇವೇಗೌಡರೂ ಹೀಗೆ ಮಾತನಾಡಬಹುದು ಎಂದು ನಾನು ಖಂಡಿತ ಊಹಿಸಿರಲಿಲ್ಲ. ಆಗತಾನೇ ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿದು ಬಂದಿದ್ದ ದೇವೇಗೌಡರು, ''ನನ್ನ ಕ್ಷೇತ್ರದ ಮತದಾರನ ಮೊಮ್ಮಗನಿಗೆ ನೀನು ಕೆಲಸ ಕೊಡಲೇಬೇಕಪ್ಪಾ'' ಎಂದು ಏಕವಚನದಲ್ಲಿ ಕೇವಲ ಒಂದು ಸಂಸ್ಥೆಯ ಅಧಿಕಾರಿಯಾಗಿದ್ದ ನನಗೆ ಆಜ್ಞೆ ಮಾಡಬಹುದಿತ್ತು. ಆದರೆ, ಅಂದು ದೇವೇಗೌಡರು ನನ್ನ ಜತೆಗೆ ಅತ್ಯಂತ ಗೌರವದಿಂದ, ಸೌಜನ್ಯದಿಂದ ನಡೆದುಕೊಂಡಿದ್ದರು. ಈ ಒಂದು ಸೌಜನ್ಯಯುತ ಸಂಭಾಷಣೆಯಿಂದಾಗಿ, ದೇವೇಗೌಡರ ಕುರಿತಾಗಿ ನನಗಿದ್ದ ಅಭಿಪ್ರಾಯವೇ ಬದಲಾಗಿಹೋಯಿತು. ಎಲ್ಲ ರಾಜಕಾರಣಿಗಳೂ ಒಂದೇ ಥರ ಅಲ್ಲ ಎನ್ನುವುದನ್ನು ತಿಳಿಸಲು ಮತ್ತು ಒಂದು ಸೌಜನ್ಯಯುಕ್ತ ಪ್ರಿಯವಾಕ್ಯವು ರಾಜಕಾರಣಿಯೊಬ್ಬನ ಕುರಿತಾದ ಅಭಿಪ್ರಾಯವನ್ನೇ ಬದಲಿಸಲು ಕಾರಣವಾಗಿಬಿಡುತ್ತದೆ ಎನ್ನುವುದನ್ನು ಹೇಳಲು ಈ ಘಟನೆಯನ್ನು ಉಲ್ಲೇಖಿಸುತ್ತಿದ್ದೇನೆ.

ಹದಿನಾರು ವರ್ಷದ ನನ್ನ ಮಗ, ತನ್ನ ಆರನೇ ವಯಸ್ಸಿನಿಂದ ಮೈಸೂರಿನಲ್ಲಿ ಕ್ರಿಕೆಟ್ ತರಬೇತಿ ಪಡೆಯುತ್ತಿದ್ದಾನೆ. ಅವನು ತರಬೇತಿ ಪಡೆಯುವ 'ಕ್ಲಬ್'ನಲ್ಲಿ ನೂರಾರು ಜನ ಸಣ್ಣ ಸಣ್ಣ ಮಕ್ಕಳು ತರಬೇತಿ ಪಡೆಯುತ್ತಾರೆ. ಅಲ್ಲಿ ಗದಾಧರನ್ ಎಂಬ ಹಿರಿಯ ತರಬೇತುದಾರರು ಈ ಮಕ್ಕಳನ್ನು ಇಂದಿಗೂ ''ರೀ ಸುಧನ್ವಾ ಬನ್ನಿ ಇಲ್ಲಿ, ಸರಿಯಾಗಿ ಕಾಲು ಮುಂದಿಟ್ಟು ಆಡಿ'' ಎಂದು ಬಹುವಚನದಿಂದಲೇ ಸಂಬೋಧಿಸುತ್ತಾರೆ. ಮಕ್ಕಳನ್ನು ಬೈದು ತಿದ್ದುವಾಗಲೂ ಅವರು ಯಾರನ್ನೂ ಏಕವಚನದಿಂದ ಕರೆದಿದ್ದನ್ನು ನಾನಂತೂ ನೋಡಿಲ್ಲ, ಹಾಗೇಕೆ ಎಂದು ಕೇಳಿದಾಗ, ''ನಾನೇ ಸರಿಯಾಗಿ ಮಾತನಾಡದಿದ್ದರೆ, ನನ್ನ ಮಕ್ಕಳು ಕಲಿಯುವುದು ಯಾರಿಂದ...'' ಎನ್ನುವ ಸರಳ ಉತ್ತರ ಗದಾಧರನ್ ಅವರಿಂದ ಬಂತು. ಸಮಾಜವನ್ನು ತಿದ್ದುವ ಜಾಗದಲ್ಲಿರುವವರಿಗೆ ಈ ಸೂಕ್ಷ್ಮಗಳು ಯಾಕೆ ಅರ್ಥವಾಗುವುದಿಲ್ಲವೋ ತಿಳಿಯದು.

ಇನ್ನು, ಕಂಡಕಂಡಲ್ಲಿ ರಾಜಕಾರಣಿಗಳ ಮುಂದೆ ಮೈಕು ಹಿಡಿಯುವ ಮಾಧ್ಯಮಗಳ ವರದಿಗಾರರನ್ನು ನಾವು ನಿತ್ಯ ನೋಡುತ್ತೇವೆ. ಹೀಗೆ ರಾಜಕಾರಣಿಗಳಿಂದ 'ಬೈಟ್' ತೆಗೆದುಕೊಳ್ಳುವ ಸಲುವಾಗಿ ವಾಹಿನಿಗಳ ಹಿರಿಯರಾರೂ ಬರುವುದಿಲ್ಲ, ಎಳೆನಿಂಬೆಕಾಯಿಗಳು ಮಾತ್ರ ಇಂಥ ಸಂದರ್ಭಗಳಲ್ಲಿ ರಾಜಕಾರಣಿಗಳ ಮುಂದೆ ಬಂದು ನಿಲ್ಲುವುದು ಸೂಕ್ಷ್ಮವಾಗಿ ಗಮನಿಸಿದರೆ ನಮಗೆ ತಿಳಿಯುತ್ತದೆ. ''ಸರ್, ನಿಮ್ಮ ವಿರುದ್ಧ ಭ್ರಷ್ಟಾಚಾರದ ಅಪವಾದ ಕೇಳಿಬರ್ತಿದೆ, ಅದಕ್ಕೆ ನೀವು ಏನು ಹೇಳುತ್ತೀರಿ?'' ಎಂದು ಕೇಳುತ್ತಾರೆ. ಅದಕ್ಕೆ, ''ಏಯ್! ನೀನ್ಯಾರಯ್ಯಾ ಅದನ್ನು ಕೇಳುವುದಕ್ಕೆ? ಸುಮ್ಮನಿರಯ್ಯಾ'' ಎನ್ನುವ ಉತ್ತರ ರಾಜಕಾರಣಿಗಳಿಂದ ಬರುತ್ತದೆ. ನಮ್ಮ ರಾಜ್ಯದ ಕೆಲ ರಾಜಕಾರಣಿಗಳು ಇಂಥ ಕಿರಿಯ ಪತ್ರಿಕಾ ವರದಿಗಾರರಿಗೆ, ಐಎಎಸ್/ಐಪಿಎಸ್ ಅಧಿಕಾರಿಗಳಿಗೆ ಏಕವಚನದಲ್ಲೇ ಸಂಬೋಧಿಸುವುದು ಇತ್ತೀಚೆಗೆ ಸಾಮಾನ್ಯವಾಗಿಬಿಟ್ಟಿದೆ. ಅದನ್ನು ನೋಡುವಾಗ, ಈ ಪತ್ರಕರ್ತಮಿತ್ರರಿಗೆ ಆತ್ಮಗೌರವ ಚುಚ್ಚುವುದಿಲ್ಲವೇ ಎಂದೆನಿಸುತ್ತದೆ. ದುರದೃಷ್ಟವೆಂದರೆ, ಈ ವರದಿಗಾರರು ತಮಗೆ ಹೀಗೆ ಏಕವಚನದಲ್ಲಿ ಸಂಬೋಧಿಸುವ ರಾಜಕಾರಣಿಗಳನ್ನು ಪ್ರತಿರೋಧಿಸುವುದೇ ಇಲ್ಲ, ಮಂತ್ರಿಮಹೋದಯರುಗಳು ತಮ್ಮ ಹತ್ತಿರ ಮಾತನಾಡಿದರು ಎನ್ನುವುದರಲ್ಲೇ ಅವರು ತೃಪ್ತಿಗೊಂಡಂತೆ ಕಾಣುತ್ತದೆ.

ಮೊದಲನೆಯದಾಗಿ, ಪತ್ರಕರ್ತ ಅಥವಾ ಅಧಿಕಾರಿ ಅಂತಲ್ಲ, ಸಾಮಾನ್ಯ ವ್ಯಕ್ತಿಯೂ ಆತ್ಮಗೌರವವನ್ನು ಯಾವುದೇ ಸಂದರ್ಭದಲ್ಲಿ ತಗ್ಗಿಸಿಕೊಳ್ಳಬಾರದು. ಆತ್ಮಗೌರವವನ್ನೇ ಬಲಿಕೊಟ್ಟ ಮೇಲೆ ಇನ್ನು ಉಳಿಯುವುದು ಅಂತ ಏನೂ ಇರುವುದಿಲ್ಲ. ರಾಜಕಾರಣಿಗಳನ್ನು ತಿದ್ದಿತೀಡಿ, ಅವರ ಮುಖಕ್ಕೆ ಕನ್ನಡಿ ಹಿಡಿಯಬೇಕಾದ ಸ್ಥಾನದಲ್ಲಿರುವ ಪತ್ರಕರ್ತರೇ ರಾಜಕಾರಣಿಗಳ ಇಂಥ ಅನಾಗರಿಕ ವರ್ತನೆಗಳಿಗೆ ಪ್ರತಿರೋಧ ಒಡ್ಡದಿದ್ದರೆ, ಸಮಾಜದಲ್ಲಿ ಇನ್ಯಾರಿಂದ ಅದನ್ನು ನಿರೀಕ್ಷಿಸಲು ಸಾಧ್ಯ ಹೇಳಿ?

ಒಬ್ಬ ವರದಿಗಾರ ಅಥವಾ ಹಿರಿಯ ಅಧಿಕಾರಿ ಧೈರ್ಯಮಾಡಿ, ''ಸರ್, ಹೀಗೆ ಏಕವಚನದಲ್ಲಿ ಮಾತಾಡಬೇಡಿ, ನನಗೆ ಗೌರವಕೊಟ್ಟು ಮಾತನಾಡಿ'' ಎಂದು ಒಮ್ಮೆ ಹೇಳಿ ನೋಡಲಿ! ರಾತ್ರಿ ಬೆಳಗಾಗುವುದರೊಳಗೆ ರಾಜಕಾರಣಿಗಳು ಬದಲಾಗದಿದ್ದರೆ ಹೇಳಿ. ಆ ರಾಜಕಾರಣಿಗಳು ಈ ಯುವ ಪತ್ರಕರ್ತರನ್ನು ಪಾಲಿಸಿ ಪೋಷಿಸಿದವರಲ್ಲ, ವಿದ್ಯೆಕಲಿಸಿದ ಆಚಾರ್ಯರಲ್ಲ, ಸಂಬಳಕೊಡುವ ಉದ್ಯೋಗದಾತರೂ ಅಲ್ಲ, ಹಾಗಿದ್ದಾಗ, ಅವರಿಂದ ಏಕವಚನದಲ್ಲಿ ಕರೆಸಿಕೊಳ್ಳುವ ಅಗತ್ಯವಾದರೂ ಏನಿರುತ್ತದೆ ಇವರುಗಳಿಗೆ? ಇವರುಗಳ ಸ್ವಗೌರವ ಒಂದು ಕಡೆಯಾದರೆ, ಇವರುಗಳು ಕೈಯಲ್ಲಿ ಹಿಡಿದಿರುವ ಮೈಕಿನ ಮೇಲೆ ಒಂದು ವಾಹಿನಿಯ ಮುದ್ರೆ ಒತ್ತಿರುತ್ತದೆ, ಆ ವಾಹಿನಿಯನ್ನು ಇವರುಗಳು ಪ್ರತಿನಿಧಿಸುತ್ತಿರುತ್ತಾರೆ. ಹಾಗಾಗಿ, ತಮ್ಮ ಕೈಯಲ್ಲಿರುವುದು ಬರೀ ಒಂದು ಮೈಕಲ್ಲ, ಸ್ವಂತ ಮರ್ಯಾದೆ ಹಾಗೂ ತಾವು ಪ್ರತಿನಿಧಿಸುತ್ತಿರುವ ಸಂಸ್ಥೆಯ ಮರ್ಯಾದೆ ಎರಡೂ ತಮ್ಮ ಕೈಯಲ್ಲಿರುತ್ತದೆ ಎನ್ನುವ ಪರಿಜ್ಞಾನವಾದರೂ ಇಂಥ ಪತ್ರಕರ್ತರಿಗೆ ಇರಬೇಕು. ಇನ್ನು, ಇದನ್ನೆಲ್ಲ ನೋಡುವ ಆ ವಾಹಿನಿಗಳ ಮುಖ್ಯಸ್ಥರೂ ಸುಮ್ಮನಿರುವುದು ನಿಜಕ್ಕೂ ಖೇದಕರ ಸಂಗತಿಯಾಗಿದೆ.

'ಸಮಾಜದಲ್ಲಿ ನಾವು ಎಲ್ಲಕ್ಕೂ ಅತೀತರು, ನಾವು ಹೇಗೆ ಬೇಕಾದರೂ ನಡೆದುಕೊಳ್ಳಬಹುದು' ಎಂದುಕೊಳ್ಳುವ ದೊಡ್ಡ ದೊಡ್ಡ ರಾಜಕಾರಣಿಗಳನ್ನು ಮಾತನಾಡಿಸುವಾಗ, ಅಲ್ಲಿಗೆ ಹಿರಿಯ ಪತ್ರಕರ್ತರನ್ನು ಕಳಿಸಬೇಕು. ಅದಲ್ಲದಿದ್ದರೆ, ತಮ್ಮ ವರದಿಗಾರರ ಕುರಿತ ರಾಜಕಾರಣಿಗಳ ಹಗುರವಾದ ವರ್ತನೆಗಳನ್ನು ವಾಹಿನಿಗಳ ಅಥವಾ ಪತ್ರಿಕೆಗಳ ಮುಖ್ಯಸ್ಥರುಗಳು ಖಡಾಖಂಡಿತವಾಗಿ ಖಂಡಿಸಿ ಅವರುಗಳಿಗೆ ಬಿಸಿಮುಟ್ಟಿಸಬೇಕು. ಈ ಎರಡನ್ನೂ ಮಾಡಲಾಗದಿದ್ದರೆ, ಮುಂದೆ ಪತ್ರಿಕಾ ಮರ್ಯಾದೆ ಎನ್ನುವುದು ಉಳಿಯುವುದಾದರೂ ಹೇಗೆ? ನಮ್ಮ ನಮ್ಮ ಸಂಸ್ಥೆಯ ಮರ್ಯಾದೆಯನ್ನು ನಾವೇ ಕಾಪಾಡಿಕೊಳ್ಳಲು ಪ್ರಯತ್ನಿಸದಿದ್ದರೆ, ಇನ್ನಾರು ಮಾಡಿಯಾರು ಆ ಕೆಲಸವನ್ನು ಹೇಳಿ? ರಾಜಕಾರಣಿಗಳನ್ನು, ಸಮಾಜವನ್ನು ತಿದ್ದುವ ಜವಾಬ್ದಾರಿಯಿರುವವರೇ ಅವರ ದರ್ಪಕ್ಕೆ ತಮ್ಮ ಕಿರಿಯ ಸಹೋದ್ಯೋಗಿಗಳ ಆತ್ಮಗೌರವವನ್ನು ಬಲಿಕೊಟ್ಟರೆ, ಮುಂದೆ ಆತ್ಮಗೌರವವನ್ನು ಹೊಂದಿರುವ ನಿರ್ಭೀತ ಪತ್ರಕರ್ತನನ್ನು ಸಮಾಜ ನಿರೀಕ್ಷೆ ಮಾಡಲು ಸಾಧ್ಯವಾದರೂ ಉಂಟೇ? ಈ ಮಟ್ಟದ ಸಂವೇದನಾರಾಹಿತ್ಯ ಒಬ್ಬ ಪತ್ರಕರ್ತನಿಗೆ ಅಥವಾ ಮಾಧ್ಯಮ ಸಮೂಹಕ್ಕೆ ಒಪ್ಪುವ ಲಕ್ಷಣವಲ್ಲ.

''ಒಮ್ಮೆ ಪತ್ರಕರ್ತನಾದವನು ಎಂದಿಗೂ ರಾಜಕಾರಣಿಗಳ ಕಾಲಿಗೆ ಬೀಳಬಾರದು'' ಎಂದು ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ಟರು, ಹಿಂದೆ ಪತ್ರಕರ್ತರಾಗಿ ಹೆಸರುಮಾಡಿದ್ದ, ಈಗ ರಾಜಕಾರಣಿಯಾಗಿರುವ ಪ್ರತಾಪ್ ಸಿಂಹ ಅವರಿಗೆ ಒಂದು ವೇದಿಕೆಯಲ್ಲಿ ಕಿವಿಮಾತು ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪತ್ರಿಕಾಧರ್ಮಕ್ಕೆ ಇರುವ ಪಾವಿತ್ರ್ಯ ಅಂಥದ್ದು. ಈ ತರಹದ ಸೂಕ್ಷ್ಮ ಸಂವೇದನೆಗಳನ್ನು ಕಳೆದುಕೊಂಡ ಮೇಲೆ ಆತ ಖಂಡಿತ ಪತ್ರಕರ್ತನಾಗಿ ಉಳಿಯಲಾರ.

ನಾವೆಲ್ಲರೂ ಎಲ್ಲಾದರೂ ಒಂದುಕಡೆ ಕೆಲಸ ಮಾಡುವವರೇ ಆಗಿದ್ದೇವೆ. ಅದು ಕಾರ್ಖಾನೆಯಲ್ಲಾಗಿರಬಹುದು, ಬ್ಯಾಂಕ್‌ನಲ್ಲಾಗಿರಬಹುದು, ಸರಕಾರಿ ಕಚೇರಿಯಲ್ಲಿರಬಹುದು ಅಥವಾ ಮಾಧ್ಯಮಗಳಲ್ಲಾಗಿರಬಹುದು. ಇನ್ನು, ಕೃಷಿ ಕೆಲಸಕ್ಕೆ ಅಥವಾ ಮನೆಗೆಲಸಕ್ಕೆ ಹೋಗುವವರೂ ಇರುತ್ತಾರೆ. ಸಾಮಾನ್ಯವಾಗಿ ಜನರು ಕೆಲಸಕ್ಕೆ ಹೋಗುವುದಕ್ಕೆ ಮುಖ್ಯಕಾರಣವೇನು ಎಂದು ನೋಡುವುದಾದರೆ, ಅದು ಜೀವನ ನಿರ್ವಹಣೆಯೇ ಆಗಿರುತ್ತದೆ. ಹೊಟ್ಟೆಪಾಡು ಎಂಬುದು ಕೆಲಸಕ್ಕೆ ಹೋಗಲು ಮುಖ್ಯ ಪ್ರೇರಣೆಯಾಗಿರುತ್ತದೆಯೇ ಹೊರತು ಇನ್ನೇನಲ್ಲ. ಹಾಗೆ ದಿನಗೂಲಿಯಿಂದ ಹಿಡಿದು ಮನೆಗೆಲಸದವರವರೆಗೆ, ಕೆಲಸದ ಜಾಗದಲ್ಲಿ ಎಲ್ಲರೂ ಬಯಸುವುದು ಮರ್ಯಾದೆಯನ್ನು ಹಾಗೂ ಗೌರವವನ್ನು. ಸಂಬಳ ಸ್ವಲ್ಪ ಹೆಚ್ಚು ಕಡಿಮೆ ಆದರೂ ಹೊಂದಿಕೊಳ್ಳುತ್ತಾರೆ, ಆದರೆ ತಮ್ಮ ಆತ್ಮಗೌರವಕ್ಕೆ ಧಕ್ಕೆ ಬಂದರೆ ಮಾತ್ರ ಬಹುತೇಕವಾಗಿ ಯಾರೂ ಸಹಿಸುವುದಿಲ್ಲ.

ಆದರೆ, ಕಾರ್ಯಸ್ಥಳಗಳಲ್ಲಿ ಕಸಗುಡಿಸುವವರನ್ನು, ಭದ್ರತಾ ಸಿಬ್ಬಂದಿಯನ್ನು ಅಥವಾ ಕಿರಿಯ ಸಹೋದ್ಯೋಗಿಗಳನ್ನು ಉನ್ನತ ಹುದ್ದೆಯಲ್ಲಿರುವವರು ಈಗೀಗ ಸಂಬೋಧಿಸುವುದೇ ಏಕವಚನದಲ್ಲಿ. 'ನಾವು ದೊಡ್ಡವರು, ನೀವು ಸಣ್ಣವರು' ಎನ್ನುವ ಭಾವ ಇಂಥವರದ್ದು. ಸರಕಾರಿ ಕಚೇರಿಗಳಲ್ಲಂತೂ ಈ ಹುದ್ದೆಯಾಧಾರಿತ ಅಹಂಕಾರ ಎನ್ನುವುದು ಹೆಚ್ಚಾಗಿ ನೋಡಲು ಸಿಗುತ್ತದೆ. ಹಾಗೆ ಸಾರ್ವಜನಿಕವಾಗಿ ತಮ್ಮ ಮೇಲಧಿಕಾರಿಯಿಂದ ಅವಮಾನಕ್ಕೀಡಾದವರು ಖಂಡಿತ ಅವರಿಗೆ ಸಹಕಾರಿಯಾಗಿ ಕೆಲಸ ಮಾಡಲಾರರು, ಹಿಂದಿನಿಂದ ಕೆಟ್ಟ ಶಬ್ದಗಳಿಂದ ಮೇಲಧಿಕಾರಿಯನ್ನು ಬೈದುಕೊಳ್ಳದೇ ಇರಲಾರರು. ನಮ್ಮ ಮನೆಗೆಲಸದವರಿಂದ ಹಿಡಿದು, ಕಚೇರಿಯಲ್ಲಿ ಕಸಗುಡಿಸುವವರವರೆಗೆ ಗೌರವದಿಂದ ಬಹುವಚನದಲ್ಲಿ ಸಂಬೋಧಿಸಲು ಶುರುಮಾಡಿ ನೋಡಿ. ಆಶ್ಚರ್ಯಕರ ಸಕಾರಾತ್ಮಕ ಪರಿಣಾಮವನ್ನು ನೀವೇ ನೋಡುತ್ತೀರಿ.

ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ತೋರಿಸಬಹುದಾದ ಕನಿಷ್ಠ ಸೌಜನ್ಯವೆಂದರೆ- ಅವರನ್ನು ಬಹುವಚನದಿಂದ ಸಂಬೋಧಿಸುವುದು. ಹಾಗಾಗಿ, ನಮ್ಮ ಸಂಸ್ಕೃತಿಯಲ್ಲಿ ಮನೆಯಲ್ಲಿಯೂ ತಂದೆ-ತಾಯಿಯರಿಂದ ಹಿಡಿದು ಅತ್ತೆ-ಮಾವಂದಿರವರೆಗೆ ಎಲ್ಲರಿಗೂ ಬಹುವಚನದಿಂದಲೇ ಸಂಬೋಧಿಸುವ ರೂಢಿ ಮೊದಲಿನಿಂದಲೂ ಇದೆ. ಕೆಲವರಂತೂ 'ನಾವು ಅಲ್ಲಿಗೆ ಹೋಗುತ್ತೇವೆ... ನಾವು ಹಾಗೆ ಮಾಡಿದ್ದೇವೆ' ಎಂದು ತಮಗೆ ತಾವೇ 'ನಾವು' ಎಂದು ಬಹುವಚನವನ್ನು ಬಳಸುವುದೂ ಇದೆ. ನಮ್ಮ ಆತ್ಮಕ್ಕೆ ಮೊದಲು ನಾವು ಗೌರವಕೊಡಬೇಕು, ಅದಕ್ಕೆ ಕಿಂಚಿತ್ತೂ ಅಗೌರವವಾಗುವುದನ್ನು ಸಹಿಸಬಾರದು. ಅಂಥ ಸಂದರ್ಭ ಬಂದೊದಗಿದಾಗ ಗಟ್ಟಿಯಾದ ಪ್ರತಿರೋಧವೊಡ್ಡುವುದನ್ನು ಕಲಿಯಬೇಕು. ನಾವು ಕೂಡ ಯಾರಿಗೂ ಏಕವಚನ ಪ್ರಯೋಗಮಾಡಿ ಅಗೌರವ ತೋರಬಾರದು, ನಮ್ಮ ಕುರಿತು ಅನ್ಯರು ಹಾಗೆ ಮಾಡಿದರೆ ಸಹಿಸಿಕೊಳ್ಳಲೂಬಾರದು. ನಮ್ಮ ಮರ್ಯಾದೆಯ ಕುರಿತು ನಮಗೇ ಆಸ್ಥೆಯಿರದಿದ್ದರೆ, ಅನ್ಯರಿಂದ ಅದನ್ನು ನಿರೀಕ್ಷಿಸುವುದಾದರೂ ಹೇಗೆ? ನನ್ನ ಪ್ರಕಾರ, ಆತ್ಮಗೌರವದ ವಿಷಯದಲ್ಲಿ ಹೊಂದಾಣಿಕೆ ಮಾಡಿಕೊಂಡು ಸಾಗುವುದೆಂದರೆ, ಅದು ಬದುಕಿದ್ದೂ ಸತ್ತಂತೆ. ಪರಸ್ಪರರನ್ನು ಗೌರವಪೂರ್ವಕವಾಗಿ ಬಹುವಚನದಲ್ಲಿ ಸಂಬೋಧಿಸುವ ಈ ಒಂದು ಸಣ್ಣ ಬದಲಾವಣೆಯಿಂದ, ಸಮಾಜದಲ್ಲಿ ಸಂಸ್ಕಾರ ಮೂಡುತ್ತದೆ. ಆ ಅರಿವನ್ನು ಮೂಡಿಸುವುದಷ್ಟೇ ಈ ಅಂಕಣಬರಹದ ಆಶಯ.

ಬೀದಿನಾಯಿಗಳು: ನಮ್ಮ ವಿರುದ್ಧ 'ಶೆಡ್-ಯಂತ್ರ' ನಡೀತಿದೆ

ಸಿನಿಗನ್ನಡ

ಸಿನಿಮಾ ಮಂದಿ ಯಾವ ವಿಷಯದಲ್ಲಿ ನಿಜ ಹೇಳ್ತಾರೋ ಗೊತ್ತಿಲ್ಲ. ಆದರೆ ತಮ್ಮ ಮದುವೆ ವಿಷಯದಲ್ಲಿ ಮಾತ್ರ ಕೊನೆಯವರೆಗೂ ಗೌಪ್ಯ ಕಾಪಾಡಿಕೊಳ್ಳೋದ್ರಲ್ಲಿ ಎತ್ತಿದ ಕೈ. ಈಗ ಸದ್ಯಕ್ಕೆ ಆಂಕರ್ ಅನುಶ್ರೀ ಅವರ ಮದುವೆ ಫಿಕ್ಸ್ ಆಗಿದೆ. ಅವರೇ ಈಗ ಎಲ್ಲರಿಗೂ ಮದುವೆ ಆಮಂತ್ರಣ ಪತ್ರ ಕೊಡ್ತಾ ಇದ್ದಾರೆ. ಆದರೆ ಆಮಂತ್ರಣ ಪತ್ರಿಕೆ ತಲುಪಿದ ಹಿರಿಯ ಪತ್ರಕರ್ತರೊಬ್ಬರು ಫೇಸ್‌ಬುಕ್ಕಿನಲ್ಲಿ ಬರೆದುಕೊಂಡಿದ್ದರು. ಒಂದು ವಾರದ ಹಿಂದೆ ಕೇಳಿದ್ದಕ್ಕೆ ಇದೇ ಅನುಶ್ರೀ, ''ಅಯ್ಯೋ ಮದುವೆ ಎಲ್ಲ ಸದ್ಯಕ್ಕಿಲ್ಲ ಸರ್'' ಎಂದಿದ್ದರಂತೆ. ಈಗ ಅವರಿಂದಲೇ ಇವರಿಗೆ ಆಮಂತ್ರಣ ಪತ್ರ ಸಿಕ್ಕಿದೆ. ಯಾಕಿಂಗೆ ಅಂತ ಎಲ್ಲರಿಗೂ ಆಶ್ಚರ್ಯ ಆಗೋದು ಸಹಜ. ಆದರೆ ಅದೇನೋ ಮೊದಲಿನಿಂದಲೂ ಸಿನಿಮಾ ಜನ ಹೀಗೆಯೇ, ಅದರಲ್ಲಿಯೂ ಹುಡುಗಿಯರು ''ನಮಗೆ ಮದುವೆ ಆಗ್ತಿಲ್ಲ ಸ್ವಾಮಿ'' ಅಂತ ಪುಂಗೋದ್ರಲ್ಲಿ ಮೊದಲು.

ತುಂಟರಗಾಳಿ
ಹರಿ ಪರಾಕ್
vveditoped@gmail.com

''ಯಾಕೆ ಬೇಕು, ಯಾರಿಗೆ ಗೊತ್ತು, ಮದುವೆ ಆಗೋ ಹುಡುಗನ ಕಿವಿಯಲ್ಲಿ ಯಾರು ಪುಂಗಿ ಊದಿ ನಮ್ಮ ಲಗ್ನಕ್ಕೆ ವಿಘ್ನ ತರ್ತಾರೋ..?'' ಅನ್ನೋ ಭಯದಲ್ಲೇ ಮದುವೆ ವಿಷಯವನ್ನು ಕೊನೆಯವರೆಗೂ ಮುಚ್ಚಿಡ್ತಾರೆ. ಚಿರಂಜೀವಿ ಸರ್ಜಾ ಅವರನ್ನು ಮದುವೆ ಆದ ಮೇಘನಾ ರಾಜ್ ಕೂಡಾ 'ಇಬ್ಬರೂ ಮದುವೆ ಆಗ್ತಾರೆ' ಅಂತ ಸುದ್ದಿ ಬರೆದಾಗ, ''ಕೆಲಸ ಇಲ್ಲದ ಪತ್ರಕರ್ತರು ಏನೇನೋ ಬರೀತಾರೆ'' ಅಂತ ಇನ್ನಿಲ್ಲದಂತೆ ಮುಲುಗಿದ್ದರು. ಆದರೆ ಕೊನೆಗೆ ಅದೇ ಪತ್ರಕರ್ತರ ಮಾತಿನಂತೆ ಇಬ್ಬರ ಮದುವೆಯೂ ಆಯ್ತು. ಮದುವೆಯ ನಂತರ ಇವರ ಮುಖಕ್ಕೆ ಮೈಕು ಹಿಡಿದು ''ಯಾಕೆ ಅವತ್ತು ಸುಳ್ಳು ಹೇಳಿದ್ರಿ? ಸತ್ಯ ಬರೆದವರ ಬಗ್ಗೆ ಕೊಂಕು ಮಾತಾಡಿದ್ರಿ?'' ಅಂತ ಯಾರೂ ಕೇಳಲ್ಲವಲ್ಲ, ಅದೇ ಇವರಿಗೆ ಧೈರ್ಯ!

ಲೂಸ್ ಟಾಕ್ ▶▶ ಬೀದಿನಾಯಿ

- **ಏನ್ ಸರ್, ಸಾರಿ, ಸರ್ರೋ, ಮೇಡಮ್ಮೋ ಗೊತ್ತಾಗ್ತಿಲ್ಲ, ಹೋಗ್ಲಿ, ಏನ್ ನಿಮ್ಮನ್ನೆಲ್ಲಾ ಶೆಡ್ಡಿಗೆ ಹಾಕ್ತಾರಂತಲ್ಲ?**
- ಏನ್ ಮಾಡೋದು ಸರ್, ಒಟ್ನಲ್ಲಿ ನಮ್ದು ನಾಯಿಪಾಡು ಆಗಿದೆ.
- **ಓಹೋ, ಸರಿ, ಆದ್ರೂ ರೋಡಲ್ಲಿ ಬಿಂದಾಸಾಗಿ ಇದ್ರಿ, ಈಗ ಶೆಡ್ಡಿಗೆ ಹೋಗೋಕೆ ತಯಾರಿದ್ದೀರಾ?**
- ಪಟ್ಟಣಗೆರೆ ಶೆಡ್ ಬಿಟ್ಟು ಇನ್ನೆಲ್ಲಿಗೆ ಕಳಿಸಿದ್ರೂ ಓಕೆ
- **ಆದ್ರೆ ಈ ಪ್ರೊಸೆಸ್ ವಿಳಂಬ ಆಗ್ತಾ ಇದೆಯಲ್ಲ. ಪಾಪ ನಿಮ್ಮ ಭವಿಷ್ಯ ಹೆಂಗೆ?**
- ನಂಗೂ ಗೊತ್ತಿಲ್ಲ. 'ಗಲೀ ಕಾ ಕುತ್ತಾ, ನಾ ರೋಡ್ ಕಾ, ನಾ ಶೆಡ್ ಕಾ' ಅನ್ನೋ ಥರ ಆಗಿದೆ.
- **ಆದ್ರೂ ನಿಮ್ಮ ಹಾವಳಿ ಜಾಸ್ತಿ ಆಗಿದೆ ಅಂತ ಜನ ನಿಮ್ಮ ಮೇಲೆ ಕಂಪ್ಲೇಂಟ್ ಮಾಡಿ ಶೆಡ್ಡಿಗೆ ಹಾಕ್ತಾ ಇದ್ದಾರೆ. ಯಾಕಿಂಗ್ ಮಾಡ್ತೀರಾ ನೀವು?**
- ಅಯ್ಯೋ, ನಾವೇನೂ ಮಾಡಿಲ್ಲ. ಇದು 'ಅರಿ-ಶೆಡ್ ವರ್ಗ'ಗಳನ್ನು ಮೀರಲಾಗದ ಜನರ ಮನಸ್ಥಿತಿ ಅಷ್ಟೇ
- **ಸರಿ, ಈಗ ನಿಮ್ಮನ್ನೆಲ್ಲ ಶೆಡ್ಡಿಗೆ ಹಾಕ್ತಾರೆ ಅಂದ್ರೆ ಸುಮ್ನೆ ಒಪ್ಕೊಂಡು ಹೋಗ್ತೀರಾ?**
- ಮತ್ತಿನ್ನೇನು? ನಮ್ಮ ವಿರುದ್ಧ 'ಶೆಡ್-ಯಂತ್ರ' ಮಾಡ್ತಾ ಇದ್ದಾರೆ ಅಂತ ಸುಪ್ರೀಂ ಕೋರ್ಟಿಗೆ ಹೋಗೋಕಾಗತ್ತಾ?

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಕಬ್ಬಿಣದ ಅದಿರು ಸಿಗುವ ಬಳ್ಳಾರಿಯಲ್ಲಿ ಅಕ್ಷಯ ತೃತೀಯದ ದಿನ ನೆಲ ಅಗೆದರೆ ಅಲ್ಲಿ ಸಿಗುವ ಕಬ್ಬಿಣದ ಅದಿರು ಬಂಗಾರದ ಅದಿರಾಗುತ್ತದೆ ಎಂಬುದು ಸೋಮು ಮತ್ತು ಖೇಮು ಅವರ ನಂಬಿಕೆ. ಹಂಗಾಗಿ ಹಿಂದಿನ ದಿನ ರಾತ್ರಿನೇ ಹೋಗಿ ಮೈನಿಂಗ್ ಏರಿಯಾದಲ್ಲಿ ಬೀಡುಬಿಟ್ಟು ರಾತ್ರಿ 12 ಗಂಟೆಯಿಂದ ನೆಲ ಅಗೆದು ಒಂದಿಷ್ಟು ಅದಿರನ್ನು ಶೇಖರಿಸಿ ಬೆಳಗ್ಗೆ ಅದನ್ನು ಬೆಂಗಳೂರಿಗೆ ಸಾಗಿಸಲು ಕಾದು ಕುಳಿತಿದ್ದರು ಸೋಮು, ಖೇಮು. ಬೆಳಗ್ಗೆ ಅಲ್ಲೇ ಲೋಕಲ್ ಹೆಲಿಕಾಪ್ಟರ್ ಒಂದನ್ನು ಕರೆಸಿ, ಅದಿರನ್ನು ಅದಕ್ಕೆ ಲೋಡ್ ಮಾಡಲು ಆರಂಭಿಸಿದರು. ಹೆಲಿಕಾಪ್ಟರ್ ಪೈಲಟ್ ''ಸರ್, ಇಷ್ಟೊಂದ್ ಭಾರ ಹಾಕಿದರೆ ನಮ್ ಹೆಲಿಕಾಪ್ಟರ್ ತಡ್ಕೊಳ್ಳೋದಿಲ್ಲ'' ಅಂದ. ಅದಕ್ಕೆ ಖೇಮು ''ನೀನು ನಾವ್ ಹೇಳಿದಷ್ಟ್ ಮಾಡು ಸಾಕು, ಲಾಸ್ಟ್ ಇಯರ್ ನಾವು ಇಂಥದ್ದೇ ಹೆಲಿಕಾಪ್ಟರ್‌ನಲ್ಲಿ ಇಷ್ಟೇ ಅದಿರು ಸಾಗಿಸಿದ್ವಿ ಗೊತ್ತಾ, ಆ ಪೈಲಟ್ಟೂ ಹಿಂಗೇ ಹೇಳಿದ, ನಿಮ್ಗೆಲ್ಲಾ ಏನೂ ಗೊತ್ತಾಗಲ್ಲ'' ಎಂದು ದಬಾಯಿಸಿದ. ಸರಿ ಅಂತ ಪೈಲಟ್ ಸುಮ್ಮನಾದ. ಎಲ್ಲ ಹೇರಿಕೊಂಡು ಹೆಲಿಕಾಪ್ಟರ್ ಹೊರಟಿತು. ಆದರೆ ಒಂದೆರಡು ನಿಮಿಷಗಳಲ್ಲೇ ಹೆಲಿಕಾಪ್ಟರ್ ಕ್ರಾಷ್ ಆಗಿ ಜನನಿಬಿಡ ಜಾಗವೊಂದರಲ್ಲಿ ನೆಲಕ್ಕೆ ಅಪ್ಪಳಿಸಿತು. ಅದೃಷ್ಟವಶಾತ್ ಮೂರೂ ಜನ ಬದುಕಿಕೊಂಡರು. ಬಿದ್ದ ಜಾಗದಿಂದ ಸೋಮು ಮೈ ಕೊಡವಿಕೊಂಡು ಮೆಲ್ಲನೆ ಏಳುತ್ತಾ ಕೊಂಚ ಗಾಬರಿಯಿಂದ ಕೇಳಿದ ''ನಾವೆಲ್ಲಿದೀವಿ?''. ಅದಕ್ಕೆ ಖೇಮು ಹೇಳಿದ ''ಗಾಬರಿ ಆಗ್ಬೇಡ, ಈ ಜಾಗ ನಂಗೆ ಎಲ್ಲೋ ನೋಡಿದಂಗೆ ಅನ್ನಿಸ್ತಿದೆ. ಹೋದ್ ವರ್ಷ ಆ ಪೈಲಟ್ ಬ್ಯಾಡ ಬ್ಯಾಡ ಅಂತ ಎಷ್ಟ್ ಹೇಳಿದ್ರೂ ಕೇಳದೇ ಇಷ್ಟೇ ಲೋಡ್ ಹಾಕ್ಕೊಂಡ್ ಹೋಗುವಾಗ ಕ್ರಾಷ್ ಆಗಿ ಬಿದ್ದಿದ್ವಲ್ಲ, ಮೋಸ್ಟ್ಲೀ ಅದೇ ಜಾಗದ ಹತ್ರನೇ ಎಲ್ಲೋ ಇದೀವಿ ಅನ್ಸುತ್ತೆ''.

ಲೈನ್‌ಮ್ಯಾನ್

- **ನಿಜವಾದ ರಸಿಕ ಅಂದ್ರೆ ಯಾರು?**
- ಸನ್ನಿ ಲಿಯೋನ್ ಹಾಡುಗಳನ್ನು ಬರೀ ಕೇಳಿಯೂ ಖುಷಿ ಪಡೋನು
- **ಎಲೆಕ್ಷನ್ ಹಿಂದಿನ ದಿನ ಹಾಕಿಸುವ ಬಿರಿಯಾನಿ ಊಟ**
- 'ಓಟ್' ಮೀಲ್ಸ್
- **ಚಳಿ ಕಚಗುಳಿ**
- ಸೋಮು: ಈ ಚಳಿಗೆ ನನ್ ಮೊಬೈಲ್ ಕೂಡಾ ನಡುಗ್ತಿದೆ
- ಖೇಮು: ಓವರ್‌ಆಕ್ಟಿಂಗ್ ಮಾಡ್ಬೇಡ, ಮುಚ್ಕೊಂಡ್ ವೈಬ್ರೇಷನ್ ಮೋಡ್ ಆಫ್ ಮಾಡು
- **ಕಲಿಯುಗದ ಜ್ಞಾನೋದಯ**
- ಅರ್ಧ ರಾತ್ರಿಯಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟು ಹೋದವನು: ಬುದ್ಧ
- ಚಾನ್ಸ್ ಸಿಕ್ಕರೂ ಹೋಗದವನು: ಬುದ್ದು
- **ಮತ್ತೆ ಭಾರಿ ಮಳೆ, ಮುಂದುವರಿಯಲಿದೆ ಅನಾಹುತ: ಕೋಡಿ ಮಠದ ಸ್ವಾಮಿ**
- ಕೋಡಿ ಮಠ ಅಲ್ವಾ, ಅದಕ್ಕೇ, ಎಲ್ಲೆಲ್ಲಿ ಮಳೆ ಬಂದು ಕೆರೆ ಕೋಡಿ ಬೀಳುತ್ತೆ ಅಂತ ಮೊದ್ಲೇ ಹೇಳ್ತಾರೆ.
- **ಎಟಿಎಂಗೆ ಅಷ್ಟೇ ಅಲ್ಲ, ಚೆಕ್ ಬುಕ್, ಪಾಸ್‌ಬುಕ್, ಮೊಬೈಲ್ ನಂಬರ್ ಬದಲಿಸೋಕೂ ಹಣ ಕೊಡಬೇಕು**
- ಬ್ಯಾಂಕ್ ದರೋಡೆ ಕೇಳಿದ್ವಿ. ಇದು ಬ್ಯಾಂಕ್‌ನಿಂದಲೇ ದರೋಡೆ
- **ಫೇಸ್‌ಬುಕ್ ಪ್ರಾಬ್ಲಂ**
- 'ಸ್ವಲ್ಪ ಕಷ್ಟ ಇದೆ ದುಡ್ಡು ಬೇಕಿತ್ತು ಕೊಡ್ತೀರಾ?' ಅಂತ ಮೆಸೇಜ್ ಮಾಡಿದೆ. 'ರೀ, ನಿಮ್ಮ ಹೆಸರಲ್ಲಿ ಫೇಕ್ ಅಕೌಂಟ್ ಮಾಡಿದ್ದಾರೆ' ಅಂತ ರಿಪ್ಲೈ ಮಾಡಿದ್ರು.
- **ಚರ್ಚ್‌ಗಳಲ್ಲಿ ಕೆಲವರು ಮೈಮೇಲೆ ಕೈ ಇಟ್ಟು ಕಿಡ್ನಿ ಸ್ಟೋನ್ ಕರಗಿಸ್ತಾರಂತೆ.**
- ಇದನ್ನು ನೋಡಿನೇ ಲಂಕೇಶ್ ಅವ್ರು 'ಕಲ್ಲು ಕರಗುವ ಸಮಯ' ಪುಸ್ತಕ ಬರೆದಿದ್ದು ಅನುತ್ತೆ.
- **ಪೊಲೀಸರು ಅರೆಸ್ಟ್ ಮಾಡಿದ ತಕ್ಷಣ ಬರೋ ಎದೆನೋವು**
- ಕಾರ್ಡಿಯಾಕ್ ಅರೆಸ್ಟ್
- **ಶಾಲಾ-ಕಾಲೇಜು ದಿನಗಳನ್ನು ಏನೆನ್ನಬಹುದು?**
- 'ಕಲಿ'ಯುಗ

ಇದು ಸು ಫ್ರಮ್ ಕೋ ಎಂಬ ಧರ್ಮಸ್ಥಳ ಪ್ರಹಸನ

ಜಗನ್ನಾಟಕ
ಜನಮೇಜಯ ಉಮರ್ಜಿ
vveditoped@gmail.com

ಭಾರತೀಯ ಸಾಮಾಜಿಕ ಮಾಧ್ಯಮದ ರಿಯಾಲಿಟಿ ಶೋಗಳಿಗೆ ಹೊಸ ಎಂಟ್ರಿ ಬಂದಿದೆ. ಅದುವೇ 'ಸು ಫ್ರಮ್ ಕೋ'. ನಾಯಕಿ- ಸುಜಾತಾ ಭಟ್. ವೇದಿಕೆ- ಧರ್ಮಸ್ಥಳ ವಿವಾದ. ನಿರ್ದೇಶಕರು- ಒಮ್ಮೊಮ್ಮೆ ಸಾರ್ವಜನಿಕವಾಗಿ, ಬಹಳ ಸಾರಿ ಗುಪ್ತವಾಗಿ ಸಭೆ ನಡೆಸುವ ಅಜ್ಞಾತ ಎಡಪಂಥೀಯ ಮೀಟಿಂಗ್ ಮಾಸ್ಟರ್‌ಗಳು ಹಾಗೂ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಹುಸಿ ಹೋರಾಟ ಮಾಡುತ್ತಿರುವವರು. ಪ್ರೇಕ್ಷಕರು- ಮಾಧ್ಯಮ ಮತ್ತು ದೇಶದ ಜನತೆ. ಸಾಕ್ಷಿ ಇಲ್ಲ ಪುರಾವೆ ಇಲ್ಲ, ಆದರೆ ಪ್ರಚಾರ ಅಪಾರ. ''ನಾನು ನೂರಾರು ಹೆಣ್ಣುಮಕ್ಕಳ ಶವಗಳನ್ನು ಧರ್ಮಸ್ಥಳದ ಸುತ್ತಮುತ್ತ ಹೂತಿದ್ದೇನೆ'' ಎಂದು ಬುರುಡೆ ಹಿಡಕೊಂಡು ಒಬ್ಬ ಬಂದ. ಆತನಿಗೆ ಹೆಸರಿಲ್ಲ, ಮುಸುಕುಧಾರಿ. ಆತ ತೋರಿಸಿದಲ್ಲೆಲ್ಲಾ ಭೂಮಿ ಅಗೆಯಲಾಯಿತು. ಗುಡ್ಡ ಅಗೆದ ಮೇಲೂ ಹೇಳಿಕೊಳ್ಳುವಂಥದು ಇಲ್ಲಿಯವರೆಗೆ ಏನೂ ಸಿಕ್ಕಿಲ್ಲ. ಇದಕ್ಕಿಂತ ಮೊದಲು ಯುಟ್ಯೂಬಿನಲ್ಲಿ ಪ್ರೊಮೋ ವಿಡಿಯೋಗಳ ಪ್ರವಾಹ ಬಂತು. ಅವುಗಳಲ್ಲಿ ಕಲ್ಕಿಯ ಬುದ್ಧಿಯೂ, ಕೃತಕ ಬುದ್ಧಿಮತ್ತೆಯೂ ಇತ್ತು. ಮಾಧ್ಯಮಗಳಲ್ಲಿ ಭೂಮಿ ಬಾನು ಒಂದಾಗುವಂತೆ ಸದ್ದಾಯಿತು. ಲಕ್ಷಾಂತರ ಜನ ನೋಡಿದರು.

'ಬುರುಡೆ ರಹಸ್ಯ ಒಂದು ಬುರುಡೆ' ಎನ್ನುವ ಸಾರ್ವಜನಿಕ ಅಭಿಪ್ರಾಯ ರೂಪಿತವಾಗುವ ಹೊತ್ತಿಗೆ ಸುಜಾತಾ ಭಟ್ ಬಂದರು. ಇದು ಧಾರಾವಾಹಿಯ ಮೂಲಕಥೆಯಲ್ಲ, ಸೇರಿಕೊಂಡ ಅಡ್ಡಕಥೆ. ಇದು ನಿಜವಾಗಿಯೂ ಸಹಜವೇ? ಅಥವಾ ಯೋಜಿತವೇ? ಪ್ರೇಕ್ಷಕರ ನಾಡಿಮಿಡಿತ ನೋಡಿ ಸೇರಿಸಿಕೊಂಡಿದ್ದೇ? ಇಂಥ ಸಂದರ್ಭಗಳಲ್ಲಿ 'ವ್ಯಕ್ತಿಗತ ಧ್ವನಿ' ಕೊಟ್ಟರೆ ಕಥೆ ಹೆಚ್ಚು ಭಾವನಾತ್ಮಕವಾಗಿ ಮಾರಾಟವಾಗುತ್ತದೆ ಎಂಬುದು ಜೀವಪರ ಕಥೆಗಾರರ ವಿಚಾರ. ''ಕೋಲ್ಕೊತ್ತಾದ ಸಿಬಿಐನಲ್ಲಿ ಸ್ಟೆನೋ ಆಗಿದ್ದೆ ಎಂದು ಹೇಳಿಕೊಂಡು, ಮಣಿಪಾಲದಲ್ಲಿ ಮೆಡಿಕಲ್ ಕಲಿಯಲು ಬಂದ ಮಗಳು, ಧರ್ಮಸ್ಥಳದಲ್ಲಿ ಕಾಣೆಯಾಗಿದ್ದಾಳೆ. ನಾನು ನ್ಯಾಯ ಕೇಳಿದೆ ಸಿಕ್ಕಿಲ್ಲ'' ಎಂದರು. ''ಧರ್ಮಸ್ಥಳದಲ್ಲಿ ನನ್ನ ತಲೆಗೆ ಹೊಡೆತ ಬಿತ್ತು. ಎಚ್ಚರವಾದಾಗ ಬೆಂಗಳೂರಿನಲ್ಲಿದ್ದೆ. ನನಗೆ ನನ್ನ ಮಗಳ ಅಸ್ಥಿ ಹುಡುಕಿ ಕೊಡಿ ನಾನು ಶಾಸ್ತ್ರೋಕ್ತವಾಗಿ ಅಂತ್ಯಸಂಸ್ಕಾರ ಮಾಡುತ್ತೇನೆ'' ಎಂದು ದೂರು ಕೊಟ್ಟರು.

ಆ ಮಹಿಳೆಗೆ ಅಷ್ಟೇ ಅಲ್ಲ, ನ್ಯಾಯ ಕೇಳಿಕೊಂಡು ಬಂದ ಎಲ್ಲರಿಗೂ ನ್ಯಾಯ ಸಿಗಬೇಕು. ಅಣ್ಣಪ್ಪ ಸ್ವಾಮಿಯೇ ಧರ್ಮದೇವತೆ. ಶತಮಾನಗಳ ಹಿಂದೆ ವೈಷ್ಣವ ವಾದಿರಾಜರು ಪ್ರತಿಷ್ಠಾಪಿಸಿದ, ಜೈನ ಹೆಗ್ಗಡೆಯವರು ನಡೆಸಿಕೊಂಡು ಹೋಗುವ ರಾಜ್ಯದ ಜನಪ್ರಿಯ ಶೈವಕ್ಷೇತ್ರ. ಸೇವೆ, ಧರ್ಮ ಮತ್ತು ಸಾಮರಸ್ಯದ ಪ್ರತೀಕವಾಗಿ ನಿಂತಿರುವ ಧರ್ಮಸ್ಥಳವನ್ನು ಎಡಪಂಥೀಯರು ಗುರಿಯಾಗಿಸಿಕೊಳ್ಳುವುದರಲ್ಲಿ ಕಾರಣವಿದೆ. ಜಾತಿ, ವರ್ಗ, ಲಿಂಗ ಆಧರಿಸಿ ಹಿಂದೂ ಸಮಾಜವನ್ನು ವಿಭಜಿಸುವ ಶಕ್ತಿಗಳಿಗೆ ಶಬರಿಮಲೆ, ಧರ್ಮಸ್ಥಳಗಳಂಥ ಕ್ಷೇತ್ರಗಳು ಸವಾಲಾಗಿವೆ. ಲಕ್ಷಾಂತರ ಜನರು ಪ್ರತಿ ವರ್ಷ ಇಲ್ಲಿ ಸೇರುತ್ತಾರೆ. ಬಂದವರು ಜಾತಿ ಭೇದ ಮರೆತು ಒಂದಾಗುತ್ತಾರೆ. ಸ್ತ್ರೀಸಹಾಯ ಗುಂಪುಗಳು ಹಳ್ಳಿ ಹಳ್ಳಿ ತಲುಪಿ ಮಹಿಳೆಯರಿಗೆ ಸಹಾಯಕವಾಗಿವೆ. ನೂರಾರು ಶಿಕ್ಷಣ ಸಂಸ್ಥೆಗಳು ಜ್ಞಾನದ ಜ್ಯೋತಿ ಹೊತ್ತಿಸಿವೆ. ಸಮಾಜವಾದಿ ಸರಕಾರವು 'ಶಕ್ತಿ' ಯೋಜನೆಯನ್ನು ಗ್ಯಾರಂಟಿ ಯೋಜನೆ ಮಾಡಿದ್ದೇ ತಡ, ನಾಡಿನ ಮಹಿಳೆಯರು ಧಾವಿಸಿದ್ದೇ ಧರ್ಮಸ್ಥಳ ಪುಣ್ಯಕ್ಷೇತ್ರ ದರ್ಶನಕ್ಕೆ. ಹೀಗಾಗಿ ಎಡಪಂಥೀಯರ ಅವಕಾಶಗಳನ್ನು ಇದು ಶೂನ್ಯ ಮಾಡುತ್ತಿದೆ. ಧರ್ಮಸ್ಥಳದಲ್ಲಿ ಭಕ್ತಿ ಮತ್ತು ಸೇವೆಯ ಮೂಲಕ ಅಚಲವಾಗಿ ನಿಂತಿರುವ ಹಿಂದೂ ಧಾರ್ಮಿಕ ಪ್ರತಿಷ್ಠೆಯನ್ನು ಕುಂದಿಸಿ, ಗೊಂದಲ ಎಬ್ಬಿಸಿ ನಂಬಿಕೆಗೆ ಘಾಸಿ ಮಾಡುವ ದುರಾಲೋಚನೆಗೆ ಈ ಪ್ರಕರಣ ಸಾಕ್ಷಿಯಾಗಿದೆ.

ಈ ನಡುವೆ ಮತ್ತೆ ವಿಡಿಯೋ ಮಾಡಲು ಗ್ರಾಮಕ್ಕೆ ಬಂದ ಯುಟ್ಯೂಬರ್ ಅನ್ನು ಸ್ಥಳೀಯರು ತರಾಟೆಗೆ ತೆಗೆದುಕೊಂಡಿದ್ದನ್ನು ಸಿಂಪತಿಯಾಗಿ ಪರಿವರ್ತಿಸಿಕೊಳ್ಳುವ ಸನ್ನಿವೇಶವೂ ಎದುರಾಯಿತು, ಆದರೆ ಟಿಆರ್‌ಪಿ ಗಿಟ್ಟಲಿಲ್ಲ. ಹೀಗಾಗಿ ಸುಜಾತ ಭಟ್ಟರ ಹೇಳಿಕೆಗಳು, ಅದರ ಹಿನ್ನೆಲೆ ಹುಡುಕುತ್ತಾ ಹೊರಡುವ ಕಥೆಗಳು ಮಾಧ್ಯಮದಲ್ಲಿ ಮುನ್ನೆಲೆಗೆ ಬಂದವು. ಅವರು ಭೂತಲವನ್ನು ಸ್ಪರ್ಶಿಸಿ ನಮಸ್ಕಾರ ಮಾಡಿದ ದೃಶ್ಯ ಕಣ್ಣಿಗೆ ಕಟ್ಟುವಂತಿತ್ತು. ಆಕೆಯ ನೋವು ನಿಜವೇ ಆಗಿದ್ದರೆ ಅವರಿಗೆ ವಿಶೇಷ ತನಿಖಾ ದಳವಿದೆ. ಆದರೆ ಅವರು ಹೇಳುವ ಕಥೆಗಳು ಅವು ಪಡೆದುಕೊಳ್ಳುವ ತಿರುವುಗಳು ಒಮ್ಮೊಮ್ಮೆ ಹಿಂದಕ್ಕೆ ಹೋಗುವುದರ ಜತೆಗೆ ರಹಸ್ಯಕಾರಿ ಮತ್ತು ರೋಚಕವಾಗಿವೆ. ಅವರ ಹೇಳಿಕೆಗಳು WhatsApp forward ಗಳಂತೆ, ಪ್ರತಿ ಗಂಟೆಗೆ ಹೊಸದೊಂದು version. ಬೆಳಗ್ಗೆ- ''ನನಗೆ ಯಾರ ಮೇಲೆಯೂ ವೈಯಕ್ತಿಕ ದ್ವೇಷವಿಲ್ಲ''. ಮಧ್ಯಾಹ್ನ- ''ಇದು ಜನರ ಹಕ್ಕಿನ ಹೋರಾಟ''. ಸಂಜೆ- ''ನನಗೆ ಬೆದರಿಕೆ ಬಂದಿದೆ''. ರಾತ್ರಿ- ''ನನ್ನ ಮಾತುಗಳನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ''. ಒಂದೇ ದಿನದಲ್ಲಿ ನಾಲ್ಕು ಹೇಳಿಕೆಗಳನ್ನು ಬದಲಿಸುವುದನ್ನು ನೋಡಿದರೆ ಯಾವ ವೆಬ್‌ಸೀರೀಸ್‌ಗೂ ಕಮ್ಮಿ ಇಲ್ಲ. ವೀಕ್ಷಕರಿಗೆ ಯಾವ ಭಾವನೆ ಬೇಕೋ ಅದಕ್ಕೆ ಅನುಗುಣವಾಗಿ ಬದಲಾವಣೆ. ಒಮ್ಮೆ ಧೈರ್ಯಶಾಲಿ ಕ್ರಾಂತಿಕಾರಿಣಿ, ಇನ್ನೊಮ್ಮೆ ವ್ಯವಸ್ಥೆಯ ಬಲಿಪಶು, ಮತ್ತೊಮ್ಮೆ ಶ್ರೀಸಾಮಾನ್ಯೆ. ಹೇಳಿಕೆ ಬದಲಾದರೂ ಕಾನ್ಫಿಡೆನ್ಸ್‌ನಲ್ಲಿ ಬದಲಾವಣೆಯಿಲ್ಲ. ನಿರ್ದೇಶಕರ ಕಲ್ಪನೆಯಂತೆ ನಿರ್ವಿಕಾರವಾಗಿ ಎಲ್ಲವೂ. ಇದು ಚಟುವಟಿಕೆಯೇ ಅಥವಾ ಮಾಧ್ಯಮ ತಾಲೀಮೇ ಎಂದು ಸಂಶಯ ಮೂಡುತ್ತದೆ.

ಮದುವೆಯ ಕುರಿತಾದ ಸುಜಾತಾ ಅವರ ಮಾತುಗಳೇ ಇನ್ನೊಂದು ಧಾರಾವಾಹಿಯಾಗಬಲ್ಲದು. ಒಂದು ಸಂದರ್ಶನದಲ್ಲಿ ''ಮದುವೆ ಶುದ್ಧ ವೈಯಕ್ತಿಕ'' ಎಂದರೆ, ಇನ್ನೊಂದರಲ್ಲಿ ''ಇದು ಸಮಾಜದ ಪ್ರತಿಬಿಂಬ'' ಎಂದರು. ಜನರಿಗೆ ವೈಯಕ್ತಿಕ ಬದುಕಿನ ವಿವರ ಬೇಕು, ಮಾಧ್ಯಮಗಳಿಗೆ ಸಾಮಾಜಿಕ ಚರ್ಚೆ ಬೇಕು. ಸುಜಾತಾ ಎರಡನ್ನೂ ಒಟ್ಟಿಗೆ ನಿಭಾಯಿಸಿದ್ದಾರೆ. ಹೀಗಾಗಿ ಇವರು ಸಂಚಿನ ಭಾಗವಾ ಅಥವಾ ವ್ಯವಸ್ಥೆಯ ಬಲಿಪಶುವಾ? ಅನ್ನೋ ಗೊಂದಲ ಪ್ರೇಕ್ಷಕರಿಗೆ ಇನ್ನೂ ಬಗೆಹರಿದಿಲ್ಲ. ಅನನ್ಯಾ ಭಟ್ ಬಗ್ಗೆ ಯಾವ ದಾಖಲೆಗಳೂ ಸಾಕ್ಷಿಗಳೂ ಸಿಕ್ಕಿಲ್ಲ. ಈ ಪ್ರಹಸನದಲ್ಲಿ ನೀಡಿದ ಅನನ್ಯಾ ಭಟ್ ಅವರ ಭಾವಚಿತ್ರ ಇನ್ಯಾರಿಗೋ ಹೋಲಿಕೆ ಆಯಿತು ಎಂಬ ಸುದ್ದಿಗಳು ಬರುತ್ತಿವೆ. ಈಕೆಯ ಪ್ರವೇಶವೂ ಒಂದು ಕಥಾತಂತ್ರವೆನಿಸುತ್ತದೆ. ಈ ಪಾತ್ರವೇ ಇಡಿ ಧಾರಾವಾಹಿಯಲ್ಲಿ ನಿರ್ದೇಶಕರಿಗೆ ಒಂದಿಷ್ಟು ಕೈ ಹಿಡಿದಿದೆ. ಒಮ್ಮೆ ವಿಡಿಯೋದಲ್ಲಿ ತಪ್ಪೊಪ್ಪಿಗೆ ಇನ್ನೊಮ್ಮೆ ಅದರ ನಿರಾಕರಣೆ, ಒಟ್ಟಿನಲ್ಲಿ ಸುಜಾತಾ ಅವರದು 'ಧಡಂ ಧುಡಕಿ' ಆಟವೆನಿಸುತ್ತದೆ.

ವಿಶೇಷ ತನಿಖಾ ತಂಡವಿದೆ, ನ್ಯಾಯಾಲಯವಿದೆ; ಸೋಕ್ಷವೋ ಮೋಕ್ಷವೋ ಒಂದಾಗುತ್ತದೆ. ಅದನ್ನು ನಾವು ನಿರ್ಣಯಿಸುವುದು ತಪ್ಪಾಗುತ್ತದೆ. ಆದರೆ ಇದರ ಹಿಂದಿರುವ ಕಾಣದ ಕೈಗಳ ಪತ್ತೆ ತನಿಖೆಯ ವ್ಯಾಪ್ತಿಗೆ ಬರುವುದಿಲ್ಲ. ಕಾಣದ ಕೈಗಳ ಉದ್ದೇಶವು ಹಿಂದೂ ಧಾರ್ಮಿಕ ಕೇಂದ್ರದ ಹೆಸರು ಕೆಡಿಸುವುದೇ ಆಗಿದೆ. ಇದರ ಹಿಂದೆ ತಥಾಕಥಿತ ಜಾತ್ಯತೀತ ಸೋಗಲಾಡಿಗಳು ಹಾಗೂ ಖತರ್‌ನಾಕ್ ಕಮ್ಯುನಿಸ್ಟ್ ಗುಂಪುಗಳಿವೆ ಎಂಬ ಸುದ್ದಿ ಹರಿದಾಡುತ್ತಿದೆ. ಪ್ರಕರಣ ಒಂದು ಹಂತಕ್ಕೆ ಬಂದ ನಂತರ ಅವರು ಸಭೆ ಸೇರಿರುವುದು ಇದಕ್ಕೆ ಪುಷ್ಟಿ ನೀಡುತ್ತದೆ. ಇದರ ನಡುವೆ ''ದಕ್ಷಿಣ ಕನ್ನಡದ ಮಾಜಿ ಜಿಲ್ಲಾಧಿಕಾರಿ ಮತ್ತು ಪ್ರಸ್ತುತ ತಮಿಳುನಾಡಿನ ಸಂಸದರೊಬ್ಬರು ಇದರ ಹಿಂದಿದ್ದಾರೆ, ಅವರೇ ಸರಕಾರಕ್ಕೆ ಎಲ್ಲಿಂದ ಹೇಳಿಸಬೇಕೋ ಅಲ್ಲಿಂದ ಹೇಳಿಸಿದ್ದಾರೆ'' ಎಂದು ಜನಾರ್ದನ ರೆಡ್ಡಿಯವರು ಹೇಳಿರುವುದು ಮತ್ತು ರಾಜ್ಯದ ಉಪಮುಖ್ಯಮಂತ್ರಿಗಳು ''ಸಂಚು ಯಾರು ಮಾಡಿದ್ದಾರೆ ಮತ್ತು ಅವರನ್ನು ಹೇಗೆ ಬಲಿಹಾಕುವುದು ನಮಗೆ ಗೊತ್ತು'' ಎಂದು ಸದನದಲ್ಲೇ ಹೇಳಿದ್ದು, ಈ ಎರಡೂ ಹೇಳಿಕೆಗಳು ಅತಿ ಮಹತ್ವ ಪಡೆದುಕೊಂಡಿರುವುದಷ್ಟೇ ಅಲ್ಲದೆ ಸಾರ್ವಜನಿಕ ವಲಯದಲ್ಲಿ ಸಂಚಲನ ಮೂಡಿಸಿವೆ.

ವಿಶೇಷ ತನಿಖಾ ದಳದ ಮುಖ್ಯಸ್ಥರು ಯಾರಿರಬೇಕು ಎಂಬಲ್ಲಿಯವರೆಗೂ ಪ್ರಭಾವ ಬೀರಿದ ತಮಗೆ ಹಿನ್ನಡೆ ಹೇಗಾಯಿತು? ಇಲ್ಲಿಯವರೆಗೆ ಆದ ಬೆಳವಣಿಗೆಗಳು ಏನು? ಮುಂದಿನ ದಾರಿ ಏನು? ಈ ಎಲ್ಲ ವಿಚಾರಗಳಿಗೆ ಸಂಬಂಧಿಸಿದಂತೆ ಬೆಂಗಳೂರಿನ ಸಭೆಯಲ್ಲಿ ಚರ್ಚೆ ನಡೆದಿರಬಹುದು. ಹಿಂದೂ ಧಾರ್ಮಿಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಇವರು ನಡೆಸಿದ ಆಟ ಇದು ಎಂಬುದು ಯಾರಿಗಾದರೂ ಸಂಶಯ ತರುತ್ತದೆ. ಅನುಮಾನ ಹುಟ್ಟಿಸುವುದು, ನೈತಿಕತೆಯ ಕಗ್ಗೊಲೆ ಎನ್ನುವುದು, ಅದಕ್ಕೆ ಸಮಾಜೋ-ರಾಜಕೀಯದ ದಿಕ್ಕು ಕೊಡುವುದು, ದೇಶಿ ಮತ್ತು ವಿದೇಶಿ ಮಾಧ್ಯಮಗಳನ್ನು ಬಳಸಿಕೊಂಡು ದೊಡ್ಡ ಸುದ್ದಿ ಮಾಡುವುದು, ಬಿಟ್ಟೂ ಬಿಡದೆ ಪ್ರಚಾರ ಮಾಡುವುದು ಇದೆಲ್ಲಾ ಹಳೆಯ 'ಗೊಬೆಲ್ಸ್ ಕಾರ್ಯತಂತ್ರ'. ಇಲ್ಲಿಯೂ ಹಾಗೇ ಆಗಿದೆ. ಸಂದರ್ಶನ, ಛಾಯಾಚಿತ್ರ, ವಿಡಿಯೋ, ಟ್ವೀಟ್ ಹೀಗೆ ಪ್ರಚಾರಕ್ಕೆ ಬೇಕಾದ ಸರಕೆಲ್ಲ ಒಂದೇ ದಿನದಲ್ಲಿ ಲಭ್ಯ.

ಧಾರಾವಾಹಿ ಇಲ್ಲಿಗೇ ಮುಗಿದಿಲ್ಲ. ಇಂದು ಅನ್ಯಾಯ, ನಾಳೆ ಬೆದರಿಕೆ, ನಾಡಿದ್ದು ಹೊಸ ದಾವೆ- ಇದು ಮುಂದುವರಿಯುತ್ತದೆ. ಜನರು ಮತ್ತು ಮಾಧ್ಯಮಗಳು ಮೂಕಪ್ರೇಕ್ಷಕರು ಮಾತ್ರ. ಇದು ಸತ್ಯಕ್ಕಾಗಿ ನಡೆಯುತ್ತಿರುವ ಹೋರಾಟವಲ್ಲ, ಬದಲಾಗಿ ಸೂಕ್ಷ್ಮವಾಗಿ ರೂಪಿಸಿದ ತಂತ್ರಗಳ ಆಟ. ಸಮಾಧಿಯ ಯಾವುದೇ ಪುರಾವೆ ಸಿಕ್ಕಿಲ್ಲ, ಕಳೇಬರಗಳು ಸಿಕ್ಕಿಲ್ಲ. ಆದರೆ ಪ್ರಚಾರದ ಅಲೆ ಗಗನಕ್ಕೇರಿದೆ. ಮುಖವಾಡ ಧರಿಸಿದ ಅನಾಮಧೇಯ ವ್ಯಕ್ತಿ, ಅದನ್ನು ರಾಷ್ಟ್ರೀಯ- ಅಂತಾರಾಷ್ಟ್ರೀಯ ಮಟ್ಟಕ್ಕೆ ಎತ್ತಿಹಿಡಿದ ಮಾಧ್ಯಮಗಳು, ಕೈಕೊಟ್ಟ ಯುಟ್ಯೂಬರ್ ಸಿಂಪತಿ, ನಡುವೆ ಬಂದ ಸುಜಾತಾ ಭಟ್ ಇವೆಲ್ಲ ಸೇರಿ ಒಂದೇ ಜಾಡಿಗೆ ಬಿಗಿದ ಕೃತಕ ಕಥಾವಸ್ತುವನ್ನು ಕಟ್ಟಿಕೊಟ್ಟಿವೆ. ಶತಮಾನಗಳಿಂದ ಧರ್ಮ, ಸೇವೆ, ಸಾಮರಸ್ಯ ಮತ್ತು ಸಮಾಜಮುಖಿ ಕಾರ್ಯಗಳ ಪ್ರತಿರೂಪವಾಗಿ ನಿಂತಿರುವ ಧರ್ಮಸ್ಥಳವನ್ನು ಕುಂದಿಸಲು ತನ್ಮೂಲಕ ಹಿಂದೂ ಶಕ್ತಿಕೇಂದ್ರವನ್ನು ಶಿಥಿಲಗೊಳಿಸಲು ಇಂಥ ಸುಳ್ಳುಪ್ರಚಾರ ಅವಶ್ಯಕವೆಂದು ಎಡಪಂಥೀಯ-ವೈಮನಸ್ಯ ಶಕ್ತಿಗಳು ಕಂಡುಕೊಂಡಿರುವುದೇ ಇದರ ನಿಜಸ್ವರೂಪ. ಸುಳ್ಳಿನ ಪ್ರಚಾರ ಎಷ್ಟೇ ಗಟ್ಟಿಯಾಗಿದ್ದರೂ, ಸತ್ಯದ ಬಲವೇ ಶಾಶ್ವತ. ಆ ಸತ್ಯವೇ ಧರ್ಮವನ್ನು ರಕ್ಷಿಸುತ್ತದೆ...

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)
(ಸೂಚನೆ: ಅನಿವಾರ್ಯ ಕಾರಣಗಳಿಂದ ಇಂದು 'ರಸದೌತಣ' ಅಂಕಣ ಪ್ರಕಟವಾಗಿಲ್ಲ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:222

ಸಮಾಚಾರ ಸಣ್ಣದಲ್ಲ

ರಿಕ್ಷಾ-ಟ್ರಕ್ ಡಿಕ್ಕಿ: 7 ಮಹಿಳೆ ಸೇರಿ 8 ಸಾವು

ಪಟನಾ: ಬಿಹಾರದ ಷಹಜಹಾನ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯ ದನಿಯಾವಾನ್-ಹಿಲ್ಸಾ ರಸ್ತೆಯಲ್ಲಿ ಶನಿವಾರ ಬೆಳಗ್ಗೆ 6.45ರಲ್ಲಿ ಆಟೋರಿಕ್ಷಾ ಮತ್ತು ಟ್ರಕ್ ನಡುವೆ ಮುಖಾಮುಖಿ ಡಿಕ್ಕಿಯಾಗಿ, 7 ಮಹಿಳೆಯರು ಸೇರಿದಂತೆ ಒಟ್ಟು 8 ಮಂದಿ ಸಾವಿಗೀಡಾಗಿದ್ದಾರೆ. ನಾಲ್ವರು ಗಾಯಗೊಂಡಿದ್ದು, ಅವರನ್ನು ಪಟನಾ ವೈದ್ಯಕೀಯ ಕಾಲೇಜು-ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತ 8 ಜನರೂ ನಳಂದ ಜಿಲ್ಲೆಯ ಹಿಲ್ಸಾ ಪೊಲೀಸ್ ಠಾಣೆ ವ್ಯಾಪ್ತಿಯ ರೆಡ್ಡಿ ಮಾಲಾಮಾ ಗ್ರಾಮದವರು. ತ್ರಿವೇಣಿ ಸಂಗಮದ ಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡಲು ಫತುಹಾಗೆ ತೆರಳುತ್ತಿದ್ದಾಗ ಅಪಘಾತವಾಗಿದೆ ಎಂದು ಪೊಲೀಸರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಅಮೆರಿಕಕ್ಕೆ ಭಾರತ ಅಂಚೆ ಸೇವೆ ಸ್ಥಗಿತ

ದೆಹಲಿ: ಭಾರತದ ಸರಕುಗಳಿಗೆ ಶೇ.50ರವರೆಗೂ ಪ್ರತಿಸುಂಕ ವಿಧಿಸಿ, ಚೀನಾಕ್ಕೆ ಕಡಿಮೆ ಸುಂಕ ವಿಧಿಸುವ ಮೂಲಕ ಭಾರತ ವಿರೋಧಿ ನಿಲುವು ತಳೆದಿರುವ ಅಮೆರಿಕ್ಕೆ ಭಾರತೀಯ ಅಂಚೆ ಇಲಾಖೆ ತಾತ್ಕಾಲಿಕವಾಗಿ ಅಂಚೆ ಸೇವೆಗಳನ್ನು ಸ್ಥಗಿತ ಗೊಳಿಸು ವುದಾಗಿ ಶನಿವಾರ ಹೇಳಿದೆ. ದಾಖಲೆಗಳು, ಪತ್ರಗಳು, 8700 ರು.ವರೆಗೂ ಬೆಲೆ ಬಾಳುವ ವಸ್ತುಗಳನ್ನು ಸದ್ಯ ಅಮೆರಿಕಕ್ಕೆ ಮುಟ್ಟಿಸಲಾಗುವುದು. ಅದಕ್ಕೆ ಹೊರತಾದ ವಸ್ತುಗಳನ್ನು ಅಮೆರಿಕಕ್ಕೆ ರವಾನಿಸುವ ಸೇವೆಯನ್ನು ಆ.25ರಿಂದ ಸ್ಥಗಿತಗೊಳಿಸಲಾಗುತ್ತಿದೆ ಎಂದು ಭಾರತೀಯ ಅಂಚೆ ಇಲಾಖೆ ಹೇಳಿದೆ. 800 ಡಾಲರ್ ಮೊತ್ತದವರೆಗಿನ ಸರಕುಗಳು ಅಮೆರಿಕ ಈವರೆಗೆ ನೀಡುತ್ತಿದ್ದ ಸುಂಕ ವಿನಾಯಿತಿಯನ್ನು ಆ.29ರಿಂದ ಹಿಂಪಡೆಯಲಿದೆ. ಹಾಗಾಗಿ ಅಂಚೆ ಸೇವೆ ತಾತ್ಕಾಲಿಕ ಸ್ಥಗಿತಗೊಳಿಸಲಾಗಿದೆ ಎಂದು ಇಲಾಖೆ ಹೇಳಿದೆ.

ಪತ್ರಕರ್ತರ ವಿರುದ್ಧ ದೇಶದ್ರೋಹ ದೂರು

ಗುವಾಹಟಿ: ಅಸ್ಸಾಂನ ಗುವಾಹಟಿ ಪೊಲೀಸರು ದೇಶದ್ರೋಹ ಪ್ರಕರಣದಲ್ಲಿ ಪತ್ರಕರ್ತರಾದ 'ದಿ ವೈರ್'ನ ಸಿದ್ಧಾರ್ಥ್ ವರದರಾಜನ್, ಕರಣ್ ಥಾಪರ್, ಅಶುತೋಷ್ ಭಾರದ್ವಾಜ್, ಅಭಿಸಾರ್ ಶರ್ಮಾ, ಜಮ್ಮು-ಕಾಶ್ಮೀರ ಮಾಜಿ ರಾಜ್ಯಪಾಲ ದಿ. ಸತ್ಯಪಾಲ್ ಮಲಿಕ್, ಪಾಕ್ ಪತ್ರಕರ್ತ ನಜಾಮ್ ಸೇಥಿ ಮತ್ತಿತರ ಹೆಸರುಗಳನ್ನು ಸೇರಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ಕಲಂ 152(ದೇಶದ್ರೋಹ), 196 ಮತ್ತು 197(1) ಹಾಗೂ 353, 45 ಮತ್ತು 61ನೇ ಕಲಂಗಳಡಿ ಪ್ರಕರಣ ದಾಖಲಿಸಲಾಗಿದೆ. ಕರಣ್ ಥಾಪರ್ ಅವರು ನಜಮ್ ಸೇಥಿ, ಅಶುತೋಷ್ ಭಾರದ್ವಾಜ್, ಸತ್ಯಪಾಲ್ ಮಲಿಕ್ ಜತೆ ಸರಣಿ ಸಂದರ್ಶನ ನಡೆಸಿದ್ದಾರೆ. ಪಹಲ್ಗಾಮ್ ಉಗ್ರ ದಾಳಿ ಬಳಿಕ ಸೇಥಿ, ಭಾರದ್ವಾಜ್ ಭಾರತ ಸರಕಾರದ ವಿರುದ್ಧ ಆಕ್ರಮಣಕಾರಿ ಹೇಳಿಕೆಗಳನ್ನು ನೀಡಿದ್ದಾರೆ ಎಂದು ದೂರಲಾಗಿದೆ.

ಪಾಕ್ ವಿಮಾನಗಳಿಗೆ ಸೆ.24ವರೆಗೆ ನಿರ್ಬಂಧ

ದೆಹಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಪಾಕಿಸ್ತಾನದ ವಿಮಾನಗಳಿಗೆ ಭಾರತದ ವಾಯು ಪ್ರದೇಶದಲ್ಲಿ ಹಾರಾಟ ಅವಕಾಶ ನಿರ್ಬಂಧಿಸಲಾಗಿದೆ. ಆ ನಿಷೇಧವನ್ನು ಮತ್ತೆ ಸೆ.24ರವರೆಗೂ ಮುಂದುವರಿಸಲಾಗಿದೆ. ಪಾಕಿಸ್ತಾನದ ವಿಮಾನಯಾನ ಸಂಸ್ಥೆಗಳು ನಿರ್ವಹಿಸುವ ಯಾವುದೇ ವಿಮಾನಗಳು ಅಥವಾ ಪಾಕ್ ಗುತ್ತಿಗೆ ಪಡೆದ ಸೇನಾಪಡೆಗಳ ವಿಮಾನಗಳು ಭಾರತದ ವಾಯು ಪ್ರದೇಶ ಪ್ರವೇಶಿಸುವುದಕ್ಕೆ ಅವಕಾಶವಿಲ್ಲ ಎಂದು ಶನಿವಾರ ಪ್ರಕಟಿಸಿರುವ ಸೂಚನೆಯಲ್ಲಿ ವಿವರಿಸಲಾಗಿದೆ.

ಟಿಕ್‌ಟಾಕ್ ನಿಷೇಧ ರದ್ದಾಗಿಲ್ಲ: ಕೇಂದ್ರ

ದೆಹಲಿ: ಚೀನಾದ ಕಂಪನಿ ಅಭಿವೃದ್ಧಿಪಡಿಸಿ ಮಾರುಕಟ್ಟೆಗೆ ಬಿಟ್ಟಿರುವ 'ಟಿಕ್‌ಟಾಕ್' ಮೊಬೈಲ್ ಅಪ್ಲಿಕೇಷನ್ ಮೇಲೆ ಭಾರತದಲ್ಲಿ ವಿಧಿಸಲಾಗಿರುವ ನಿರ್ಬಂಧವನ್ನು ರದ್ದುಗೊಳಿಸುವ ಆದೇಶವನ್ನು ಈವರೆಗೂ ಕೇಂದ್ರ ಸರಕಾರದಿಂದ ಹೊರಡಿಸಲಾಗಿಲ್ಲ ಎಂದು ಅಧಿಕೃತ ಮೂಲಗಳು ಸ್ಪಷ್ಟಪಡಿಸಿವೆ. ಟಿಕ್‌ಟಾಕ್ ನಿಷೇಧ ತೆರವಾಗಿದೆ ಎಂಬುದು ಕೇವಲ ವದಂತಿಯಾಗಿದೆ. ಸರಕಾರದಿಂದ ಅಂತಹ ಯಾವುದೇ ಆದೇಶ ಪ್ರಕಟವಾಗಿಲ್ಲ ಎಂದು ಮೂಲಗಳು ತಿಳಿಸಿವೆ. ಚೀನಾ-ಭಾರತದ ನಡುವಿನ ಉದ್ವಿಗ್ನತೆ ತಗ್ಗಿದೆ. ಚೀನಾ ವಿದೇಶಾಂಗ ಸಚಿವರು ಇತ್ತೀಚೆಗಷ್ಟೇ ಭಾರತಕ್ಕೆ ಭೇಟಿ ನೀಡಿ ತೆರಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಮಾ.31ರಂದು ಚೀನಾಕ್ಕೆ 'ಎಸ್‌ಸಿಒ' ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ತೆರಳುತ್ತಿದ್ದಾರೆ ಎಂಬ ಬೆಳವಣಿಗೆಗಳ ಹಿನ್ನೆಲೆ 'ಟಿಕ್ ಟಾಕ್' ನಿಷೇಧ ತೆರವು ವದಂತಿ ಹರಡಿದೆ ಅಷ್ಟೇ ಎನ್ನಲಾಗಿದೆ.

{ ಬಿ.ಆರ್.ಗವಾಯಿ } ಸಿಜೆಐ

ವೃತ್ತಿ ಬದುಕಿನಲ್ಲಿ ಯಶಸ್ಸು ಪರೀಕ್ಷೆ ಫಲಿತಾಂಶದ ಮೇಲೆ ಅವಲಂಬಿಸಿರುವುದಿಲ್ಲ. ಬದಲಾಗಿ ದೃಢ ನಿಶ್ಚಯ, ಕಠಿಣ ಪರಿಶ್ರಮ, ಸಮರ್ಪಣೆ, ಕೆಲಸದಲ್ಲಿ ಬದ್ಧತೆಯನ್ನು ಆಧರಿಸಿರುತ್ತದೆ. ಉದಾ: ನನ್ನ ಸಹಪಾಠಿ ಮೊದಲ ರ‍್ಯಾಂಕ್ ಪಡೆದು ವಕೀಲರಾದರು. ಆದರೆ, 3ನೇ ರ‍್ಯಾಂಕ್ ಬಂದ ನಾನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಆಗುವವರೆಗೂ ಬೆಳವಣಿಗೆ ಕಂಡೆ.

ಯುದ್ಧ ವಿಮಾನ ಎಂಜಿನ್ ದೇಶೀ ತಯಾರಿಕೆಗೆ ಸಿದ್ಧತೆ

ಫ್ರಾನ್ಸ್‌ನ 'ಸ್ಯಾಫ್ರನ್' ಕಂಪನಿ ಸಲ್ಲಿಸಿದ್ದ ಪ್ರಸ್ತಾವನೆಗೆ 'ಡಿಆರ್‌ಡಿಒ' ಸಮ್ಮತಿ
ತೇಜಸ್ ಮಾರ್ಕ್-1ಎಗೆ ಎಂಜಿನ್ ತಡ ಮಾಡಿದ ಅಮೆರಿಕಕ್ಕೆ ತಿರುಗೇಟು

ದೆಹಲಿ: ಆತ್ಮನಿರ್ಭರ ಭಾರತ ದೇಶವನ್ನು ಸ್ವಾವಲಂಬನೆಯ ಹಾದಿಯಲ್ಲಿ ದಿನೇ ದಿನೇ ಬಲಪಡಿಸುತ್ತಲೇ ಸಾಗಿದೆ. 'ದೇಶೀಯವಾಗಿಯೇ' 5ನೇ ತಲೆಮಾರಿನ ಯುದ್ಧ ವಿಮಾನಗಳಿಗೆ ಅಗತ್ಯವಾಗಿರುವ ಜೆಟ್ ಎಂಜಿನ್ ಸಿದ್ಧಪಡಿಸುವುದಕ್ಕೆ ಕಡೆಗೂ ಭಾರತ ಮುಂದಾಗಿದೆ. ಈ ಸಂಬಂಧ ಫ್ರಾನ್ಸ್ ದೇಶದ ರಕ್ಷಣಾ ಕ್ಷೇತ್ರದ ಪ್ರಮುಖ ಕಂಪನಿ 'ಸ್ಯಾಫ್ರನ್' ಸಲ್ಲಿಸಿರುವ ಪ್ರಸ್ತಾವನೆಗೆ ಭಾರತ ಸಮ್ಮತಿ ಸೂಚಿಸಿದೆ.

ಸ್ಯಾಫ್ರನ್ ಕಂಪನಿಯ ಸಹಭಾಗಿತ್ವದಲ್ಲಿ 5ನೇ ತಲೆಮಾರಿನ ಯುದ್ಧ ವಿಮಾನಗಳು ಮತ್ತು 'ಲೈಟ್ ಕಾಂಬ್ಯಾಟ್ ಏರ್‌ಕ್ರಾಫ್ಟ್'(ಎಲ್‌ಸಿಎ)ಗಳಿಗೆ ಬೇಕಾಗಿರುವ 'ಜೆಟ್ ಎಂಜಿನ್' ಗಳನ್ನು ದೇಶೀಯವಾಗಿಯೇ ಅಭಿವೃದ್ಧಿಪಡಿಸಲು ಭಾರತದ 'ರಕ್ಷಣಾ ಕ್ಷೇತ್ರದ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ'(ಡಿಆರ್‌ಡಿಒ) ಸಿದ್ಧವಾಗಿದೆ. ಈ ಮೊದಲು ಕೂಡಾ ಫ್ರಾನ್ಸ್‌ನ ಡಸ್ಸಾಲ್ಟ್ ಕಂಪನಿಯೇ ಭಾರತದ ಸಶಸ್ತ್ರ ಪಡೆಗಳಿಗೆ 'ರಫೇಲ್' ಯುದ್ಧ ವಿಮಾನಗಳನ್ನು ನೀಡಿದೆ ಎಂಬುದು ಉಲ್ಲೇಖಾರ್ಹ.

ಸ್ಯಾಫ್ರನ್ ಜತೆಗೂಡಿ ಯುದ್ಧ ವಿಮಾನಗಳಿಗೆ ಶಕ್ತಿಶಾಲಿ ಎಂಜಿನ್ ತಯಾರಿಸಿಕೊಳ್ಳುವ ಮಹತ್ವದ ಯೋಜನೆಯ ಪ್ರಸ್ತಾವನೆಯನ್ನು 'ಡಿಆರ್‌ಡಿಒ' ರಕ್ಷಣಾ ಸಲಕರಣೆಗಳ ಖರೀದಿಗೆ ಸಂಬಂಧಿಸಿದ ಕೇಂದ್ರ ಸಚಿವ ಸಂಪುಟದ ಮುಂದೆ ಸದ್ಯದಲ್ಲೇ ಮಂಡಿಸಲಿದೆ ಎಂದು ಡಿಆರ್‌ಡಿಒದ ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

5ನೇ ತಲೆಮಾರು ಮತ್ತು ಭವಿಷ್ಯದ ಯುದ್ಧ ವಿಮಾನಗಳಿಗೆ ಅಗತ್ಯವಾದ ಎಂಜಿನ್‌ಗಳನ್ನು ಭಾರತ-ಫ್ರಾನ್ಸ್ ಜಂಟಿಯಾಗಿ ಭಾರತದ ನೆಲದಲ್ಲೇ ತಯಾರಿಸುವ ಯೋಜನೆ ಸದ್ಯ ಪ್ರಸ್ತಾವನೆ ಹಂತದಲ್ಲಿದ್ದು, ಸಂಪುಟದ ಸಮ್ಮತಿ ದೊರೆಯುತ್ತಲೇ ಕಾರ್ಯರೂಪಕ್ಕೆ ಬರಲಿದೆ. ಫ್ರಾನ್ಸ್‌ನ ಸ್ಯಾಫ್ರನ್ ಕಂಪನಿ 120 ಕಿಲೋನ್ಯೂಟನ್ ಸಾಮರ್ಥ್ಯದ ಯುದ್ಧ ವಿಮಾನ ಎಂಜಿನ್‌ಗಳ ತಯಾರಿಕೆಯ ತಂತ್ರಜ್ಞಾನವನ್ನು ಶೇ.100ರಷ್ಟು ಭಾರತಕ್ಕೆ ಹಸ್ತಾಂತರಿಸಲು ಒಪ್ಪಿದೆ ಎಂದು ಮೂಲಗಳು ತಿಳಿಸಿವೆ.

ಭಾರತೀಯ ವಾಯುಪಡೆಗೆ ಅತ್ಯಗತ್ಯವಾಗಿದ್ದ ಲಘು ಯುದ್ಧ ವಿಮಾನ(ಎಲ್‌ಸಿಎ) 'ತೇಜಸ್ ಮಾರ್ಕ್-1ಎ'ಗೆ ಅತ್ಯಗತ್ಯವಾಗಿದ್ದ ಜೆಟ್ ಎಂಜಿನ್ ಅನ್ನು ಕೊಡುವುದಕ್ಕೆ ತಡ ಮಾಡುತ್ತಿರುವ ಅಮೆರಿಕಕ್ಕೆ, ದೇಶೀಯವಾಗಿಯೇ ಎಲ್‌ಸಿಎ ಜೆಟ್ ಎಂಜಿನ್ ತಯಾರಿಸುವ ಮಹತ್ವದ ನಿರ್ಧಾರದ ಮೂಲಕ ಭಾರತ ತಿರುಗೇಟು ನೀಡಲು ಮುಂದಾಗಿದೆ.

ಭಾರತದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿ, (ಎಚ್‌ಎಎಲ್) ಭಾರತೀಯ ವಾಯುಪಡೆಗೆ ಬೇಡಿಕೆಗೆ ತಕ್ಕಷ್ಟು ತೇಜಸ್ ಮಾರ್ಕ್-1ಎ ಯುದ್ಧ ವಿಮಾನಗಳನ್ನು ತಯಾರಿಸಿಕೊಡುವುದಾಗಿ ಹೇಳಿ 2 ವರ್ಷಗಳೇ ಕಳೆದಿವೆ. ಆದರೆ, ವಿಮಾನ ತಯಾರಾದರೂ ಅದಕ್ಕೆ ಜೋಡಿಸಲು ಬೇಕಾದ 99ಜಿಇ-ಎಫ್404 ಟರ್ಬೋಫ್ಯಾನ್ ಎಂಜಿನ್ ಅಮೆರಿಕದ ಜನರಲ್ ಎಲೆಕ್ಟ್ರಿಕ್ ಕಂಪನಿಯಿಂದ ಬರಬೇಕಿದೆ. ಆ ಸಂಬಂಧ 2021ರ ಆಗಸ್ಟ್‌ನಲ್ಲೇ ಜನರಲ್ ಎಲೆಕ್ಟ್ರಿಕ್ ಕಂಪನಿ ಮತ್ತು ಎಚ್‌ಎಎಲ್ ನಡುವೆ 5375 ಕೋಟಿ ರು.ಗಳ ಒಪ್ಪಂದವಾಗಿದೆ. ಆದರೆ, ಅಮೆರಿಕದ ಕಂಪನಿ ಮೊದಲಿಗೆ ಕೆಲವು ಎಂಜಿನ್‌ಗಳನ್ನು ರವಾನಿಸಿದೆ. ಆದರೆ ಕಳೆದೆರಡು ವರ್ಷಗಳಿಂದ ಒಂದು ಎಂಜಿನ್ ಕೂಡಾ ಕೊಟ್ಟಿಲ್ಲ. ಹಾಗಾಗಿ ಎಚ್‌ಎಎಲ್‌ನಲ್ಲಿ ತೇಜಸ್ ಮಾರ್ಕ್-1ಎ ವಿಮಾನಗಳ ತಯಾರಿಕೆ ತಡವಾಗುತ್ತಿದೆ. ಇದೇ ಕಾರಣವಾಗಿ ಭಾರತೀಯ ವಾಯುಪಡೆ ಮುಖ್ಯಸ್ಥರು ಇತ್ತೀಚೆಗೆ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿದ್ದರು ಎಂಬುದು ಉಲ್ಲೇಖಾರ್ಹ.

₹700 ಕೋಟಿ ಪ್ರಯೋಗಾಲಯ

ಸ್ಯಾಫ್ರನ್ ಕಂಪನಿ ಅದಾಗಲೇ ಭಾರತದಲ್ಲಿ ಯುದ್ಧ ಹೆಲಿಕಾಪ್ಟರ್‌ಗಳನ್ನು ತಯಾರಿಸುತ್ತಿದೆ. ಈಗ 5ನೇ ತಲೆಮಾರಿನ ಅತ್ಯಾಧುನಿಕ ಮಧ್ಯಮ ಶ್ರೇಣಿ ಯುದ್ಧ ವಿಮಾನ(ಅಡ್ವಾನ್ಸಡ್ ಮೀಡಿಯಂ ಕಾಂಬ್ಯಾಟ್ ಏರ್ ಕ್ರಾಫ್ಟ್-ಎಎಂಸಿಎ) ತಯಾರಿಸುವುದಕ್ಕೆ ಡಿಆರ್‌ಡಿಒ ಜತೆಗೂಡಲು ಸಿದ್ಧವಾಗಿದೆ. ಡಿಆರ್‌ಡಿಒ ಮತ್ತು ಸ್ಯಾಫ್ರನ್ ಕಂಪನಿಯ ಜಂಟಿ ಪ್ರಯತ್ನದ 'ಲ್ಯಾಬ್ ಗ್ಯಾಸ್ ಟರ್ಬೈನ್ ರಿಸರ್ಚ್ ಎಸ್ಟಾಬ್ಲಿಷ್‌ಮೆಂಟ್' 700 ಕೋಟಿ ಡಾಲರ್ ಮೌಲ್ಯದ್ದಾಗಿದೆ ಎಂದು ಡಿಆರ್‌ಡಿಒ ಅಧಿಕಾರಿಗಳು ಸುದ್ದಿಸಂಸ್ಥೆಗೆ ವಿವರ ನೀಡಿದ್ದಾರೆ.

ಸಂಪೂರ್ಣ ತಂತ್ರಜ್ಞಾನ ಹಸ್ತಾಂತರ

ಫ್ರಾನ್ಸ್ ದೇಶದ ಸ್ಯಾಫ್ರನ್ ಕಂಪನಿ ಮತ್ತು ಡಿಆರ್‌ಡಿಒ ಮಧ್ಯದ ಒಪ್ಪಂದ ಬಹಳ ಅನುಕೂಲಕಾರಿಯಾಗಿದೆ. ಏಕೆಂದರೆ 5ನೇ ತಲೆಮಾರಿನ ಯುದ್ಧ ವಿಮಾನದ ಎಂಜಿನ್‌ನ ಮಾದರಿ, ತಯಾರಿಕೆಯ ವಿಧಾನ ಮತ್ತು ನಂತರದ ನಿರ್ವಹಣೆ, ದುರಸ್ತಿ ಎಲ್ಲವೂ ಸೇರಿದಂತೆ ಸಂಪೂರ್ಣ ತಂತ್ರಜ್ಞಾನವನ್ನು (ಇಂಟೆಲೆಕ್ಚುವಲ್ ಪ್ರಾಪರ್ಟಿ) ಭಾರತದ ಜತೆ ಹಂಚಿಕೊಳ್ಳಲು ಸ್ಯಾಫ್ರನ್ ಒಪ್ಪಿಕೊಂಡಿದೆ. ಈ ಅಂಶವೇ ದೇಶೀಯವಾಗಿ ಯುದ್ಧ ವಿಮಾನ ಎಂಜಿನ್ ತಯಾರಿಕೆಗೆ ಬಲ ನೀಡಲಿದೆ ಎಂದು ಡಿಆರ್‌ಡಿಒ ಅಧಿಕಾರಿಗಳು ಹೇಳಿದ್ದಾರೆ.

ಸ್ವಾವಲಂಬನೆ ಕನಸು ನನಸು

5ನೇ ತಲೆಮಾರಿನ ಯುದ್ಧ ವಿಮಾನಗಳು ಮತ್ತು ಅದಕ್ಕೆ ಅಗತ್ಯವಾಗಿ ಬೇಕಾದ ಶಕ್ತಿಶಾಲಿ ಜೆಟ್ ಎಂಜಿನ್‌ಗಳನ್ನು ಭಾರತದಲ್ಲೇ ತಯಾರಿಸಿಕೊಳ್ಳಲು ಇಚ್ಛಿಸಿದ್ದೇವೆ. ಆತ್ಮನಿರ್ಭರ ಭಾರತ ಪರಿಕಲ್ಪನೆಯೇ ಅದಕ್ಕೆ ಉತ್ತೇಜನ ನೀಡುತ್ತಿದೆ. ಅದಕ್ಕೆ ತಕ್ಕಂತೆಯೇ ಫ್ರಾನ್ಸ್‌ನ ರಕ್ಷಣಾ ಕ್ಷೇತ್ರದ ಪ್ರಮುಖ ಕಂಪನಿ ಸ್ಯಾಫ್ರನ್ ಕೂಡಾ ಭಾರತದ ಜತೆ ಕೈಜೋಡಿಸಲು ಮುಂದೆ ಬಂದಿದೆ. ನಮ್ಮ ಸ್ವಾವಲಂಬನೆ ಕನಸು ಈ ಮೂಲಕ ಈಡೇರಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿಕೊಂಡಿದ್ದಾರೆ.



ಎಸ್‌ಸಿಒಗೆ ಭಾರತ ವಿರೋಧಿ ಪಾಕಿಸ್ತಾನ, ಟರ್ಕಿ ನಾಯಕರು

ಬೀಜಿಂಗ್: ಮಾಸಾಂತ್ಯ ಚೀನಾದ ಟಿಯಾಂಜಿನ್‌ನಲ್ಲಿ ಆಯೋಜಿತ 'ಶಾಂಘೈ ಸಹಕಾರ ಸಂಸ್ಥೆ'(ಎಸ್‌ಸಿಒ) ಶೃಂಗಸಭೆ ಅದರ ಇತಿಹಾಸದಲ್ಲೇ ಅತ್ಯಂತ ದೊಡ್ಡ ಸಭೆಯಾಗಿರಲಿದೆ. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ವಿಶ್ವದ 20 ದೇಶಗಳ ನಾಯಕರು ಭಾಗಿಯಾಗಲಿದ್ದಾರೆ ಎಂದು ಚೀನಾ ಹೇಳಿದೆ.

10 ಸದಸ್ಯರ ಶೃಂಗಸಭೆ ಆ.31 ರಿಂದ ಸೆ.1ರವರೆಗೆ ನಡೆಯಲಿದೆ. ಇದು ಚೀನಾ ಆಯೋಜನೆಯ 5ನೇ ಎಸ್‌ಸಿಒ ಶೃಂಗಸಭೆ. ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್, ಇಂಡೋನೇಷ್ಯಾ ಅಧ್ಯಕ್ಷ ಪ್ರಬೋವೊ ಸುಬಿಯಾಂಟೊ, ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಮತ್ತು ವಿಯೆಟ್ನಾಂ ಪ್ರಧಾನಿ ಫಾಮ್ ಮಿನ್ ಚಿನ್ಹ್, ಪಾಕ್ ಪ್ರಧಾನಿ ಶೆಹಬಾಜ್ ಶರೀಫ್, ನೇಪಾಳ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಮತ್ತು ಮಾಲ್ಡೀವ್ಸ್ ಅಧ್ಯಕ್ಷ ಮೊಹಮ್ಮದ್ ಮುಯಿಜು ಶೃಂಗಸಭೆಯಲ್ಲಿರುವರು ಎಂದು ಚೀನಾ ಸಹಾಯಕ ವಿದೇಶಾಂಗ ಸಚಿವ ಲಿಯು ಬಿನ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಅಲ್ಲದೇ, ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಮತ್ತು ಎಸ್‌ಸಿಒ ಪ್ರಧಾನ ಕಾರ್ಯದರ್ಶಿ ನೂರ್ಲಾನ್ ಯೆಮೆರ್ಕ್ಬಾಯೆವ್ ಸೇರಿ 10 ಅಂತಾರಾಷ್ಟ್ರೀಯ ಸಂಸ್ಥೆಗಳ ಪ್ರಮುಖರೂ ಭಾಗವಹಿಸಲಿದ್ದಾರೆ. ಚೀನಾ, ರಷ್ಯಾ, ಭಾರತ, ಇರಾನ್, ಕಝುಕಿಸ್ತಾನ್, ಕಿರ್ಗಿಸ್ತಾನ್, ಪಾಕಿಸ್ತಾನ, ತಜಕಿಸ್ತಾನ್, ಉಜ್ಬೇಕಿಸ್ತಾನ್, ಬೆಲಾರಸ್ ಎಸ್‌ಸಿಒ ಸದಸ್ಯ ರಾಷ್ಟ್ರಗಳಾಗಿವೆ.

ಅನಿಲ್ ಅಂಬಾನಿ ವಿರುದ್ಧ ಎಫ್‌ಐಆರ್, ಸಿಬಿಐ ದಾಳಿ

ದೆಹಲಿ: 'ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್‌ಸಿಒಎಂ) ಮತ್ತು ಕಂಪನಿಯ ಪ್ರವರ್ತಕ ನಿರ್ದೇಶಕ ಅನಿಲ್ ಅಂಬಾನಿ ವಿರುದ್ಧ ಕೇಂದ್ರ ತನಿಖಾ ದಳ(ಸಿಬಿಐ) ಅಪರಾಧ ಪ್ರಕರಣ ದಾಖಲಿಸಿದ್ದು, ಅನಿಲ್ ನಿವಾಸ ಮತ್ತು 'ಆರ್‌ಸಿಒಎಂ'ಗೆ ಸೇರಿದ ಕಚೇರಿಗಳಲ್ಲಿ ಶನಿವಾರ ಬೆಳಗ್ಗೆಯಿಂದಲೇ ಶೋಧ ನಡೆಸಲಾರಂಭಿಸಿದೆ.

2000 ಕೋಟಿ ರು. ಸಾಲ: ಎಸ್‌ಬಿಐಗೆ ವಂಚನೆ ಆರೋಪ

'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ'(ಎಸ್‌ಬಿಐ)ಗೆ 2,000 ಕೋಟಿ ರು. ವಂಚನೆ ಮಾಡಿದ ಆರೋಪ ಅನಿಲ್ ಅಂಬಾನಿ ವಿರುದ್ಧದ ಎಫ್‌ಐಆರ್‌ಗೆ ಮೂಲವಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಜೂ.13ರಂದು ವಂಚನೆ ದೂರು ದಾಖಲಿಸಿದ ತರುವಾಯ ಸಿಬಿಐ ಕ್ರಮ ಕೈಗೊಂಡಿದೆ.

2016ರ ಆ.26ರಿಂದ ಈವರೆಗೆ ಆರ್‌ಸಿಒಎಂ ಕಡೆಯಿಂದ 2,227.64 ಕೋಟಿ ರು. ಅಸಲು ಮತ್ತು ಬಡ್ಡಿ ಬಾಕಿಯಾಗಿದೆ. ಅದಲ್ಲದೇ 786.52 ಕೋಟಿ ರು.ಗಳ ನಿಧಿ-ಆಧಾರಿತ ಅಲ್ಲದ ಬ್ಯಾಂಕ್ ಗ್ಯಾರಂಟಿ ಇದರಲ್ಲಿ ಸೇರಿವೆ ಎಂದು ಎಸ್‌ಬಿಐ ಹೇಳಿರುವುದಾಗಿ ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಟ್ರಂಪ್ ಬೆದರುಬೊಂಬೆ: ನಾಗಪುರ ಜನಾಕ್ರೋಶ!

ನಾಗಪುರ: ರಷ್ಯಾದಿಂದ ಕಚ್ಚಾತೈಲ ಖರೀದಿ ನಿಲ್ಲಿಸಿ. ಇಲ್ಲವಾದರೆ ಶೇ.50ರಷ್ಟು ಪ್ರತಿಸುಂಕ ಹಾಕುವೆ ಎಂದು ಭಾರತವನ್ನು ಬೆದರಿಸಲು ಯತ್ನಿಸುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೇ ಭಾರತೀಯ ವಿಭಿನ್ನ ರೀತಿಯಲ್ಲಿ ತಿರುಗೇಟು ಕೊಡಲು ಆರಂಭಿಸಿದ್ದಾರೆ.

ಮೊದಲಿಗೆ ಮಹಾರಾಷ್ಟ್ರದ ನಾಗಪುರದ ಜನತೆ ಶತಮಾನ ಹಳೆಯ 'ಮಾರ್ಬತ್ ಉತ್ಸವ' ನೆಪದಲ್ಲಿ ಡೊನಾಲ್ಡ್ ಟ್ರಂಪ್ ಅವರ ಬೃಹತ್ ಗಾತ್ರದ 'ಬೆದರುಬೊಂಬೆ' ತಯಾರಿಸಿ ಶನಿವಾರ ನಗರದ ಬೀದಿಗಳಲ್ಲಿ ಮೆರವಣಿಗೆ ಮಾಡಿದ್ದಾರೆ. ಅಷ್ಟೇ ಅಲ್ಲ, 'ಶೇ.50 ಪ್ರತಿಸುಂಕಕ್ಕೆ ಧಿಕ್ಕಾರ', 'ಭಾರತದ ಸರಕುಗಳಿಗೆ ಸುಂಕ ವಿಧಿಸಿದರೆ ನಿನಗೇ ನಷ್ಟ', 'ಭಾರತದ ಸರಕು ಅಮೆರಿಕಕ್ಕೆ ಬೇಡವಾದರೆ ರಷ್ಯಾ ಮಾರುಕಟ್ಟೆ ಕಾದಿದೆ' ಎಂಬ ದೊಡ್ಡ ಭಿತ್ತಿಫಲಕಗಳನ್ನೂ ಜನರು ಹಿಡಿದುಕೊಂಡು ಮೆರವಣಿಗೆಯಲ್ಲಿ ಸಾಗಿದ್ದಾರೆ.

ದೀಪಾವಳಿ ಹಬ್ಬದಲ್ಲಿ ರಾವಣ ಬೆದರುಬೊಂಬೆ ಸುಡವಂತೆಯೇ ನಾಗಪುರದಲ್ಲಿ ಟ್ರಂಪ್ ಬೆದರುಗೊಂಬೆಗೂ ಒಂದು ಗತಿ ಕಾಣಿಸಲಾಗಿದೆ. ಲಕ್ಷಾಂತರು ಜನರು 'ಟ್ರಂಪ್ ಬೆದರುಗೊಂಬೆ' ಮೆರವಣಿಗೆಯಲ್ಲಿ ಭಾಗಿಯಾಗಿದ್ದರು ಎಂಬುದು ಉಲ್ಲೇಖಾರ್ಹ. ಇದು ಟ್ರಂಪ್ ಆಡಳಿತ ವೈಖರಿಗೆ ಭಾರತೀಯರ ಆಕ್ರೋಶದ ಕಿರುಪರಿಚಯವಾಗಿದೆ ಎಂದೇ ವ್ಯಾಖ್ಯಾನಿಸಲಾಗಿದೆ.

ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ ಮಾರ್ಚ್ ಬಳಿಕ ಲೋಕಾರ್ಪಣೆ

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಾಹಿತಿ

ದೆಹಲಿ: ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ಯೋಜನೆಯ ಕಾಮಗಾರಿ 2025 ಡಿಸೆಂಬರ್‌ನಿಂದ 2026 ಮಾರ್ಚ್ ನಡುವೆ ಮುಗಿಯುವ ನಿರೀಕ್ಷೆಯಿದ್ದು, ನಂತರ ಲೋಕಾರ್ಪಣೆಯಾಗಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಶನಿವಾರ ಮಾಹಿತಿ ನೀಡಿದ್ದಾರೆ.

15,188 ಕೋಟಿ ರು. ವೆಚ್ಚದಲ್ಲಿ 262 ಕಿ.ಮೀ ಉದ್ದದ ಎಕ್ಸ್‌ಪ್ರೆಸ್ ವೇ ನಿರ್ಮಾಣ ಮಾಡಲಾಗುತ್ತಿದೆ. ಕರ್ನಾಟಕ ಭಾಗದಲ್ಲಿ 71 ಕಿಮೀಗಳಷ್ಟು ದೂರ ಕಾಮಗಾರಿ ಪೂರ್ಣಗೊಂಡಿದ್ದು, 2024ರ ಡಿಸೆಂಬರ್‌ನಿಂದ ವಾಹನ ಸಂಚಾರವೂ ನಡೆಯುತ್ತಿದೆ. ಆದರೆ, ಆಂಧ್ರ ಪ್ರದೇಶ ಮತ್ತು ತಮಿಳುನಾಡು ಭಾಗದಲ್ಲಿ ಕಾಮಗಾರಿ ಪೂರ್ಣಗೊಳ್ಳಲು ಇನ್ನೂ 5-6 ತಿಂಗಳು ಬೇಕಿದೆ ಎಂದು ಹೆದ್ದಾರಿ ಸಚಿವಾಲಯ ಮಾಹಿತಿ ನೀಡಿದೆ.

ಬೆಂಗಳೂರು-ಹೈದರಾಬಾದ್ ನಡುವಿನ 512 ಕಿ.ಮೀ ಮತ್ತು ಬೆಂಗಳೂರು-ಪುಣೆ ಮಾರ್ಗದ 700 ಕಿ.ಮೀ ಉದ್ದದ ಎಕ್ಸ್‌ಪ್ರೆಸ್ ವೇ ನಿರ್ಮಾಣ ಸಂಬಂಧ 'ವಿವರ ಯೋಜನಾ ವರದಿ'ಗಳು(ಡಿಪಿಆರ್) ಸಚಿವಾಲಯಕ್ಕೆ ಸಲ್ಲಿಕೆಯಾಗಿವೆ. ಹೊಸದಾಗಿ ನಿರ್ಮಾಣಗೊಳ್ಳುವ ಎಕ್ಸ್‌ಪ್ರೆಸ್ ವೇಗಳಲ್ಲಿ ಸುಧಾರಿತ ಸಂಚಾರ ನಿರ್ವಹಣಾ ವ್ಯವಸ್ಥೆಗಳು, ರಸ್ತೆಬದಿ ಸಂಚಾರ ಸೌಲಭ್ಯಗಳು ಮತ್ತು ಯುಟಿಲಿಟಿ ಕಾರಿಡಾರ್‌ಗಳು ಇರುತ್ತವೆ ಎಂದು ಸಚಿವಾಲಯ ತಿಳಿಸಿದೆ.

ವಿಳಂಬಕ್ಕೆ ಕಾರಣ: ಎಕ್ಸ್‌ಪ್ರೆಸ್ ವೇ ಯೋಜನೆಗಳ ವಿಳಂಬಕ್ಕೆ ಭೂಸ್ವಾಧೀನಕ್ಕೆ ಸ್ಥಳೀಯರ ವಿರೋಧ, ಮಂದಗತಿ ಪರಿಹಾರ ವಿತರಣೆ, ಮಾರ್ಗ ಮಧ್ಯೆ ಬರುವ ಧಾರ್ಮಿಕ ಕಟ್ಟಡಗಳ ಸ್ಥಳಾಂತರ ತೊಂದರೆಗಳು ಕಾರಣವಾಗಿರುತ್ತವೆ. ಆಂಧ್ರಪ್ರದೇಶದಲ್ಲಿ ಕೌಂಡಿನ್ಯಾ ವನ್ಯಜೀವಿ ಅಭಯಾರಣ್ಯ ಬಳಿ ಕಾಮಗಾರಿಗೆ ಅನುಮೋದನೆ ದೊರೆಯದೇ ಯೋಜನೆಗೆ ಹಿನ್ನಡೆಯಾಗಿದೆ. ತಮಿಳುನಾಡಿನಲ್ಲಿ ಜನವಸತಿ ಪ್ರದೇಶಗಳ ಬಳಿ ಸ್ಫೋಟ ನಡೆಸುವುದಕ್ಕೆ ನಿರ್ಬಂಧ ಇರುವುದು ಸೇರಿದಂತೆ ವಿವಿಧ ಕಾರಣಗಳು ಯೋಜನೆ ನಿಧಾನಗೊಳಿಸಿವೆ ಎಂದು ಹೆದ್ದಾರಿ ಸಚಿವಾಲಯ ಸುದ್ದಿಸಂಸ್ಥೆಗೆ ತಿಳಿಸಿದೆ.

ಬೆಂಗಳೂರು-ಚೆನ್ನೈ ಮೂರು ಗಂಟೆ ಪ್ರಯಾಣ

ಪ್ರಸ್ತುತ ಬೆಂಗಳೂರು-ಚೆನ್ನೈ ಮಾರ್ಗದಲ್ಲಿ 262 ಕಿಮೀ ಸಾಗಲು 6 ಗಂಟೆ ಹಿಡಿಯುತ್ತಿದೆ. ದಕ್ಷಿಣ ಭಾರತದ ಮೊದಲ ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ ಎನಿಸಿಕೊಂಡಿರುವ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ಲೋಕಾರ್ಪಣೆಗೊಂಡರೆ ಎರಡೂ ಮಹಾನಗರಗಳ ನಡುವಿನ ಪ್ರಯಾಣ ಅವಧಿ 3 ಗಂಟೆಗೆ ತಗ್ಗಲಿದೆ. ಸರಕು ಸಾಗಣೆ ವೆಚ್ಚವೂ ಕಡಿಮೆಯಾಗಿ ವ್ಯಾಪಾರಿಗಳು ಮತ್ತು ಕೈಗಾರಿಕೆಗಳಿಗೆ ಹಣ ಉಳಿಯತ್ತದೆ ಎಂದು ಬೆಂಗಳೂರು ಸಂಸದ ಪಿ.ಸಿ.ಮೋಹನ್ ಹೇಳಿದ್ದಾರೆ.

ಪ್ರವಾಸಿ ಬಸ್ ಅಪಘಾತ, ಐದು ಸಾವು

ಬಸ್‌ನಲ್ಲಿ ಭಾರತ, ಚೀನಾ, ಫಿಲಿಪಿನೊ ಪ್ರವಾಸಿಗರು | ನಯಾಗರಾ ವೀಕ್ಷಿಸಿ ಹಿಂದಿರುಗುವಾಗ ಅಪಘಾತ

ನ್ಯೂಯಾರ್ಕ್: ಅಮೆರಿಕದ 'ನ್ಯೂಯಾರ್ಕ್' ನಗರದಲ್ಲಿ ಭಾರತ ಸೇರಿದಂತೆ ವಿವಿಧ ದೇಶಗಳ 54 ಪ್ರವಾಸಿಗರಿದ್ದ ಬಸ್ ಶುಕ್ರವಾರ ಅಪಘಾತಕ್ಕೀಡಾಗಿದ್ದು, ಐವರು ಸಾವನ್ನಪ್ಪಿದ್ದಾರೆ.

ನಯಾಗರಾ ಜಲಪಾತ ವೀಕ್ಷಿಸಿ ಪ್ರವಾಸಿಗರು ನ್ಯೂಯಾರ್ಕ್‌ಗೆ ಹಿಂತಿರುಗುತ್ತಿದ್ದಾಗ ಬಫಲೋ ನಗರದಿಂದ ಪೂರ್ವಕ್ಕೆ 40 ಕಿ.ಮೀ. ದೂರದಲ್ಲಿ ಬಸ್ ಅಪಘಾತಕ್ಕೀಡಾಗಿದೆ. ಭಾರತೀಯರು, ಚೀನಾ, ಫಿಲಿಪಿನೋ ದೇಶದ, 1 ವರ್ಷದ ಮಗುವಿನಿಂದ 74 ವರ್ಷದ ವೃದ್ಧರವರು ಬಸ್‌ನಲ್ಲಿದ್ದರು. ಅಪಘಾತಕ್ಕೀಡಾದಾಗ ಹೆಚ್ಚಿನ ಪ್ರಯಾಣಿಕರು ಸೀಟ್ ಬೆಲ್ಟ್ ಧರಿಸಿರಲಿಲ್ಲ. ಹಾಗಾಗಿ ಬಹಳಷ್ಟು ಪ್ರವಾಸಿಗರು ಬಸ್‌ನಿಂದ ಹೊರಕ್ಕೆ ಎಸೆಯಲ್ಪಟ್ಟರು. ತಲೆಗೆ ಪೆಟ್ಟು ಬಿದ್ದು ಗಂಭೀರ ಸ್ಥಿತಿಯಲ್ಲಿದ್ದ ಐವರು ವಯಸ್ಕರು ಸ್ಥಳದಲ್ಲೇ ಸಾವನ್ನಪ್ಪಿದರು. ಚಾಲಕ ಸುರಕ್ಷಿತವಾಗಿದ್ದು, ಅಪಘಾತದಲ್ಲಿ ಆತನ ಲೋಪ ಕಂಡುಬಂದಿಲ್ಲ. ಬಸ್‌ನಲ್ಲಿ ತಾಂತ್ರಿಕ ದೋಷವೂ ಕಾಣಿಸಿಲ್ಲ. ಅಪಘಾತಕ್ಕೆ ನೈಜ ಕಾರಣ ತಿಳಿಯಲು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿ ಮೇಜರ್ ಆಂಡ್ರೆ ರೇ ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಗಾಯಾಳು: 40ಕ್ಕೂ ಅಧಿಕ ಗಾಯಾಳುಗಳನ್ನು ಅಪಘಾತ ಸ್ಥಳದಿಂದ 6 ಹೆಲಿಕಾಪ್ಟರ್ ಮತ್ತು ಆಂಬ್ಯುಲೆನ್ಸ್ ಬಳಸಿ ಆಸ್ಪತ್ರೆಗೆ ಕರೆತರಲಾಗಿದೆ. ಕೆಲವರಿಗೆ ತಲೆಗೆ ಪೆಟ್ಟು ಬಿದ್ದಿದ್ದರೆ, ಕೆಲವರಿಗೆ ಕೈ-ಕಾಲು ಮೂಳೆ ಮುರಿದಿವೆ. ಕೆಲವರು ಆಘಾತಕ್ಕೆ ಒಳಗಾಗಿದ್ದಾರೆ. ಬಫಲೋ ನಗರದ ಎರಿ ಕೌಂಟಿ ಮೆಡಿಕಲ್ ಸೆಂಟರ್‌ನಲ್ಲಿ ಇಬ್ಬರಿಗೆ ತುರ್ತು ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ವೈದ್ಯಕೀಯ ಸಿಬ್ಬಂದಿ ವಿವರ ನೀಡಿದ್ದಾರೆ.

ಉತ್ತರಾಖಂಡ ಮೇಘಸ್ಫೋಟ: 1 ಸಾವು

ಪ್ರವಾಹಕ್ಕೆ ಹತ್ತಾರು ಜನ ಕಣ್ಮರೆ | ನೂರಾರು ಮನೆಗಳು, ವಾಹನಗಳು ಹಾನಿ

ಡೆಹ್ರಾಡೂನ್: ಉತ್ತರಾಖಂಡ ರಾಜ್ಯದಲ್ಲಿ ಮತ್ತೆ ಮೇಘಸ್ಫೋಟವಾಗಿದೆ. ಚಮೋಲಿ ಜಿಲ್ಲೆಯ ಥರಾಲಿಯಲ್ಲಿ ಶುಕ್ರವಾರ ರಾತ್ರಿ ಭಾರೀ ಮಳೆ ಸುರಿದಿದೆ. ಹಠಾತ್ ಪ್ರವಾಹದಲ್ಲಿ ಒಬ್ಬ ಯುವತಿ ಮೃತಪಟ್ಟಿದ್ದು, ಹಲವರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ನೂರಾರು ಮನೆಗಳು, ವಾಹನಗಳು ಹಾನಿಗೊಳಗಾಗಿವೆ. ರಾಡಿಬಾಗ್ ಮತ್ತು ಚೆಪ್ಡಾನ್ ಪ್ರದೇಶದಲ್ಲಿ ನೂರಾರು ವಾಹನಗಳು ಕೆಸರು, ಮಣ್ಣಿನಡಿ ಹೂತುಹೋಗಿವೆ.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕೆಲವೆಡೆ ಎಸ್‌ಡಿಆರ್‌ಎಫ್ ತಂಡ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದೆ. ಆದರೆ, ರಸ್ತೆಗಳಿಗೆ ಭಾರೀ ಹಾನಿಯಾಗಿರುವುದರಿಂದ ರಕ್ಷಣಾ ತಂಡಗಳ ಸಿಬ್ಬಂದಿಗೆ ಪ್ರವಾಹ ಪೀಡಿತ ಸ್ಥಳಗಳನ್ನು ತಲುಪುವುದೇ ದೊಡ್ಡ ಸವಾಲಾಗಿದೆ. ಗಡಿ ರಸ್ತೆಗಳ ಸಂಘಟನೆ(ಬಿಆರ್‌ಒ) ಸಮರೋಪಾದಿಯಲ್ಲಿ ರಸ್ತೆಗಳ ದುರಸ್ತಿ ಕಾರ್ಯದಲ್ಲಿ ತೊಡಗಿಸಿಕೊಂಡಿದೆ.

ಪರಿಸ್ಥಿತಿಯ ಗಂಭೀರತೆ ಗಮನಿಸಿದ ಥಾಣಾ ಥರಾಲಿ ಪೊಲೀಸರು ಶುಕ್ರವಾರ ರಾತ್ರಿಯೇ ಕ್ಷಿಪ್ರ ಕಾರ್ಯಾಚರಣೆ ನಡೆಸಿ ನೂರಾರು ಜನರನ್ನು ಎಚ್ಚರಿಸಿ ಮನೆಗಳಿಂದ ಹೊರಕ್ಕೆ ಕರೆತಂದು ಸುರಕ್ಷಿತ ಸ್ಥಳಗಳಿಗೆ ಕರೆದೊಯ್ದಿದ್ದರಿಂದ ದೊಡ್ಡ ಪ್ರಾಣಾಪಾಯ ತಪ್ಪಿಸಿದಂತಾಗಿದೆ.

2 ವಾರಗಳ ಹಿಂದಷ್ಟೇ ಉತ್ತರಕಾಶಿಯಲ್ಲಿ ಮೇಘಸ್ಫೋಟವಾಗಿದ್ದರಿಂದ ಧರಾಲಿ ಗ್ರಾಮದಲ್ಲಿ ಪ್ರವಾಹ ಉಂಟಾಗಿ ನಾಲ್ವರು ಮೃತಪಟ್ಟು ನೂರಾರು ಮಂದಿ ನಾಪತ್ತೆಯಾಗಿದ್ದರು.

ಜಾರ್ಖಂಡ್ ಮಳೆಗೆ 5 ಬಲಿ

ಜಾರ್ಖಂಡ್ ರಾಜ್ಯದಲ್ಲಿ ಭಾರೀ ಮಳೆಯಾಗುತ್ತಿದ್ದು, ಐವರು ಮೃತಪಟ್ಟರು. ಸೆರೈಕೆಲಾ-ಖಾಸಾವಾನ್ ಪ್ರದೇಶದಲ್ಲಿ ಮನೆಯೊಂದರ ಗೋಡೆ ಕುಸಿದಿದ್ದರಿಂದ ಗೃಹಿಣಿ ಮತ್ತು 7 ವರ್ಷದ ಮಗು ಸಾವಿಗೀಡಾಗಿದ್ದಾರೆ. 8 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಟ್ರಂಪ್ ಆಪ್ತ ಸೆರ್ಗಿಯೊ ಭಾರತಕ್ಕೆ ರಾಯಭಾರಿ!

ದಕ್ಷಿಣ ಮತ್ತು ಮಧ್ಯ ಏಷ್ಯಾ ವಲಯಕ್ಕೆ ಗೋರ್ ಅಮೆರಿಕದ ವಿಶೇಷ ಪ್ರತಿನಿಧಿ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಆಪ್ತ ರಾಜಕೀಯ ಸಹಾಯಕ ಮತ್ತು ಶ್ವೇತಭವನ ಸಿಬ್ಬಂದಿ ವಿಭಾಗ ನಿರ್ದೇಶಕ ಸೆರ್ಗಿಯೊ ಗೋರ್ ಅವರನ್ನು ಭಾರತಕ್ಕೆ ಹೊಸ ರಾಯಭಾರಿಯಾಗಿ ನೇಮಕ ಮಾಡಿ ಶುಕ್ರವಾರ ಆದೇಶ ಹೊರಡಿಸಿದ್ದಾರೆ. ಜತೆಗೆ ಗೋರ್, ದಕ್ಷಿಣ ಮತ್ತು ಮಧ್ಯ ಏಷ್ಯಾ ವಲಯಕ್ಕೆ ಅಮೆರಿಕದ ವಿಶೇಷ ಪ್ರತಿನಿಧಿಯಾಗಿಯೂ ಜವಾಬ್ದಾರಿ ನಿರ್ವಹಿಸಲಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹೆಚ್ಚಿನ ಪ್ರಮಾಣದ ಪ್ರತಿಸುಂಕ ಹೇರಿಕೆ ಕಾರಣದಿಂದಾಗಿ ಭಾರತ-ಅಮೆರಿಕ ಸಂಬಂಧ ಪ್ರಸ್ತುತ ಬಹಳ ಸೂಕ್ಷ್ಮವಾಗಿರುವಾಗ ಹೊಸ ರಾಯಭಾರಿಯ ನೇಮಕ ಕುತೂಹಲಕ್ಕೆ ಕಾರಣವಾಗಿದೆ.

ವಿಶ್ವದ ಅತ್ಯಧಿಕ ಜನಸಂಖ್ಯೆಯ ದೇಶವಾದ ಭಾರತದಲ್ಲಿ ನನ್ನ ಅಜೆಂಡಾ(ಕಾರ್ಯಸೂಚಿ) ಜಾರಿ, ಅಲ್ಲದೇ ಮತ್ತೊಮ್ಮೆ 'ಅಮೆರಿಕ ದೇಶ ಶ್ರೇಷ್ಠ' ಆಗಿಸಲು ನಾನು ಪೂರ್ಣ ನಂಬಬಹುದಾದ ಅಧಿಕಾರಿ ಗೋರ್. ಹಾಗಾಗಿಯೇ ಅವರನ್ನು ಭಾರತ ಗಣರಾಜ್ಯಕ್ಕೆ ರಾಯಭಾರಿಯಾಗಿ ನೇಮಿಸಿರುವೆ ಎಂದು ಟ್ರಂಪ್ 'ಟ್ರೂತ್' ಆಪ್‌ನಲ್ಲಿ ಬರೆದಿದ್ದಾರೆ.

ಭಾರತಕ್ಕೆ ರಾಯಭಾರಿ ಹಾಗೂ ದಕ್ಷಿಣ-ಮಧ್ಯ ಏಷ್ಯಾ ವ್ಯವಹಾರಗಳ ವಿಶೇಷ ರಾಯಭಾರಿಯಾಗಿ ನೇಮಕವಾಗಿರುವುದಕ್ಕೆ ಹೆಮ್ಮೆ ಎನಿಸುತ್ತಿದೆ. ಅಮೆರಿಕ ಪ್ರತಿನಿಧಿಸುವುದು ಜೀವನದಲ್ಲೇ ದೊಡ್ಡ ಗೌರವ ಎಂದು ಗೋರ್ ಹರ್ಷ ವ್ಯಕ್ತಪಡಿಸಿದ್ದಾರೆ.

ಎರಿಕ್ ಗಾರ್ಸೆಟ್ಟಿ 2023 ಮೇನಿಂದ 2025ರ ಜನವರಿವರೆಗೆ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದರು.

ತಾಷ್ಕೆಂಟ್ ಮೂಲದ ಗೋರ್!

ಸೆರ್ಗಿಯೊ ಗೋರ್, ಮೂಲತಃ ಉಜ್ಬೇಕಿಸ್ತಾನದವರು. ತಾಷ್ಕೆಂಟ್ ನಗರದಲ್ಲಿ ಜನಿಸಿದ ಗೋರ್, 1990ರಲ್ಲಿ ಅಮೆರಿಕಕ್ಕೆ ವಲಸೆ ಹೋಗಿ ಅಲ್ಲಿಯೇ ನೆಲೆ ಕಂಡುಕೊಂಡಿದ್ದಾರೆ. 2023-24ರಲ್ಲಿ ಅಧ್ಯಕ್ಷೀಯ ಚುನಾವಣಾ ಪ್ರಚಾರ ಕಾಲದಲ್ಲಿ ಹೆಚ್ಚು ಶ್ರಮವಹಿಸಿದ್ದರು ಎಂಬ ಕಾರಣಕ್ಕೆ ಗೋರ್‌ರನ್ನು ಡೊನಾಲ್ಡ್ ಟ್ರಂಪ್ ಬಹಳವಾಗಿ ನಂಬಿದ್ದಾರೆ. ಆದರೆ, ವಿಶ್ವದ ಸಿರಿವಂತ ಉದ್ಯಮಿ ಎಲಾನ್ ಮಸ್ಕ್‌ಗೆ ಸೆರ್ಗಿಯೊ ಗೋರ್ ಬಗ್ಗೆ ಅಷ್ಟು ವಿಶ್ವಾಸವಿಲ್ಲ. ಮಸ್ಕ್ ಈ ಹಿಂದೆ ಶ್ವೇತಭವನದಲ್ಲಿದ್ದಾಗ, ಸರಕಾರದ ವೆಚ್ಚ ಕಡಿತ ಕಾರ್ಯಕ್ರಮದ ಮುಖ್ಯಸ್ಥರಾಗಿದ್ದಾಗ, ಸೆರ್ಗಿಯೊ ಗೋರ್‌ರನ್ನು ಒಮ್ಮೆ 'ವಿಷದ ಹಾವು' ಎಂದು ಕರೆದಿದ್ದರು.

ಸಮಾಚಾರ ಸಣ್ಣದಲ್ಲ

ಮಂಗಳೂರು - ಬೆಂಗಳೂರಿಗೆ 4 ವಿಶೇಷ ರೈಲು

ಮಂಗಳೂರು: ಗಣೇಶ ಚೌತಿ ಉತ್ಸವ ದಟ್ಟನೆ ಪರಿಹರಿಸಲು ಮಂಗಳೂರು- ಬೆಂಗಳೂರು ಮಧ್ಯೆ ಚೌತಿ ವಿಶೇಷ ರೈಲುಗಳನ್ನು ಓಡಿಸಲಾಗುವುದು. ನಂ.06251 ಯಶವಂತಪುರ ಜಂಕ್ಷನ್-ಮಂಗಳೂರು ಸೆಂಟ್ರಲ್ ವಿಶೇಷ ರೈಲು ಯಶವಂತಪುರದಿಂದ ಆ.25ರಂದು ರಾತ್ರಿ11.55 ಕ್ಕೆ ಹೊರಟು ಮರುದಿನ ಮಂಗಳೂರು ಸೆಂಟ್ರಲ್‌ಗೆ ಬೆಳಗ್ಗೆ 11.45 ಕ್ಕೆ ತಲಪಲಿದೆ. ನಂ.06252 ಮಂಗಳೂರು ಸೆಂಟ್ರಲ್ ಯಶವಂತಪುರ ಜಂಕ್ಷನ್ ರೈಲು ಆ.26 ರಂದು ಮಧ್ಯಾಹ್ನ 1 ಗಂಟೆಗೆ ಹೊರಟು ಅದೇ ದಿನ ರಾತ್ರಿ 10.40ಕ್ಕೆ ಯಶವಂತಪುರ ಜಂಕ್ಷನ್ ತಲಪಲಿದೆ. ನಂ.06253 ಯಶವಂತಪುರ ಜಂಕ್ಷನ್ ಮಂಗಳೂರು ಸೆಂಟ್ರಲ್ ವಿಶೇಷ ರೈಲು ಆ.26 ರಂದು ರಾತ್ರಿ 11.55 ಕ್ಕೆ ಹೊರಟು ಮರುದಿನ ಬೆಳಗ್ಗೆ 11.45ಕ್ಕೆ ಮಂಗಳೂರು ಸೆಂಟ್ರಲ್ ತಲಪಲಿದೆ. ನಂ.06254 ಮಂಗಳೂರು ಸೆಂಟ್ರಲ್-ಯಶವಂತಪುರ ಜಂಕ್ಷನ್ ಎಕ್ಸ್‌ಪ್ರೆಸ್ ರೈಲು ಮಂಗಳೂರಿನಿಂದ ಆ.27ರಂದು ಮಧ್ಯಾಹ್ನ 2.15 ಕ್ಕೆ ಹೊರಟು ಅದೇ ರಾತ್ರಿ 11.30 ಕ್ಕೆ ಯಶವಂತಪುರ ತಲಪುವುದು. ಈ ನಾಲ್ಕೂ ರೈಲುಗಳಿಗೆ ಕುಣಿಗಲ್, ಚನ್ನರಾಯಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯರೋಡ್, ಕಬಕ-ಪುತ್ತೂರು, ಬಂಟ್ವಾಳದಲ್ಲಿ ನಿಲುಗಡೆ ಇದೆ.

ಮೊಬೈಲ್ ಕಳವು: 7 ವರ್ಷ ಜೈಲು ಶಿಕ್ಷೆ

ತುಮಕೂರು: ಒಂದೇ ಒಂದು ಮೊಬೈಲ್ ಕದ್ದ ಕಳ್ಳನಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಿ ತುಮಕೂರು ಜಿಲ್ಲಾ ಸತ್ರ ಪ್ರಧಾನ ನ್ಯಾಯಾಲಯ ತೀರ್ಪು ನೀಡಿದೆ. ಪ್ರದೀಪ್ ಎಂಬಾತ ಜೈಲು ಶಿಕ್ಷೆಗೆ ಗುರಿಯಾದ ಅಪರಾಧಿ. ಅಮಿತ್ ಹಾಗೂ ದಿಲೀಪ್ ಚೌಧರಿ ಎಂಬ ಇಬ್ಬರು ಯುವಕರಿಗೆ ಡ್ರ್ಯಾಗರ್ ತೋರಿಸಿ ಬೆದರಿಸಿ ಪ್ರದೀಪ್ ಮೊಬೈಲ್ ಕಸಿದುಕೊಂಡು ಪರಾರಿಯಾಗಿದ್ದನು. 2020ರಲ್ಲಿ ನಾಮದ ಚಿಲುಮೆ ಬಳಿ ಘಟನೆ ನಡೆದಿತ್ತು. ಈ ಸಂಬಂಧ ಕ್ಯಾತ್ಸಂದ್ರ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದರು. ಅಂದಿನ ಇನ್‌ಸ್ಪೆಕ್ಟರ್ ಚನ್ನೇಗೌಡ ಕೋರ್ಟ್‌ಗೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಸರಕಾರಿ ಅಭಿಯೋಜಕಿ ಆರ್.ಟಿ. ಅರುಣಾ ವಾದ ಮಂಡಿಸಿದ್ದರು. ನ್ಯಾಯಧೀಶ ಬಿ. ಜಯಂತ್ ಕುಮಾರ್ ಅವರು ಈ ತೀರ್ಪು ನೀಡಿ ಆದೇಶ ಹೊರಡಿಸಿದ್ದಾರೆ.

ವಿದ್ಯಾರ್ಥಿನಿಯನ್ನು ಕೊಂದ ಬಾಲಕ

ಹೈದರಾಬಾದ್: ತಾನು ಕ್ರಿಕೆಟ್ ಬ್ಯಾಟ್ ಕದಿಯುವುದನ್ನು ನೋಡಿದಳೆಂಬ ಕಾರಣಕ್ಕೆ 14 ವರ್ಷದ ಬಾಲಕನೊಬ್ಬ 10 ವರ್ಷದ ಬಾಲಕಿಯನ್ನು ಹತ್ಯೆ ಮಾಡಿರುವ ಘಟನೆ ಕೂಕಟಪಲ್ಲಿಯಲ್ಲಿ ನಡೆದಿದೆ ಎಂದು ಸೈಬರಾಬಾದ್ ಪೊಲೀಸರು ತಿಳಿಸಿದ್ದಾರೆ. ಆರೋಪಿ ಬಾಲಕನು 10ನೇ ತರಗತಿಯ ವಿದ್ಯಾರ್ಥಿಯಾಗಿದ್ದು, ಆ. 18ರ ಬೆಳಗ್ಗೆ ಪಕ್ಕದ ಮನೆಯ ಬಾಲಕನ ಎಂಆರ್‌ಎಫ್ ಬ್ಯಾಟ್ ಕದಿಯಲು ಯೋಜನೆ ರೂಪಿಸಿದ್ದಾನೆ. ಆತ ಬ್ಯಾಟ್ ಕದಿಯುವಾಗ ಪಕ್ಕದ ಮನೆಯ ಬಾಲಕನ ಸಹೋದರಿ (10 ವರ್ಷದ ಬಾಲಕಿ) ಅದನ್ನು ಗಮನಿಸಿ, ಆತನಿಗೆ ಎಚ್ಚರಿಕೆ ನೀಡಿದ್ದಾಳೆ. ಇದರಿಂದ ಭಯಗೊಂಡ ಬಾಲಕನು ಬಾಲಕಿಗೆ ಚಾಕುವಿನಿಂದ ಹಲವು ಬಾರಿ ಇರಿದು ಕೊಲೆ ಮಾಡಿದ್ದಾನೆ ಎಂದು ಸೈಬರಾಬಾದ್ ಪೊಲೀಸ್ ಆಯುಕ್ತ ಅವಿನಾಶ್ ಮೊಹಾಂತಿ ತಿಳಿಸಿದ್ದಾರೆ. ಬಳಿಕ ಚಾಕು ಮತ್ತು ಕೈಗಳನ್ನು ತೊಳೆದುಕೊಂಡು, ಬಟ್ಟೆ ಬದಲಾಯಿಸಿ ತನಗೆ ಏನೂ ತಿಳಿದಿಲ್ಲ ಎಂಬಂತೆ ವರ್ತಿಸಿದ್ದಾನೆ. ಬಾಲಕನನ್ನು ಶುಕ್ರವಾರ ಬಂಧಿಸಲಾಗಿದೆ. ಶಾಲೆಗೆ ರಜೆ ಇದ್ದ ಕಾರಣ ಬಾಲಕಿ ಮನೆಯಲ್ಲಿ ಒಬ್ಬಂಟಿಯಾಗಿ ಇರುವಾಗ ಘಟನೆ ನಡೆದಿದೆ ಎಂದು ಅವರು ತಿಳಿಸಿದ್ದಾರೆ.

ತುಮಕೂರು ಜಿಲ್ಲಾಸ್ಪತ್ರೆ ಡ್ಯೂಟಿ ನರ್ಸ್ ಸಾವು

ತುಮಕೂರು: ನಗರದ ಜಿಲ್ಲಾಸ್ಪತ್ರೆಯಲ್ಲಿ ನರ್ಸ್ ಆಗಿ ಸೇವೆ ಸಲ್ಲಿಸುತ್ತಿದ್ದ 32 ವರ್ಷದ ಲತಾ ಹೃದಯಾಘಾತದಿಂದ ನಿಧನರಾಗಿದ್ದಾರೆ. ಜಿಲ್ಲಾ ಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿಯೇ ಲತಾ ಅವರಿಗೆ ಹೃದಯಾಘಾತವಾಗಿದೆ. ಶುಕ್ರವಾರ ರಾತ್ರಿ ಪಾಳೆಯ ಕೆಲಸಕ್ಕೆ ಲತಾ ಹಾಜರಾಗಿದ್ದರು. ರಾತ್ರಿ ಊಟ ಮುಗಿಸಿಕೊಂಡು ವಾಶ್‌ರೂಮ್ ಬಳಿ ತೆರಳಿದ್ದ ವೇಳೆ ಲತಾ ಅವರಿಗೆ ವಾಂತಿಯಾಗಿ ಸುಸ್ತಾಗಿ, ಎದೆನೋವು ಎಂದು ಕುಸಿದು ಬಿದ್ದಿದ್ದಾರೆ. ಆಸ್ಪತ್ರೆಯಲ್ಲಿರವುದರಿಂದ ಆ ಕ್ಷಣದಲ್ಲಿಯೇ ಲತಾ ಅವರಿಗೆ ಚಿಕಿತ್ಸೆ ಕೊಡಿಸಲು ವೈದ್ಯರು ಮುಂದಾಗಿ ದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಲತಾ ನಿಧನರಾಗಿದ್ದಾರೆ. ಸುಮಾರು ರಾತ್ರಿ 11 ಗಂಟೆಗೆ ಹೃದಯಾಘಾತ ಉಂಟಾಗಿದೆ ಎಂದು ತಿಳಿದು ಬಂದಿದೆ.

ಜಿತೇಂದ್ರ ಸಿಂಗ್
ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ

ಮುಂದಿನ 15 ವರ್ಷದಲ್ಲಿ 100 ಉಪಗ್ರಹಗಳನ್ನು ಉಡಾವಣೆ ಮಾಡಲು ಭಾರತ ಯೋಚಿಸಿದ್ದು, ಈ ಯೋಜನೆಯು ನೀಲನಕ್ಷೆಯ ಪ್ರಕಾರ ಸರಕಾರಿ ತಂತ್ರಜ್ಞಾನ ಕಾರ್ಯಾಚರಣೆ ಹಾಗೂ ಖಾಸಗಿ ನೇತೃತ್ವದ ಕಾರ್ಯಾಚರಣೆಯ ಸಹಭಾಗಿತ್ವದಲ್ಲಿ ಅನುಷ್ಠಾನಕ್ಕೆ ಬರಲಿದೆ. 2040ರವರೆಗೆ ಹಾಗೂ ಆ ನಂತರದ ಭಾರತದ ಬಾಹ್ಯಾಕಾಶ ಕಾರ್ಯಾಚರಣೆಗಳಿಗೆ ಈ ನೀಲನಕ್ಷೆ ಮಾರ್ಗದರ್ಶನ ಒದಗಿಸಲಿದೆ.

ಶ್ರಾವಣ ಮಾಸದ ಕೊನೆಯ ದಿನದ ವಿಶೇಷ ಅಭಿಷೇಕ | ಸಾವಿರಾರು ಭಕ್ತರು ಭಾಗಿ

ಮಲೆ ಮಹದೇಶ್ವರನಿಗೆ 108 ಕುಂಭಾಭಿಷೇಕ

ಚಾಮರಾಜನಗರ: ಪ್ರಸಿದ್ಧ ಯಾತ್ರಾಸ್ಥಳವಾದ ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟದಲ್ಲಿ ಶ್ರಾವಣ ಮಾಸದ ಕೊನೆ ದಿನವಾದ ಶನಿವಾರ ದೇವರಿಗೆ 108 ಕುಂಭಾಭಿಷೇಕ ನೆರವೇರಿತು.

ಕ್ಷೇತ್ರದಲ್ಲಿ ಪ್ರತೀ ವರ್ಷವೂ ಶ್ರಾವಣ ಮಾಸದ ಮೊದಲ ದಿನ ಮತ್ತು ಕಡೇ ದಿನದಂದು ದೇವರಿಗೆ 108 ಕುಂಭಗಳ ಪವಿತ್ರ ಜಲದಿಂದ ಅಭಿಷೇಕ ನೆರವೇರಿಸಲಾಗುತ್ತದೆ. ಅದರಂತೆ ಶನಿವಾರ ಬೆನಕ ಅಮಾವಾಸ್ಯೆ ಹಿನ್ನಲೆ ಮಲೆಮಹದೇಶ್ವರ ಬೆಟ್ಟದಲ್ಲಿ 108 ಬೇಡಗಂಪಣ ಅರ್ಚಕರು ಮಜ್ಜನ ಬಾವಿಯಿಂದ ಪವಿತ್ರ ಜಲವನ್ನು ಮೆರವಣಿಗೆಯಲ್ಲಿ ತಂದರು.

ಮಲೆ ಮಹದೇಶ್ವರ ಬೆಟ್ಟದ ಸಾಲೂರು ಬೃಹನ್ಮಠಾಧ್ಯಕ್ಷ ಶಾಂತ ಮಲ್ಲಿಕಾರ್ಜುನಸ್ವಾಮಿ ನೇತೃತ್ವದಲ್ಲಿ ಬೇಡಗಂಪಣ ಅರ್ಚಕರು ಮಜ್ಜನ ಬಾವಿಯಿಂದ 108 ಕುಂಭಗಳನ್ನು ಹೊತ್ತು ತಂದು ಹೋಮ ನೆರವೇರಿಸಿ ಸ್ವಾಮಿಗೆ ಅಭಿಷೇಕ ನೆರವೇರಿಸಿದರು, ಜೊತೆಗೆ 108 ಎಳನೀರಿನಿಂದಲೂ ಅಭಿಷೇಕ ಮಾಡುವ ಮೂಲಕ ಶ್ರಾವಣ ಮಾಸದ ವಿಶೇಷ ಪೂಜೆ ನೆರವೇರಿತು.

ಮೆರವಣಿಗೆಯಲ್ಲಿ ವಾದ್ಯಮೇಳ, ಛತ್ರಿ, ಚಾಮರದೊಂದಿಗೆ 108 ಅರ್ಚಕರು ಕುಂಭ ಹೊತ್ತು ದೇವಾಲಯದ ಹೊರ ಹಾಗೂ ಒಳ ಆವರಣದಲ್ಲಿ ಮೆರವಣಿಗೆ ಮಾಡಿ ಗರ್ಭಗುಡಿ ಸುತ್ತ ಪ್ರದಕ್ಷಿಣೆ ಹಾಕಿದರು. ಸ್ವಾಮಿಗೆ 108 ಕುಂಭಾಭಿಷೇಕ ಪ್ರಯುಕ್ತ ಗಂಗಾಪೂಜೆ, ಗಣಪತಿಪೂಜೆ ಪುಣ್ಯಾಹ, ಪಂಚ ಕಳಶ, ನವಗ್ರಹ ಸಮೇತ ಮಹಾಮೃತ್ಯುಂಜಯ, ಸಪ್ತ ಸಭಾ ದೇವತೆಗಳು, ಕಳಸ ಆವಾಹನೆ, ಹೋಮಹವನ ಪೂಜೆ ನೆರವೇರಿಸಲಾಗಿದೆ ಎಂದು ಪ್ರಾಧಿಕಾರದ ಕಾರ್ಯದರ್ಶಿ ರಘು ತಿಳಿಸಿದ್ದಾರೆ.

ಶ್ರಾವಣ ಮಾಸದ ಕಡೇ ದಿನದಂದು ಬೇಡಗಂಪಣ ಅರ್ಚಕರು ದೇವರಿಗೆ 108 ಕುಂಭಗಳ ಅಭಿಷೇಕ ನೆರವೇರಿಸಿದರು.

ಮಮತಾ ಆಸ್ತಿ ಕೇವಲ 15.38 ಕೋಟಿ ರು.: ಎಡಿಆರ್ ವರದಿ

ನಾಯ್ಡು ಸಿರಿವಂತ ಸಿಎಂ ಸಿದ್ದರಾಮಯ್ಯಗೆ 3ನೇ ಸ್ಥಾನ

ದೆಹಲಿ: ಭಾರತದಲ್ಲಿನ ವಿವಿಧ ರಾಜ್ಯಗಳಲ್ಲಿನ ಮುಖ್ಯಮಂತ್ರಿ (ಸಿಎಂ)ಗಳಲ್ಲಿ ಯಾರು ಎಷ್ಟು ಸಿರಿವಂತರು? ಈ ಪ್ರಶ್ನೆಗೆ 'ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್'(ಎಡಿಆರ್) ಉತ್ತರ ನೀಡಿದೆ.

ಆಂಧ್ರಪ್ರದೇಶದ ಎನ್.ಚಂದ್ರಬಾಬು ನಾಯ್ಡು ದೇಶದಲ್ಲಿ ಅತ್ಯಂತ ಸಿರಿವಂತ ಸಿಎಂ ಎನಿಸಿಕೊಂಡಿದ್ದಾರೆ. ಅವರ ಬಳಿ ಒಟ್ಟು 931 ಕೋಟಿ ರು. ಮೌಲ್ಯದ ಆಸ್ತಿ ಇದೆ. 2ನೇ ಸ್ಥಾನದಲ್ಲಿ ಅರುಣಾಚಲ ಪ್ರದೇಶದ ಸಿಎಂ ಪೆಮಾ ಖಂಡು ಇದ್ದಾರೆ. ಅವರ ಬಳಿ 332 ಕೋಟಿ ರು.ಗೂ ಹೆಚ್ಚು ಆಸ್ತಿ ಇದೆ. 3ನೇ ಸ್ಥಾನದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದಾರೆ. ಅವರ ಒಟ್ಟು ಆಸ್ತಿ ಮೌಲ್ಯ 51 ಕೋಟಿ ರು.ಗಳಷ್ಟಿದೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೇವಲ 15.38 ಲಕ್ಷ ರು. ಮೊತ್ತದ ಆಸ್ತಿ ಹೊಂದಿದ್ದು, ದೇಶದಲ್ಲೆ ಅತಿ ಕಡಿಮೆ ಆಸ್ತಿ ಹೊಂದಿರುವ ಮುಖ್ಯಮಂತ್ರಿ ಎನಿಸಿಕೊಂಡಿದ್ದಾರೆ. ಛತ್ತೀಸ್‌ಗಢ ಸಿಎಂ ವಿಷ್ಣು ದೇವ್ ಸಾಯಿ 3.80 ಕೋಟಿ ರು., ಪಂಜಾಬ್ ಸಿಎಂ ಭಗವಂತ್ ಮಾನ್ ಮತ್ತು ಒಡಿಶಾ ಸಿಎಂ ಮೋಹನ್ ಚರಣ್ ಮಾಝಿ ತಲಾ 1.97 ಕೋಟಿ ರು., ಬಿಹಾರ ಸಿಎಂ ನಿತೀಶ್ ಕುಮಾರ್ 1.64 ಕೋಟಿ ರು., ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ 1.54 ಕೋಟಿ ರು., ರಾಜಸ್ಥಾನ ಸಿಎಂ ಭಜನ್ ಲಾಲ್ ಶರ್ಮಾ 1.46 ಕೋಟಿ ರು., ಕೇರಳ ಸಿಎಂ ಪಿಣರಾಯಿ ವಿಜಯನ್ 1.18 ಕೋಟಿ ರು. ಹೊಂದಿದ್ದಾರೆ. ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದ ಸಿಎಂ ಉಮರ್ ಅಬ್ದುಲ್ಲಾ 55.24 ಲಕ್ಷ ರು. ಮೌಲ್ಯದ ಆಸ್ತಿಯನ್ನಷ್ಟೇ ಹೊಂದಿದ್ದಾರೆ.

ಟಾಪ್ ತ್ರಿ ಸಿಎಂಗಳು



30 ಸಿಎಂಗಳ ಒಟ್ಟು ಆಸ್ತಿ ಮೌಲ್ಯ 1632 ಕೋಟಿ ರು.!

'ಎಡಿಆರ್' ಶುಕ್ರವಾರ ಪ್ರಕಟಿಸಿರುವ ಪಟ್ಟಿಯ ಪ್ರಕಾರ ಮಣಿಪುರದ ಹೊರತು ಭಾರತದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 30 ಮುಖ್ಯಮಂತ್ರಿಗಳ ಸರಾಸರಿ ಆಸ್ತಿ 54.42 ಕೋಟಿ ರು. ಗಳಷ್ಟಿದೆ. 30 ಸಿಎಂಗಳ ಒಟ್ಟಾರೆ ಆಸ್ತಿ ಮೊತ್ತ 1,632 ಕೋಟಿ ರು.ಗಳಷ್ಟಿದೆ. 30 ಸಿಎಂಗಳಲ್ಲಿ ಇಬ್ಬರು ಮಾತ್ರವೇ ಶತಕೋಟ್ಯಾಧಿಪತಿಗಳು ಎನಿಸಿಕೊಂಡಿದ್ದಾರೆ. ಮುಖ್ಯಮಂತ್ರಿಗಳ ಪ್ರಮಾಣವಚನ ಸ್ವೀಕಾರ ಪ್ರಮಾಣಪತ್ರಗಳಲ್ಲಿನ ಮಾಹಿತಿ ಆಧರಿಸಿ ಎಡಿಆರ್ ಈ ಪಟ್ಟಿ ತಯಾರಿಸಿದೆ.

ರಾಷ್ಟ್ರೀಯ ಹಿತಾಸಕ್ತಿ ಮತ್ತು ರೈತರ ರಕ್ಷಣೆ ವಿಚಾರದಲ್ಲಿ ರಾಜಿ ಇಲ್ಲ: ಭಾರತ

ಟ್ರಂಪ್ ಮುಖವಾಡ ಕಳಚಿದ ಜೈಶಂಕರ್

ದೆಹಲಿ: ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿ ಮತ್ತು ರೈತರ ರಕ್ಷಣೆ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅಮೆರಿಕಕ್ಕೆ ಸ್ಪಷ್ಟ ಸಂದೇಶ ನೀಡಿದ್ದಾರೆ. ರಷ್ಯಾದಿಂದ ತೈಲ ಖರೀದಿಸುವ ಬಗ್ಗೆ ಅಮೆರಿಕದ ಅಸಮಾಧಾನದ ಬಗ್ಗೆ ಮತನಾಡಿದ ಅವರು, 'ಚೀನಾ ರಷ್ಯಾದ ತೈಲದ ಅತಿದೊಡ್ಡ ಆಮದುದಾರರಾಗಿರುವಾಗ, ಅದರ ಮೇಲೆ ಏಕೆ ಸುಂಕ ವಿಧಿಸಲಾಗಿಲ್ಲ?' ಎಂಬ ಪ್ರಶ್ನೆಯನ್ನು ಅವರು ಎತ್ತಿದರು.

ಅಮೆರಿಕದೊಂದಿಗಿನ ನಡೆಯುತ್ತಿರುವ ವ್ಯಾಪಾರ ವಿವಾದದ ಕುರಿತು ಜೈಶಂಕರ್, ಭಾರತವು ಮೂರು ಕಟ್ಟುನಿಟ್ಟಾದ ಆದ್ಯತೆಗಳನ್ನು ಹೊಂದಿದೆ. ರೈತರು ಮತ್ತು ಸಣ್ಣ ಉತ್ಪಾದಕರ ಹಿತಾಸಕ್ತಿಗಳ ರಕ್ಷಣೆ, ತೈಲ ಆಮದಿನ ಮೇಲಿನ ರಾಷ್ಟ್ರೀಯ ಹಿತಾಸಕ್ತಿ ಮತ್ತು ಭಾರತ-ಪಾಕ್ ಸಂಬಂಧಗಳಲ್ಲಿ ಯಾವುದೇ ರೀತಿಯ ಬಾಹ್ಯ ಮಧ್ಯಸ್ಥಿಕೆಗೆ ವಿರೋಧದ ಕುರಿತೂ

ಅಮೆರಿಕದೊಂದಿಗೆ ಮಾತುಕತೆ ನಡೆಯುತ್ತಿದೆ. ಆದರೆ ಈ ವಿಷಯಗಳ ಬಗ್ಗೆ ಯಾವುದೇ ರಾಜಿ ಸಾಧ್ಯವಿಲ್ಲ' ಎಂದು ಅವರು ಹೇಳಿದರು.

'ನಮ್ಮ ಯೋಚನೆಗಳು ಸ್ಪಷ್ಟವಾಗಿವೆ. ಅತ್ಯಂತ ಮುಖ್ಯವಾದದ್ದು ರೈತರು ಮತ್ತು ಸಣ್ಣ ಉತ್ಪಾದಕರ ಹಿತಾಸಕ್ತಿ. ಯಾವುದೇ ಸರಕಾರವು ಇದರಲ್ಲಿ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ರಷ್ಯಾದಿಂದ ತೈಲ ಆಮದಿನ ಮೇಲೆ ಅಮೆರಿಕದ ದ್ವಂದ್ವ ನೀತಿಯನ್ನು ಜೈಶಂಕರ್ ಬಯಲು ಮಾಡಿದರು. ರಷ್ಯಾದಿಂದ ಅತೀ ಹೆಚ್ಚು ಆಮದು ಮಾಡಿಕೊಳ್ಳುವ ಚೀನಾದ ಮೇಲೆ ಏಕೆ ಸುಂಕ ವಿಧಿಸಲಾಗಿಲ್ಲ?' ಎಂದು ಪ್ರಶ್ನಿಸಿದರು.

ಯುರೋಪ್ ಮತ್ತು ಅಮೆರಿಕ ಸ್ವತಃ ರಷ್ಯಾದಿಂದ ಖರೀದಿಸುತ್ತವೆ, ಹಾಗಾದರೆ ಭಾರತದ ಮೇಲೆ ಏಕೆ ಪ್ರಶ್ನೆಗಳಿವೆ? ಭಾರತವು ಯಾರ ಒತ್ತಡಕ್ಕೂ ಮಣಿಯದೆ, ತನ್ನದೇ ಆದ ಹಿತಾಸಕ್ತಿಗಾಗಿ ಇಂಧನ ನೀತಿಯ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಎಂದು ಅವರು ಸ್ಪಷ್ಟವಾಗಿ ಹೇಳಿದರು.

ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುವುದನ್ನು ಮುಂದುವರಿಸಿದ್ದಕ್ಕಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಹೆಚ್ಚುವರಿಯಾಗಿ ಶೇಕಡ 25ರಷ್ಟು ಸುಂಕವನ್ನು ವಿಧಿಸಿದೆ ಎಂಬುದು ಗಮನಿಸಬೇಕಾದ ಸಂಗತಿ. ಇದು ರಷ್ಯಾದ ಆದಾಯಕ್ಕೆ ಹಾನಿ ಮಾಡುತ್ತಿದೆ ಎಂದು ವಾಷಿಂಗ್ಟನ್ ಹೇಳಿಕೊಂಡಿದೆ, ಆದರೆ ತೈಲ ಆಮದು ಮುಂದುವರಿಯುತ್ತದೆ ಎಂದು ಭಾರತ ಸ್ಪಷ್ಟಪಡಿಸಿದೆ.

ರಾಹುಲ್ ಮಧ್ಯಪ್ರವೇಶ ಕೋರಿ ಬೈಕ್ ಟ್ಯಾಕ್ಸಿ ಚಾಲಕರಿಂದ ಮನವಿ

ದೆಹಲಿ: ಕರ್ನಾಟಕದ ಬೈಕ್ ಟ್ಯಾಕ್ಸಿ ಚಾಲಕರು ರಾಹುಲ್ ಗಾಂಧಿಯವರನ್ನು ಭೇಟಿಯಾಗಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ಬೈಕ್ ಟ್ಯಾಕ್ಸಿ ನಿಷೇಧದಿಂದ ಸಂಕಷ್ಟ ಎದುರಿಸುತ್ತಿರುವ ರಾಜ್ಯದ ಲಕ್ಷಾಂತರ ಅಸಂಘಟಿತ ಕಾರ್ಮಿಕರ ಬೈಕ್ ಟ್ಯಾಕ್ಸಿ ಕಲ್ಯಾಣ ಸಂಘಕ್ಕೆ ಇನ್ನಷ್ಟು ಬೆಂಬಲ ಸಿಕ್ಕಿದಂತಾಗಿದೆ.

ಪ್ರತಿಪಕ್ಷ ನಾಯಕ ಮತ್ತು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿಯನ್ನು ದೆಹಲಿಯಲ್ಲಿ ಭೇಟಿ ಮಾಡಿದ ಸಂಘದ ಸದಸ್ಯರು, ಬೈಕ್ ಟ್ಯಾಕ್ಸಿ ನಿಷೇಧದಿಂದ ಕರ್ನಾಟಕದಲ್ಲಿ ಚಾಲಕರು ಎದುರಿಸುತ್ತಿರುವ ಸಂಕಷ್ಟವನ್ನು ವಿವರಿಸಿದರು. ಬೈಕ್ ಟ್ಯಾಕ್ಸಿಗಳ ಕಾರ್ಯಾಚರಣೆ ನಿಟ್ಟಿನಲ್ಲಿ ಸ್ಪಷ್ಟ ನೀತಿ ರೂಪಿಸಲು ಕೂಡಲೇ ಮಧ್ಯಪ್ರವೇಶಿಸಬೇಕು ಎಂದು ಮನವಿ ಸಲ್ಲಿಸಿದ್ದಾರೆ.

ಬೈಕ್ ಟ್ಯಾಕ್ಸಿ ಕಾರ್ಯಾಚರಣೆ ಸಂಬಂಧ ಸಮರ್ಪಕ ನೀತಿಯನ್ನು ರೂಪಿಸುವಂತೆ ಮನವಿ ಮಾಡಿಕೊಂಡಿದೆ. ಅದು ಆಗುವ ವರೆಗೆ, ಕಾರ್ಮಿಕರ ವಿರುದ್ಧ ದಂಡಾತ್ಮಕ ಕ್ರಮ ಕೈಗೊಳ್ಳದೆ ತಕ್ಷಣ ಸೇವೆ ಪುನರಾರಂಭಿಸಲು ಅವಕಾಶ ನೀಡಬೇಕೆಂದು ಒತ್ತಾಯಿಸಿದೆ.

ಸಂಘದ ಪ್ರತಿನಿಧಿಗಳ ಮಾತುಗಳನ್ನು ಕೇಳಿರುವ ರಾಹುಲ್ ಗಾಂಧಿಯವರು, ಜೀವನ ನಡೆಸಲು ಹೋರಾಡುತ್ತಿರುವ ಯುವ ಕಾರ್ಮಿಕರ ಪರ ನಿಲ್ಲುವುದಾಗಿ ಭರವಸೆ ನೀಡಿದ್ದಾರೆ. ಅವರ ಈ ಭರವಸೆಯಿಂದ, ಬೈಕ್ ಟ್ಯಾಕ್ಸಿ ಸೇವೆ ಸ್ಥಗಿತದಿಂದ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ರಾಜ್ಯದ 6 ಲಕ್ಷಕ್ಕೂ ಹೆಚ್ಚು ಚಾಲಕರು ಮತ್ತು ಅವರ ಕುಟುಂಬಗಳಿಗೆ ಹೊಸ ಭರವಸೆ ಮೂಡಿದಂತಾಗಿದೆ.

ಅಜ್ಜಿ ಬೈದ ಕಾರಣಕ್ಕೆ ಮೊಮ್ಮಗ ಆತ್ಮಹತ್ಯೆ

ಕಲಬುರಗಿ: ಅಜ್ಜಿ ಗುಟ್ಕಾ ತಿನ್ನಬೇಡ ಎಂದು ಬೈದ ಹಿನ್ನೆಲೆಯಲ್ಲಿ 9ನೇ ತರಗತಿ ಓದುತ್ತಿದ್ದ ಬಾಲಕ ಆತ್ಮಹತ್ಯೆಗೆ ಶರಣಾದ ಹೃದಯ ವಿದ್ರಾವಕ ಘಟನೆ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಕರ್ಜಗಿ ಗ್ರಾಮದಲ್ಲಿ ನಡೆದಿದೆ. ಮಣ್ಣಾಂಕಲಗಿ ಗ್ರಾಮದ 15 ವರ್ಷದ ರೋಹಿತ್ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕಳೆದ ಏಳೆಂಟು ವರ್ಷಗಳಿಂದ ಅಜ್ಜಿ ದಮಯಂತಿ ಅವನನ್ನು ಸಾಕಿ ಪೋಷಿಸುತ್ತಾ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ರೋಹಿತ್ ಗುಟ್ಕಾ ತಿನ್ನುತ್ತಿದ್ದ ವಿಚಾರವನ್ನು ಸ್ನೇಹಿತರು ಅಜ್ಜಿಗೆ ತಿಳಿಸಿದ್ದರಿಂದ, ಅಜ್ಜಿ ದಮಯಂತಿ ಬೈದ ಹಿನ್ನಲೆ ಆತ್ಮಹತ್ಯೆಗೆ ದಾರಿ ಮಾಡಿಕೊಂಡಿದ್ದಾನೆ ಎಂದು ಹೇಳಲಾಗಿದೆ. ಘಟನೆಯ ಕುರಿತು ಅಫಜಲಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೋದಿ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್

ತೇಜಸ್ವಿ ಯಾದವ್ ವಿರುದ್ಧ ಎಫ್‌ಐಆರ್

ಶಹಜಹಾನ್‌ಪುರ (ಬಿಹಾರ): ಪ್ರಧಾನಿ ಮೋದಿ ಅವರ ಮೇಲೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಕುರಿತು ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ನಾಯಕ ತೇಜಸ್ವಿ ಯಾದವ್ ವಿರುದ್ಧ ಇಲ್ಲಿನ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಈ ಸಂಬಂಧ ಬಿಜೆಪಿ ನಗರಾಧ್ಯಕ್ಷ ಶಿಲ್ಪಿ ಗುಪ್ತಾ ದೂರು ದಾಖಲಿಸಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ರಾಜೇಶ್ ದ್ವಿವೇದಿ ಹೇಳಿದ್ದಾರೆ. ಪ್ರಧಾನಿ ವಿರುದ್ಧ ಯಾದವ್ ಅವರ ಅಸಭ್ಯ ಹೇಳಿಕೆ ದೇಶದ ಜನರಲ್ಲಿ ಅಪಾರ ಕೋಪವನ್ನು ಉಂಟುಮಾಡಿದೆ ಎಂದು ಗುಪ್ತಾ ಅವರ ದೂರಿನಲ್ಲಿ ಆರೋಪಿಸಲಾಗಿತ್ತು.

ಸದರ್ ಬಜಾರ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಹಾಗೂ ಪೋಸ್ಟ್ ಸಾರ್ವಜನಿಕರು ಮತ್ತು ಬಿಜೆಪಿ ಕಾರ್ಯಕರ್ತರಲ್ಲಿ ಅಸಮಾಧಾನವನ್ನು ಸೃಷ್ಟಿಸಿದೆ ಎಂದು ಆರೋಪಿಸಿದೆ. ಈ ಪೋಸ್ಟ್ ಅನ್ನು ಅಧಿಕೃತ ಆರ್‌ಜೆಡಿ ಖಾತೆಯಿಂದ ಮಾಡಲಾಗಿದೆ ಎಂದು ಗುಪ್ತಾ ಹೇಳಿದರು. ಇಂದು ಮತ ಕಳ್ಳ ಬಿಹಾರದ ಗಯಾಕ್ಕೆ ಬರುತ್ತಾನೆ ಮತ್ತು ಬಿಹಾರಿಗಳ ಮುಂದೆ ಸುಳ್ಳಿನ ಮೇಲೆ ಸುಳ್ಳು ಹೇಳುತ್ತಾನೆ ಎಂದು ಯಾದವ್ ಪೋಸ್ಟ್ ಹಾಕಿದ್ದರು.

ಬಯಲುಸೀಮೆಯ ವಾಣಿಜ್ಯ ಬೆಳೆಗಾರರಲ್ಲಿ ಹರುಷ | ಬೆಲೆ ಏರಿಕೆಯಿಂದ ಗ್ರಾಹಕರಲ್ಲಿ ಆತಂಕ

ಹೆಸರುಕಾಳು, ಕಡ್ಲೆಬೇಳೆ ಬೆಲೆ ಗಗನಮುಖಿ

ಹೂವಪ್ಪ ಐ ಹೆಚ್

ಬೆಂಗಳೂರು: ಉತ್ತರ ಕರ್ನಾಟಕದ ಬಯಲು ಸೀಮೆಯ ವಾಣಿಜ್ಯ ಬೆಳೆ ಹೆಸರುಕಾಳಿನ ಸುಗ್ಗಿ ಮಾರುಕಟ್ಟೆಯಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆರಂಭವಾಗಿಲ್ಲ, ಆದರೂ ಗದಗ ಎಪಿಎಂಸಿಯಲ್ಲಿ ಕಳೆದ ವಾರದಲ್ಲಿ ಕ್ವಿಂಟಲ್‌ಗೆ 10 ಸಾವಿರ ರು.ಗೆ ಹೆಸರುಕಾಳು ಮಾರಾಟವಾಗಿರುವುದು ಬೆಳೆಗಾರರಿಗೆ ಹರುಷ ತಂದಿದೆ.

ಆದರೆ ಈ ಬೆಲೆ ಏರಿಕೆಯಿಂದ ಗ್ರಾಹಕರು ಆತಂಕದಲ್ಲಿದ್ದಾರೆ. ಸಾಲುಸಲು ಹಬ್ಬಗಳು ಆರಂಭವಾಗಿವೆ. ಹೆಸರುಬೇಳೆ ಪಾಯಸ, ಕೋಸಂಬರಿ, ಕಾಳು ಪಲ್ಲೆ ಹೀಗೆ ತರವಾರಿ ಖಾದ್ಯಗಳು ಮಾಡಿ ಹಬ್ಬ ಆಚರಣೆ ಹೇಗೆ ಮಾಡುವುದು ಎಂಬ ಚಿಂತೆ ಗ್ರಾಹಕರದ್ದಾಗಿದೆ. ಇದರ ಜತೆ ಹಬ್ಬದ ಕಾರಣದಿಂದಾಗಿ ಕಡ್ಲೆಬೇಳೆ ಬೆಲೆ ಕೂಡಾ ಏರಿಕೆಯಾಗಿದೆ.

ಬೆಂಗಳೂರು ಎಪಿಎಂಸಿಯಲ್ಲಿ ಹೆಸರುಕಾಳಿನ ಸಗಟು ದರ ಸರಾಸರಿ ಕೆ.ಜಿ.ಗೆ 118-120 ರು.ಇದ್ದು, ಚಿಲ್ಲರೆ ದರ 130-138 ರು., ಹೆಸರುಬೇಳೆ ಸಗಟು 105-115 ರು. ಇದ್ದು ಚಿಲ್ಲರೆ ಬೆಲೆ 125-130 ರು.ಗೆ ಮಾರಾಟವಾಗುತ್ತಿದೆ. ಕಡ್ಲೆಬೇಳೆ ಸಗಟು 80-90 ರು. ಇದ್ದು, ಚಿಲ್ಲರೆ ದರ 110-125 ರು.ಗೆ ಇದೆ.

ಹಬ್ಬಗಳು ಇರುವುದರಿಂದ ಬೇಳೆಕಾಳುಗಳಿಗೆ ಪ್ರತೀ ವರ್ಷ ಹೆಚ್ಚಿನ ಬೇಡಿಕೆ ಇದ್ದೇ ಇರುತ್ತದೆ ಎನ್ನುತ್ತಾರೆ ಬೆಂಗಳೂರು ಇಂಡಿಯಾ ಫುಡ್ಸ್‌ನ ಎನ್ ಶಿವಕುಮಾರ್.

ಗದಗ ಮಾರುಕಟ್ಟೆಯಲ್ಲಿ ಹೆಸರುಕಾಳು ಆವಕ ಅಂದಾಜು 100 ಕ್ವಿಂಟಲ್‌ರಷ್ಟು ಇತ್ತು. ಜುಲೈ ತಿಂಗಳಲ್ಲಿ ಕ್ವಿಂಟಲ್‌ಗೆ ಹರಾಜು ಬರೀ 6,500 ರು.ಗೆ. ಆಗಿದೆ. ಜುಲೈ ಕೊನೆಯಲ್ಲಿ ಹೆಸರುಕಾಳು ಬೆಲೆ ಏರಿಕೆಯಲ್ಲಿದ್ದು, ಅದೇ ಹಾದಿಯಲ್ಲಿ ಸಾಗುತ್ತಿದೆ. ಒಂದೇ ವಾರದಲ್ಲಿ ಉತ್ತಮ ದಪ್ಪ ಹೆಸರುಕಾಳು 10 ಸಾವಿರ ರು.ದಾಟಿದೆ. ಆಗಸ್ಟ್ 1ರಿಂದ ಅಂದಾಜು 2070 ಕ್ವಿಂಟಲ್ ಆವಕವಾಗಿದ್ದು, 10,220 ರು. ಗೆ ಮಾರಾಟವಾಗಿದೆ. 75ರಿಂದ 80 ದಿನಕ್ಕೆ ಹೆಸರುಕಾಳು ಕಟಾವಿಗೆ ಬರುತ್ತದೆ. ಆದರೆ ಈ ಬಾರಿ ಕೃತಿಕಾ ಮಳೆ ಧಾರಾಕಾರವಾಗಿ ಸುರಿದ ಹಿನ್ನೆಲೆಯಲ್ಲಿ ಮೇ ಕೊನೆಯ ವಾರದಲ್ಲಿ ರೈತರು ಬಿತ್ತನೆ ಮಾಡಿದ್ದಾರೆ. ಕೆಲವೆಡೆ ಹೆಸರು ಕೊಯ್ಲಿಗೆ ಬಂದಿದ್ದು, ಸುಗ್ಗಿ ಆರಂಭವಾಗಿದೆ ಪೂರ್ಣಪ್ರಮಾಣದಲ್ಲಿ ಆರಂಭವಾಗಲು ಇನ್ನು 5-6 ದಿನಗಳಾದರೂ ಬೇಕು.

ಧಾರವಾಡ ಜಿಲ್ಲೆಯಲ್ಲಿ ಈ ಬಾರಿ 81,081 ಹೆಕ್ಟೇರ್‌ನಲ್ಲಿ ಹೆಸರು ಬಿತ್ತನೆಯಾಗಿದೆ. ಅಣ್ಣಿಗೇರಿ, ನವಲಗುಂದ, ಕುಂದಗೋಳ ತಾಲೂಕಿನಲ್ಲಿ ಹೆಸರು ನಿರೀಕ್ಷೆಗೂ ಮೀರಿ ಬಿತ್ತನೆಯಾಗಿದೆ. ಬಾಗಲಕೋಟ ಜಿಲ್ಲೆಯಲ್ಲಿ 20 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಹೆಸರುಕಾಳು ಬಿತ್ತನೆಯಾಗಿದೆ. ಕ್ವಿಂಟಲ್ ದರ ಸಣ್ಣಕಾಳಿಗೆ 9,605 ಇದ್ದರೆ, ಉತ್ತಮ ದಪ್ಪ ಹೆಸರುಕಾಳಿನ ದರ ಪ್ರತಿ ಕ್ವಿಂಟಲ್‌ಗೆ 10,060 ಇದೆ. ಕಳೆದ ವರ್ಷ ದರವು ಕ್ವಿಂಟಲ್‌ಗೆ 7,500 ಇತ್ತು ಇನ್ನುತ್ತಾರೆ ಬಾಗಲಕೋಟೆ ಎಪಿಎಂಸಿ ವರ್ತಕರು.

ಎಪಿಎಂಸಿಯಲ್ಲಿ ಹೆಸರುಕಾಳಿಗೆ ಉತ್ತಮ ಬೆಲೆ ಸಿಗುತ್ತಿರುವುದು ಸಂತಸ ತಂದಿದೆ. ಸರಕಾರವು ತಕ್ಷಣವೇ ಬೆಂಬಲ ಬೆಲೆಯಡಿ ಖರೀದಿಸಿದರೆ ಮುಂದೆ ಬೆಲೆ ಕಡಿಮೆಯಾದಾಗ ನಮಗದು ಸಹಕಾರಿಯಾದೀತು.
- ಶಿವಕುಮಾರ್, ಶೀರೂರಿನ ರೈತ

ದಿನನಿತ್ಯ ಅಡುಗೆಗೆ ಹೆಸರುಕಾಳು ಅಗತ್ಯ. ಈಗ ಸಾಲು ಸಾಲು ಹಬ್ಬಗಳು ಬರುತ್ತಿರುವುದರಿಂದ ಹೆಸರುಬೇಳೆಗೆ ಬೇಡಿಕೆ ಜಾಸ್ತಿ. ಕೆ.ಜಿ.ಗೆ ಈಗಾಗಲೇ 130 ರು. ಇದ್ದು, ಇನ್ನೂ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ನಿಜಕ್ಕೂ ಆತಂಕಗೊಂಡಿದ್ದೇನೆ.
- ದೀಪ ಎಂ.ಸಿ, ಗ್ರಾಹಕಿ

ಸಮಾಚಾರ ಸಣ್ಣದಲ್ಲ

ಬಿಸಿಸಿಐಗೆ ಭಾರೀ ನಷ್ಟ?

ದೆಹಲಿ: ಆನ್‌ಲೈನ್ ಗೇಮಿಂಗ್ ನಿಯಂತ್ರಣ ಮಸೂದೆಯಿಂದ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಭಾರಿ ನಷ್ಟ ಅನುಭವಿಸಲಿದೆ. ಟೀಮ್ ಇಂಡಿಯಾದ ಜೆರ್ಸಿ ಪ್ರಾಯೋಜಕರಾಗಿರುವ ಡ್ರೀಮ್ 11, ಹೊಸದಾಗಿ ಪರಿಚಯಿಸಲಾದ ಗೇಮಿಂಗ್ ನಿಯಂತ್ರಣ ಮಸೂದೆಯಿಂದಾಗಿ ತನ್ನ ಚಟುವಟಿಕೆಗಳನ್ನು ಸಂಪೂರ್ಣವಾಗಿ ಸ್ಥಗಿತ ಗೊಳಿಸಬೇಕಾಗಿದೆ. ಆ ಪರಿಣಾಮವಾಗಿ, ಟೀಮ್ ಇಂಡಿಯಾ ಮುಂಬರುವ ಏಷ್ಯಾ ಕಪ್‌ನಲ್ಲಿ ಜೆರ್ಸಿ ಪ್ರಾಯೋಜಕರಿಲ್ಲದೆ ಆಡಬೇಕಾದ ಪರಿಸ್ಥಿತಿ ಎದುರಾಗಿದೆ. ಏಷ್ಯಾ ಕಪ್ ಮುಂದಿನ ತಿಂಗಳು 9 ರಂದು ಯುಎಇಯಲ್ಲಿ ಪ್ರಾರಂಭವಾಗಲಿದ್ದು, ಆ ವೇಳೆಗೆ ಹೊಸ ಪ್ರಾಯೋಜಕರು ಸಿಗದಿದ್ದರೆ, ಭಾರತೀಯ ತಂಡವು ಮುಖ್ಯ ಪ್ರಾಯೋಜಕರಿಲ್ಲದೆ ಪಂದ್ಯಾವಳಿಯಲ್ಲಿ ಭಾಗವಹಿಸ ಬೇಕಾಗುತ್ತದೆ. ನಗದು ಬಹುಮಾನ ಒಳಗೊಂಡ ಆನ್‌ಲೈನ್ ಗೇಮಿಂಗ್ ಅನ್ನು ನಿಷೇಧಿಸುವ ಗುರಿಯನ್ನು ಹೊಂದಿರುವ ಪ್ರಮುಖ ಮಸೂದೆಯನ್ನು ಸಂಸತ್ತು ಕಳೆದ ವಾರ ಅಂಗೀಕರಿಸಿದೆ. ಎರಡೂ ಸದನಗಳಲ್ಲಿ ಯಾವುದೇ ಚರ್ಚೆಯಿಲ್ಲದೆ ಆನ್‌ಲೈನ್ ಗೇಮಿಂಗ್ ನಿಯಂತ್ರಣ ಮಸೂದೆಯನ್ನು ಅಂಗೀಕರಿಸ ಲಾಯಿತು. ಏಷ್ಯಾ ಕಪ್‌ಗೆ ಮುನ್ನ ಡ್ರೀಮ್ 11ಕ್ಕೆ ನಿಷೇಧ ತಟ್ಟುತ್ತಿದ್ದಂತೆ ಟೀಮ್ ಇಂಡಿಯಾ ಜೆರ್ಸಿ ಪ್ರಾಯೋಜಕ ಬಿಕ್ಕಟ್ಟನ್ನು ಎದುರಿಸುತ್ತಿದೆ.

2 ತಂಡದಲ್ಲೂ ಕೇಶವ್ ಮಹಾರಾಜ್‌ಗೆ ಸ್ಥಾನ

ಕೇಪ್‌ಟೌನ್: ಇಂಗ್ಲೆಂಡ್ ವಿರುದ್ಧ ಏಕದಿನ ಹಾಗೂ ಟಿ20 ಸರಣಿಗಳಿಗೆ ದಕ್ಷಿಣ ಆಫ್ರಿಕಾ ತಂಡವನ್ನು ಪ್ರಕಟಿಸಲಾಗಿದ್ದು, ಸ್ಪಿನ್ನರ್ ಕೇಶವ್ ಮಹಾರಾಜ್

ಎರಡೂ ತಂಡಗಳಲ್ಲಿ ಸ್ಥಾನವನ್ನು ಪಡೆದಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ಮೊದಲನೇ ಏಕದಿನ ಪಂದ್ಯದಲ್ಲಿ ಐದು ವಿಕೆಟ್ ಸಾಧನೆ ಮಾಡಿದ್ದ ಬಳಿಕ ಕೇಶವ್ ಮಹಾರಾಜ್, ಐಸಿಸಿ ಏಕದಿನ ಬೌಲಿಂಗ್ ಶ್ರೇಯಾಂಕದಲ್ಲಿ ಅಗ್ರಸ್ಥಾನವನ್ನು ಅಲಂಕರಿಸಿದ್ದರು. ಜಿಂಬಾಬ್ವೆ ಹಾಗೂ ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಗಳಿಂದ ಹೊರಗೆ ಉಳಿದಿದ್ದ ಕೇಶವ್ ಮಹಾರಾಜ್ ಇದೀಗ ದಕ್ಷಿಣ ಆಫ್ರಿಕಾ ಟಿ20 ತಂಡದಲ್ಲಿಯೂ ಸ್ಥಾನವನ್ನು ಪಡೆದಿದ್ದಾರೆ. 'ಇತ್ತೀಚಿನ ಟಿ20 ಸರಣಿಯಲ್ಲಿ ನಾವು ಸ್ಪಿನ್ ಬೌಲಿಂಗ್ ಆಲ್‌ರೌಂಡರ್‌ಗಳೊಂದಿಗೆ ಪ್ರಯೋಗ ನಡೆಸುತ್ತಿದ್ದೆವು ಮತ್ತು ಕೇಶವ್ ಅವರು ತಂಡಕ್ಕೆ ಈಗ ಮರಳಿರುವುದು ಸ್ಪಿನ್ ಆಯ್ಕೆಗಳನ್ನು ಇನ್ನು ಮುಂದೆ ಬಲಪಡಿಸಲಿದೆ ಎಂದು ಕೋಚ್ ಶುಕ್ರಿ ಕಾನ್ರಾಡ್ ತಿಳಿಸಿದ್ದಾರೆ.

ರಾಘ್ವೀ ಬಿಸ್ಟ್ ಅಮೋಘ ಬ್ಯಾಟಿಂಗ್ | ಶಿಫಾಲಿ ವರ್ಮ ಅರ್ಧ ಶತಕ

ಸುಸ್ಥಿತಿಯಲ್ಲಿ ಭಾರತ ಮಹಿಳಾ-ಎ ತಂಡ

ಬ್ರಿಸ್ಬೇನ್: ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ-ಎ ತಂಡದ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಭಾರತ ಮಹಿಳಾ-ಎ ತಂಡವು ಭಾನುವಾರದ ದಿನದಾಂತ್ಯಕ್ಕೆ 8 ವಿಕೆಟ್‌ಗೆ 260 ರನ್ ಗಳಿಸಿದ್ದು, ಸುಸ್ಥಿತಿಯಲ್ಲಿದೆ.

ಭಾರತದ ಮೊದಲ ಇನ್ನಿಂಗ್ಸ್ ಮೊತ್ತವಾದ 299 ರನ್‌ಗಳನ್ನು ಬೆಂಬತ್ತಿದ್ದ ಆಸ್ಟ್ರೇಲಿಯಾ ಮಹಿಳಾ-ಎ ತಂಡವು ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 305 ರನ್ ಗಳಿಸಿ, 6 ರನ್‌ಗಳ ಇನ್ನಿಂಗ್ಸ್ ಮುನ್ನಡೆ ಪಡೆದಿತ್ತು.

5 ವಿಕೆಟ್ ನಷ್ಟಕ್ಕೆ 158 ರನ್‌ನಿಂದ ಭಾನುವಾರ ಬೆಳಿಗ್ಗೆ ಆಟ ಮುಂದುವರಿಸಿದ್ದ ಆಸೀಸ್ ವನಿತೆಯರ ತಂಡದ ಪರವಾಗಿ ಸಿಯನ್ನಾ ಗಿಂಗರ್ ಶತಕ ಸಿಡಿಸಿ ತಂಡಕ್ಕೆ ಆಸರೆಯಾದರು. 138 ರನ್‌ಗಳನ್ನು ಎದುರಿಸಿದ್ದ ಅವರು 103 ರನ್ ಗಳಿಸಿ ಸೈಮಾ ಠಾಕೂರ್ ಬೌಲಿಂಗ್‌ನಲ್ಲಿ ಔಟ್ ಆದರು.

ಆ ಬಳಿಕ ಆಸೀಸ್ ಪರ ಮೈಟ್ಲಾನ್ ಬ್ರೌನ್ 32 ಬಾಲ್‌ಗಳನ್ನು ಎದುರಿಸಿ 22 ರನ್ ಮಾಡಿದರೆ, ಎಮಿ ಎಡ್ಗರ್ 13 ರನ್ ಗಳಿಸಿದರು. ಆಸೀಸ್-ಎ ತಂಡವು ತನ್ನೆಲ್ಲಾ ವಿಕೆಟ್ ಕಳೆದುಕೊಂಡು 305 ರನ್ ಗಳಿಸಿತ್ತು.

2ನೇ ಇನ್ನಿಂಗ್ಸ್ ಆರಂಭಿಸಿದ ಭಾರತೀಯ ಮಹಿಳೆಯರ ಆರಂಭ ಉತ್ತಮವಾಗಿತ್ತು. ತಂಡದ ಮೊತ್ತ 42 ಆದಾಗ 12 ರನ್ ಗಳಿಸಿದ ನಂದಿನಿ ಕಶ್ಯಪ್ ತಮ್ಮ ವಿಕೆಟ್ ಒಪ್ಪಿಸಿದರೆ, ಮತ್ತೋರ್ವ ಬ್ಯಾಟರ್ ಶಿಫಾಲಿ ವರ್ಮ 58 ಬಾಲ್ ಎದುರಿಸಿ 52 ರನ್ ಗಳಿಸಿ ತಂಡಕ್ಕೆ ಆಧಾರಸ್ತಂಭವಾದರು.

ಧಾರಾ ಗುಜ್ಜರ್ 39 ಬಾಲ್ ಎದುರಿಸಿ 20 ರನ್ ಗಳಿಸಿದರೆ, ತೇಜಲ್ ಹಸಾಬ್ನಿಸ್ 52 ಬಾಲ್ ಎದುರಿಸಿ 39 ರನ್ ಗಳಿಸಿದರು. ಆ ಬಳಿಕ ಕ್ರೀಸ್‌ಗೆ ಬಂದ ರಾಘ್ವಿ ಬಿಸ್ಟ್ ಎರಡನೇ ಇನ್ನಿಂಗ್ಸ್‌ನಲ್ಲೂ ಆಕರ್ಷಕ ಬ್ಯಾಟಿಂಗ್ ಪ್ರದರ್ಶಿಸಿದರು. 119 ಬಾಲ್‌ಗಳನ್ನು ಎದುರಿಸಿದ ಅವರು 86 ರನ್ ಗಳಿಸಿ ಭಾರತ ಮಹಿಳಾ ತಂಡ ಗೌರವಾರ್ಹ ಮೊತ್ತ ತಲುಪುವಲ್ಲಿ ನೆರವಾದರು.

ಎರಡನೇ ಇನ್ನಿಂಗ್ಸ್‌ನಲ್ಲಿ ಮಿನ್ನುಮಣಿ ಯಾವುದೇ ರನ್ ಗಳಿಸದೆ ನಿರಾಸೆ ಮೂಡಿಸಿದರು. ರಾಧಾ ಯಾದವ್ 27 ಬಾಲ್ ಎದುರಿಸಿ 10 ರನ್ ಬಾರಿಸಿದರೆ, ಜ್ಯೋತಿಷ 9 ರನ್ ಹಾಗೂ ಟೈಟಸ್ ಸಧು 2 ರನ್ ಗಳಿಸಿ ಅಜೇಯರಾಗಿ ಕ್ರೀಸ್‌ನಲ್ಲಿ ಉಳಿದಿದ್ದಾರೆ.

ಆಸೀಸ್ ತಂಡದ ಪರ ಅಮಿ ಎಡ್ಗರ್ 53 ರನ್ ನೀಡಿ 4 ವಿಕೆಟ್ ಪಡೆದರೆ, ಜಾರ್ಜಿಯಾ 42 ರನ್ ಕೊಟ್ಟು 2 ವಿಕೆಟ್ ಗಳಿಸಿದರು.

ಉಳಿದಂತೆ ಮೈಟ್ಲಾನ್ ಬ್ರೌನ್, ಸಿಯಾನ ಗಿಂಗರ್ ತಲಾ ಒಂದು ವಿಕೆಟ್ ಪಡೆದರು.

ಶಿಫಾಲಿ ವರ್ಮ: ಆಕರ್ಷಕ ಅರ್ಧ ಶತಕ

ರಾಘ್ವೀ ಬ್ರಿಸ್ಟ್: ಬಿರುಸಿನ ಬ್ಯಾಟಿಂಗ್.

2027ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವಿಶ್ವಕಪ್

ದೆಹಲಿ: ಸುಮಾರು 24 ವರ್ಷಗಳ ನಂತರ 2027ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಏಕದಿನ ವಿಶ್ವಕಪ್ ನಡೆಯಲಿದೆ. ಜಿಂಬಾಬ್ವೆ ಮತ್ತು ನಮೀಬಿಯಾಗಳೂ ಈ ಟೂರ್ನಿಯ ಜಂಟಿ ಆತಿಥ್ಯ ವಹಿಸಲಿದೆ. ಟೂರ್ನಿಯ ಯೋಜನೆಯನ್ನು ಕ್ರಿಕೆಟ್ ದಕ್ಷಿಣ ಆಫ್ರಿಕಾ ಬಿಡುಗಡೆ ಮಾಡಿದ್ದು, ಪಂದ್ಯಾವಳಿಯನ್ನು ಯಶಸ್ವಿಗೊಳಿಸಲು ಸ್ಥಳೀಯ ಸಂಘಟನಾ ಮಂಡಳಿಯನ್ನು ರಚಿಸಲಾಗಿದೆ. ಅದರ ಅಧ್ಯಕ್ಷರಾಗಿ ದಕ್ಷಿಣ ಆಫ್ರಿಕಾದ ಮಾಜಿ ಸಚಿವ ಟ್ರೆವರ್ ಮ್ಯಾನುಯೆಲ್ ಆಯ್ಕೆಯಾಗಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ 2003ರಲ್ಲಿ ಕೊನೆಯ ಬಾರಿ ವಿಶ್ವಕಪ್ ಟೂರ್ನಿ ನಡೆದಿತ್ತು.

2027ರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ 14 ತಂಡಗಳ ನಡುವೆ ಒಟ್ಟು 54 ಪಂದ್ಯಗಳು ಇರಲಿವೆ. ಇವುಗಳಲ್ಲಿ 44 ಪಂದ್ಯಗಳು ದಕ್ಷಿಣ ಆಫ್ರಿಕಾದ 8 ವಿಭಿನ್ನ ಮೈದಾನಗಳಲ್ಲಿ ನಡೆಯಲಿವೆ. ಜೋಹಾನ್ಸ್‌ಬರ್ಗ್, ಪ್ರಿಟೋರಿಯಾ, ಕೇಪ್ ಟೌನ್, ಡರ್ಬನ್, ಗ್ಕೆಬೆರ್ಹಾ, ಬ್ಲೂಮ್‌ಫಾಂಟೈನ್, ಪೂರ್ವ ಲಂಡನ್ ಮತ್ತು ಪಾರ್ಲ್ ಸೇರಿವೆ. 10 ಪಂದ್ಯಗಳು ಜಿಂಬಾಬ್ವೆ ಮತ್ತು ನಮೀಬಿಯಾ ದಲ್ಲಿ ನಡೆಯಲಿವೆ. 2027ರಲ್ಲಿ 14 ತಂಡಗಳ ನಡುವೆ ಪ್ರಶಸ್ತಿಗಾಗಿ ಕಾದಾಟ ನಡೆಯಲಿದೆ. ತಲಾ 7 ತಂಡಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ. ಪ್ರತೀ ಗುಂಪಿನ ಅಗ್ರ 3 ತಂಡಗಳು ಸೂಪರ್ ಸಿಕ್ಸ್‌ಗೆ ಪ್ರವೇಶ ಪಡೆಯುತ್ತವೆ. ಇದರ ನಂತರ ಸೆಮಿಫೈನಲ್ಸ್ ಮತ್ತು ಫೈನಲ್ ಇರುತ್ತವೆ. ಸೂಪರ್ ಸಿಕ್ಸ್ ಸಮಯದಲ್ಲಿ ಒಂದು ತಂಡ ಇತರ ಗುಂಪಿನ ತಂಡಗಳ ವಿರುದ್ಧ ಮಾತ್ರ ಆಡುತ್ತದೆ. 1999 ಮತ್ತು 2003ರ ವಿಶ್ವಕಪ್ ಟೂರ್ನಿಗಳಲ್ಲಿ ಈ ಸ್ವರೂಪದಲ್ಲಿ ಪಂದ್ಯಗಳನ್ನು ಆಡಿಸಲಾಗಿತ್ತು.

ಕಾಜಲ್‌ಗೆ ಚಿನ್ನದ ಪದಕ

ಅಂಡರ್-20 ವಿಶ್ವ ಕುಸ್ತಿ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಗೆದ್ದ ಭಾರತೀಯ ಕ್ರೀಡಾಪಟು

ಸಮೋಕೋವ್ (ಬಲ್ಗೇರಿಯಾ): ಭಾರತದ ಕಾಜಲ್ ದೋಚಕ್ ಇಲ್ಲಿ ನಡೆದ 20 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದಾರೆ. 17ನೇ ವಯಸ್ಸಿನ ಕಾಜಲ್, 72 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಚೀನಾದ ಲಿಯು ಯುಕಿಯನ್ನು ಎದುರಿಸಿ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ 8-6 ಅಂತರದಲ್ಲಿ ಜಯಗಳಿಸಿದರು. ಆಗಸ್ಟ್ 24 ರವರೆಗೆ ನಡೆಯಲಿರುವ ಈ ಟೂರ್ನಿಯಲ್ಲಿ ಭಾರತ ಇಲ್ಲಿಯವರೆಗೂ 2 ಚಿನ್ನ, 4 ಬೆಳ್ಳಿ ಮತ್ತು 3 ಕಂಚು ಸೇರಿದಂತೆ ಒಟ್ಟು 9 ಪದಕಗಳನ್ನು ಗೆದ್ದಿದೆ.

'ಚಿನ್ನದ ಪದಕವನ್ನು ನನ್ನ ಪೋಷಕರು ಮತ್ತು ನನ್ನ ತರಬೇತುದಾರರಿಗೆ ಸಮರ್ಪಿಸಲಾಗಿದೆ, ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲುವುದು ನನ್ನ ಕನಸು' ಎಂದು ಕಾಜಲ್ ದೋಚಕ್ ಹೇಳಿದ್ದಾರೆ.

ಕಾಜಲ್ ಪ್ರತೀ ಪಂದ್ಯದಲ್ಲೂ ಆಕ್ರಮಣಕಾರಿಯಾಗಿ ಆಡುತ್ತಾ ಎದುರಾಳಿಗಳನ್ನು ಸೋಲಿಸಿದ್ದರು. ಪ್ರಿ-ಕ್ವಾರ್ಟರ್ ಫೈನಲ್‌ನಲ್ಲಿ ಅವರು, ಬಲ್ಗೇರಿಯಾದ ಎಮಿಲಿ ಮಿಹೈಲೋವಾ ಅಪೋಸ್ಟೋಲೊವಾ ಅವರನ್ನು ಎದುರಿಸಿದ್ದರು. ತಾಂತ್ರಿಕ ಶ್ರೇಷ್ಠತೆಯ ಆಧಾರದ ಮೇಲೆ ಅವರು ಆ ಪಂದ್ಯವನ್ನು ಗೆದ್ದರು.

ಕ್ವಾರ್ಟರ್ ಫೈನಲ್‌ನಲ್ಲಿ ಕಾಜಲ್, ಕಿರ್ಗಿಸ್ತಾನ್‌ನ ಕಿರ್ಕುಲ್ ಶರ್ಶೆಬೇವಾ ಅವರನ್ನು ಎದುರಿಸಿದರು.



ಅದರಲ್ಲಿ ಕಾಜಲ್ ಕಡಿಮೆ ಆಕ್ರಮಣಶೀಲತೆಯನ್ನು ಪ್ರದರ್ಶಿಸಿದರೂ ರಕ್ಷಣೆಯತ್ತ ಗಮನಹರಿಸಿ ಪಂದ್ಯವನ್ನು 7-0 ಅಂತರದಿಂದ ಗೆದ್ದುಕೊಂಡಿದ್ದರು.

ಲಿಟಾನ್ ದಾಸ್‌ಗೆ ನಾಯಕತ್ವ | ನೂರುಲ್, ಸೈಫ್ ಹಸನ್‌ಗೆ ಸ್ಥಾನ

ಏಷ್ಯಾ ಕಪ್: ಬಾಂಗ್ಲಾ ತಂಡ ಪ್ರಕಟ

ಢಾಕ: ಮುಂಬರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಗೆ 16 ಸದಸ್ಯರ ಬಾಂಗ್ಲಾದೇಶ ತಂಡವನ್ನು ಬಾಂಗ್ಲಾ ಕ್ರಿಕೆಟ್ ಮಂಡಳಿ ಪ್ರಕಟಿಸಿದೆ. ವಿಕೆಟ್ ಕೀಪರ್-ಬ್ಯಾಟರ್ ನೂರುಲ್ ಹಸನ್ ಸೋಹನ್ ಹಾಗೂ ಸೈಫ್ ಹಸನ್ ಅವರು ದೀರ್ಘಾವಧಿಯ ಬಳಿಕ ಬಾಂಗ್ಲಾದೇಶ ತಂಡಕ್ಕೆ ಮರಳಿದ್ದಾರೆ. ಸೋಹನ್ 2022ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ವಿರುದ್ಧ ಕೊನೆಯ ಪಂದ್ಯವನ್ನು ಆಡಿದ್ದರು. ಬಾಂಗ್ಲಾದೇಶ ಪರ ಅವರು ಟಿ20 ಸರಣಿಯಲ್ಲಿ ಅತ್ಯುತ್ತಮ ಪ್ರದರ್ಶನವನ್ನು ತೋರಿ, ಐದು ಪಂದ್ಯಗಳಿಂದ 109 ರನ್‌ಗಳನ್ನು ಕಲೆ ಹಾಕಿದ್ದರು.

ಸೈಫ್ ಹಸನ್ 2023ರ ರಾಷ್ಟ್ರೀಯ ತಂಡದ ಪರ ಕಾಣಿಸಿಕೊಂಡಿದ್ದರು. ಬಾಂಗ್ಲಾ-ಎ ಟೂರ್ನಿಯಲ್ಲಿ ಅತ್ಯುತ್ತಮ ಪ್ರದರ್ಶನವನ್ನು ತೋರಿ 117 ರನ್‌ಗಳನ್ನು ಸಿಡಿಸಿದ್ದರು. ಲಿಟಾನ್ ದಾಸ್ ಅವರು ಬಾಂಗ್ಲಾದೇಶ ತಂಡವನ್ನು ಮುನ್ನಡೆಸಲಿದ್ದಾರೆ. ಇವರು ಇತ್ತೀಚೆಗೆ ಶ್ರೀಲಂಕಾ ಹಾಗೂ ಜಿಂಬಾಬ್ವೆ ವಿರುದ್ಧದ ಟಿ20 ಸರಣಿಗಳಲ್ಲಿ ತಂಡವನ್ನು ಮುನ್ನಡೆಸಿದ್ದರಲ್ಲದೆ, ಸರಣಿ ಗೆಲ್ಲುವಲ್ಲೂ ಪ್ರಮುಖ ಪಾತ್ರ ವಹಿಸಿದ್ದರು.

ಬಾಂಗ್ಲಾದೇಶ ತಂಡ ಸೆಪ್ಟೆಂಬರ್ 11ರಂದು ಅಬುಧಾಬಿಯ ಶೇಖ್ ಜಾಯೆದ್ ಕ್ರೀಡಾಂಗಣದಲ್ಲಿ ಹಾಂಗ್‌ಕಾಂಗ್ ವಿರುದ್ಧ ತನ್ನ ಅಭಿಯಾನವನ್ನು ಆರಂಭಿಸಲಿದೆ. ಬಾಂಗ್ಲಾ ಮೂರು ಬಾರಿ (2012, 2016 ಮತ್ತು 2018) ಏಷ್ಯಾ ಕಪ್ ಫೈನಲ್ ತಲುಪಿದರೂ,

ರನ್ನರ್ ಅಪ್ ಸ್ಥಾನದಲ್ಲಿ ತೃಪ್ತಿಪಟ್ಟಿತ್ತು. ಒಮ್ಮೆ ಪಾಕಿಸ್ತಾನದ ವಿರುದ್ಧ ಮತ್ತು ಎರಡು ಬಾರಿ ಭಾರತದ ವಿರುದ್ಧ ಬಾಂಗ್ಲಾ ಸೋತಿದೆ.

ಬಾಂಗ್ಲಾದೇಶ ತಂಡ: ಲಿಟಾನ್ ದಾಸ್ (ನಾಯಕ), ತಂಝಿದ್ ಹಸನ್ ತಮೀಮ್, ಪರ್ವೇಝ್ ಹುಸೇನ್ ಎಮಾನ್, ಸೈಫ್ ಹಸನ್, ತೌಹಿದ್ ಹೃದಯ್, ಜಾಕಿರ್ ಅಲಿ ಅನಿಕ್, ಶಮಿಮ್ ಹುಸೇನ್, ನೂರುಲ್ ಹಸನ್ ಸೋಹನ್, ಶಾಕ್ ಮೆಹಿಡಿ ಹಸನ್, ರಿಷದ್ ಹುಸೇನ್, ನೂಸುನ್ ಅಹ್ಮದ್, ಮುಸ್ತಾಫಿಝುರ್ ರೆಹಮಾನ್, ತಂಝಿಮ್ ಹಸನ್ ಶಕಿಬ್, ಟಾಸ್ಕಿನ್ ಅಹ್ಮದ್, ಶೋರಿಫುಲ್ ಇಸ್ಲಾಮ್, ಮೊಹಮ್ಮದ್ ಸೈಫುದ್ದಿನ್.

ಭೈರಾಗೆ ಮುಹೂರ್ತ

ಭೈರಾ ಚಿತ್ರದ ಮುಹೂರ್ತ ಸಮಾರಂಭವು ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ಅದ್ದೂರಿಯಾಗಿ ನಡೆಯಿತು. ನಟ ಪ್ರೇಮ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ಚಿತ್ರತಂಡಕ್ಕೆ ಶುಭಹಾರೈಸಿದರು. ನೂರಾರು ಸಿನಿಮಾಗಳಿಗೆ ನೃತ್ಯ ನಿರ್ದೇಶನ ಮಾಡಿರುವ ಎಸ್.ಅಕುಲ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದು, ಖುಷಿ ಕನಸು ಕ್ರಿಯೇಶನ್ಸ್ ಬ್ಯಾನರ್‌ನಲ್ಲಿ ಅಮಿತ್ ಪೂಜಾರಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಗೋಳಿಹಟ್ಟಿ, ಸಾಗುತ ಸಾಗುತ ದೂರ ದೂರ ಚಿತ್ರಗಳ ಖ್ಯಾತಿಯ ಮಹೇಶ್ ಸಿದ್ದು ನಾಯಕನಾಗಿ ನಟಿಸುತ್ತಿದ್ದಾರೆ.

ಆ್ಯಂಗ್ರಿ ಯಂಗ್ ಮ್ಯಾನ್ ಆಗಿ ಮಹೇಶ್ ಸಿದ್ದು ಕಾಣಿಸಿ ಕೊಳ್ಳುತ್ತಿದ್ದು, ಬಜಾರಿ ಹುಡುಗಿಯಾಗಿ ಶ್ವೇತಾ ಸುರೇಂದ್ರ, ಬಣ್ಣಹಚ್ಚಿದ್ದಾರೆ. ಉಳಿದಂತೆ ಜಾಕ್ ಜಾಲಿಜಾಲಿ, ಯಶ್‌ಶೆಟ್ಟಿ, ರವಿಕಾಳೆ, ವರ್ಧನ್, ಸಂಪತ್ ಕುಮಾರ್, ಬಿ.ಚಂದಿರಧರ, ವೀಣಾಶೆಟ್ಟಿ ಮುಂತಾದವರು ಅಭಿನಯಿಸುತ್ತಿದ್ದಾರೆ.

ಇದು ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ಸಿಲಿಕಾನ್ ಸಿಟಿಯಲ್ಲಿ ನಡೆಯುತ್ತಿರುವ ರೌಡಿಸಂ ಸುತ್ತ ಸಿನಿಮಾದ ಕಥೆ ಸಾಗುತ್ತದೆ. ಅಮಾಯಕ ಹುಡುಗನನ್ನು ಕೆಣಕಿದರೆ ತಾಳ್ಮೆ ಮೀರಿ, ಆತ ಯಾವ ಪರಿಮಿತಿಗೆ ಹೋಗುತ್ತಾನೆ. ತಮ್ಮ ಸ್ವಾರ್ಥ ರಾಜಕಾರಣಕ್ಕಾಗಿ ಈತನನ್ನು ಹೇಗೆ ಬಳಸಿಕೊಳ್ಳುತ್ತಾರೆ. ತನಗೆ ಎದುರಾದ ಸವಾಲನ್ನು ನಾಯಕ ಹೇಗೆ ಎದಿರಿಸುತ್ತಾನೆ ಎಂಬುದನ್ನು ಆ್ಯಕ್ಷನ್, ಸಸ್ಪೆನ್ಸ್ ಬೆರೆಸಿ ತೆರೆಯಲ್ಲಿ ಕಟ್ಟಿಕೊಡಲಾಗುತ್ತಿದೆ ಎಂದು ನಿರ್ದೇಶಕ ಅಕುಲ್ ತಿಳಿಸಿದರು.

ಭರ್ಜರಿ ಚೇತನ್, ಅನಿರುದ್ ಶಾಸ್ತ್ರಿ, ನಾಗಾರ್ಜುನ ಶರ್ಮ ಸಾಹಿತ್ಯದ ಗೀತೆಗಳಿಗೆ ಮಂಜು ಮಹದೇವ್ ಸಂಗೀತ ಸಂಯೋಜಿಸಿದ್ದಾರೆ. ಎಸ್.ಹಾಲೇಶ್ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ವಿಕ್ರಮ್‌ಮೋರ್ ಮತ್ತು ವಿನೋದ್ ಸಾಹಸ ನಿರ್ದೇಶನದ ಈ ಚಿತ್ರಕ್ಕಿದೆ. ಬೆಂಗಳೂರು ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ವಿಟಾಕೀಸ್

ಬದುಕು ಕಲಿಸುವ ಸುಂದರ ಪಾಠ

ಮದುವೆಯಾದ ಮೇಲೆ ಜವಾಬ್ದಾರಿ ಹೆಚ್ಚುತ್ತದೆ, ಆ ಬಳಿಕ ಹೇಗೆ ನಮ್ಮ ಬದುಕು ಬದಲಾಗುತ್ತದೆ ಎಂಬುದನ್ನು ಜಸ್ಟ್ ಮ್ಯಾರೀಡ್ ಚಿತ್ರದಲ್ಲಿ ಹೇಳಲಾಗಿದೆ. ಆತ ಸೂರ್ಯ ದೊಡ್ಡ ಕುಟುಂಬದ ಹುಡುಗ. ತಾತ ನಿವೃತ್ತ ನ್ಯಾಯಮೂರ್ತಿಯಾದರೆ, ದೊಡ್ಡಪ್ಪ ಗೃಹಸಚಿವ. ಅಪ್ಪ ಖ್ಯಾತ ಗಾಯಕ. ಹಾಗಾಗಿ ನಾಯಕನಿಗೆ ಜೀವನದಲ್ಲಿ ಚಿಂತೆಗಳೇ ಇರುವುದಿಲ್ಲ. ಹುಡುಗಾಟದ ಹುಡುಗನಾಗಿ ಸ್ನೇಹಿತರ ಜತೆಗೆ ಜಾಲಿಯಾಗಿ ಜೀವನ ಕಳೆಯುತ್ತಿರುತ್ತಾನೆ. ಮೋಜು ಮಸ್ತಿ, ಸ್ನೇಹಿತರ ಜತೆಗೆ ತುಂಟಾಟ ಹೀಗೆ ಸೂರ್ಯನ ಜೀವನ ಸಾಗುತ್ತಿರುತ್ತದೆ.

ಈ ನಡುವೆಯೇ ಸೂರ್ಯನಿಗೆ ಮದುವೆ ಮಾಡಲು ಮನೆಯವರು ನಿರ್ಧರಿಸುತ್ತಾರೆ. ಸೂರ್ಯನ ಬಾಳಲ್ಲಿ ಸಹನಾ ಪ್ರವೇಶವಾಗುತ್ತಿದ್ದಂತೆ ಆತನ ಜೀವನಕ್ಕೊಂದು ಹೊಸ ತಿರುವು ಸಿಗುತ್ತದೆ. ಅಲ್ಲಿಂದ ಸೂರ್ಯನ ಬದುಕು ಹೇಗೆ ಬದಲಾಗುತ್ತದೆ, ಮದುವೆಗೆ ಬಳಿಕವೇ ಸುಂದರ ಜೀವನ ಎಂಬುದನ್ನು ಸಿನಿಮಾದಲ್ಲಿ ಕಟ್ಟಿಕೊಡಲಾಗಿದೆ. ನಿರ್ದೇಶಕಿ ಸಿ.ಆರ್.ಬಾಬಿ ಪ್ರಸ್ತುತ ಕಾಲಘಟ್ಟಕ್ಕೆ ಹೊಂದುವ ಕಥೆಯನ್ನು ಆಯ್ದುಕೊಂಡಿದ್ದರೂ ಅದನ್ನು ಎಲ್ಲರಿಗೂ ಹೊಂದುವಂತೆ ನಿರೂಪಿಸುವಲ್ಲಿ ಎಡವಿದ್ದಾರೆ. ಸಿದ್ಧ ಸೂತ್ರಗಳಿಂದ ಆಚೆಗೆ ಬಂದು ನೈಜತೆಗೆ ಹತ್ತಿರವಾಗುವಂತೆ ಸಿನಿಮಾದ ಕಥೆಯನ್ನು ನಿರೂಪಿಸಿದ್ದರೆ ಚಿತ್ರ ಚೆನ್ನಾಗಿರುತ್ತಿತ್ತು ಎನ್ನಿಸುತ್ತದೆ.

ಶೈನ್ ಶೆಟ್ಟಿ ಕಥೆಗೆ ತಕ್ಕಂತೆ ಹೊಂದಿಕೊಂಡು ನಟಿಸಿದ್ದಾರೆ, ಅವರ ಪಾತ್ರಕ್ಕೆ ಇನ್ನಷ್ಟು ಮೊನಚಾದ ಸಂಭಾಷಣೆ ಇರಬೇಕಿತ್ತು. ಇನ್ನು ಅಂಕಿತಾ ಅಮರ್ ಪಾತ್ರಕ್ಕೆ ಜೀವ ತುಂಬಿದ್ದಾರೆ. ನಾಯಕನಿಗಿದ್ದಂತೆ ಅಂಕಿತಾಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿಲ್ಲ. ಉಳಿದಂತೆ ದೇವರಾಜ್, ಶ್ರೀಮಾನ್, ರವಿಶಂಕರ್ ಗೌಡ, ಮಾಳವಿಕಾ ಅವಿನಾಶ್, ಶ್ರುತಿ ಹರಿಹರನ್ ಎಲ್ಲರೂ ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಚಿತ್ರಕ್ಕೆ ಹೊಸತನ ತಂದಿದ್ದು, ಕೆಲವೊಂದು ಹಾಡುಗಳು ಮನದಲ್ಲಿ ಗುನುಗುನಿಸುತ್ತವೆ. ಒಟ್ಟಾರೆ ಜಸ್ಟ್ ಮ್ಯಾರೀಡ್ ಚಿತ್ರವನ್ನು ಒಮ್ಮೆ ನೋಡಲು ಅಡ್ಡಿಯಿಲ್ಲ.

ಚಿತ್ರ : ಜಸ್ಟ್ ಮ್ಯಾರೀಡ್
ನಿರ್ದೇಶಕಿ : ಸಿ.ಆರ್.ಬಾಬಿ
ನಿರ್ಮಾಪಕ: ಅಜನೀಶ್.ಬಿ.ಲೋಕನಾಥ್
ತಾರಾಗಣ : ಶೈನ್ ಶೆಟ್ಟಿ, ಅಂಕಿತಾ ಅಮರ್, ದೇವರಾಜ್, ಶ್ರುತಿ ಹರಿಹರನ್, ಶ್ರೀಮಾನ್, ಸಾಕ್ಷಿ ಅಗರ್ ವಾಲ್ ಮುಂತಾದವರು
ರೇಟಿಂಗ್ : ★★★



ಡಾಲಿ ಬರ್ತ್‌ಡೇಗೆ ಜಿಂಗೋ ಗಿಫ್ಟ್

ಡಾಲಿ ಧನಂಜಯ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಡಾಲಿ ಬರ್ತ್‌ಡೇ ಪ್ರಯುಕ್ತ ಜಿಂಗೋ ಚಿತ್ರತಂಡ ಪ್ರೇಕ್ಷಕರಿಗೆ ಉಡುಗೊರೆ ನೀಡಿದೆ. ಧನಂಜಯ ಬಿಂಗೋ ಚಿತ್ರದಲ್ಲಿ ನಟಿಸುತ್ತಿದ್ದು ಈ ಚಿತ್ರದ ಪೋಸ್ಟರ್ ರಿಲೀಸ್ ಆಗಿದೆ. ಕಣ್ಣಿಗೆ ಸನ್ ಗ್ಲಾಸ್ ತೊಟ್ಟು, ಬಾಯಲ್ಲಿ ಸಿಗರೇಟು ಹಿಡಿದು, ನಗು ಬೀರುತ್ತಿರುವ ಡಾಲಿ ವಿಭಿನ್ನ ಲುಕ್ ಪ್ರೇಕ್ಷಕರ ಮನಸೂರೆಗೊಂಡಿದೆ. ಬಿಂಗೋ ಚಿತ್ರದಲ್ಲಿ ಪೊಲಿಟಿಕಲ್ ಡ್ರಾಮಾ ಜತೆಗೆ ಕಾಮಿಡಿ, ಆ್ಯಕ್ಷನ್, ಥ್ರಿಲ್ಲರ್ ಹೀಗೆ ಎಲ್ಲ ಅಂಶಗಳು ಬೆರೆತಿವೆ. ಡಾಲಿ ಈ ಹಿಂದೆ ಎಂದೂ ಕಂಡಿರದ ವಿಭಿನ್ನ ಪಾತ್ರದಲ್ಲಿ ತೆರೆಯಲ್ಲಿ ಮಿಂಚಲಿದ್ದಾರೆ ಎಂಬುದು ಪೋಸ್ಟರ್ ನೋಡಿದರೆ ಖಚಿತವಾಗುತ್ತದೆ. ಈ ಹಿಂದೆ ಡೇರ್ ಡೆವಿಲ್ ಮುಸ್ತಾಫಾ ಚಿತ್ರವನ್ನು ನಿರ್ದೇಶಿಸಿದ್ದ ಶಶಾಂಕ್ ಸೋಗಾಲ್ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಜಿಂಗೋ ಅದ್ದೂರಿಯಾಗಿ ಮೂಡಿಬರುತ್ತಿದ್ದು, ಡಾಲಿ ಪಿಚ್ಚರ್ಸ್ ಮತ್ತು ತ್ರಿಶೂಲ್ ವಿಜನರಿ ಸ್ಟುಡಿಯೋಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗುತ್ತಿದೆ.

ಚಿಕ್ಕದಾಗಿ ಆರಂಭವಾದ ನಮ್ಮ ಸಿನಿಮಾ ಈಗ ಕ್ಯಾನ್ವಾಸ್ ವಿಸ್ತರಿಸಿಕೊಂಡಿದ್ದು, ಅದ್ದೂರಿಯಾಗಿ ಮೂಡಿಬರುತ್ತಿದೆ. ಎಲ್ಲಾ ಪ್ರೇಕ್ಷಕರಿಗೆ ಹಿಡಿಸುವಂತಹ ಕಥೆ ಈ ಸಿನಿಮಾದಲ್ಲಿದೆ ಎನ್ನುತ್ತಾರೆ ನಿರ್ದೇಶಕ ಶಶಾಂಕ್ ಸೋಗಲ್. ಸದ್ಯ ಜಿಂಗೋ ಚಿತ್ರದ ಶೂಟಿಂಗ್ ಭರದಿಂದ ಸಾಗುತ್ತಿದ್ದು, ಮುಂದಿನ ವರ್ಷ ತೆರೆಗೆ ಬರಲಿದೆ. ರಾಹುಲ್ ರಾಯ್ ಛಾಯಾಗ್ರಹಣ, ನವನೀತ್ ಶ್ಯಾಮ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಗಬ್ರುಸತ್ಯ ಪ್ರತ್ಯಕ್ಷ: ಜಿಂಗೋ ಚಿತ್ರದಲ್ಲಿ ಬ್ಯುಸಿಯಾಗಿರುವ ಡಾಲಿ, ಉತ್ತರಕಾಂಡ ಸಿನಿಮಾದಲ್ಲಿಯೂ ಅಭಿನಯಿಸುತ್ತಿದ್ದಾರೆ, ಈ ಸಿನಿಮಾದಲ್ಲಿ ಡಾಲಿ ಇನ್ನಷ್ಟು ವಿಭಿನ್ನವಾಗಿ ಕಾಣಿಸಿಕೊಳ್ಳುತ್ತಿದ್ದು, ಗಬ್ರು ಸತ್ಯ ಪಾತ್ರದಲ್ಲಿ ಮಿಂಚಲಿದ್ದಾರೆ. ಡಾಲಿ ಹುಟ್ಟುಹಬ್ಬದ ಪ್ರಯುಕ್ತ ಉತ್ತರಕಾಂಡ ಚಿತ್ರತಂಡ ಕೂಡ ಹೊಸ ಪೋಸ್ಟರ್ ರಿಲೀಸ್ ಮಾಡಿದೆ. ಇದರಲ್ಲಿ ಡಾಲಿ ರಗಡ್ ಆಗಿ ಪ್ರತ್ಯಕ್ಷವಾಗಿದ್ದಾರೆ. ಒಡೆದ ಕನ್ನಡಕ, ಹಗ್ಗ ಕಟ್ಟಿದ ಕೈಯಲ್ಲಿ ರಕ್ತದ ಕಲೆ ಆದರೂ ಮಾಸದ ನಗು ಇದೆಲ್ಲವನ್ನು ಗಮನಿಸಿದರೆ ಇಲ್ಲಿ ಡಾಲಿ ಡಾನ್ ಆಗಿ ಕಾಣಿಡಿಕೊಂಡಿದ್ದಾರೆ ಎಂಬ ಸುಳಿವು ಸಿಗುತ್ತದೆ. ಇದರ ಜತೆಗೆ ಮನ್ಸಾರ್ ಹುಟ್ಟುತ್ತಾರ್. ಗಬ್ರುಗಳ್ ಮತ್ತ ಮತ್ತ ಹುಟ್ಟಾರ ಎಂದು ಉತ್ತರ ಕರ್ನಾಟಕದ ಸ್ಟೈಲ್‌ನಲ್ಲಿ ಪೋಸ್ಟರ್‌ನಲ್ಲಿ ಬರೆಯಲಾಗಿದೆ. ಮನುಷ್ಯರು ಹುಟ್ಟುತ್ತಾರೆ ಅದು ಒಮ್ಮೆ. ಆದರೆ, ಈ ಗಬ್ರುಗಳು ಮತ್ತೆ ಮತ್ತೆ ಹುಟ್ಟುತ್ತಾರೆ ಎನ್ನುವುದು ಇದರ ಅರ್ಥವಾಗಿದೆ. ಉತ್ತರಕಾಂಡ ಚಿತ್ರದಲ್ಲಿ ಶಿವರಾಜ್ ಕುಮಾರ್ ನಟಿಸುತ್ತಿದ್ದು, ಮಾಲೀಕ್ ಎಂಬ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ರೋಹಿತ್ ಪದಕಿ ನಿರ್ದೇಶನ ಈ ಚಿತ್ರವನ್ನು ಕೆಆರ್‌ಜಿ ಸ್ಟುಡಿಯೋಸ್ ನಿರ್ಮಾಣ ಮಾಡುತ್ತಿದೆ.

ಟ್ರೇಲರ್‌ನಲ್ಲಿ ಮನಗೆದ್ದ ಮುತ್ತಣ್ಣ

ತಂದೆ ಮಗನ ಬಾಂಧವ್ಯದ ಕಥೆ ಹೊತ್ತ ಸನ್ ಆಫ್ ಮುತ್ತಣ್ಣ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಟ್ರೇಲರ್ ಉದ್ದಕ್ಕೂ ಅಪ್ಪ ಮಗನ ಬಾಂಧವ್ಯ ಗಮನಸೆಳೆಯುತ್ತದೆ. ಎಮೋಷನ್ಸ್ ಜತೆಗೆ ಲವ್, ಕಾಮಿಡಿ ಎಲ್ಲವೂ ಚಿತ್ರದಲ್ಲಿ ಬೆರೆತಿದೆ. ರಂಗಾಯಣ ರಘು ಮೇಜರ್ ಮುತ್ತಣ್ಣನಾಗಿ ಕಾಣಿಸಿಕೊಂಡಿದ್ದು, ಪ್ರಣಮ್ ದೇವರಾಜ್ ಮಗನ ಪಾತ್ರವನ್ನು ನಿರ್ವಹಿಸಿದ್ದಾರೆ. ದಿಯಾ ಖುಷಿ ಡಾಕ್ಟರ್ ಪಾತ್ರದಲ್ಲಿ ಬಣ್ಣಹಚ್ಚಿದ್ದಾರೆ. ಪಂಚಿಂಗ್ ಡೈಲಾಗ್ ಕಾಮಿಡಿ ಕಚಗುಳಿ ಇಡುತ್ತದೆ. ಪುರಾತನ ಫಿಲಂಸ್‌ನಲ್ಲಿ ನಿರ್ಮಾಣವಾಗಿರುವ ಈ ಚಿತ್ರವನ್ನು ಶ್ರೀಕಾಂತ್ ಹುಣಸೂರು ನಿರ್ದೇಶನ ಮಾಡಿದ್ದಾರೆ.

ಪ್ರಜ್ವಲ್ ಜತೆಗೆ ಸಿಕ್ಸರ್ ಸಿನಿಮಾದಲ್ಲಿ ಅಭಿನಯಿಸಿದ್ದೆ. ಈಗ ಪ್ರಣಮ್ ದೇವರಾಜ್ ಜತೆಗೂ ಅಭಿನಯಿಸುವ ಅವಕಾಶ ಸಿಕ್ಕಿದೆ. ಎಲ್ಲರೂ ಒಪ್ಪುವಂತಹ ಸುಂದರ ಕಥೆ ಸಿನಿಮಾದಲ್ಲಿದೆ. ನಿರ್ದೇಶಕ ಶ್ರೀಕಾಂತ್ ಹುಣಸೂರು ನಿರ್ದೇಶಕರಾಗಿ ಕನ್ನಡ ಚಿತ್ರರಂಗದಲ್ಲಿ ಉಳಿಯುವ ಲಕ್ಷಣಗಳು ಇದೆ ಎಂದು ನಟ ರಂಗಾಯಣ ರಘು ಹೇಳಿದರು.

ನಮ್ಮ ಚಿತ್ರ ಈ ವಾರವೇ ಬಿಡುಗಡೆಯಾಗಬೇಕಿತ್ತು. ಆದರೆ, ನಮ್ಮ ಚಿತ್ರ ನೋಡಿದ ಮಲೆಯಾಳಂ ವಿತರಕರು ಸನ್ ಆಫ್ ಮುತ್ತಣ್ಣ ಚಿತ್ರವನ್ನು ಮಲೆಯಾಳಂನಲ್ಲೂ ಬಿಡುಗಡೆಗೆ ಮುಂದಾಗಿದ್ದಾರೆ. ಇದರಿಂದ ಸೆಪ್ಟೆಂಬರ್ 12ರಂದು ಕನ್ನಡ, ತೆಲುಗು, ಮಲೆಯಾಳಂ ಭಾಷೆಗಳಲ್ಲಿ ನಮ್ಮ ಸಿನಿಮಾವನ್ನು ಬಿಡುಗಡೆ ಮಾಡುತ್ತಿದ್ದೇವೆ ಎಂದು ನಿರ್ದೇಶಕ ಶ್ರೀಕಾಂತ್ ಹುಣಸೂರು ತಿಳಿಸಿದರು. ಕೃಷ್ಣ ಛಾಯಾಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಸಚಿನ್ ಬಸ್ರೂರು ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ನಿರ್ದೇಶಕರು ಒಳ್ಳೆಯ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ನಾನು ರಂಗಾಯಣ ರಘು ಅವರ ಮಗನ ಪಾತ್ರದಲ್ಲಿ ನಟಿಸಿದ್ದೇನೆ. ನಿಜವಾಗಿಯೂ ಅವರೇ ಈ ಚಿತ್ರದ ನಾಯಕ. ಹಿರಿಯ ನಟರಿಂದ ಸಾಕಷ್ಟು ಕಲಿತ್ತಿದ್ದೇನೆ. ಎಲ್ಲರೂ ಅರಿತುಕೊಳ್ಳಬೇಕಾದ ಸ್ಟೋರಿ ಸಿನಿಮಾದಲ್ಲಿದೆ.

-ಪ್ರಣಮ್ ದೇವರಾಜ್ ನಟ

ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರಗಳು ಕನ್ನಡದಲ್ಲಿ ಕೊಂಚ ಕಡಿಮೆಯಾಗಿದ್ದವು. ಸನ್ ಆಫ್ ಮುತ್ತಣ್ಣ ಆ ಕೊರಗನ್ನು ನೀಗಿಸಿದೆ. ಪ್ರೇಕ್ಷಕರು ಸಹ ಆ ಚಿತ್ರಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ. ನಮ್ಮ ಚಿತ್ರ ಎಲ್ಲರ ಮನಗೆಲ್ಲಲ್ಲಿದೆ.

-ಖುಷಿ ನಟಿ

ವಿರಾಮ

» ಗುರುರಾಜ ಪೋಶೆಟ್ಟಿಹಳ್ಳಿ
ಸಂಸ್ಕೃತಿ ಚಿಂತಕರು, ಬೆಂಗಳೂರು

ಮೊದಲೊಂದಿಪೆ ನಿನಗೆ ಗಣನಾಥ..

ಗಣೇಶ, ಗಣಪತಿ, ಲಂಬೋದರ. ಏಕದಂತ, ವಿಘ್ನೇಶ್ವರ, ವಿನಾಯಕ, ವಿಶ್ವಂಭರ, ವಕ್ರತುಂಡ, ಗಜಾನನ ಇವನಿಗೆ ಸಾವಿರಾರು ಹೆಸರುಗಳು. ಯಾವ ಹೆಸರಿನಿಂದ ಕರೆದರೂ ಇವನು ಪ್ರಸನ್ನ ಮೂರ್ತಿಯೇ. ಇತರ ದೇವತೆಗಳಂತೆ ಇವನನ್ನು ಒಲಿಸಿಕೊಳ್ಳುವುದು ಕಷ್ಟವಲ್ಲ. ಯಾವುದೇ ಶುಭಕಾರ್ಯ ಆರಂಭಿಸುವಾಗ ವಿಘ್ನೇಶ್ವರನಿಗೆ ಮೊದಲ ಪೂಜೆ. ಮಕ್ಕಳಿಗಂತೂ ಗಣೇಶ ಚತುರ್ಥಿ ಅಚ್ಚುಮೆಚ್ಚು. ಉಂಡೆ, ಚಕ್ಕುಲಿ, ಲಡ್ಡು, ಮೋದಕ ಮುಂತಾದ ವಿನಾಯಕನ ಪ್ರಿಯ ತಿನಿಸುಗಳು ಈ ಹಬ್ಬದ ಸಂಭ್ರಮ ಹೆಚ್ಚಿಸುತ್ತವೆ. ಗಣೇಶ ಚೌತಿಯ ಈ ಸುದಿನ ದಂದು ಚಕ್ಕುಲಿ ಮೋದಕ ಸವಿಯುತ್ತಾ ಮೋದಕ ಪ್ರಿಯನ ಬಗೆಬಗೆಯ ಸ್ವಾರಸ್ಯಕರ ಕೆಲ ಕಥೆಗಳು ನಿಮ್ಮ ಓದಿಗಾಗಿ ಇಲ್ಲಿದೆ.

ಬಾಲ ಕಾಮೇಶ್ವರಿ

ಕಾಮೇಶ್ವರ

ಬ್ರಹ್ಮಾಂಡ ಪುರಾಣದ ಲಲಿತೋಪಾಖ್ಯಾನ ಗಣೇಶನ ಜನನದ ಬಗ್ಗೆ ಸ್ವಾರಸ್ಯಕರವಾದ ಕಥೆ ಯೊಂದನ್ನು ಪ್ರಸ್ತುತ ಪಡಿಸುತ್ತದೆ. ಈ ಕಥೆ ಯನ್ನು ಹಯಗ್ರೀವ ನೆಂಬ ಅರಸ ಅಗಸ್ತ್ಯ ಮಹರ್ಷಿಗೆ ತಿಳಿಸು ತ್ತಾನೆ. ಪಾರ್ವತಿ ಸ್ನಾನಕ್ಕೆ ಹೋದಾಗ ಶಿವ ನಿಂದ ಕೊಲ್ಲಲ್ಪಟ್ಟು ಆನೆಯ ತಲೆ ಪಡೆದ ಕಥೆಗಿಂತ ಭಿನ್ನವಾದ ಈ ಕಥೆಯು ದೇವಿ ಭಾಗವತದ ಒದು ಭಾಗವಾಗಿದೆ.

ಕಾಮದಹನದ ಅನಂತರ ಉಳಿದ ಬೂದಿಯಿಂದ ಭಂಡಾಸುರನೆಂಬ ರಕ್ಕಸ ಜನ್ಮ ತಾಳುತ್ತಾನೆ. ಈತನು ಮಯಾಸುರ ನಿರ್ಮಿಸಿದ ಶೂನ್ಯಕ ನಗರದಲ್ಲಿ ವಾಸ ಮಾಡುತ್ತಿರುತ್ತಾನೆ. ಋಷಿ ಮುನಿಗಳ ಯಜ್ಞಗಳಿಗೆ ತೊಂದರೆ ನೀಡುತ್ತಿದ್ದ ಭಂಡಾಸುರನ ಕಿರುಕುಳ ತಾಳಲಾರದ ದೇವತೆಗಳು ಈ ರಕ್ಕಸನ ಕಾಟವನ್ನು ತಪ್ಪಿಸುವಂತೆ ಪ್ರಾರ್ಥಿಸುತ್ತಾರೆ. ದೇವತೆಗಳ ಪ್ರಾರ್ಥನೆಗೆ ಓಗೊಟ್ಟ ದೇವಿ, ಅಗ್ನಿಕುಂಡದಿಂದ ಪ್ರಕಟಗೊಂಡು ಅಗ್ನಿಕುಂಡ ಸಮುದ್ಭವೆ ಎಂದು ಹೆಸರು ಗಳಿಸುತ್ತಾಳೆ. ಆಕೆಯ ಸೌಂದರ್ಯ ಕಂಡು ಮೋಹಿಸಿದ ಶಿವ ಕಾಮೇಶ್ವರ ರೂಪದಲ್ಲಿ ಆಕೆಯನ್ನು ತನ್ನ ಪತ್ನಿಯಾಗಿ ಸ್ವೀಕರಿಸುತ್ತಾನೆ.

ಅನಂತರ ದೇವಿಯು ರಾಜಮಾತಂಗಿ, ವಾರಾಹಿ, ನಕುಲಿ ಮುಂತಾದ ಮಾತೃಕೆಯ ರೊಡನೆ ಭಂಡಾಸುರನ ರಾಜಧಾನಿ ಶೂನ್ಯಕ ನಗರದತ್ತ ತೆರಳುತ್ತಾಳೆ. ಮೊದಲಿಗೆ ಭಂಡಾಸುರನ ಪುತ್ರ ಚತುರ್ಬಾಹುವಿನೊಂದಿಗೆ ಭೀಕರ ಕಾಳಗ ನಡೆದು ಈತನನ್ನು ಬಾಲ ತ್ರಿಪುರ ಸುಂದರಿ ದೇವಿ ಕೊಲ್ಲುತ್ತಾಳೆ. ಅನಂತರ ಯುದ್ಧರಂಗಕ್ಕೆ ಬಂದ ಭಂಡಾಸುರನ ಸೋದರರಾದ ವಿಷಂಗ ಮತ್ತು ವಿಶುಕ್ರ ಕೂಡ ಸಾವಿಗೀಡಾಗುತ್ತಾರೆ. ಚಿಂತೆಗೀಡಾದ ಭಂಡಾಸುರ ತನ್ನ ಗುರುಗಳ ಆದೇಶದ ಮೇರೆಗೆ ದೇವಿಯ ಮೇಲೆ ವಿಘ್ನಯಂತ್ರದ ಪ್ರಯೋಗ ಮಾಡುತ್ತಾನೆ. ಇದು ಸರ್ವ ವಿಘ್ನಗಳನ್ನು ಪರಿಹಾರ ಮಾಡಬಲ್ಲ ಶಕ್ತಿ ಹೊಂದಿದ್ದು, ದೇವಿಗೆ ಇದರಿಂದ ಹಿನ್ನಡೆಯಾಗುತ್ತದೆ.

ಇದನ್ನು ಪರಿಹರಿಸಲು ದೇವಿಯು ಋಷಿ ಮುನಿಗಳ ಸೂಚನೆಯ ಮೇರೆಗೆ ತನ್ನ ಪತಿ ಕಾಮೇಶ್ವರನೊಂದಿಗೆ ಕೂಡಿ ಗಣೇಶನೆಂಬ ಶಿಶುವಿಗೆ ಜನ್ಮ ನೀಡುತ್ತಾಳೆ. ಈ ಮಗು ಕಾಮೇಶ್ವರ ಮುಖ ಲೋಕಕಲ್ಪಿತ ಶ್ರೀಗಣೇಶ

ಎಂದು ಹೆಸರು ಪಡೆಯುತ್ತದೆ. ಸರ್ವ ದೇವತೆಗಳೂ ತಮ್ಮತಮ್ಮ ಶಕ್ತಿಗಳನ್ನು ಗಣೇಶನಿಗೆ ನೀಡುತ್ತಾರೆ. ಸರ್ವಶಕ್ತನಾದ ಈತ ಯುದ್ಧರಂಗಕ್ಕೆ ಆಗಮಿಸಿ ವಿಘ್ನಯಂತ್ರವನ್ನು ನಾಶ ಮಾಡುತ್ತಾನೆ. ಇದರಿಂದ ತನ್ನ ಶಕ್ತಿ ಕಳೆದುಕೊಂಡ ಭಂಡಾಸುರ ಗಜಾಸುರನನ್ನು ತನ್ನ ಪರವಾಗಿ ಯುದ್ಧಕ್ಕೆ ಕಳುಹಿಸುತ್ತಾನೆ. ಗಜಾಸುರ ಕೂಡ ಯುದ್ಧದಲ್ಲಿ ಅಂತ್ಯ ಕಾಣುತ್ತಾನೆ. ಕೊನೆಗೆ ಅನಿವಾರ್ಯವಾಗಿ ಭಂಡಾಸುರ ದೇವಿಯ ವಿರುದ್ಧ ತಾನೇ ಯುದ್ಧರಂಗಕ್ಕೆ ಬರುತ್ತಾನೆ. ದೇವಿ ತನ್ನ ಹತ್ತೂ ಉಗುರುಗಳಿಂದ ಹಲತ್ತು ಆಯುಧ ಗಳನ್ನು ಸೃಷ್ಟಿಸಿ ಭಂಡಾಸುರನ ಮೇಲೆ ಪ್ರಯೋಗಿಸಿ ಆತನನ್ನು ಸಂಹರಿಸುತ್ತಾಳೆ. ಯುದ್ಧಕ್ಕೆ ಅನಿರೀಕ್ಷಿತ ತಿರುವು ಕೊಟ್ಟ ಗಣೇಶ ವಿಘ್ನೇಶ್ವರ ಎಂಬ ಹೆಸರು ಪಡೆಯುತ್ತಾನೆ.



ಸಿದ್ಧಿ ವಿನಾಯ, ಮುಂಬಯಿ

ಮಧೂರು ಮಹಾಗಣಪತಿ



ಬಸವನಗುಡಿ ದೊಡ್ಡಗಣಪತಿ



ಗೋಕರ್ಣ ಗಣಪತಿ



ಗಣಪತಿ, ಹಂಪಿ

ಇಡಗುಂಜಿ ಗಣಪತಿ



ಗಣಪತಿಗೆ ಆನೆ ತಲೆ ಜೋಡಣೆ

ಇತ್ತ ಮಗ ಬೆಳೆಯುತ್ತಾನೆ. ಅಮ್ಮನ ಗೆಳೆಯ, ರಕ್ಷಕ, ಮಗ, ಅಪ್ಪ, ಹಿತೈಷಿ ಎಲ್ಲವೂ ಆಗಿ ಬೆಳೆಯುತ್ತಾನೆ. ತಾಯಿ ಸ್ನಾನ ಮಾಡುವಾಗ ಕಾವಲು ಕಾಯುತ್ತಾನೆ. ಊರೆಲ್ಲ ಸುತ್ತಾಡಿ ಬರುವ ಶಿವನಿಗೆ ಮನೆಗೆ ಬಂದ ಕೂಡಲೇ ಮಡದಿಯ ಮೋಹ. ಸ್ನಾನ ಮಾಡುತ್ತಿದ್ದಾಳೆ ಅಂದರೂ ಬಿಡದೇ ಒಳನುಗ್ಗುತ್ತಲೆತ್ನಿಸಿದರೆ ಮಗ ಬಿಟ್ಟಾನೆ? ಆತ ಕರುಣೆಯ ಕಡಲೂ ಹೌದು, ಕಠಿಣತೆಯ ಪ್ರಶ್ನೆ ಬಂದಾಗ ಕಾಲನೂ ಹೌದು. ಇಲ್ಲಿ ಅವನ ಸಿಟ್ಟಿಗೆ ಬಲಿಯಾಗುವುದು ಮುದ್ದುಮಗು.

ಸ್ನಾನ ಮುಗಿದು ಬರುವ ಪಾರ್ವತಿಗೆ ಕಾಣುವುದು ಮಗನ ಹೆಣ. ಅವಳು ಸಿಟ್ಟು ನೋವಿನಿಂದ ಶಿವನನ್ನೂ ಗೋಳಾಡಿಸುತ್ತಾಳೆ. ಶಿವನಿಗೆ ಇದೆಲ್ಲ ಅರ್ಥವಾಗದು. ಅಯ್ಯೋ, ನಮಗೇನು ಹುಟ್ಟಿದ ಮಗುವಲ್ಲ, ಹಾಗೆ ನೋಡಿದರೆ ಅದೊಂದು ಬೊಂಬೆ. ಆಡೋ ಬೊಂಬೆ ಮುರಿದುಹೋಯ್ತು ಅಂತ ಅಳುವ ಮಗುವಿನ ಹಾಗೆ ವರ್ತಿಸುದ್ದೀಯಲ್ಲ, ನೀವು ಜಗತ್ತಿಗೇ ತಾಯಿ, ಇದೊಂದು ಹೋದರೆ ಏನಾಯ್ತು ಅಂತ ಹಗುರವಾಗಿ ಮಾತನಾಡುತ್ತಾಳೆ. ಇದು ಅವಳನ್ನು ಇನ್ನಷ್ಟು ನೋಯಿಸುತ್ತದೆ. ಕೊನೆಗೂ ಪತ್ನಿಯ ಕೊರಗನ್ನು ನೋಡಲಾಗದೇ ಶಿವ ಗಣಗಳನ್ನು ಕರೆಸುತ್ತಾನೆ. ಗಣಗಳ ಮುಖ್ಯಸ್ಥನ ತಲೆಯನ್ನೇ ಈ ಮಗುವಿಗೆ ಇಡುತ್ತಾನೆ ಎಂಬ ಉಲ್ಲೇಖ ಪುರಾಣದಲ್ಲಿದೆ. ಅಷ್ಟೇ ಅಲ್ಲ ತನ್ನ ಗಣಗಳ ಅಧಿಪತಿಯನ್ನಾಗಿ ಮಾಡುತ್ತಾನೆ. ಹಾಗಾಗಿಯೇ ಆತ ಗಣಪತಿ, ಗಣರಾಜ. ಬ್ರಹ್ಮಾಂಡ ನಾಯಕನೂ ಹೌದು. ಹಿರಿಯರು ಈಗಲೂ ಉತ್ತರ ದಿಕ್ಕಿಗೆ ತಲೆ ಹಾಕಿ ಮಲಗಬಾರದೆಂದು ಹೇಳುತ್ತಿರುತ್ತಾರೆ. ಅದಕ್ಕೆ ಅವರು ಕೊಡುವ ಕಾರಣ ಉತ್ತರ ದಿಕ್ಕಿನಲ್ಲಿ ಮಲಗಿದ್ದ ಆನೆ ತಲೆಯನ್ನು ಕತ್ತರಿಸಿದ್ದು. ಜತೆಗೆ ವೈಜ್ಞಾನಿಕ ಹಿನ್ನೆಲೆಯೂ ಇದೆ. ಉತ್ತರ ದಿಕ್ಕಿನಲ್ಲಿ ಗುರುತ್ವಾಕರ್ಷಣಾ ಶಕ್ತಿ ಹೆಚ್ಚು. ಹಾಗಾಗಿ ಆ ದಿಕ್ಕಿಗೆ ತಲೆ ಹಾಕಿ ಮಲಗುವುದರಿಂದ ಆರೋಗ್ಯ ಸಮಸ್ಯೆ ಕಾಣಿಸಬಹುದು.

ಬಾಲ್ಯದಲ್ಲಿ ಗಜಾನನ ಲೀಲೆ: ರಾವಣ ಘೋರ ತಪಸ್ಸು ಮಾಡಿ ಶಿವನನ್ನು ಒಲಿಸಿಕೊಂಡ. ತನ್ನನ್ನು ಯಾರೂ ಯುದ್ಧದಲ್ಲಿ ಸೋಲಿಸಬಾರದು ಎಂಬ ಉದ್ದೇಶದಿಂದ ಆತ್ಮಲಿಂಗ ನೀಡುವಂತೆ ರಾವಣ ಶಿವನಲ್ಲಿ ಕೇಳಿದ, ಶಿವ ಸಮ್ಮತಿಸಿದ, ಜತೆಗೆ ಒಂದು ಷರತ್ತನ್ನೂ ವಿಧಿಸಿದ. ಆತ್ಮಲಿಂಗ ನೆಲದ ಮೇಲಿಡಬಾರದು, ಆಕಸ್ಮಾತ್ ಇಟ್ಟರೆ ನಂತರ ತೆಗೆಯಲು ಆಗುವುದಿಲ್ಲ ಎಂದು ತಿಳಿಸಿ ಮಾಯವಾದ. ವರ ಪಡೆದ ಖುಷಿಯಲ್ಲಿ ರಾವಣ ಹೊರಟ. ಸುದ್ದಿ ತಿಳಿದು ದೇವತೆಗಳಿಗೆಲ್ಲ ಚಿಂತೆಯಾಯಿತು. ಮೊದಲೇ ರಾವಣ ಕ್ರೂರಿ. ಇನ್ನು ವರ ಪಡೆದ ಅಂದ ಮೇಲೆ ಕೇಳಬೇಕೆ? ಆತನ ಅನ್ಯಾಯಕ್ಕೆ ಕೊನೆಯೇ ಇರದು ಎಂದು ಗಾಬರಿ ಬಿದ್ದರು. ಒಮ್ಮೆ ಕೊಟ್ಟ ವರ ಹಿಂಪಡೆಯಲು ಸಾಧ್ಯವಿಲ್ಲವೆಂದು ಶಿವನೂ ಕೈಚೆಲ್ಲಿ ಬಿಟ್ಟ. ಆಗ ಗಣಪ ನೆರವಿಗೆ ಧಾವಿಸಿದ. ಬಾಲಕನೊಬ್ಬನ ವೇಷ ಧರಿಸಿ ಭೂಲೋಕಕ್ಕೆ ಬಂದ. ಆತ್ಮಲಿಂಗ ತೆಗೆದುಕೊಂಡು ರಾವಣ ಒಂದೇಸಮನೆ ನಡೆಯುತ್ತ ಗೋಕರ್ಣಕ್ಕೆ ತಲುಪಿದ. ಆತನ ಹೊಟ್ಟೆಯೊಳಗೆ ಅದಾಗಲೇ ಗಂಗೆ ಸೇರಿಕೊಂಡಿದ್ದಳು. ಹಾಗಾಗಿ ಆತನಿಗೆ ಜೋರು ಮೂತ್ರ ಶಂಕೆ ಕಾಡಲಾರಂಭಿಸಿತು. ಆತ್ಮಲಿಂಗವನ್ನು ನೆಲದ ಮೇಲೆ ಇಡುವ ಹಾಗಿಲ್ಲವಲ್ಲ. ಹಾಗಾಗಿ ಯಾರಾದರೂ ಸಿಗುತ್ತಾರೆಯೋ ಎಂದು ನಿರುಕಿಸಿದ. ಸ್ವಲ್ಪ ದೂರದಲ್ಲಿ ಬಾಲಕನ ರೂಪದಲ್ಲಿರುವ ಗಣಪತಿ ಕಾಣಿಸಿದ. ಅವನನ್ನು ಬಳಿಗೆ ಕರೆದು ಆತ್ಮಲಿಂಗವನ್ನು ನೀಡಿ ದೂರದಲ್ಲಿ ಬಾಲಕನ ರೂಪದಲ್ಲಿರುವ ಗಣಪತಿ ಕಾಣಿಸಿದ. ಅವನನ್ನು ಬಳಿಗೆ ಕರೆದು ಆತ್ಮಲಿಂಗವನ್ನು ನೀಡಿ ಜೋಪಾನವಾಗಿ ನೋಡಿಕೊಳ್ಳುವಂತೆ ತಿಳಿಸಿದ. ಅಗತ್ಯ ಕೆಲಸವಿರುವಂತೆ ನಟಿಸಿದ ಗಣಪ ತಾನು ಮೂರು ಎಣಿಸುವುದರೊಳಗೆ ಬರಬೇಕೆಂದು ಇಲ್ಲದಿದ್ದರೆ ಆತ್ಮಲಿಂಗವನ್ನು ನೆಲದ ಮೇಲಿಡುವುದಾಗಿಯೂ ಬೆದರಿಕೆ ಹಾಕಿದ. ಬೇಗ ಬಂದು ಬಿಡಬಹುದೆಂದು ಇದಕ್ಕೆ ಸಮ್ಮತಿಸಿದ ರಾವಣ ಮೂತ್ರ ವಿಸರ್ಜಿಸಲು ತೆರಳಿದ. ಗಂಗೆ ಹೊಟ್ಟೆಯಲ್ಲಿ ಕುಳಿತಿದ್ದ ಪರಿಣಾಮ ರಾವಣ ವಿಸರ್ಜಿಸಿದಷ್ಟೂ ಮೂತ್ರ ಬರುತಿತ್ತು. ಗಣಪ ಒಂದು ಎಂದ. ಸ್ವಲ್ಪ ಹೊತ್ತು ಬಿಟ್ಟು ಎರಡನೇ ಎಣಿಕೆಯೂ ಮುಗಿಯಿತು. ರಾವಣ ಇನ್ನೂ ಬಂದಿಲ್ಲ. ಮೂರು ಎಂದು ಕೂಗಿದ ಗಣಪತಿ ಆತ್ಮಲಿಂಗವನ್ನು ನೆಲದ ಮೇಲೆ ಇಟ್ಟೇ ಬಿಟ್ಟ. ರಾವಣ ಬಂದು ತೆಗೆಯಲು ಎಷ್ಟೇ ಪ್ರಯತ್ನಿಸಿದರೂ ಲಿಂಗವನ್ನು ನೆಲದಿಂದ ಮೇಲೆತ್ತಲಾಗಲಿಲ್ಲ. ರಾವಣ ಆತ್ಮಲಿಂಗವನ್ನು ಎಳೆಯಲು ಪ್ರಯತ್ನಿಸಿದರೆ ಫಲವಾಗಿ ಅದು ದನದ ಕಿವಿಯ ರೂಪ ತಾಳಿತು. ಹಾಗಾಗಿ ಸ್ಥಳಕ್ಕೆ ಗೋಕರ್ಣ ಎಂದು ಹೆಸರು ಬಂತು ಎನ್ನುತ್ತದೆ ಕಥೆ.

ಚಂದ್ರನಲ್ಲೇಕೆ ಕಪ್ಪು ಕಲೆ: ಅದೊಂದು ಚೌತಿಯ ದಿನ. ಭೂಲೋಕವೆಲ್ಲ ಸಂಚರಿಸಿದ ಗಣಪತಿಗೆ ಆ ದಿನ ಇಡೀ ಮೃಷ್ಟಾನ್ನ ಭೋಜನ. ತಿಂಡಿ ಪ್ರಿಯನಾದ ಗಣಪ ಲಡ್ಡು, ಮೋದಕ, ಪಂಚಕಜ್ಜಾಯ ಹೀಗೆ ಭಕ್ತರು ಪ್ರೀತಿಯಿಂದ ಅರ್ಪಿಸಿದ್ದೆಲ್ಲವನ್ನೂ ತಿಂದ. ಹೊಟ್ಟೆ ತುಂಬಿ ಬಿರಿಯುತ್ತದೆ ಎನಿಸಿತು. ಹತ್ತಿರದಲ್ಲೇ ಹಾವೊಂದು ಹೋಗುತ್ತಿತ್ತು. ಅದನ್ನು ಬೆಲ್ಟಿನಂತೆ ಕಟ್ಟಿಕೊಂಡ. ರಾತ್ರಿಯಾಯಿತು. ಸರಿ ದೇವಲೋಕಕ್ಕೆ ಹೊರಟ. ಒಂದೆಡೆ ಕೆಸರು ತುಂಬಿತ್ತು. ಗಣಪತಿ ಅದನ್ನು ಗಮನಿಸದೆ ಅದರ ಮೇಲೆ ಕಾಲಿಟ್ಟು ಜಾರಿ ಬಿದ್ದ. ಸದ್ಯ ಯಾರೂ ನೋಡಿಲ್ಲ ಅಂತ ಆಚೆ ಈಚೆ ನೋಡಿ ಎದ್ದು ನಿಂತ. ಗಣಪ ಬೀಳುವುದನ್ನು ನೋಡಿದ ಚಂದ್ರ ಕಿಸಕ್ಕನೆ ನಕ್ಕ. ಗಣಪತಿಗೆ ಕಫಪ ಬಂತು. ನನಗೇ ಗೇಲಿ ಮಾಡುತ್ತಿಯಾ ಅಂತ ಸಿಟ್ಟಿನಿಂದ ಕೆಸರನ್ನು ಎರಚಿದ. ಕೆಸರು ಚಂದ್ರನ ಮುಖದಲ್ಲೇ ಉಳಿಯಿತು. ಹುಣ್ಣಿಮೆಯಂದು ಚಂದ್ರನನ್ನು ನೋಡಿ. ಈಗಲೂ ಚಂದ್ರನ ಮುಖದಲ್ಲಿ ಕಪ್ಪಾದ ಕೆಸರು ಕಾಣಬಹುದು.

ಅಪ್ಪನಿಗೂ ತಪ್ಪದ ವಿಘ್ನ: ಏಕದಂತ ಪ್ರಥಮ ವಂದಿತ. ಎಲ್ಲರೂ ಯಾವುದೇ ಕೆಲಸಕ್ಕೆ ಮುಂದಾಗುವ ಮುನ್ನ ಮನದಲ್ಲಾದರೂ ವಿನಾಯಕನಿಗೆ ವಂದಿಸಲೇಬೇಕು. ಗಣಪ ನಮ್ಮ ಕೆಲಸದ ದಾರಿಯಲ್ಲಿ ಒದಗುವ ವಿಘ್ನವಿಡ್ಡೂರಗಳನ್ನು ಕಳೆದು ಕಾರ್ಯವನ್ನು ಸುಗಮಗೊಳಿಸುತ್ತಾನೆ. ಗಣಪನಿಗೆ ಈ ಅಧಿಕಾರವನ್ನು ನೀಡಿದವನು ತಂದೆ ಈಶ್ವರನೇ. ಈ ನಿಯಮದಿಂದ ಶಿವನೂ ಹೊರತಲ್ಲ. ಆದರೆ ಒಮ್ಮೆ, ಶಿವನಿಗೇ ಗಣಪನನ್ನು ನೆನೆಯಲು ಮರೆತುಹೋಯಿತು. ತ್ರಿಪುರಾಸುರರು ವರಬಲದಿಂದ ಸೊಕ್ಕಿ ಮೆರೆಯುತ್ತಿದ್ದಾಗ, ಅವರನ್ನು ಸದೆಬಡಿಯಲು ಬ್ರಹ್ಮನ ಸಾರಥ್ಯದಲ್ಲಿ ಶಿವನೇ ಹೊರಟ. ಆದರೆ ಶಿವ ಕುಳಿತ ವಿಶ್ವಕರ್ಮ ನಿರ್ಮಿತ ರಥದ ಚಕ್ರದ ಕಡೆಗೀಲು ತಪ್ಪಿ ರಥ ಮುಗ್ಗರಿಸಿತು. ಅಪಶಕುನವಾಯಿತು. ಯಾಕೆ ಹೀಗೆಂದು ಚಿಂತಿಸಿದ ಶಿವನಿಗೆ, ಗಣಪತಿ ಪೂಜೆ ಮಾಡಲು ಬ್ರಹ್ಮ ನೆನಪಿಸಿದ. ವಿಘ್ನವಿನಾಶಕನನ್ನು ನೆನೆದ ಬಳಿಕ ವಿಘ್ನ ದೂರವಾಗಿ, ತ್ರಿಪುರಸುರರ ಮಥನ ಸಾಂಗವಾಗಿ ನೆರವೇರಿತು.

ವಿಶ್ವಂಭರನ ಜಗತ್ತು: ಒಮ್ಮೆ ದೇವತೆಗಳು ಬಲು ಅಪರೂಪವಾದ ಜ್ಞಾನವೃಕ್ಷದ ಹಣ್ಣೊಂದನ್ನು ಪಾರ್ವತಿಗೆ ತಂದು ಕೊಟ್ಟರು, ಅದನ್ನು ಪಡೆಯಲು ಗಣಪತಿಗೂ ಷಣ್ಮುಖನಿಗೂ ಜಗಳವಾಯಿತು. ಜಗಳ ಬಿಡಿಸಲು ಶಿವ-ಪಾರ್ವತಿ ಒಂದು ಉಪಾಯ ಮಾಡಿದರು. 'ಇಬ್ಬರೂ ಜಗತ್ತನ್ನು ಸುತ್ತಿ ಬನ್ನಿ. ಯಾರು ಮೊದಲು ಬರುತ್ತಾರೋ ಅವರಿಗೆ ಹಣ್ಣು' ಎಂದು ಶಿವ ಹೇಳಿದ. ಆ ಕೂಡಲೇ ಕಾರ್ತಿಕೇಯ ತನ್ನ ವಾಹನವಾದ ನವಿಲನ್ನು ಏರಿ ವಿಶ್ವಸುತ್ತಲು ಹೊರಟೇಬಿಟ್ಟ. ನವಿಲು ಆತನನ್ನು ಕೂರಿಸಿಕೊಂಡು ಪುರ್‍ರನೆ ಹಾರಿಹೋಯಿತು. ಗಣೇಶನ ವಾಹನ ಇಲಿ, ಗಣೇಶನನ್ನು ಹೊತ್ತುಕೊಂಡು ಪ್ರಪಂಚ ಸುತ್ತಬೇಕೆ ಎಂದು ಆತಂಕದಿಂದ ಆತನನ್ನು ನೋಡಿತು. ಆದರೆ ವಿಶ್ವಂಭತ ಕ್ಷಣಮಾತ್ರವೂ ಚಿಂತಿಸಲಿಲ್ಲ. ಮಿಂದು ಶುಚಿರ್ಭೂತವಾಗಿ, ನಡೆಯುತ್ತಾ ತಂದೆ-ತಾಯಿಯರಿಗೆ ಒಂದು ಸುತ್ತು ಬಂದ. 'ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ' ಎಂದ. ಜಗತ್ತನ್ನೇ ಸುತ್ತಿದಂತೆ ಅಲ್ಲವೆ? ಹಣ್ಣು ಬೆನಕನಿಗೆ ದಕ್ಕಿತು. ಎಷ್ಟೋ ಹೊತ್ತಿನ ಬಳಿಕ ತೇಕುತ್ತಾ ಕಾರ್ತಿಕೇಯ ಬಂದಾಗ, ಹಣ್ಣೆಲ್ಲಿದೆ! ಅದನ್ನಾಗಲೇ ಗಣಪ ಪಡೆದು ತಿಂದು ಮುಗಿಸಿಯಾಗಿತ್ತು.

ಮೂಷಿಕವಾಹನ: ಗಜಾಸುರ ಎಂಬ ದಾನವ ತಪಸ್ಸಿನಿಂದ ಶಿವನನ್ನು ಮೆಚ್ಚಿಸಿ, ದೇವತೆಗಳಿಂದಲೂ ಮನುಷ್ಯರಿಂದಲೂ ಮರಣ ಬಾರದಂತೆ ವರ ಪಡೆದ. ವರಬಲದಿಂದ ಕೊಬ್ಬಿ ದೇವತೆಗಳನ್ನು ಹಣಿದು, ಋಷಿಮುನಿಗಳಿಗೆ ತೊಂದರೆ ಕೊಡತೊಡಗಿದ. ಮುನಿಗಳು ತ್ರಿಮೂರ್ತಿಗಳ ಮೊರೆ ಹೊಕ್ಕರು. ಗಜಾಸುರನನ್ನು ಸದೆಬಡಿಯುವ ಕೆಲಸವನ್ನು ಗಣಪತಿಗೆ ವಹಿಸಲಾಯಿತು. » ಮೂರನೇ ಪುಟಕ್ಕೆ

ಮೇಲೆ ಮೆದು ಕಣಕ, ಒಳಗೆ ಮೃದುಹೂರಣ, ಅದುವೇ ಒಬ್ಬಟ್ಟಿನ ಪುರಾಣ

ಒಬ್ಬಟ್ಟು ಬಲು ಬಿಕ್ಕಟ್ಟು

» ಬಿ.ಕೆ.ಮೀನಾಕ್ಷಿ, ಮೈಸೂರು

ನಾನೆಂದರೆ ಎಲ್ಲರಿಗೂ ಬಹಳ ಪ್ರಿಯ. ನಾನು ಒಂದು ಸಾಮಾನ್ಯ ತಿಂಡಿ ಅಥವಾ ಊಟ ಅಷ್ಟೇ ಎಂದು ಭಾವಿಸಿದರೆ ಅದು ತಪ್ಪು ಕಲ್ಪನೆ. ನನಗೆ, ಭೂತ-ವರ್ತಮಾನ-ಭವಿಷ್ಯದಲ್ಲೂ ಅಗ್ರಸ್ಥಾನ ಇದೆ. ಯಾವತ್ತಿಗೂ ನಾನು ಜನಪ್ರಿಯ...!

ಅದಿರಲಿ, ನನ್ನನ್ನು ಸ್ತ್ರೀಯಾಗಿ ಗುರುತಿಸಿ ಕೊಳ್ಳಲೋ ಅಥವಾ ಗಂಡಾಗಿಯೋ?

ನನಗೆ ಹೆಣ್ಣಾಗಿ ಗುರುತಿಸಿಕೊಳ್ಳುವುದೇ ಇಷ್ಟ! **ಯಾಕೆ ಹೇಳಿ ನೋಡೋಣ?:** ಯಾವತ್ತಿಗೂ ಒಬ್ಬ ಹೆಣ್ಣು, ತಾನು ನೊಂದು ಬೆಂದರೂ ತನ್ನ ಸಂಸಾರವನ್ನು ಹೊರಗಿನ ಜನಕ್ಕೆ ಸರಿಯಾಗಿ ಕಾಣುವಂತೆ, 'ಅಚ್ಚುಕಟ್ಟಾದ ಸಂಸಾರ' ಎನ್ನುವಂತೆ ನಡೆಸಿ ಕೊಂಡು ಹೋಗುತ್ತಾಳೆ. ನಾನೂ ಅಷ್ಟೆ ಅಲ್ವಾ?

ನೋಡಿ, ಮೊದಲು ಬೇಳೆಯನ್ನು ಚೆನ್ನಾಗಿ ಬೇಯಿಸಿಕೊಳ್ಳುತ್ತಾರೆ. ಹೆಂಗಸು ಒಲೆ ಮುಂದೆ ಬೇಯುವಂತೆ! ಆಗ ನಾನು ದುಃಖಪಡುವುದಿಲ್ಲ. ನನ್ನಿಂದ 4 ಜನ ಬಾಯಿ ಸಿಹಿ ಮಾಡಿಕೊಳ್ಳುತ್ತಾರೆ ಎಂದರೆ ನಾನು ಬೇಯುವುದರಲ್ಲಿ ತಪ್ಪೇನೂ ಇಲ್ಲ ಎಂದುಕೊಂಡೇ ಒಲೆ ಮೇಲೆ ಬೇಯುತ್ತೇನೆ, ಹದವಾಗಿ ರುಬ್ಬಿದರೆ ಹದವಾದ ಹೂರಣ ಆಗುವಂತೆ. ನಂತರ ತೆಂಗಿನಕಾಯಿ ಬೆಲ್ಲ ಹಾಕಿ ಮತ್ತೆ ಕುದಿಸು ತ್ತಾರೆ, ಸರಿಯಾಗಿ ಹೊಂದಿಕೊಳ್ಳಲಿ ಎಂದು. ಹೆಣ್ಣೂ ಹಾಗೇ ತಾನೇ? ತಾನು ಎಷ್ಟೇ ಬೆಂದು ನೊಂದು ಬಸವಳಿದರೂ ಎಲ್ಲರೊಂದಿಗೆ ಹೊಂದಿಕೊಂಡು ಸಂಸಾರಕ್ಕೆ ಶೋಭೆ ತರುತ್ತಾಳೆ ಅಲ್ಲವೇ? ಹಾಗೆಯೇ ನಾನೂ ಮತ್ತೆ ಕುದಿದು ಕುದಿದು ಹೊಂದಿಕೊಳ್ಳುವೆ. ಮನೆಯಲ್ಲಿ ಅತ್ತೆ-ಗಂಡ ಮನೆಗೆ ಬಂದ ಸೊಸೆ-ಪತ್ನಿಯನ್ನು ಹಾಕಿ ರುಬ್ಬುವಂತೆ ನನ್ನನ್ನೂ ಒರಳಿಗೆ ಹಾಕಿ ಗುಂಡುಕಲ್ಲಿನಲ್ಲಿ ನುಣ್ಣಗೆ ರುಬ್ಬ ತ್ತಾರೆ. ಹದವಾದ ಹೂರಣವನ್ನು ಉಂಡೆ ಕಟ್ಟಲು ಬರುವವರೆಗೂ ರುಬ್ಬುತ್ತಾರೆ. ಸೊಸೆಯನ್ನು ರುಬ್ಬೀ ರುಬ್ಬಿ ಸಂಸಾರದ ಹದವು ಅರಿಯುವಂತೆ ಮಾಡುತ್ತಾರಲ್ಲಾ ಹಾಗೆ! ನಂತರ ಸುಂದರವಾದ ಗುಂಡು ಗುಂಡಾದ ಉಂಡೆ ಕಟ್ಟಿ ತಟ್ಟೆಗೆ ತುಂಬಿಸಿಟ್ಟು ಕೊಂಡು 'ಕಣಕ'ದ ಜತೆ ಹೋಳಿಗೆ ಮಾಡಲು ತಯಾರಾಗುತ್ತಾರೆ. ಇಷ್ಟಕ್ಕೆ ಒಬ್ಬಟ್ಟು ತಯಾರಾಗಿ ಬಿಡುತ್ತಾ? ಇಲ್ಲ! ನನ್ನನ್ನು ಮೈದಾಹಿಟ್ಟಿನ ಕಣಕವನ್ನು ಹಿಂಜಿ ಅದರಲ್ಲಿ ಹೂರಣದ ಉಂಟೆ ಇಟ್ಟು ತೆಳುವಾಗಿ ರೊಟ್ಟಿಯಂತೆ ತಟ್ಟಿ, ಉರಿಯುವ ಒಲೆಯ ಮೇಲಿಟ್ಟ ಹೆಂಚಿನಲ್ಲಿ ಹದವಾಗಿ ಬೇಯಿಸು ತ್ತಾರೆ. ಮಧ್ಯೆ ಎಣ್ಣೆ ಹಾಕಿ ಮಗುಚುವುದು ನಡೆಯುತ್ತದೆ!

ಒಲೆ ಮೇಲೆ ಹದವಾಗಿ ಬೆಂದ ಮೇಲೆಯೇ ನಾನು ಊಟದ ಎಲೆ ತಲುಪುವುದು. ತಿನ್ನುವ ಜನರೂ ಬಾಯಿ ಚಪ್ಪರಿಸಿಕೊಂಡು ಸದೂ ಸದು ತಿಂದು ಚೆನ್ನಾಗಿ ಜೀರ್ಣಿಸಿಕೊಳ್ಳುತ್ತಾರೆ.

ಇರಿ, ಇರಿ. ವಿಷಯಾಂತರವಾಯಿತು. ಹೂರಣದ ನಂತರ ನನ್ನನ್ನು ಮುಚ್ಚಟೆ ಮಾಡುತ್ತಾರೆ ಅಂದೆ ಅಲ್ಲವೇ? ಹೇಗೆ? ಮೈದಾಹಿಟ್ಟು, ಚಿರೋಟಿ ರವೆಗಳ ಮಿಶ್ರಣ ಮಾಡಿ ಅದಕ್ಕೆ ಚಿಟಿಕೆ ಉಪ್ಪು, ಅರಿಣ ಹಾಕಿ ಕಲೆಸಿ ಕಣಕ ತಯಾರಿಸಿಕೊಳ್ಳುತ್ತಾರೆ. ಅದಕ್ಕಂತೂ ಬಹಳವಾದ ಹದ ಬೇಕಪ್ಪಾ.

'ಡೊಂಕು ಬಾಲದ ನಾಯಕರೇ, ನೀವೇನೂಟವ ಮಾಡಿದಿರಿ?' ಅಂತ ಪುರಂದರದಾಸರು ಬರೆದಿದ್ದಾರಲ್ವಾ? ಅದರಲ್ಲಿ ಮೊದಲ ಚರಣ......

'ಕಣಕ ಕುಟ್ಟೋ ಅಲ್ಲಿಗೆ ಹೋಗಿ ಹಣಿಕಿ ಇಣಿಕಿ ನೋಡುರಿ ಕಣಕ ಕುಟ್ಟೋ ಒನಕೆಲಿ ಬಡಿದರೆ ಕುಯ್ ಕುಯ್ ರಾಗವ ಮಾಡಿದಿರಿ'.. ಎಂಬ ಸಾಲ ಬರುತ್ತದೆ. ಈಗ ನಿಮಗೆ ಅಂದಾಜು ಸಿಕ್ಕಿತು ಎಂದುಕೊಳ್ಳುವೆ. ಮೊದಲು ಮೈದಾ-ರವೆಗೆ ಸ್ವಲ್ಪ ನೀರು ಹಾಕಿ ಕಲೆಸಿ ಆಮೇಲೆ ಒರಳಿಗೆ ಹಾಕಿ ಒನಕೆ ತೆಗೆದುಕೊಂಡು ಚೆನ್ನಾಗಿ ಕುಟ್ಟುತ್ತಾರೆ. ಹೀಗೆ ಕಣಕವನ್ನು ಚೆನ್ನಾಗಿ ಥಳಿಸಿ ಹದಕ್ಕೆ ತಂದು ನಂತರ ಹೂರಣದ ರಾಣಿಯನ್ನು ಅದರಲ್ಲಿ ಕೂರಿಸಿ ಜೋಪಾನ ಮಾಡಿ ಎಣ್ಣೆ ಹಾಕಿ ಸುಭಗವಾಗಿ ಚಂದ್ರಾಕಾರವಾಗಿ ತಟ್ಟಿ ಅಥವಾ ಲಟ್ಟಿಸಿ ಕಾದ ಹೆಂಚಿನ ಮೇಲೆ ಹಾಕಿ ಎಣ್ಣೆ ಸುರು, ತಿರುಗಿಸಿ ಮಗುಚಿ ಹದವಾಗಿ ಬೇಯಿಸುತ್ತಾರೆ. ಇದೆಲ್ಲವೂ ನನ್ನನ್ನು ತಯಾರಿಸುವ ವಿಧಾನ. » ಮೂರನೇ ಪುಟಕ್ಕೆ

ಒಬ್ಬಟ್ಟು ಪ್ರಿಯೆ ಮೀನಾಕ್ಷಿಯ ಸ್ವಗತ

ಈಗ, ನನ್ನ ಬಗ್ಗೆ ಬರೀತಿದಾರಲ್ಲಾ ಈಕೆ ಮೀನಾಕ್ಷಿ. ಅವರಿಗೆ ನನ್ನ ಬಗ್ಗೆ ಅದೇನೋ ನೆನಪಾಯ್ತಂತೆ. ಈಗ ಅವರು ನೆನಪು ಹಂಚಿಕೊಳ್ಳುತ್ತಾರಂತೆ.. ಇರಿ ಸ್ವಲ್ಪ.. ಮೀನಾಕ್ಷಿಯವರ ಮಾತಲ್ಲೇ ಕೇಳಿ: 'ನಾನು ಹಲವು ವರ್ಷಗಳ ಹಿಂದೆ ಎಸ್.ಎಲ್.ಭೈರಪ್ಪನವರ ಜಲಪಾತ ಓದಿದೆ. ಓದುತ್ತಾ ಹೋದಂತೆ ಅದರಲ್ಲಿ ಒಂದು ವಿವರಣೆ. ಬಿಸಿಯಾದ ತೆಕ್ಕೆ ತೆಕ್ಕೆ ಒಬ್ಬಟ್ಟನ್ನು ತಂದು ಎಲೆಗೆ ಬಡಿಸುತ್ತಾರೆ. ಅದಕ್ಕೆ ತುಪ್ಪ-ಹಾಲು ಹಾಕಿ ಕಲೆಸಿ ತಿನ್ನುತ್ತಿದ್ದರೆ ಪರಮಾನಂದ. ಇದಿಷ್ಟೇ ಅಲ್ಲ, ಭೈರಪ್ಪನವರು ಅದನ್ನು ಬಹಳ ಸುಂದರವಾಗಿ, ಬಾಯಲ್ಲಿ ನೀರೂರುವಂತೆ ವಿವರಿ ಸುತ್ತಾ ಹೋಗುತ್ತಾರೆ. ನನಗಂತೂ ಓದುತ್ತಾ.. ಒಬ್ಬಟ್ಟು ತಿನ್ನುವ ಆಸೆ ತಡೆಯಲಾರದೆ ಆ ಕ್ಷಣವೇ ಒಬ್ಬಟ್ಟಿಗೆ ರೆಡಿ ಮಾಡಿ ರಾತ್ರಿ ಬಿಸಿಬಿಸಿಯಾಗಿ ತಯಾರಿಸಿ, ತುಪ್ಪ-ಹಾಲು ಹಾಕಿಕೊಂಡು ಸ್ವಾದ ಸವಿ ಯುತ್ತಾ ತಿಂದು ಮುಗಿಸಿದೆ'. ಹೀಗೆ, ಮೀನಾಕ್ಷಿ ಎಲ್ಲೋ ಓದಿದ್ದನ್ನೇ ಬಾಯಲ್ಲಿ ನೀರೂರಿಸಿ ತಕ್ಷಣವೇ ಮಾಡಿಕೊಂಡು ತಿನ್ನುತ್ತಾರೆ ಎಂದರೆ ನನ್ನ ಘನತೆ ಎಂತಹುದು ಇರಬೇಡ! ನೋಡಿ, ಒಂದು ಮಾತು ಹೇಳ್ತೀನಿ. ಒಬ್ಬಟ್ಟಿನ ಊಟ ಮಾಡಿದರೇ ಅದು ಹಬ್ಬ ಅನ್ನಿಸಿಕೊಳ್ಳುವುದು! ಒಬ್ಬಟ್ಟು ಮಾಡಿದರೇ ಅದು ಸುಗ್ರಾಸ ಭೋಜನವಾಗುವುದು!

ವಿಶ್ವವಾಣಿ
24.08.2025 ಭಾನುವಾರ

ಪುಸ್ತಕ ವಿಮಾನ

ಅನನ್ಯ, ಅಪರೂಪದ ಚೇತೋಹಾರಿ ಪ್ರಬಂಧ

» ಉದಯ ಕುಮಾರ ಹಬ್ಬು

ಶ್ರೀಧರ ನಾಯಕ್ ಅವರು ಮೂರು ದಶಕಗಳಿಗೂ ಮಿಕ್ಕಿ ಕಾಲ ಪತ್ರಕರ್ತರಾಗಿ ದುಡಿದವರು. ಈ ಪ್ರಬಂಧ ಸಂಕಲನ 'ಮಾರ್ಜಾಲ ಮಹಾಪುರಾಣ' ಅವರೇ ಹೇಳಿಕೊಂಡಂತೆ 'ಬಂಧ ಇಲ್ಲದ ಬಂಧುರ ಪ್ರಬಂಧಗಳು'. ಪತ್ರಕರ್ತನ, ಸಂಶೋಧಕನ ಒಳನೋಟಗಳು ಮತ್ತು ಸಾಹಿತಿಯ ಸಂವೇದನಾ ಶಕ್ತಿಯು ಈ ಸಂಕಲನದಲ್ಲಿ ಮುಪ್ಪುರಿಗೊಂಡಿವೆ.

ಪ್ರಬಂಧಗಳನ್ನು ಬರೆದು ಓದುಗರ ಗಮನ ಸೆಳೆಯವ ಕಲೆ ಇವರಿಗೆ ಈಗಾಗಲೇ ಕರಗತವಾಗಿದೆ ಎಂದು ಅವರ ಈ ಕೃತಿ ಮತ್ತು ಹಿಂದಿನ ಕೃತಿಗಳನ್ನು ಓದಿ ತಿಳಿಯಬಹುದು. ಪ್ರಬಂಧಕ್ಕೂ ಲಲಿತ ಪ್ರಬಂಧಕ್ಕೂ ವ್ಯತ್ಯಾಸಗಳಿವೆ. ಲಲಿತ ಪ್ರಬಂಧಗಳು ಹಗುರ ಧಾಟಿಯಲ್ಲಿದ್ದರೆ ಪ್ರಬಂಧಗಳು ಗಂಭೀರ ವಿಚಾರಗಳನ್ನು ಹಲವಾರು ಆಯಾಮಗಳಿಂದ ಅವಲೋಕನ ಮಾಡಿ ಓದುಗರಿಗೆ ಗೊತ್ತಿಲ್ಲದ ವಿಷಯಗಳನ್ನು ಆಕರ್ಷಕವಾಗಿ ನಿರೂಪಿಸಿ ಓದುಗರ ಜ್ಞಾನವನ್ನು ವಿಸ್ತರಿಸುವುದರ ಜೊತೆಗೆ ಅವರಿಗೆ ಒಂಥರ ಖುಷಿ ನೀಡುತ್ತವೆ. ಈ ಮಾದರಿಯ ಪ್ರಬಂಧಗಳು ಇವು.

ಶ್ರೀಧರ ನಾಯಕ್ ಅವರು ಉಳಿದ ಅನೇಕ ಬರಹಗಾರರಂತೆ ಕಥೆ, ಕಾದಂಬರಿಗಳನ್ನು ಬರೆಯದೆ ಹೆಚ್ಚು ಜನ ಬರಹಗಾರರು ಬರೆಯಲು ಹಿಂತೆಗೆವ ಪ್ರಬಂಧ ಬರಹಗಳ ಕುರಿತು ಒಲವು ತೋರಿಸಿದ್ದು ಕನ್ನಡದ ಭಾಗ್ಯ ಎಂದು ನಾನು ಭಾವಿಸುತ್ತೇನೆ. ಇವರು ಪ್ರಬಂಧದಲ್ಲಿ ಬೆಕ್ಕಿನ ಕುರಿತು ಅದ್ಭುತವಾದ ಹಲವಾರು ಮಾಹಿತಿಗಳನ್ನು ಸಂಗ್ರಹಿಸಿ ಬರೆದಿದ್ದಾರೆ. ಇದಕ್ಕೆ ಕಾರಣ ಅವರಿಗೆ ಬೆಕ್ಕಿನ ಮೇಲೆ ಇರುವ ಅಪರಿಮಿತ ಪ್ರೀತಿ. ಅವರು ನಾಯಿಯನ್ನೂ ಅಷ್ಟೇ ಪ್ರೀತಿಯಿಂದ ಮನೆಯ ಬಂಧುವಂತೆ, ಬಹುಶಃ ತನ್ನ ಮಗುವಿನಂತೆ ಪ್ರೀತಿಸಿದ್ದುಂಟು. ಪ್ರೀತಿಯ ನಾಯಿ ಸತ್ತಾಗ ಅಷ್ಟೇ ಸಂಕಟಪಟ್ಟಿದ್ದೂ ಉಂಟು. ಈ ಸಂಕಲನದಲ್ಲಿ ಒಟ್ಟೂ ಏಳು ಪ್ರಬಂಧಗಳಿವೆ. ಒಂದಕ್ಕಿಂತ ಇನ್ನೊಂದು ವಿಭಿನ್ನ. ಮೊದಲ ಪ್ರಬಂಧದಲ್ಲಿ ಬೆಕ್ಕಿನ ಮೇಲಿನ ಅವರ ಪ್ರೀತಿ, ಒಡನಾಟ, ಮಮಕಾರ, ಹಲವಾರು ಭಾವಪೂರ್ಣ ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ. ಬೆಕ್ಕಿನ ಮೇಲಿನ ಪ್ರೀತಿ ಮತ್ತು ಮಮಕಾರವನ್ನು ಸ್ವಾರಸ್ಯಮಯವಾಗಿ ನಿರೂಪಿಸಿದ್ದಾರೆ.

ಅಷ್ಟಲ್ಲದೆ ಬೆಕ್ಕುಗಳನ್ನು ಈಜಿಪ್ಟ್‌ನಂತಹ ದೇಶಗಳಲ್ಲಿ ದೇವರಂತೆ ದೇಗುಲಗಳನ್ನು ಕಟ್ಟಿ ಪೂಜಿಸುತ್ತಿದ್ದ ಪದ್ಧತಿ ಕುರಿತು ಬರೆದಿದ್ದಾರೆ. ಅಂತೆಯೇ ಮಂಡ್ಯದಲ್ಲಿ ಕೂಡ ಬೆಕ್ಕಿನ ದೇವಸ್ಥಾನವಿದೆ. ಬೆಕ್ಕು ದಾರಿಯಲ್ಲಿ ಸತ್ತಿದ್ದನ್ನು ಕಂಡರೆ ಅದರ ಸಂಸ್ಕಾರ ಮಾಡಬೇಕೆಂಬ ಸಂಪ್ರದಾಯ ಮಂಡ್ಯದಲ್ಲಿದೆ. ಇದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗರ ಹಾವು ಸತ್ತದ್ದನ್ನು ನೋಡಿದಾಗ ಸಂಸ್ಕಾರ ಮಾಡುವ ಉದಾಹರಣೆಯನ್ನು ಅವರು ನೆನಪಿಸುತ್ತಾರೆ.

ಮಾರ್ಜಾಲ ಪುರಾಣಂ (ಲಲಿತ ಪ್ರಬಂಧ)
ಲೇಖಕ: ಪಿ. ಶ್ರೀಧರ ನಾಯಕ್
ಪ್ರಕಾಶನ: ಗೀತಾಂಜಲಿ ಪಬ್ಲಿಕೇಷನ್ಸ್
ಬೆಲೆ ರು.150/-
ಸಂಪರ್ಕ: 9591760456

ಡಾ ಡಿ. ಆರ್. ನಾಗರಾಜ್ ಅವರು ಕನ್ನಡದ ಖ್ಯಾತ ವಿಮರ್ಶಕರು. ಅವರು ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ ಎಂಬ ಗ್ರಂಥದಲ್ಲಿ ಅಲ್ಲಮನು ಬೆಕ್ಕನ್ನು ವಿಶಿಷ್ಟ ರೂಪಕವನ್ನಾಗಿ ಬಳಸಿದ್ದಿದ್ದರ ಉಲ್ಲೇಖವನ್ನು ಲೇಖಕರು ಇಲ್ಲಿ ಮಾಡುತ್ತಾರೆ. ಪಾರಿವಾಳಕ್ಕೆ ಶ್ರೀಧರ್ ಕಾಳು ಹಾಕಲು ತೊಡಗಿದಾಗ ಅವುಗಳ ಪ್ರಾಣಕ್ಕೇ ಕುತ್ತು ಬಂದುದು ಬೆಕ್ಕಿನಿಂದಾಗಿ ಎಂದು ವಿಷಾದ ವ್ಯಕ್ತಪಡಿಸುತ್ತಾರೆ. ಪುರಂದರ ದಾಸರು ಕೂಡ ಬೆಕ್ಕನ್ನು ಸಾವಿಗೆ ಸಂಕೇತವಾಗಿ ಬಳಸಿದ್ದುದನ್ನು ಅವರು ಉಲ್ಲೇಖಿಸುತ್ತಾರೆ. ಒಟ್ಟಾರೆಯಾಗಿ ಬೆಕ್ಕಿನ ಬಗ್ಗೆ ಸಮಗ್ರವಾಗಿ, ಸ್ವಾರಸ್ಯಕರವಾಗಿ ಈ ಪ್ರಬಂಧವನ್ನು ಬರೆದಿದ್ದಾರೆ.

ಎರಡನೆಯ ಪ್ರಬಂಧ,**'ಬಾಲ್ಯ-ಬಣ್ಣದ ತಗಡಿನ ತುತ್ತೂರಿ'**. ಈ ಪ್ರಬಂಧದಲ್ಲಿ ಅವರು ತಮ್ಮ ಬಾಲ್ಯಕಾಲದ ಸವಿನೆನಪುಗಳನ್ನು ಅತ್ಯಂತ ಅಪ್ಯಾಯಮಾನವಾಗಿ, ಬಲು ಪ್ರೀತಿಯಿಂದ ನಿರೂಪಿಸಿದ್ದಾರೆ. ಈ ಪ್ರಬಂಧ ಪ್ರತಿಯೊಬ್ಬನಿಗೂ ಅವನವನ ಬಾಲ್ಯಕ್ಕೆ ಮರಳುವಂತೆ ಮಾಡುತ್ತದೆ. ಹೆಚ್ಚಿನ ಬರಹಗಾರರು ತಮ್ಮ ಸಾಹಿತ್ಯ ರಚನೆಗೆ ಬಾಲ್ಯಕಾಲದ ನೆನಪುಗಳನ್ನೇ ಆಧಾರವಾಗಿಟ್ಟುಕೊಂಡಿರುತ್ತಾರೆ. ಶ್ರೀಧರ್ ಅವರ ಬಾಲ್ಯ ತುಂಬ ಸಮೃದ್ಧವಾಗಿ, ಅವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿ, ಒಟ್ಟಾರೆಯಾಗಿ ತುಂಬ ಸುಖಮಯವಾಗಿಯೇ ಇತ್ತು ಎನ್ನಬಹುದು. ಅವರ ಅದೃಷ್ಟಕ್ಕೆ ಅವರ ಮನೆಯ ಮಾಳಿಗೆಯಲ್ಲಿ ಕುವೆಂಪು, ಕಾರಂತರಂತಹ ಖ್ಯಾತ ಸಾಹಿತಿಗಳ ಪುಸ್ತಕಗಳಿದ್ದುದು ಅವರ ವಾಚನಾಭಿರುಚಿಯನ್ನು ಹೆಚ್ಚಿಸಲು, ಸಾಹಿತ್ಯದ ಸಂವೇದನೆಯನ್ನು ಪಡೆಯಲು ಸಹಾಯಕವಾಯಿತು.

ಅಂದು - ಇಂದಿನ ನಡುವೆ ಇರುವ ಅಜಗಜ ವ್ಯತ್ಯಾಸಗಳು ಅವರ ನೋವಿಗೆ ಕಾರಣವಾಗಿವೆ. ಇಂದು ನಮ್ಮ ಹುಡುಗರು ಅಂತಹ ಶ್ರೀಮಂತ ಸಮೃದ್ಧವಾದ ಅನುಭವಗಳನ್ನು ಪಡೆಯಲಾರರು. ಅವರ ಪ್ರಾಥಮಿಕ ಶಿಕ್ಷಣದ ಸ್ವಾರಸ್ಯಕರ ಅನುಭವಗಳ ನಿರೂಪಣೆ ಇದರಲ್ಲಿ ಇವೆ. ಕಳೆದು ಹೋದ ಬಾಲ್ಯದ ಬಗ್ಗೆ ನಾಸ್ತಾಲ್ಜಿಯಾ ಇದೆ.

ಬಾಲ್ಯದ ಹುಡುಗಾಟದಲ್ಲಿ ಇನ್ನೊಬ್ಬರ ಮನೆಯ ಮಾವಿನ ಮರಕ್ಕೆ ಕಲ್ಲು ಹೊಡೆದು ಮಾವಿನ ಕಾಯಿಗಳನ್ನು ಉದುರಿಸಿ, ಕತ್ತರಿಸಿ ಮೆಣಸಿನ ಪುಡಿ ಮತ್ತು ಉಪ್ಪು ಹಾಕಿ ಪಚಡಿ ಮಾಡಿ ತಿಂದದ್ದು, ಆ ಮನೆಯವರಿಂದ ಬೈಸಿಕೊಂಡಿದ್ದು, ಹಲಸಿನ ಹಣ್ಣಿನ ಕಾಲದಲ್ಲಿ ವಿವಿಧ ಬಗೆಯ ಖಾದ್ಯಗಳನ್ನು ತಿಂದದ್ದು, ಶಾಲೆಯಲ್ಲಿ ಆಕಾಶಗೂಡು, ಗಾಳಿಪಟ ಮಾಡಿದ್ದು, ಅಮ್ಮ ಆನುಷಂಗಿಕವಾಗಿ ನಳಮಹಾರಾಜನ ಕಥೆ ಹೇಳಿದ್ದು - ಇಂತಹ ಪ್ರಸಂಗಗಳಿವೆ.

ಅವರು ಬಾಲ್ಯದ ನೆನಪುಗಳ ಬಗ್ಗೆ ಹೇಳೋದು ಹೀಗೆ: ನಾವಿದ್ದ ಕಾಡುಬೆಟ್ಟಿನ ಆ ದೊಡ್ಡ ಮನೆ ಭೌತಿಕವಾಗಿ ಉಳಿದಿಲ್ಲ. ಇತಿಹಾಸದ ಪುಟಗಳಲ್ಲಿ ಸೇರಿ ಹೋದರೂ ನಾವು 13 ಜನರು, ಎರಡೂವರೆ ವರ್ಷ ಕಡಿಮೆ ಎಂದರೆ 17 ಜನರ ಬದುಕಿಗೆ ಸುಭದ್ರ ಅಡಿಪಾಯ ಕಂಡುಕೊಂಡ ಆ ಮನೆ ರೂಪಕದಂತೆ ಮನಸ್ಸಿನ ಭಿತ್ತಿಯಲ್ಲಿ ಸ್ಥಿರವಾಗಿ ನೆಲೆ ನಿಂತಿದೆ. ನಾವು ಬೆಳೆದು ದೊಡ್ಡವರಾಗಿದ್ದೇವೆ. ನಮ್ಮ ಮುಗ್ಧತೆ ನಮ್ಮಿಂದ ದೂರವಾಗಿದೆ.

'ಅರ್ಥವಾಗದವರು': ಇದು ಮನುಷ್ಯರಲ್ಲಿ ಇನ್ನೊಬ್ಬರಿಗೆ ಕಿರುಕುಳ ಕೊಟ್ಟು ಅದರಲ್ಲಿ ವಿಕೃತ ಸಂತೊಷವನ್ನು ಪಡುವ ಹೀನ ಸ್ವಭಾವದ ಬಗ್ಗೆ ಕನಲಿ ಬರೆದ ಪ್ರಬಂಧ. ಈ ಹಿಂಸಾ ಪ್ರವೃತ್ತಿ ಅನೇಕರಲ್ಲಿ ಇರುವುದು ಸತ್ಯವೇ.

'ಕ್ಲೀಷೆ': ಪ್ರಬಂಧದಲ್ಲಿ ಪತ್ರಕರ್ತರು, ಸಾಹಿತಿಗಳು, ಸಾಮಾಜಿಕ ಜಾಲತಾಣದ ಓದುಗರು ಉಪಯೋಗಿಸುವ, ಬಳಸಿದ್ದ ಪದಗಳನ್ನು ಮತ್ತೆ ಉಪಯೋಗಿಸುವ, ಕ್ಲೀಷೆಯಾಗುವ ಅನೇಕ ಉದಾಹರಣೆಗಳನ್ನು ಸ್ವಾರಸ್ಯಕರ ಸನ್ನಿವೇಶಗಳ ಮೂಲಕ ನಿರೂಪಿಸಿದ್ದಾರೆ.

ಓದುವಿಕೆಗಿಂತನ್ಯ ತಪವು ಇಲ್ಲ: ಈ ಪ್ರಬಂಧದಲ್ಲಿ ಇಂದಿನ ಓದುಗರ ನಿರಾಸಕ್ತಿಯ ಬಗ್ಗೆ ಅದರ ಕಾರಣಗಳ ಕುರಿತಾಗಿ ವಿಶ್ಲೇಷಣೆ ಇದೆ. ಇದಕ್ಕೆ ಕಾರಣ ಇಂದಿನ ಸಾಮಾಜಿಕ ಜಾಲತಾಣಗಳು ಎಂದು ಹೇಳುತ್ತಾರೆ.

'ಕಥೆ ಮತ್ತು ಕಲಾವಿದರು' : ಇದರಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾದ ಕಥೆ, ಧಾರಾವಾಹಿಗಳಿಗೆ ಚಿತ್ರಗಳನ್ನು ಬಿಡಿಸಿಕೊಡುವ ಅನೇಕ ಚಿತ್ರ ಕಲಾವಿದರ ಪರಿಚಯ, ಅವರ ಚಿತ್ರಕಲಾ ವೈಶಿಷ್ಟ್ಯದ ಕುರಿತಾಗಿ ಸೊಗಸಾದ ವ್ಯಕ್ತಿಚಿತ್ರಣವಿದೆ.

ಎಂ. ಆರ್. ಗೋಪಿ ಕಾಮತ್, ಚಂದ್ರನಾಥ ಆಚಾರ್ಯ, ಜಿ. ಕೆ. ಸತ್ಯ ಈ ಎಲ್ಲ ಪ್ರಖ್ಯಾತ ಕಲಾವಿದರು ಕಲೆಗಾಗಿ ಬದುಕನ್ನೇ ಮುಡಿಪಾಗಿಟ್ಟವರು. ಅವರ ಬದುಕಿನ ಅವಸ್ಥಾಂತರಗಳನ್ನು ಓದುವುದೇ ಒಂದು ಅತೀತವಾದ ಅನುಭವ. ಇಂತಹ ಅನನ್ಯವಾದ ಪ್ರಬಂಧಗಳನ್ನು ಬರೆದು ಓದುಗರ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿದವರು ಶ್ರೀಧರ್ ನಾಯಕ್ ಅವರು. ಇಂತಹ ಅನನ್ಯವಾದ ಪ್ರಬಂಧಗಳನ್ನು ಬರೆದು ಓದುಗರ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿದ ಈ ಪುಸ್ತಕಕ್ಕೆ ನಾನು ಋಣಿ.

ಮುಂಬೈ ಯಕ್ಷಗಾನ ರಂಗಭೂಮಿ

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

'ಮುಂಬೈ ಯಕ್ಷಗಾನ ರಂಗಭೂಮಿ' ಇದು ಡಾ. ವೈ.ವಿ. ಮಧುಸೂದನ ರಾವ್ ಅವರ ಸಂಶೋಧನ ಮಹಾಪ್ರಬಂಧ. ಮುಂಬೈ ಒಂದು ದೈತ್ಯ ನಗರ. ಇದು ನಮ್ಮ ದೇಶದ ಬಹು ದೊಡ್ಡ ಸಾಂಸ್ಕೃತಿಕ ಕೇಂದ್ರವೂ ಹೌದು. ಈ ಮಾಯಾ ನಗರಿಯಲ್ಲಿ ಕರ್ನಾಟಕ ಮೂಲದ ಯಕ್ಷಗಾನ ಕಲೆ ಇಟ್ಟ ಹೆಜ್ಜೆ ಹಾಗೂ ಅದು ತೊಟ್ಟ ರೂಪದ ಸಮಗ್ರ ಚಿತ್ರಣ ಈ ಕೃತಿಯಲ್ಲಿ ಅಚ್ಚುಕಟ್ಟಾಗಿ ದಾಖಲಾಗಿದೆ. ಕರ್ನಾಟಕದ ರಾಜಧಾನಿ ಬೆಂಗಳೂರನ್ನು ಬಿಟ್ಟರೆ ಅತಿ ಹೆಚ್ಚು ಕನ್ನಡಿಗರಿರುವ ಪ್ರದೇಶವೆಂದರೆ ಅದು ಮುಂಬಯಿ. ಇಂದಿಗೂ ಮುಂಬಯಿ ಸುತ್ತಮುತ್ತ ಸುಮಾರು ಇಪ್ಪತ್ತೈದು ಲಕ್ಷ ತುಳು-ಕನ್ನಡಿಗರು ನೆಲೆಸಿ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿರುವುದು ಉಲ್ಲೇಖನೀಯ ಅಂಶ. ಮುಂಬೈಯಲ್ಲಿ ಇರುವಷ್ಟು ಸಂಘ-ಸಂಸ್ಥೆಗಳು ಜಗತ್ತಿನ ಬೇರೆ ಎಲ್ಲಿಯೂ ಇಲ್ಲ ಎನ್ನುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಯಕ್ಷಗಾನ ಕಲೆಯ ಬಲವರ್ಧನೆಗೆ ಹೊರನಾಡಾದ ಮುಂಬಯಿ ಬಹು ಮಹತ್ವದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಇಲ್ಲಿನ ಯಕ್ಷಗಾನ ರಂಗಭೂಮಿಗೆ ಹತ್ತಿರ ಹತ್ತಿರ ಒಂದು ಶತಮಾನದ ಇತಿಹಾಸವಿದೆ. 1880ರ ಹೊತ್ತಿಗೆ ಕರ್ಕಿ ವೆಂಕಟರಮಣ ಶಾಸ್ತ್ರಿಗಳು ಅನೇಕ ಯಕ್ಷಗಾನ ಪ್ರಸಂಗಗಳನ್ನು ಮುಂಬಯಿಯಲ್ಲಿ ಅಚ್ಚು ಹಾಕಿಸಿದ್ದು ಚಾರಿತ್ರಿಕ ಸಂಗತಿ. ಆ ಬಳಿಕ ದೊಡ್ಡ ಪ್ರಮಾಣದಲ್ಲಿ ಯಕ್ಷಗಾನ ಕಲೆಯ ಪ್ರಸಾರ, ಪ್ರಚಾರ ಮುಂಬಯಿಯಲ್ಲಿ ನಡೆದದ್ದು ಈಗ ಇತಿಹಾಸ. ಇವೆಲ್ಲದರ ಅಧಿಕೃತ ವಿವರ, ಪ್ರವರ, ವಿಶ್ಲೇಷಣೆ ದಾಖಲಾತಿ ಪ್ರಸ್ತುತ ಮಹಾಪ್ರಬಂಧದಲ್ಲಿದೆ.

ಯಕ್ಷಗಾನ ಕರ್ನಾಟಕ ಸಂಸ್ಕೃತಿಯನ್ನು ರೂಪಿಸಿದ ಪ್ರಮುಖ ಹಾಗೂ ಪ್ರಧಾನ ಕಲೆಗಳಲ್ಲಿ ಒಂದು. ಯಕ್ಷಗಾನ ರಂಗಕ್ಕೆ ಸುದೀರ್ಘವಾದ ಇತಿಹಾಸವಿದೆ, ದೊಡ್ಡ ಆಚಾರ್ಯ ಪರಂಪರೆಯಿದೆ. ಅದೊಂದು ಸಂಪೂರ್ಣ ರಂಗಭೂಮಿಯೂ ಆಗಿದೆ. ವಲಸೆ ಬಂದ ಮುಂಬೈ ಕನ್ನಡಿಗರು ಯಕ್ಷಗಾನವನ್ನು ಇಲ್ಲಿ ಪ್ರತಿಷ್ಠಾಪಿಸಿದರು, ಪೋಷಿಸಿದರು. ಅದು ರಾಷ್ಟ್ರಮಟ್ಟದಲ್ಲಿ ಬೆಳಗುವಂತೆ ನೋಡಿಕೊಂಡರು. ಮುಂಬೈ ಯಕ್ಷಗಾನ ರಂಗಭೂಮಿಗೆ ನೂರಾರು ವರ್ಷಗಳ ಇತಿಹಾಸವಿದೆ. ಅನೇಕ ಯಕ್ಷಗಾನ ಮೇಳಗಳು ಇವತ್ತಿಗೂ ಮುಂಬಯಿಯಲ್ಲಿ ಸಕ್ರಿಯವಾಗಿ ಈ ಕಲೆಯ ಉಪಾಸನೆಯಲ್ಲಿ ನಿರತವಾಗಿವೆ. ಮರಾಠಿಯಲ್ಲಿಯೂ ಕನ್ನಡದ ಯಕ್ಷಗಾನ ನಡೆಯುತ್ತಿರುವುದು ಈ ಕಲೆಯ ಅತಿಶಯತೆಯನ್ನು ಎತ್ತಿ ತೋರಿಸುತ್ತದೆ. ಮರಾಠಿ ರಂಗಭೂಮಿಯ ಹುಟ್ಟಿಗೂ ಯಕ್ಷಗಾನ ಪ್ರೇರಣೆ ನೀಡಿದ್ದು ಐತಿಹಾಸಿಕ ದಾಖಲೆಯಾಗಿದೆ. ಭಾರತದ ಜಾನಪದ ರಂಗಭೂಮಿಗೆ ಕರ್ನಾಟಕ ಕೊಟ್ಟ ಮಹತ್ವದ ಯೋಗದಾನ ಎಂದರೆ ಯಕ್ಷಗಾನ. ಮುಂಬೈಯಲ್ಲಿ ಯಕ್ಷಗಾನ ಕಲೆಯ ಏಳುಬೀಳುಗಳ ವರ್ಣನಾತ್ಮಕ ಕಥನ ಈ ಮಹಾಪ್ರಬಂಧದಲ್ಲಿ ಸೊಗಸಾಗಿ ಬಿಂಬಿತವಾಗಿದೆ.



ಲೇಖಕ : ಡಾ. ವೈ.ವಿ.ಮಧುಸೂದನ ರಾವ್
ಪ್ರಕಾಶನ: ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ, ಮುಂಬೈ
ಬೆಲೆ ರೂ 500/,
ಸಂಪರ್ಕ: 98686 75364

ಮುಂಬೈ ಸಾಹಿತ್ಯ ವಲಯವಾಗಿ ಹೆಸರು ಮಾಡಿದೆ, ಅಂತೆಯೇ ಮುಂಬೈಯ ಯಕ್ಷಗಾನ ಪ್ರಸಂಗಕರ್ತರೂ ಸಹ ಈ ಮರಾಠಿ ಮಣ್ಣಿನಲ್ಲಿ ಅನನ್ಯವಾದ ಸಾಧನೆಯನ್ನು ಮಾಡಿದ್ದಾರೆ. ಯಕ್ಷಗಾನ ಕಲೆಗೆ ಮುಂಬೈ ನೂತನ ಆಯಾಮವನ್ನು ನೀಡುವಲ್ಲಿ ಹೇಗೆ ಯಶಸ್ವಿಯಾಗಿದೆ ಎಂಬ ಸಂಗತಿಯನ್ನು ಆಧಾರಸಹಿತವಾಗಿ ಇಲ್ಲಿ ಬೆಳಕಿಗೆ ಹಿಡಿಯಲಾಗಿದೆ. ಮುಂಬೈಯ ಯಕ್ಷಗಾನ ಸಾಹಿತ್ಯವು ಸಾಕಷ್ಟು ವೈವಿಧ್ಯಮಯವಾಗಿದೆ ಎಂಬುದನ್ನು ವಿಪುಲ ಉದಾಹರಣೆಗಳೊಂದಿಗೆ ಲೋಕಸಮ್ಮುಖ ಗೊಳಿಸಲಾಗಿದೆ. ಇಲ್ಲಿನ ಯಕ್ಷಗಾನ ರಂಗಭೂಮಿ ಕಾಲ ಕಾಲಕ್ಕೆ ಕಂಡ ಸ್ಥಿತ್ಯಂತರಗಳನ್ನು ಪ್ರಯೋಗ, ಪರಿಣಾಮಗಳನ್ನು ಯಕ್ಷಗಾನ ಪ್ರಸಂಗಗಳ ಹಿರಿಮೆಗಳನ್ನು ವೈಶಿಷ್ಟ್ಯಗಳನ್ನು ಎತ್ತಿ ತೋರಿಸುವ ಮೌಲ್ಯಮಾಪನ ಮಾಡುವ ಬಳಕೆಯಲ್ಲಿರುವ ಪ್ರಸಂಗಗಳೊಡನೆ ತಾಳೆಹಾಕಿ ನೋಡುವ ಪ್ರಯತ್ನದಲ್ಲಿ ಈ ಮಹಾಪ್ರಬಂಧ ಯಶಸ್ವಿಯಾಗಿದೆ.

ಪದವೀಧರ ಯಕ್ಷಗಾನ ಸಮಿತಿಯ ಸಾಧನೆ, ಬಿಲ್ಲವರ ಅಸೋಸಿಯೇಷನ್ ಪ್ರಾಯೋಜಿತ ಗುರುನಾರಾಯಣ ಯಕ್ಷಗಾನ ಮಂಡಳಿ, ದುರ್ಗಾಪರಮೇಶ್ವರಿ ಯಕ್ಷಗಾನ ಮಂಡಳಿ,ಜನಪ್ರಿಯ ಯಕ್ಷಗಾನ ಮಂಡಳಿ, ಗೀತಾಂಬಿಕಾ ಯಕ್ಷಗಾನ ಮಂಡಳಿ, ಅಜೆಕಾರು ಕಲಾಭಿಮಾನಿ ಬಳಗ ಜತೆ ಜತೆಗೆ ಇಲ್ಲಿನ ತಾಳಮದ್ದಳೆ ಕೂಟ, ಕನ್ನಡ, ತುಳು, ಕೊಂಕಣಿ, ಮರಾಠಿ, ಹಿಂದಿ, ಆಂಗ್ಲ ಭಾಷೆಗಳಲ್ಲಿ ಯಕ್ಷ ಕಲಾ ಸೌರಭ ಪ್ರಸಾರಗೊಂಡಿರುವುದು, ಇವತ್ತಿಗೂ ಮುಂಬೈಯಲ್ಲಿ ಯಕ್ಷಗಾನ ಕಲೆಯನ್ನು ಜೀವಂತವಾಗಿ ಉಳಿಸಲು ಪ್ರಯತ್ನಿಸುತ್ತಿರುವ ಅನೇಕ ಸಂಘ ಸಂಸ್ಥೆಗಳು ಸಂಘಟಕರು,ನೂರಾರು ಯಕ್ಷಗಾನ ಕಲಾವಿದರ ಸಾಹಸ ಸಾಧನೆಗಳೆಲ್ಲ ಇಲ್ಲಿ ಇತಿಹಾಸದ ಪುಟ ಸೇರಿರುವುದು ಅವಲೋಕನೀಯವಾಗಿದೆ. ಕಲಾವಿದನೊಬ್ಬನ ಶೋಧಕ ದೃಷ್ಟಿ ಹಾಗೂ ಹುಡುಕಾಟದ ಒಳಗಣ್ಣು ಇಲ್ಲಿ ಚೆನ್ನಾಗಿ ಕೆಲಸ ಮಾಡಿದೆ.ನಾಡಿನ ಖ್ಯಾತ ಯಕ್ಷಗಾನ ಕಲಾವಿದ, ವಿದ್ವಾಂಸ ವಿಮರ್ಶಕ ಡಾ. ಪ್ರಭಾಕರ ಜೋಶಿ ಅವರು ಈ ಕೃತಿಗೆ ಸುದೀರ್ಘವಾದ ಮುನ್ನುಡಿಯನ್ನು ಬರೆದಿದ್ದು ಪ್ರಾದೇಶಿಕತೆಗೂ ಸಹ ಯಕ್ಷಗಾನದ ಬೆಳವಣಿಗೆಗೆ ಪೂರಕವಾಗಿದೆ ಎಂದಿರುವುದು ಗಮನೀಯ ಅಂಶ. ಮುಂಬೈ ಯಕ್ಷಗಾನ ರಂಗಭೂಮಿಯ ವಿಭಿನ್ನ ನೆಲೆಗಳ ಮೇಲೆ ಬೆಳಕು ಹಾಯಿಸುವ ಹೊಸ ಹೊಸ ಮಾಹಿತಿಗಳಿಂದ ಸಮೃದ್ಧವಾಗಿರುವ

ಈ ಮಹತ್ವದ ಶೋಧ ಕೃತಿಗಾಗಿ ಕಲಾವಿದ ಡಾ. ಮಧುಸೂದನ ರಾವ್ ಅವರಿಗೆ ಹಾರ್ದಿಕ ಅಭಿನಂದನೆಗಳು.

ಅಸ್ತಿತ್ವದ ಅನ್ವೇಷಣೆ

ಈ ಕೃತಿಯು ವೀರಣ್ಣ ಕಲಕೇರಿಯವರಿಂದ ಬರೆದ ಕಿರು ಲೇಖನಗಳ ಸಂಗ್ರಹವಾಗಿದೆ. ದಿನನಿತ್ಯದ ಬದುಕು, ಬೌದ್ಧಿಕ ವಿಚಾರಗಳು, ಸಮಾಜದ ಬಗೆಗಿನ ಸಂವೇದನೆ ಮತ್ತು ವ್ಯಕ್ತಿಯ ಅಂತರಂಗದ ಅನ್ವೇಷಣೆಯನ್ನು ಒಳಗೊಂಡಿರುವ ಈ ಬರಹಗಳು, ಓದುಗರನ್ನು ಆಳವಾಗಿ ಚಿಂತನೆಯಲ್ಲಿ ತೊಡಗಿಸುತ್ತವೆ. ಸಾಹಿತ್ಯ ಮತ್ತು ಸಮಾಜ ಜೀವನದ ನಡುವೆ ಸೇತುವೆಯಾದಂತಿದೆ ಈ ಕೃತಿ.



ಭಾವ ಶುದ್ಧಿಯೇ ಖುಷಿಗೆ ಮೂಲ ಎಂಬ ಲೇಖನದಲ್ಲಿ ಭಾವನೆಗಳ ಮಹತ್ವವನ್ನು ಮತ್ತು ಅವು ಶಬ್ದಗಳ ಮೂಲಕ ವ್ಯಕ್ತವಾಗುವ ರೀತಿಯನ್ನು ಅರ್ಥಗಟ್ಟಿಸಲಾಗಿದೆ. ವ್ಯಕ್ತಿತ್ವದ ಅಸ್ತಿತ್ವ ಲೇಖನದಲ್ಲಿ ವ್ಯಕ್ತಿಯ ಆತ್ಮಸಾಕ್ಷಾತ್ಕಾರ ಮತ್ತು ತನ್ನ ಶಕ್ತಿಗಳ ಅರಿವು ಎಂಬುದರ ಬಗ್ಗೆ ವಿವರಣೆ ಇದೆ. ವಿವೇಕ ಮರೆಯದ ಮಾತು ನಮ್ಮದಾಗಲಿ ಎಂಬ ಲೇಖನದಲ್ಲಿ ಮಾತು ನಿಜವಾಗಲಿ, ನೀತಿಯಾಗಲಿ, ಸಮಂಜಸವಾಗಲಿ ಎಂಬ ಸ್ಪಷ್ಟ ಆಶಯವಿದೆ. ಅರಿವು ಅರಳಿಸೋಣ ಲೇಖನದ ತಾತ್ಪರ್ಯ ಏನೆಂದರೆ ಜ್ಞಾನ, ತಿಳುವಳಿಕೆ, ಮತ್ತು ಸಾಮಾಜಿಕ ಬದ್ಧತೆಯ ಅಗತ್ಯತೆಯನ್ನು ಹಂಚಿಕೊಳ್ಳುವ ಅರ್ಥವನ್ನು ನೀಡುತ್ತದೆ. ಸದ್ವಾದಗಳು ಸಮಯ ಹಾಳು ಮಾಡುವುದಕ್ಕಲ್ಲ, ಸಮರ್ಥ ಚಿಂತನೆಗೆ ದಾರಿ ಮಾಡಿಕೊಡಬೇಕೆಂಬ ಹಿರಿತನವನ್ನು ಲೇಖನವೊಂದರಲ್ಲಿ ವಿವರಿಸಲಾಗಿದೆ. ಹೀಗೆ ಒಟ್ಟಾರೆ ಅಸ್ತಿತ್ವದ ಅನ್ವೇಷಣೆ ಕೃತಿಯ ಲೇಖನಗಳು ಆಳವಾದ ಚಿಂತನೆಗೆ ಆಹ್ವಾನಿಸುತ್ತವೆ.

ಆಕಾಶವಾಣಿಯ ಆಪ್ತ ಪರಿಚಯ

» ಉಮಾ ರಾಮರಾವ್, ಮುಂಬಯಿ

ಆಕಾಶವಾಣಿಯಲ್ಲಿ ಸುದೀರ್ಘ ಸೇವೆಯನ್ನು ಸಲ್ಲಿಸಿ ಕೇಂದ್ರ ನಿರ್ದೇಶಕರಾಗಿ ನಿವೃತ್ತರಾಗಿರುವ ಡಾ. ವಿಜಯಾ ಹರನ್ ಅವರು ತಮ್ಮ ವೃತ್ತಿ ಜೀವನದ ರೋಚಕ 'ವಾದ ನೆನಪುಗಳನ್ನು ದಾಖಲಿಸಿರುವ ಅಪರೂಪದ ಕೃತಿ 'ಆಕಾಶವಾಣಿಯ ಆ ದಿನಗಳು'. ವೈಯಕ್ತಿಕ ಮನರಂಜನೆಗೂ ಸಾಮೂಹಿಕ ಸಂವಹನಕ್ಕೂ ಏಕೈಕ ಪ್ರಸಾರ ಮಾಧ್ಯಮವಾಗಿ ಆಕಾಶವಾಣಿಯು ರಾರಾಜಿಸುತ್ತಿದ್ದ ಎಪ್ಪತ್ತರ ದಶಕದಲ್ಲಿ ಆ ಸಂಸ್ಥೆಯನ್ನು ಸೇರಿ ನಿಷ್ಠೆಯಿಂದ ಸೇವೆಗೈದವರು ಡಾ. ವಿಜಯಾ. ಟಿವಿ ಮತ್ತು ಬೆರಳ ತುದಿಯಲ್ಲಿಯೇ ಸುದ್ದಿ ಮನರಂಜನೆಗಳು ಎಟುಕುವಂತಿರುವ ಮೊಬೈಲುಗಳಿಂದ ಆಕಾಶವಾಣಿಯ ಹಿಂದಿನ ವೈಭವವು ಸ್ವಲ್ಪ ಮಸುಕಾಗಿರುವುದಾದರೂ ಹಳ್ಳಿಗಳ ನಾಡಾದ ನಮ್ಮ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಯನ್ನೂ ಮುಟ್ಟಬಲ್ಲಂತಹ ಸಶಕ್ತ ಮಾಧ್ಯಮ ರೇಡಿಯೋ ಒಂದೇ ಎನ್ನುವ ವಾಸ್ತವ ಇಂದಿಗೂ ಅಚಲವಾಗಿ ನಿಂತಿದೆ. ಇಂದು ಹಿರಿಯ ನಾಗರಿಕರೆನಿಸಿರುವ ಅನೇಕರ ಜೀವನದ ತಾರುಣ್ಯದ ದಿನಗಳಲ್ಲಿ ರೇಡಿಯೋ ಅತಿ ನೆಚ್ಚಿನ ಸಂಗಾತಿಯಾಗಿದ್ದದ್ದು ಪರಮಸತ್ಯ. ಮನೆಯ ಹಜಾರದಲ್ಲಿ ಠೀವಿಯಿಂದ ವಿರಾಜಮಾನವಾಗಿರುತ್ತಿದ್ದ ರೇಡಿಯೋ ಎನ್ನುವ ಮಾಯಾ ಪೆಟ್ಟಿಗೆಯ ಒಳಗಿನಿಂದ ಉಲಿಯುವ ಕಲಾವಿದರು ನಮ್ಮ ಹದಿವಯಸ್ಸಿನ ದಿನಗಳಲ್ಲಿ ದೇವಲೋಕದಿಂದ ಇಳಿದು ಬಂದವರೇನೋ ಎನ್ನುವ ವಿಸ್ಮಯವನ್ನು ನಮ್ಮಲ್ಲಿ ಹುಟ್ಟಿಸುತ್ತಿದ್ದದ್ದು ನಿಜ. ವಿಜಯಾ ಅವರ ಪುಸ್ತಕವು ದಾಖಲಿಸುವುದು 'ಆ ದಿನಗಳ' ನೆನಪುಗಳನ್ನೇ.

ಆಕಾಶವಾಣಿಯಲ್ಲಿನ ಉದ್ಯೋಗವನ್ನು ವೃತ್ತಿಯಾಗಿ ಪ್ರಾರಂಭಿಸಿ ಅದನ್ನೇ ತಮ್ಮ ಪ್ರವೃತ್ತಿಯನ್ನಾಗಿಯೂ ಮಾಡಿಕೊಂಡ ಭಾಗ್ಯಶಾಲಿಗಳು ವಿಜಯಾ. ತಿಳಿಯಾದ ಆಲೋಚನೆಗಳು, ಆತ್ಮೀಯವಾದ ಭಾಷೆ, ಅನುಭವದಿಂದ ಪುಷ್ಟವಾದ ಮಾಹಿತಿ ಇವು ವಿಜಯಾರವರ ಎಲ್ಲ ಬರೆವಣಿಗೆಗಳ ಹಿಂದಿರುವ ಪ್ರಧಾನವಾದ ಗುಣಗಳು. ಪ್ರಸಕ್ತ ಪುಸ್ತಕದಲ್ಲಿಯೂ ಇವು ಎದ್ದು ಕಾಣುತ್ತವೆ. ಮೂವತ್ತೆಂಟು ವರ್ಷಗಳ ತಮ್ಮ ಸುದೀರ್ಘ ಸೇವಾವಧಿಯ ನೆನಪುಗಳನ್ನು ಲೇಖಕಿಯಿಲ್ಲಿ ದಾಖಲಿಸಿದ್ದಾರೆ. ಅವರ ನಿರೂಪಣೆ ಗೋಜಲುಗಳಿಲ್ಲದೆ ಸುಲಲಿತವಾಗಿ ಹರಿದು ಬಂದಿದೆ. ಉದ್ಘೋಷಕಿಯ ಹುದ್ದೆಯಿಂದ ಪ್ರಾರಂಭಿಸಿ ನಿರ್ದೇಶಕಿಯ ಹುದ್ದೆಗೆ ಮೇಲೇರುವವರೆಗೆ ಅವರ ಉದ್ಯೋಗ ಜೀವನದ ಏರಿಳಿತಗಳೆಲ್ಲವೂ ಇಲ್ಲಿ ಬಹಳ ಮನೋಜ್ಞವಾಗಿ ಹೇಳಲ್ಪಟ್ಟಿವೆ. 'ಆಕಾಶವಾಣಿಗೆ ಪ್ರವೇಶ' ಎಂಬ ಅಧ್ಯಾಯದಿಂದ ಪ್ರಾರಂಭವಾಗಿ 'ಮಹಾನ್ ಸಂಸ್ಥೆ - ಮನದಾಳದ ಮಾತು' ಎನ್ನುವ ಅಧ್ಯಾಯದೊಡನೆ ಕೊನೆಗೊಳ್ಳುವ ಹದಿಮೂರು ಅಧ್ಯಾಯಗಳ ಈ ಕಥನ ಅತ್ಯಂತ ಯೋಜಿತವಾಗಿ ಕ್ರಮವಾಗಿ ಸಾಗಿ ವಿಜಯಾ ಅವರ ವೃತ್ತಿಜೀವನದ ಪ್ರಮುಖ ಘಟ್ಟಗಳೆಲ್ಲವನ್ನೂ ಸಮಗ್ರವಾಗಿ ದಾಖಲಿಸುತ್ತದೆ. ಪ್ರತಿಯೊಂದು ಅಧ್ಯಾಯಕ್ಕೂ ವಿಜಯಾ ಅವರು ನೀಡಿರುವ ಸಮುಚಿತವಾದ ಶೀರ್ಷಿಕೆಗಳು ಅವರಲ್ಲಿರುವ ಹುಟ್ಟು ಬರಹಗಾರ್ತಿಯ ಪ್ರತಿಭೆಗೆ ಸಾಕ್ಷಿಯಾಗಿವೆ.

ಜವಾಬ್ದಾರಿಯಿಂದ ಕೂಡಿದ ಉದ್ಯೋಗ ಜೀವನವೆನ್ನುವುದು ಹೂವಿನ ಹಾಸಿಗೆಯಲ್ಲ. ಅಲ್ಲಿ ಸವಾಲುಗಳಿವೆ, ದುಗುಡ ದುಮ್ಮಾನಗಳನ್ನು ಹುಟ್ಟಿಸುವ ಅನೇಕ ಸಂಗತಿಗಳಿವೆ, ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಕೆಲವೊಮ್ಮೆ ಇದು ಸರಿಯೋ ಅಥವಾ ಇನ್ನೊಂದೋ ಎಂದು ಮನಸ್ಸನ್ನು ತೊಳಲಾಡಿಸುವ ದ್ವಂದ್ವಗಳಿವೆ. ವೃತ್ತಿಜೀವನದ ಈ ಎಲ್ಲ ಅಂಶಗಳನ್ನೂ ಲೇಖಕಿಯು ಅತ್ಯಂತ ಸಂಯಮದಿಂದ ನಿರೂಪಿಸಿದ್ದಾರೆ. ತಾವು ಉದ್ಘೋಷಕಿಯಾಗಿ ಸೇರಿದ್ದಾಗಿನ 1972ರ ಸಮಯದ ಆಕಾಶವಾಣಿಯ ಸ್ಥಿತಿಗತಿಗಳು, ಮಹಿಳಾ ಉದ್ಯೋಗಿಗಳಿಗೆ ಎದುರಾಗುತ್ತಿದ್ದ ಸಮಸ್ಯೆಗಳು, ಒಳ್ಳೆಯ ವಸತಿ ಸೌಕರ್ಯಗಳಿಲ್ಲದ ಊರುಗಳಲ್ಲಿ ಕೆಲಸ ಮಾಡಬೇಕಾಗಿ ಬಂದಾಗಿನ ಬವಣೆಗಳು, ಅವೇಳೆಗಳಲ್ಲಿ ಕಚೇರಿಗೂ ಮನೆಗೂ ಪ್ರಯಾಣಿಸಬೇಕಾದ ಆತಂಕಗಳು ಇವೆಲ್ಲವನ್ನೂ ಮನಮುಟ್ಟುವಂತೆ ಬರೆದಿದ್ದಾರೆ. ಜೊತೆಗೇ ವೃತ್ತಿಜೀವನದಲ್ಲಿ ಮೇಲೇರಿದಂತೆ ದೊರೆತ ಹೊಸ ಅವಕಾಶಗಳು, ಹಿರಿಯ ಸಾಹಿತಿಗಳ ಮತ್ತು ಇತರ ಗಣ್ಯರ ಸಂಪರ್ಕ, ನಾಡಿನ ಮೂಲೆ ಮೂಲೆಗಳನ್ನು ತಮ್ಮ ಧ್ವನಿಯ ಮೂಲಕವೇ ತಲುಪಿ ತಾವು ಮನೆಮಾತಾದ ಸಾರ್ಥಕಭಾವ ಇವುಗಳನ್ನೂ ಪಕ್ಷಪಾತವಿಲ್ಲದೆಯೇ ದಾಖಲಿಸಿದ್ದಾರೆ.

ಆಕಾಶವಾಣಿಯಲ್ಲಿ ವಿಜಯಾ ಅವರದು ಬಹು ಯಶಸ್ವಿಯಾಗಿ ಪೂರ್ಣಗೊಂಡ ಸೇವೆ. ಇಂತಹ ಗೆಲುವಿನ ಕಥೆಯನ್ನು ಹೇಳಿಕೊಳ್ಳುವಾಗ ನಿರೂಪಣೆಯಲ್ಲಿ ಸ್ವಪ್ರಶಂಸೆಯು ನುಸುಳಿಬಿಡುವುದು ಬಹಳ ಸ್ವಾಭಾವಿಕ. ಆದರೆ ಲೇಖಕಿಯಿಲ್ಲಿ ಎಲ್ಲ ಅನುಭವಗಳನ್ನೂ ಸಾಧನೆಗಳನ್ನೂ ಅತ್ಯಂತ ವಸ್ತುನಿಷ್ಠವಾಗಿ ದಾಖಲಿಸಿ ಪುಸ್ತಕವು ಒಂದು ಸ್ವಂತದ ಬಡಾಯಿಯಾಗದಂತೆ ಎಚ್ಚರ ವಹಿಸಿದ್ದಾರೆ. ಇದು ಪುಸ್ತಕದ ವಾಚನೀಯತೆಯನ್ನು ಮತ್ತಷ್ಟು ಹೆಚ್ಚಿಸಿದೆ. ವಿಜಯಾ ಅವರ ಈ ಕಾಳಜಿ ನಿಜಕ್ಕೂ ಮೆಚ್ಚುಗೆಯನ್ನು ಹುಟ್ಟಿಸುತ್ತದೆ.

ಕೃತಿ: ಆಕಾಶವಾಣಿಯ ಆ ದಿನಗಳು
ಲೇಖಕರು:ಡಾ. ಎಂ.ಎಸ್. ವಿಜಯಾ ಹರನ್
ಪುಟಗಳು:424, ಬೆಲೆ: ರೂ. 525
ಪ್ರಕಾಶಕರು: ಸಂಸ್ಕೃತಿ ಬುಕ್ ಏಜನ್ಸೀಸ್, ಮೈಸೂರು

ವೃತ್ತಿಜೀವನದಲ್ಲಿ ಕಾಲಕಾಲಕ್ಕೆ ದೊರೆತು ಕೆಲಸಕ್ಕೆ ಹುರುಪನ್ನು ತುಂಬಿದ ಅಭಿಮಾನಿಗಳ ಪತ್ರಗಳು, ಜೊತೆಗಾರರಲ್ಲಿ ಗಳಿಸಿದ ಪ್ರೀತಿಯನ್ನು ತೆರೆದು ತೋರಿಸುವ ಸಹೋದ್ಯೋಗಿಗಳ ನುಡಿಗಳು, ಬರಹಕ್ಕೆ ಅಧಿಕೃತತೆಯನ್ನು ನೀಡುವ ಪತ್ರಿಕೆಗಳ ವರದಿಗಳು ಇವೆಲ್ಲವೂ ಬಹಳ ಅಚ್ಚುಕಟ್ಟಾದ ಅನುಬಂಧಗಳಾಗಿ ಸೇರ್ಪಡೆಗೊಂಡಿವೆ. ಈ ಪುಸ್ತಕದ ಅತ್ಯಂತ ಗಮನ ಸೆಳೆಯುವ ಇನ್ನೊಂದು ಅಂಶವೆಂದರೆ ಕೊನೆಯಲ್ಲಿ ಲೇಖಕಿಯು ನೀಡಿರುವ ಕ್ಯೂಆರ್ ಕೋಡ್‌ಗಳು. ಆಕಾಶವಾಣಿಯ ಹಲವಾರು ಜನಪ್ರಿಯ ಕಾರ್ಯಕ್ರಮಗಳು ಧ್ವನಿಮುದ್ರಿತ ಸುರುಳಿಗಳಾಗಿ ಬೆಚ್ಚಗೆ ಕಚೇರಿಯ ಕಪಾಟುಗಳಲ್ಲಿ ಹುದುಗಿಹೋಗದೆ ಈ ಪುಸ್ತಕವನ್ನು ಓದುವವರಿಗೂ ಸುಲಭವಾಗಿ ತಲುಪುವಂತೆ ಈ ಮೂಲಕವಾಗಿ ಲೇಖಕಿಯು ಅನುಕೂಲವನ್ನು ಕಲ್ಪಿಸಿಕೊಟ್ಟಿದ್ದಾರೆ. ಆಕಾಶವಾಣಿಯಲ್ಲಿ ಪ್ರಸಾರವಾಗಿ ಜನಪ್ರಿಯವಾಗಿದ್ದ 'ಹಟ್ಟಿ ಹರಟೆ', 'ಗಾದೆ ಗದ್ದುಗೆ' ಮೊದಲಾದ ಹಲವಾರು ಕಾರ್ಯಕ್ರಮಗಳ ಧ್ವನಿಮುದ್ರಿಕೆಗಳಿಗೆ ಈ ಕ್ಯೂಆರ್ ಕೋಡ್ಗಳು ವಾಚಕರನ್ನು ನೇರವಾಗಿ ಸೇರಿಸುತ್ತವೆ. ವೃತ್ತಿಜೀವನದಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಲ್ಲಿ ವಿಜಯಾ ಅವರು ತೋರಿರುವ ವಿಶೇಷ ಮುತುವರ್ಜಿ, ಪ್ರತಿಭೆಗಳು ಈ ಪುಸ್ತಕದ ರಚನೆಯಲ್ಲಿಯೂ ಈ ಮೂಲಕವಾಗಿ ತೋರ್ಪಡಿಸಿಕೊಂಡಿವೆ.

ಸರ್ವಾಂಗ ಸುಂದರವಾದ ಈ ಪುಸ್ತಕಕ್ಕೆ ಡಾ. ಸಿ. ನಾಗಣ್ಣ ಅವರ ಮುನ್ನುಡಿ ಮತ್ತು ಶತಾವಧಾನಿ ಡಾ. ಆರ್. ಗಣೇಶರ ಬೆನ್ನುಡಿಗಳು ಹೆಚ್ಚಿನ ಶೋಭೆಯನ್ನಿತ್ತಿವೆ. ಸಾಮೂಹಿಕ ಸಂವಹನದಲ್ಲಿ ಇಡಿಯ ಭಾರತದ ಜೀವನಾಡಿಯಾಗಿರುವ ಆಕಾಶವಾಣಿಯು ತನ್ನ ಮೊದಲ ಪ್ರಸಾರವನ್ನು ಪ್ರಾರಂಭಿಸಿದ್ದು ಕನ್ನಡದ ನೆಲವಾದ ಮೈಸೂರಿನಿಂದ. ಹಾಗೆಯೇ ಆಕಾಶವಾಣಿಯ ಅದ್ಭುತ ದಿನಗಳ ಸುಂದರ ಚಿತ್ರಣವನ್ನು ಇಷ್ಟೊಂದು ಯಥಾವತ್ತಾಗಿಯೂ ಮನೋಹರವಾಗಿಯೂ ನೀಡುವ ಪುಸ್ತಕವು ಪ್ರಕಟವಾಗಿರುವುದೂ ನಮ್ಮ ಕನ್ನಡದಲ್ಲಿಯೇ ಎನ್ನುವ ಹೆಮ್ಮೆಯನ್ನು ಕನ್ನಡಿಗರಿಗೆ ಇತ್ತಿರುವ ಡಾ. ವಿಜಯಾ ಅವರು ನಿಜಕ್ಕೂ ಅಭಿನಂದನಾರ್ಹರು. ಸಂಸ್ಕೃತಿ ಬುಕ್ ಏಜನ್ಸೀಸ್ ಅವರು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟಿರುವ ಈ ಪುಸ್ತಕವು ಕನ್ನಡಿಗರ ಹೆಮ್ಮೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಪರ್ವ
(ಮಹಾಭಾರತ ಹೀಗೂ ನಡೆದಿರಬಹುದೇ ಎಂದು ಸೋಜಿಗ, ಆಶ್ಚರ್ಯ ಮತ್ತು ಕುತೂಹಲವುಂಟು ಮಾಡುವ ಭೈರಪ್ಪ ಅವರ ಪ್ರಸಿದ್ಧ ಕಾದಂಬರಿ)
ಎಸ್.ಎಲ್. ಭೈರಪ್ಪ
ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ : ರೂ 845/-



2
ವಿದೇಶ ಕಾಲ
(ನೂರಕ್ಕೂ ಹೆಚ್ಚು ದೇಶಗಳಿಗೆ ಪ್ರವಾಸ ಕೈಗೊಂಡಿರುವ ವಿಶ್ವೇಶ್ವರ ಭಟ್ಟರು ಅಲ್ಲಿಯ ವಿಶಿಷ್ಟ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದಾರೆ. ಇದು ಭಟ್ಟರ ನೂರನೇ ಪುಸ್ತಕವೂ ಹೌದು)
ವಿಶ್ವೇಶ್ವರ ಭಟ್ , ವಿಶ್ವವಾಣಿ ಪುಸ್ತಕ, ಬೆಂಗಳೂರು , ಬೆಲೆ : ರೂ 500/-



3
ನಾಡದೇವಿ ಭುವನೇಶ್ವರಿ ನಡೆದು ಬಂದ ದಾರಿ
(ನಾಡದೇವಿಯನ್ನು ಕುರಿತ ಸಮಗ್ರ ಮಾಹಿತಿ ಇಲ್ಲಿದೆ. ಈ ಸಾಂಸ್ಕೃತಿಕ ಅಧ್ಯಯನವನ್ನು ವಿಜ್ಞಾನಿಯೊಬ್ಬರು ಮಾಡಿರುವುದು ಇಲ್ಲಿಯ ವಿಶೇಷ)
ಡಾ। ಟಿ.ಆರ್. ಅನಂತರಾಮು
ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 195/-



4
ಒಳಚರಂಡಿ
(ಪ್ರಸಿದ್ಧ ಕಥೆಗಾರ ಶ್ರೀ ನಾಗತಿಹಳ್ಳಿ ಅವರು ಕಳೆದ 20 ವರ್ಷಗಳಲ್ಲಿ ಬರೆದ ಕಥೆಗಳಿವು. ಮಾಗಿದ ಲೇಖಕನ ವಿಶಿಷ್ಟ ಕಥೆಗಳು ಇಲ್ಲಿ ಸಂಕಲಿತವಾಗಿವೆ)
ನಾಗತಿಹಳ್ಳಿ ಚಂದ್ರಶೇಖರ್ ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, ಬೆಂಗಳೂರು ,
ಬೆಲೆ : ರೂ 150/-



5
ಬದುಕಿನ ಅರ್ಥದ ಹುಡುಕಾಟದಲ್ಲಿ ಮನುಷ್ಯ
(ವಿಕ್ಟರ್ ಫ್ರಾಂಕಲ್‌ನ ಬೆಸ್ಟ್ ಸೆಲ್ಲರ್ ಕೃತಿಯೀಗ ಕನ್ನಡದಲ್ಲಿ. ಶಿವಾನಂದ ಬೇಕಲ್ ಕನ್ನಡಕ್ಕೆ ಅನುವಾದಿಸಿದ್ದಾರೆ)
ವಿಕ್ಟರ್ ಈ. ಫ್ರಾಂಕಲ್
ಅನು : ಶಿವಾನಂದ ಬೇಕಲ್
ಪ್ರಕಾಶನ, ಪುಣೆ ,
ಬೆಲೆ : ರೂ 195/-



6
ಹ್ಯಾಷ್ ಟ್ಯಾಗ್
(ಛಂದ ಪುಸ್ತಕ ಬಹುಮಾನ ಪಡೆದ ಕೃತಿ. ವಿಭಿನ್ನ ಶೈಲಿಯ ಬರಹಗಾರ ಕುಲಕರ್ಣಿ ಅವರ ಪ್ರಬಂಧಗಳು, ಕತೆಗಳು ಈಗಾಗಲೇ ಪ್ರಕಟವಾಗಿವೆ.)
ಗುರುರಾಜ ಕುಲಕರ್ಣಿ
ಛಂದ ಪುಸ್ತಕ,ಬೆಂಗಳೂರು
ಬೆಲೆ : ರೂ 135/-

7
ಸೊಂಟಕ್ ಬೆಲ್ಟು ಕಟ್ಟಿಕೊಂಡು
(ಹೊಸ ರೀತಿಯ ಪ್ರವಾಸ ಕಥನವಿದು. ಕೇವಲ ಪ್ರೇಕ್ಷಣೀಯ ಸ್ಥಳಗಳ ವಿವರಣೆಯಲ್ಲ. ಅದಕ್ಕಿಂತ ಭಿನ್ನವಾದ ಅನುಭವ ಮೂಡಿಸುತ್ತಾರೆ ಭಾರತಿಯವರು) ಭಾರತಿ ಬಿ.ವಿ.
ಸಾವಣ್ಣ ಪ್ರಕಾಶನ, ಬೆಂಗಳೂರು
ಬೆಲೆ : ರೂ 200/-



8
ಅಂತ್ಯವಾಗದು ಕಥೆ
(ಬುಕ್ ಬ್ರಹ್ಮ ಕಥಾಸ್ಪರ್ಧೆಯಲ್ಲಿನ ಬಹುಮಾನಿತ ಕಥೆಗಳು ಇಲ್ಲಿವೆ)
ಸಂಪಾದಕೀಯ ಬಳಗ
ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 390/-



9
ಕೊನೆ ಹೇಗೋ ಅರಿಯಲಾರೆ!
(ಮತ್ತೆ ಪತ್ತೇದಾರಿ ಪ್ರಕಾರವನ್ನು ಚಾಲ್ತಿಯಲ್ಲಿತಂದ ಪ್ರಮುಖರಲ್ಲಿ ಸಿ. ಎಸ್. ನಾಗೇಶ್ ಕುಮಾರ್ ಕೂಡಾ ಒಬ್ಬರು. ಕೊನೆಯವರೆಗೂ ಕುತೂಹಲ ಕಾಯ್ದುಕೊಳ್ಳುವ ಶಕ್ತಿ ಅವರ ಬರವಣಿಗೆಗೆ ಇದೆ.), ಸಿ. ಎಸ್. ನಾಗೇಶ್ ಕುಮಾರ್
ಸಾಹಿತ್ಯಲೋಕ ಪಬ್ಲಿಕೇಷನ್ಸ್,
ಬೆಂಗಳೂರು , ಬೆಲೆ : ರೂ 265/-



10
ಸಂಗಮ
(ಕಳೆದು ಹೋಗಿದ್ದ ಕಥೆಗಾರ್ತಿ, ರಾಜಲಕ್ಷ್ಮಿ ಎನ್.ರಾವ್ ಅವರ ಏಕೈಕ ಪ್ರಕಟಿತ ಕಥಾ ಸಂಕಲನವಿದು. 91 ವರ್ಷದ, ಪ್ರಸಿದ್ಧ ಸಾಹಿತಿ ಬಿಎಂಶ್ರೀ ಮೊಮ್ಮಗಳ ಪ್ರಸಿದ್ಧ ಕಥಾ ಸಂಕಲನ ಈಗ ಮರುಮುದ್ರಣವಾಗಿದೆ)
ರಾಜಲಕ್ಷ್ಮಿ ಎನ್.ರಾವ್
ಸಂಕಥನ, ಮಂಡ್ಯ, ಬೆಲೆ : ರೂ 320/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ಅನ್ಯ ಭಾಷೆಯ ಪದ ಶಬ್ದವನ್ನು ಹೊರಹಾಕುತ್ತದೆಯೆ ಹೊರತು ಭಾವನೆಯನ್ನು ಅದು ವ್ಯಕ್ತಪಡಿಸುವುದಿಲ್ಲ. ಪದಕ್ಕೆ, ಭಾಷೆಗೆ ಭಾವನೆಯ ಲೇಪನ ಹಚ್ಚಬೇಕಾದರೆ ನಮ್ಮ ಮಾತೃಭಾಷೆಯೆ ಬೇಕು. ಅಂಥ ಸಂಭಾಷಣೆಗಳು ಕಡಿಮೆಯಾಗುತ್ತಿರುವುದೇ ಆಪ್ತತೆ ಕಡಿಮೆಯಾಗಲು ಬಹು ದೊಡ್ಡ ಕಾರಣವಾಗಿರುವುದು. ಆಂಗ್ಲಭಾಷೆಯು ನುಂಗಿ ಹಾಕಿರುವುದು ಬರೀ ಪದಗಳನ್ನಲ್ಲ, ನಮ್ಮ ಭಾವನೆಯನ್ನಷ್ಟೆ ಅಲ್ಲ, ನಮ್ಮ ನಾಲಿಗೆಯ ಸಾಮರ್ಥ್ಯವನ್ನೂ ಕೂಡ.

ಭಾಷೆಯ ಸರಳೀಕರಣ ಮತ್ತು ಅವನತಿ

» ಹಂಸವರ್ಧನ

ಭಾಷೆ- ಮನುಷ್ಯರನ್ನು ಒಂದುಗೂಡಿಸುವ ಒಂದು ಮಾಧ್ಯಮ. ಬೇರೆ ಬೇರೆ ಕಾಲ-ದೇಶಗಳಲ್ಲಿ ಅಲ್ಲಿಗೆ ತಕ್ಕಂತಹ ಭಾಷೆಗಳು ಅಸ್ತಿತ್ವಕ್ಕೆ ಬಂದವು. ಅದು ಆ ಜಾಗದ ಭೌಗೋಳಿಕ ಪ್ರಾದೇಶಿಕ ಸಂಸ್ಕೃತಿಯೊಂದಿಗೆ ಬೆಳೆಯಿತು. ಮನುಷ್ಯರಿಗೆ ಅತ್ಯಾವಶ್ಯಕವಾದದ್ದು ಈ ಭಾಷೆ. ಸಂವಹನಕ್ಕೆ ಸನ್ನೆ ಚಿನ್ಹೆಗಿಂತ ಹೆಚ್ಚು ಸುಲಭ ಹಾಗೂ ಪರಿಣಾಮಕಾರಿ. ಬರೀ ಸಂವಹನಕ್ಕಷ್ಟೆ ಅಲ್ಲ ಜ್ಞಾನಾರ್ಜನೆಗೆ, ಭಾವನೆಗಳನ್ನು ವ್ಯಕ್ತಪಡಿಸಲು. ಹೀಗೆ ಅನೇಕ ಕವಲುಗಳಿವೆ ಈ ಭಾಷಾ ಉಗಮಕ್ಕೆ. ಪ್ರಕೃತಿಯಲ್ಲಿ ಯಾವುದೂ ಹಠತ್ತಾಗಿ ಆಗುವುದಿಲ್ಲ. ಹಾಗೆ ಆದದ್ದು ಅಷ್ಟೆ ವೇಗವಾಗಿ ನಶಿಸಿ ಹೋಗುತ್ತದೆ. ನಿಧಾನವಾಗಿ ಬೆಳೆದದ್ದು ದೀರ್ಘಕಾಲದವರೆಗು ಉಳಿಯುತ್ತದೆ. ಹಾಗೆಯೆ ಭಾಷೆಯು ಕೂಡ. ಅದು ಬೆಳೆದದ್ದು ಹೀಗೆ ನಿಧಾನವಾಗಿ. ಪ್ರಾಕೃತಿಕ ಸಂಪನ್ಮೂಲಗಳಿಂದ ಶುರುವಾಗಿ ದೇಶ ಕಾಲ ಹೀಗೆ ಬೆಳೆಯಿತು. ಅದರ ಹುಟ್ಟು ಯಾರಿಗೂ ತಿಳಿದಿಲ್ಲ, ತಿಳಿಯುವುದು ಇಲ್ಲ. ಏಕೆಂದರೆ ಭಾಷೆಯ ಇತಿಹಾಸ ತಿಳಿಯಲು ಹೊರಟರೆ ಅದರ ಮೂಲಕ್ಕೆ ಬರುವುದರೊಳಗಾಗಿ ಅವನು ಸರ್ವಜ್ಞನಾಗಿರುತ್ತಾನೆ. ಆಗ ಅವನಿಗೆ ತಿಳಿಯುತ್ತದೆ- ಭಾಷೆಯ ಮೂಲ ತಿಳಿಯಲಿಕ್ಕೆ ಅಸಾಧ್ಯ ಎಂದು.

ಈಗ ನಾವು ಏನೇ ಹೇಳಬಹುದು, ಹೇಗೆಲ್ಲ ವಾದಿಸಬಹುದು ಅದು ನಮ್ಮ ಅಜ್ಞಾನವೇ ಹೊರತು ನಿಜವಾದ ಸತ್ಯವಲ್ಲ. ಪ್ರಸ್ತುತ ಘಟನೆಗಳಲ್ಲೆ ಯಾವುದು ಸರಿ ಯಾವುದು ತಪ್ಪು, ಯಾವುದು ನಿಜ ಯಾವುದು ಸುಳ್ಳು ಎಂಬುದು ಗೊತ್ತಾಗುವುದೆ ಇಲ್ಲ. ಅಂತಹದರಲ್ಲಿ ಯಾವ ಶತಮಾನದಲ್ಲೊ ಆಗಿ ಬೆಳೆದು ಬಂದಿರುವ ಭಾಷೆಯ ಬಗ್ಗೆ ತರ್ಕಿಸುವುದು ಅಜ್ಞಾನವಲ್ಲದೆ ಮತ್ತೇನು? ಐವತ್ತು ನೂರು ವರ್ಷಗಳ ಇತಿಹಾಸದ ಬಗ್ಗೆಯೆ ಇನ್ನು ನಮಗೆ ಗೊಂದಲವಿರುವಾಗ ಇನ್ನು ಸಾವಿರಾರು ವರ್ಷ ಹಳೆಯದಾದ ಈ ಭಾಷಾ ವಿಜ್ಞಾನವನ್ನು ಅರಿಯುವುದು ಹೇಗೆ? ತರ್ಕಿಸುವುದು ಯಾವ ಮೂಲಗಳಿಂದ? 'ಅಕ್ಕಿಯೊಳಗನ್ನವನು ಮೊದಲಾರು ಕಂಡವರು। ಅಕ್ಕರದ ಬರಹಕ್ಕೆ ಮೊದಲಿಗನದಾರು। ಲೆಕ್ಕವಿರಿಸಿಲ್ಲ ಜಗ ತನ್ನಾದಿ ಬಂಧುಗಳ। ದಕ್ಕುವುದೆ ಜಸ ನಿನಗೆ- ಮಂಕುತಿಮ್ಮ' ಎಂಬ ಡಿ.ವಿ.ಜಿ ಅವರ ಕಗ್ಗದಂತೆ ಯಾರಿಗೆ ಕೀರುತಿ? ಯಾರಿಗೆ ಆರತಿ? ಯಾರಿಗು ಇಲ್ಲ; ಯಾರಿಗೂ ಸಲ್ಲ.

ಕಾಲ ಸರಿದಂತೆ ಸಾವಿರಾರು ಭಾಷೆ ಬೆಳೆಯಿತು. ಹಾಗೆ ಅವನತಿಯೂ ಹೊಂದಿತು. ಹೆಜ್ಜೆ ಹೆಜ್ಜೆಗೂ ಪ್ರಾಂತ್ಯಗಳು. ಒಂದೊಂದಕ್ಕು ಒಂದೊಂದು ಪ್ರಕೃತಿ. ಪ್ರಕೃತಿಗೆ ಅನುಗುಣವಾಗಿ ಚರಾಚರ ವಸ್ತುಗಳು. ಅವುಗಳಲ್ಲಿ ಭಿನ್ನ ಭಿನ್ನ ಆಚರಣೆಗಳು. ಅದಕ್ಕೆ ತಕ್ಕಂತಹ ಸಂವಹನ. ಅದಕ್ಕಾಗಿ ಭಿನ್ನ ಭಿನ್ನ ಭಾಷೆಗಳು ಭಾರತದಲ್ಲಿ ಸರ್ವೆ ಸಾಮಾನ್ಯ. ಇಲ್ಲಿ ಯಾವುದು ಮೇಲು ಯಾವುದು ಕೀಳು ಎಂಬುದಕ್ಕಿಂತ ಯಾವುದು ಹೆಚ್ಚು ಪರಿಣಾಮಕಾರಿ ಎಂಬುದೇ ಮುಖ್ಯ. ಯಾವ ವಸ್ತುವಿನ ಗುಣ-ಲಕ್ಷಣಗಳನ್ನು ಯಾವ ಪದ ಹೆಚ್ಚು ಸೂಕ್ತವಾಗಿ ಹೇಳುತ್ತದೆ ಎಂಬುದೆ ಭಾಷೆಯ ಶ್ರೇಷ್ಠತೆ ನಿಂತಿದೆ. ಯಾವ ವಸ್ತುವಿಗೆ ಯಾವ ಹೆಸರು? ಎಲ್ಲಾ ಬಗೆಯ ವಿಭಿನ್ನ ವಸ್ತುಗಳಿಗೆ ಭಿನ್ನ ಭಿನ್ನ ಹೆಸರು ಯಾವ ಭಾಷೆಯಲ್ಲಿದೆ ಎಂಬುದು ಅದರ ಸಮೃದ್ಧತೆಯನ್ನು ಸೂಚಿಸುತ್ತದೆ. ವಸ್ತುವಿನ ನಿರ್ದೇಶನ ಅಥವಾ ಗುಣ, ಲಕ್ಷಣ, ಭಾವನೆ ಯಾವ ಪದ ಪರಿಣಾಮಕಾರಿಯಾಗಿ ಹೇಳುತ್ತದೆ ಎನುವುದರ ಮೇಲೆ ಭಾಷೆಯ ಶ್ರೇಷ್ಠತೆ ನಿಂತಿದೆ. ಪದ, ಅದರಿಂದ ವಾಕ್ಯ ಹೀಗೆ ಸಂವಹನದಲ್ಲಿ ತೊಡಕಾಗಬಹುದು, ಯಾವ ಪದದಿಂದ ಹುಟ್ಟಿದ ಶಬ್ಧತರಂಗ ಕಿವಿಗೆ ಅಪ್ಪಳಿಸಿ ಆಪ್ತವಾಗುವಂತೆ ಮಾಡುವುದೊ ಆ ಭಾಷೆಯು ಹೆಚ್ಚು ಆಪ್ತವಾಗುತ್ತದೆ. ಅನಾಹತ ನಾದವನ್ನು ಆಹತಗೊಳಿಸುವುದೆ ಭಾಷೆ. ಅದು ಮಾತ್ರ ನಮ್ಮ ಕಿವಿಗೆ ಬಿದ್ದು ನಮಗೆ ಕೇಳಿಸುತ್ತದೆ. ಅದನ್ನು ಮಾತ್ರ ನಾವು ಸರಾಗವಾಗಿ ಮಾತನಾಡಲು ಸಾಧ್ಯ. ಅಷ್ಟಕ್ಕೆ ಮಾತ್ರ ನಮ್ಮ ನಾಲಿಗೆ ಸೀಮಿತವಾಗಿದೆ.

ಜನರು ಒಂದು ಭಾಷೆ ಮಾತನಾಡುವುದು ಸಾಮಾನ್ಯ. ಒಂದಕ್ಕಿಂತ ಹೆಚ್ಚು ಮಾತನಾಡುವುದು ಅಸಮಾನ್ಯವೇನೂ ಅಲ್ಲ. ಹತ್ತಾರು ಭಾಷೆ ಮಾತನಾಡುವುದು ಅಸಹಜ. ನಾವು ಎಷ್ಟು ಭಾಷೆಯನ್ನು ಮಾತನಾಡುತ್ತೇವೆ ಎನ್ನುವುದಕ್ಕಿಂತ ಎಷ್ಟು ಆಪ್ತವಾಗಿ ಮಾತನಾಡುತ್ತೇವೆ ಎನ್ನುವುದೆ ಮುಖ್ಯ. ಬರೀ ಸಂವಹನಕ್ಕೆ ಭಾಷೆ ಒಂದು ಮಾಧ್ಯಮ ಹೌದಾದರೆ ಮೌನವು ಒಂದು ಮಾಧ್ಯಮ. ಆದರೆ ಅದನ್ನು ಅರ್ಥ ಮಾಡಿಕೊಳ್ಳುವವರು ಬೇಕು. ಮಾತಿಗೆ ಹಾಗಲ್ಲ. ಪದ ಜ್ಞಾನ ಇದ್ದವರು ಯಾರು ಬೇಕಾದರು ಅರ್ಥ ಮಾಡಿಕೊಳ್ಳಬಹುದು. ಬರೀ ವಾಕ್ಯವನ್ನು, ವಾಕ್ಯದ ಹಿಂದಿರುವ ಭಾವನೆಯನ್ನಲ್ಲ. ಅದಿರಲಿ, ಈಗೀಗ ನಾವು ಹೆಚ್ಚು ಆಪ್ತವಾಗಿ ಮಾತನಾಡುವುದಕ್ಕಿಂತ ಬರೀ ವಿಷಯ ವಿನಿಮಯಕ್ಕಾಗಿ ಮಾತನಾಡುವುದೆ ಹೆಚ್ಚು. ಭಾವಸಂಚಯ ಆಪ್ತ ಸಮಾಚಾರವೆಲ್ಲ ಕಳೆದು ಹೋಗುತ್ತಿವೆ.

ಕಾರಣ ಏನೇ ಇರಲಿ. ಅದನ್ನು ವಿಮರ್ಷಿಸಲು ಈ ಲೇಖನ ಸಾಲದು. ಅದನ್ನು ಪಕ್ಕಕ್ಕಿಟ್ಟು ನೋಡಿದರೆ ಭಾಷೆಯ ಪರಿಣಾಮಕಾರಿತ್ವ ದಿನೇ ದಿನೇ ಕುಗ್ಗುತ್ತಿರುವುದು ಒಂದು ಕಾರಣ. ಇದು ಆತಂಕಕಾರಿ ಆದರೂ ಸತ್ಯ. ಒಂದು ಭಾಷೆ ಆಪ್ತತೆಯಿಂದ ಕೂಡಿರಬೇಕಾದರೆ, ಹೆಚ್ಚು ದೃಢವಾಗಿ ನಿಲ್ಲಬೇಕಾದರೆ ಮಾತನಾಡಲು ಬಳಸುವ ಪದಗಳು ಪರಿಣಾಮಕಾರಿಯಾಗಿರಬೇಕು. ಆದರೀಗ ಏನಾಗಿದೆ? ಪದಗಳೇ ಶುದ್ಧವಾಗಿಲ್ಲ. ಆಡುಭಾಷೆಯಲ್ಲಿ ಅಕ್ಷರಗಳು ಕೂಡುವುದು ಸಾಮಾನ್ಯ. ಪದಗಳು ಕೂಡುವುದು ಸಾಮಾನ್ಯವೆ. ಆದರೆ ಪದಗಳೆ ಮಾಯವಾದರೆ! ವ್ಯವಹರಿಸಲು ಏನನ್ನು ಬಳಸುವುದು? ನಮ್ಮ ಮಾತಿನಲ್ಲಿ ಪದಗಳು ಎಷ್ಟು ಕಲುಷಿತಗೊಂಡಿದ್ದಾವೆ ಎಂದರೆ ಭಾಷೆಯ ಸೊಬಗೇ ಹಾಳಾಗಿ ಹೋಗಿದೆ. ಪದಗಳ ನಾಶತ್ವ ಅಥವಾ ಮಾರ್ಪಾಡು, ಅನ್ಯ ಭಾಷೆಯ ಪದಗಳ ಆಕ್ರಮಣ ಆಡುಭಾಷೆಯಲ್ಲಿ ಯಥೇಚ್ಚವಾಗಿ ಮಿಳಿತಗೊಂಡಿವೆ. ಪರಿಣಾಮ ಮಾತನ್ನು ಕೇಳಲು ಅಸಹ್ಯಪಟ್ಟುಕೊಳ್ಳುವಷ್ಟು. ಕಿವಿಗೆ ಇಂಪಾಗುವಂತಹ ಶುದ್ಧ ಕನ್ನಡ ಸಂಭಾಷಣೆ ಕೇಳಬೇಕೆಂದರೆ ಕಪ್ಪು-ಬಿಳುಪು ಕನ್ನಡ ಸಿನಿಮಾ ನೋಡಬೇಕಾಗಿ ಬಂದಿದೆ. ಈಗ ಪುಸ್ತಕದಲ್ಲಿಯೂ ಶುದ್ಧ ಕನ್ನಡ ಸಿಗುವುದು ಕಷ್ಟವಾಗಿದೆ.

ಅನ್ಯ ಭಾಷೆಯ ಅತಿಕ್ರಮಣ ಈಗೀಗ ಇನ್ನಷ್ಟು ಹೆಚ್ಚಾಗಿದೆ. ಅರಬ್ಬಿ, ಉರ್ದು, ಪಾರ್ಸಿ, ಪೋರ್ಚಗಲ್, ಇಂಗ್ಲೀಷ್ – ಹೀಗೆ ಯವನ ಭಾಷೆಯು ನುಸುಳಿದೆ. ದೇಶಿ ಭಾಷೆಗಳಿಂದಲೂ ಹಲವು ಪದಗಳು ಹಲವರತ್ತ ಹೋಗಿವೆ. ಕನ್ನಡಕ್ಕೂ ಬಂದಿವೆ. ಅದು ಸಾಮಾನ್ಯ. ಆದರೆ ಈಗ ಇಂಗ್ಲೀಷಿನ ಅತಿ ವ್ಯಾಮೋಹದಿಂದ ಮತ್ತು ಕನ್ನಡ ಪದಗಳ ತಿಳುವಳಿಕೆಯ ಅಜ್ಞಾನದಿಂದ ಇಂಗ್ಲೀಷಿನ ಪದಗಳು ಅತಿಯಾಗಿ ಕನ್ನಡದ ಮೇಲೆ ಆಕ್ರಮಣ ಮಾಡಿವೆ. ಅದಕ್ಕೆ ಸೈನಿಕರು ಕನ್ನಡದವರೆ ಎನ್ನುವುದು ವಿಷಾದನೀಯ. ಯಾಕೆ ಹೀಗೆ ಎಂಬುದನ್ನು ತರ್ಕಿಸಲು ಹೊರಟರೆ ಮೇಲ್ನೋಟಕ್ಕೆ ಕಾಣುವುದು ಶ್ರೇಷ್ಠತೆ ಹಾಗು ಅಗಾಧತೆ. ಅಗಾಧತೆಯಿಂದ ಶ್ರೇಷ್ಠತೆ ಹುಟ್ಟಿರಬಹುದು. ಇಂಗ್ಲೀಷಿನ ಪ್ರತಿಷ್ಠೆಗೆ ಬಿದ್ದು ಅದರ ಪದಗಳು ಆಡುಭಾಷೆಯಲ್ಲಿ ನುಸುಳಿದವು. ನಂತರದ ದಿನಗಳಲ್ಲಿ ಹಳ್ಳಿಗು ಕಾಲಿಟ್ಟಿತು- ಇಂಗ್ಲೀಷಿನ ಪದ ಬಳಕೆಯ ಗೀಳು. ಇಂಗ್ಲೀಷಿನ ಪದ ಬಳಸಿದರೆ ಜ್ಞಾನಿ, ಅದರಿಂದ ಮರ್ಯಾದೆ ಹೆಚ್ಚು ಎನ್ನುವ ಮನೋಭಾವನೆ ಬೆಳೆಯಿತು. ಅದು ಹೆಚ್ಚು ಹೆಚ್ಚು ನುಸುಳಲು ಕಾರಣವಾಯಿತು. ದೂರದರ್ಶನ, ದೂರವಾಣಿ, ದೈನಂದಿನ ಪತ್ರಿಕೆ, ಒಡನಾಟ ಹೀಗೆ ಎಲ್ಲವೂ ಅದಕ್ಕೆ ನಿಮಿತ್ತವಾದವು. ಒತ್ತಕ್ಷರಗಳಿಲ್ಲದ ಸರಳವಾದ ಪದಗಳು ಅಷ್ಟೆ ವೇಗವಾಗಿ ಬಾಯಿಗೆ ಬಿದ್ದವು. ಎಷ್ಟರ ಮಟ್ಟಿಗೆ ಎಂದರೆ ನಗರಗಳಲ್ಲಿ ನೂರಕ್ಕೆ ನಲವತ್ತರಿಂದ ಅರವತ್ತು ಪ್ರತಿಶತ ಇಂಗ್ಲೀಷ್ ಪದಗಳೆ ತುಂಬಿರುವಷ್ಟು.

ಸಂಭಾಷಣೆಗಳು ಚುಟುಕಾಗಿರುವ ಈ ಕಾಲದಲ್ಲಿ ಅಷ್ಟೊಂದು ಅನ್ಯ ಭಾಷೆಯ ಪದಗಳು ಬೆರೆತರೆ ಮೂಲ ಭಾಷೆಯ ಗತಿಯೇನು? ದಿನನಿತ್ಯದ ಅನೇಕ ಪದಗಳು ತರ್ಜುಮೆಗೊಂಡಿವೆ. ಸಮಯ, ಕಾಲ, ದಿನ, ಉಪಚಾರದ ಮಾತುಗಳು, ಬಣ್ಣ, ವಸ್ತುಗಳ ಹೆಸರು ಬಹುತೇಕ ಎಲ್ಲ ಸಣ್ಣ ಸಣ್ಣ ಅತಿ ಮುಖ್ಯವಾದ ಪದಗಳನ್ನೇ ಅದು ನುಂಗಿಹಾಕಿದೆ. ಎಷ್ಟರ ಮಟ್ಟಿಗೆ ಆಂಗ್ಲ ಪದಗಳು ದಾಳಿಯಿಟ್ಟಿವೆಯೆಂದರೆ ಅಚ್ಚ ಕನ್ನಡ ಪದಗಳನ್ನು ಸಾರ್ವಜನಿಕವಾಗಲಿ, ಮನೆಯಲ್ಲೆ ಆಗಲಿ ಮಾತನಾಡಲೆ ಮುಜುಗರವಾಗುತ್ತದೆ. ಬರೀ ಕನ್ನಡ ಅಥವಾ ಪ್ರಾದೇಶಿಕ ಪದಗಳನ್ನು ಬಳಸಿ ಮಾತನಾಡಿದರೆ ಕೇಳುವವರಿಗೆ ಅರ್ಥವಾಗುತ್ತದೋ ಇಲ್ಲವೊ ಎನ್ನು ಗೊಂದಲ. ಒಂದು ವೇಳೆ ಕನ್ನಡದಲ್ಲೆ ವ್ಯವಹರಿಸುವ ಗಟ್ಟಿ ಮನಸ್ಸು ಮಾಡಿ ಶುದ್ಧ ಕನ್ನಡದ ಪದ ಬಳಸಿದರೆ ಕೇಳಿಸಿಕೊಂಡವರು ತಕ್ಷಣವೆ ಕೇಳಿದವರನ್ನು ಆ ಪದವನ್ನೆ ಇಂಗ್ಲೀಷಿನಲ್ಲಿ ಕೇಳುತ್ತಾರೆ. ಇದು ಯಾವ ತರಹದ ಗೀಳು? ಅಥವಾ ಅಜ್ಞಾನವೊ? ಇಲ್ಲ ಸ್ಪಷ್ಟತೆಗಾಗಿಯೋ? ಗೊತ್ತಿಲ್ಲ. ಅಂದರೆ ಶುದ್ಧ ಕನ್ನಡದ ಪದ ಕನ್ನಡಿಗರಿಗೆ ಇಂಗ್ಲೀಷಿನ ಪದದಿಂದ ಸ್ಪಷ್ಟೀಕರಣವಾಗಬೇಕಾದಂತ ಹಂತಕ್ಕೆ ನಮ್ಮ ವಿವೇಚನೆ ಬಂದು ನಿಂತಿದೆ.

ವ್ಯವಹಾರಿಕ ಸಂವಹನ ಒಂದು ಮಜಲಾದರೆ ಭಾವನೆಗಳ ವಿನಿಮಯದ ಸಂವಹನ ಇನ್ನೊಂದು ಮಜಲು. ವ್ಯವಹಾರಿಕತೆಯಲ್ಲಿ ಆಪ್ತತೆ ಬೇಕಿಲ್ಲದಿದ್ದರು ಭಾವನಾತ್ಮಕವಾದ ಸಂಭಾಷಣೆಯಲ್ಲಿ ಅದು ಬೇಕು. ಒಬ್ಬರಿಗೆ ಇನ್ನೊಬ್ಬರು ಹತ್ತಿರವಾಗುವುದು ಇಂಥ ಮಾತುಗಳಿಂದಲೆ. ಮಾತಿನಿಂದ ಎಂಥವರನ್ನು ಸೆಳೆದುಕೊಳ್ಳಬಹುದು. ಮಾತೇ ಹಲವರ ಬಂಡವಾಳ. ಅದು ಕೆಲವೊಂದು ಕ್ಷೇತ್ರದಲ್ಲಿ ನಿತ್ಯವು ನಡೆಯುತ್ತಿರುವ ವಿದ್ಯಮಾನ. ಅದು ಎಲ್ಲರಿಗು ಗೊತ್ತಿಲ್ಲದೇನು ಇಲ್ಲ. ಒಳಗಿನವರಾಗಲಿ ಹೊರಗಿನವರಾಗಲಿ ನಮ್ಮ ಜತೆ ಬೆರೆಯುವುದು ನಮ್ಮ ಸಂವಹನ ಕಲೆಯಿಂದ. ಆ ಕಲೆಗೆ ಬೇಕಾದ್ದು ಭಾಷಾ ಜ್ಞಾನ. ಭಾಷಾ ಅಜ್ಞಾನದಿಂದ ಮಾತು ಶುದ್ಧವಾಗುವುದಿಲ್ಲ. ಅಶುದ್ಧವಾದ ಮಾತುಗಳಿಂದ ಆಪ್ತತೆ ಬೆಳೆಯುವುದಿಲ್ಲ. ನಾವು ಹೆಚ್ಚು ಆಪ್ತರಾಗಬೇಕೆದಾರೆ ನಮಗೆ ನಮ್ಮ ಮಾತೃಭಾಷೆಯೆ ಬೇಕು. ಅದರಲ್ಲೆ ನಮ್ಮ ಸಂಭಾಷಣೆಗಳು ನಡೆಯಬೇಕು. ಯಾರದೊ ಭಾಷೆಯಿಂದ ನಮ್ಮ ಅಂತರಂಗವನ್ನು ಪರಿಣಾಮಕಾರಿಯಾಗಿ ಪ್ರಕಟಿಸಲು ಆಗದು.

ಅನ್ಯ ಭಾಷೆಯ ಪದ ಶಬ್ದವನ್ನು ಹೊರಹಾಕುತ್ತದೆಯೆ ಹೊರತು ಭಾವನೆಯನ್ನು ಅದು ವ್ಯಕ್ತಪಡಿಸುವುದಿಲ್ಲ. ಪದಕ್ಕೆ, ಭಾಷೆಗೆ ಭಾವನೆಯ ಲೇಪನ ಹಚ್ಚಬೇಕಾದರೆ ನಮ್ಮ ಮಾತೃಭಾಷೆಯೆ ಬೇಕು. ಅಂಥ ಸಂಭಾಷಣೆಗಳು ಕಡಿಮೆಯಾಗುತ್ತಿರುವುದೇ ಆಪ್ತತೆ ಕಡಿಮೆಯಾಗಲು ಬಹು ದೊಡ್ಡ ಕಾರಣವಾಗಿರುವುದು. ಆಂಗ್ಲಭಾಷೆಯು ನುಂಗಿ ಹಾಕಿರುವುದು ಬರೀ ಪದಗಳನ್ನಲ್ಲ, ನಮ್ಮ ಭಾವನೆಯನ್ನಷ್ಟೆ ಅಲ್ಲ, ನಮ್ಮ ನಾಲಿಗೆಯ ಸಾಮರ್ಥ್ಯವನ್ನೂ ಕೂಡ. ನಮ್ಮ ಭಾಷೆಯ ಅಗಾಧತೆಯಲ್ಲಿ ಬೇಕಾದಷ್ಟು ಪದಗಳಿವೆ. ಕೆಲವು ಸರಾಗವಾಗಿ ನುಡಿಯಬಹುದಾದಂತವಾಗಿದ್ದರೆ ಕೆಲವು ನಾಲಿಗೆಗೆ ರಸದೌತಣವನ್ನು ಉಣಬಡಿಸುವಂತಹವು. ನಾಲಿಗೆ ತಿರುವು ಮುರುವುಗಳಿಂದ ಹೆಚ್ಚು ಕ್ಲಿಷ್ಟ ಪದಗಳನ್ನು ಉಚ್ಚರಿಸಿ ಆನಂದಿಸುತ್ತಿತ್ತು. ಅದನ್ನು ಕೇಳಲು ಆಹ್ಲಾದಕರವಾಗುತ್ತಿತ್ತು. ಈ ಸೌಂದರ್ಯ ಇಂಗ್ಲೀಷಿಗಿಲ್ಲ. ನಮ್ಮ ಭಾಷೆಯ ಸೊಬಗು ಅದಕ್ಕಿಲ್ಲ. ಅದಕ್ಕೆ ಅಂತ ಅರ್ಹತೆ ಇಲ್ಲ. ಅನರ್ಹವಾಗಿದ್ದು ಇಷ್ಟು ಆಪ್ತವಾಗಿದ್ದೆ ಸೋಜಿಗ. ತಿರಸ್ಕರಿಬೇಕಾದ್ದನ್ನೆ ನಮ್ಮವರು ಪುರಸ್ಕರಿಸುವಂತಾಗಿರುವುದು ನಮ್ಮ ನಾಳಿನ ದೌರ್ಭಾಗ್ಯ. ಎಲ್ಲಾ ಭಾಷೆಗು ಅದರದ್ದೆ ಆದ ಸೌಂದರ್ಯವಿದೆ. ಅದನ್ನು ಗೌರವಿಸುವುದು ನಮ್ಮ ಸಂಸ್ಕೃತಿ. ಯಾವ ಭಾಷೆಯನ್ನೆ ಆಗಲಿ ಹೀಯಾಳಿಸುವುದು, ಜರಿಯುವುದು ನಾಲಿಗೆಗೆ ಗೌರವವಲ್ಲ. ಈಗಲೂ ಇಂಗ್ಲೀಷನ್ನು ಬೈಯುವುದಾಗಲಿ ಮಾಡುತ್ತಿಲ್ಲ. ಅದಕ್ಕಿಂತ ಸಮೃದ್ಧವಾದ ನಮ್ಮ ಭಾಷೆಯು ಕಡೆಗಣಿಸಲ್ಪಡುತ್ತಿದೆಯಲ್ಲ ಎಂಬ ಬೇಸರ. ಅದರಿಂದ ಭಾಷೆಗೆ ನಷ್ಟವೇನೂ ಇಲ್ಲ. ಎಲ್ಲ ನಷ್ಟ ನಮಗೆ. ಒಂದು ವೈವಿಧ್ಯಮಯ ಭಾಷೆಯ ಅವನತಿಗೆ ಕಾರಣರಾದರೆ ಅದರ ನಷ್ಟ ನಮಗಲ್ಲದೆ ಭಾಷೆಗೇಗಾದೀತು?

ಭಾಷೆಯು ಕ್ಷೀಣಿಸುತ್ತಿರುವಂತೆ ನಮ್ಮ ನಾಲಿಗೆ ಶಕ್ತಿಯು ಕುಂದುತ್ತಿದೆ. ಸರಳ ಪದಗಳನ್ನೆ ಉಚ್ಚರಿಸುವ ಭರದಲ್ಲಿ ನಾಲಿಗೆಯ ಸಾಮರ್ಥ್ಯವನ್ನು ಕಡೆಗಣಿಸುತ್ತಿದ್ದೇವೆ. ನಮ್ಮ ನೆನಪಿನ ಶಕ್ತಿ ಎಷ್ಟರಮಟ್ಟಿಗೆ ಕುಗ್ಗಿದೆಯೆಂದರೆ ದೈನಂದಿನ ಬಳಕೆಯ ವಸ್ತು ವಿಷಯಗಳ ಪದಗಳೇ ಸಂಭಾಷಣೆಯಲ್ಲಿ ನೆನಪಿಗೆ ಬರುವುದಿಲ್ಲ. ಆ ಜಾಗದಲ್ಲಿ ಇಂಗ್ಲೀಷಿನ ಪದಗಳು ನೆನೆಯದಿದ್ದರೂ ಬಂದುಬಿಡುತ್ತವೆ. ಇಂಗ್ಲೀಷ್ ಪದಗಳ ಹಾವಳಿಯಿಂದ ಕನ್ನಡ ಪದಗಳು ನೆನಪಿನಿಂದಲೆ ದೂರವಾಗಿವೆ. ಇಷ್ಟು ಮರೆತರೆ ಕನ್ನಡ ಪದಗಳಿಗೆಲ್ಲಿ ಉಳಿಗಾಲ? ಡಾರ್ವಿನ್ ಥಿಯರಿಯಂತೆ ಅನುಪಯುಕ್ತ ಅಂಗವು ಮುಂದೆ ನಶಿಸಿ ಹೋಗಬಹುದು. ಏಕೆಂದರೆ ಸಂಭಾಷಣೆಯು ಕಡಿಮೆಯಾಗಿರುವಾಗ ಅದರಲ್ಲು ಸರಳ ಪದಗಳೆ ತುಂಬಿರುವಾಗ ಮುಂದೊಂದು ದಿನ ಆ ಸರಳ ಪದಗಳು ಕಡಿಮೆಯಾಗಿ, ವಾಕ್ಯಗಳೆ ಪದಗಳಾಗಿ ನಂತರ ಮೌನವೆ ಸಂಭಾಷಣೆಯಾದಾಗ ಅದು ಸಾಧ್ಯವಾಗಬಹುದು. ಹುಲ್ಲಲ್ಲಿ ಜಾರಿ ಹಾವು ಕಾಲು ಕಳೆದುಕೊಂಡಂತೆ ನಾಲಿಗೆಯೆ ಹೋಗಬಹುದು. ಇಲ್ಲ ಪಶುಗಳಂತೆ ಬರೀ ಮೇಯಲಷ್ಟೆ ಸೀಮಿತವಾಗಬಹುದು. ಅಂದರೆ ಅದರ ತೀಕ್ಷ್ಣತೆ ಉಳಿಯದೆಂದೇ ಅರ್ಥ. ನೆನಪಿರಲಿ ಪ್ರಕೃತಿಯ ಮಾರ್ಪಾಡಲ್ಲಿ ಯಾವುದು ಅಸಾಧ್ಯವಲ್ಲ. ಇದು ಒಂದು ಊಹೆ ಅಷ್ಟೆ. ಹಾಗಾಗ ಕೂಡದು. ಒಮ್ಮೊಮ್ಮೆ ಯಾಕಾಗದಿರದು ಎನಿಸುತ್ತದೆ. ಬರೀ ಕ್ಲಿಷ್ಟ ಪದಗಳನ್ನು ಹೇಳಲಾಗದೆ ಅಲ್ಲಿ ಇಂಗ್ಲೀಷಿನ ಪದಗಳು ಹೊಕ್ಕಿರಬೇಕಾದರೆ ಮುಂದೆ ಆ ಸರಳ ಪದಗಳನ್ನೆ ಉಚ್ಚರಿಸಲು ಕಷ್ಟವಾದರೆ! ಈಗೀಗಂತು ಎಲ್ಲಕ್ಕು ಮಿತ ಸಂಭಾಷಣೆ. ಹಿಂದಿನವರ ಹಾಗೆ ಎಲ್ಲಕ್ಕು ಮಾತಿಲ್ಲ. ಹಿಂದೆ ಮಾತಿಗೆ ಮೇಲು ಕೀಳು ಎಂಬ ಭೇದವಿರಲಿಲ್ಲ. ಈಗ ಮನೆಯಲ್ಲಿ ಮಾತು ಕಡಿಮೆ. ಭಾವನೆ ವ್ಯಕ್ತಪಡಿಸಲು ಈಗೀಗ ಬಾಯಿಗಿಂತ ಕೈ ಬೆರೆಳುಗಳನ್ನೇ ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಮುಂದೆ ಬಾಯಿ ಬರೀ ಊಟ ಮಾಡುವ ಅಂಗವಾದರೆ ಆಶ್ಚರ್ಯವಿಲ್ಲ!



ಯಾರನ್ನು ದೇವರೆನ್ನಲಿ?

» ಡಾ. ನಾ. ಮೊಗಸಾಲೆ

ಯಾರನ್ನು ದೇವರೆನ್ನಲಿ?
ಕಾಣಿಸುವುದಿಲ್ಲ ಎಲ್ಲೂ ಅವನು!

ನೀರಲ್ಲಿ ಕಂಡರೂ ಕಾಣಬಹುದು
ಆದರೆ, ಪ್ರಳಯ ಅಥವಾ ನೆರೆ ಅವನ ಗುಣವಲ್ಲವಲ್ಲ?

ಬೆಂಕಿಯಲ್ಲಿ ಕಂಡರೂ, ಇರಬಹುದೆನ್ನಬಹುದು
ಆದರೆ ಸುಡಲು ಹೊರಟರೆ ಬೆಂಕಿ ಬೆಂಕಿಯನ್ನೇ ಸುಡುವಷ್ಟು ಉರಿಯುತ್ತದೆ
ನಮ್ಮನ್ನೂ ಸುಟ್ಟು ಗಿಟ್ಟು?

ಗಾಳಿಯನ್ನು ದೇವರೆನ್ನಲಾದೀತೇ?
ಅದು ನೀರು ಮತ್ತು ಬೆಂಕಿಯ ಒಡಹುಟ್ಟೇ ಆದಂತಿದೆಯಲ್ಲ?

ಮಣ್ಣನ್ನು ದೇವರೆನ್ನಲು ಸುಲಭ ಎನ್ನಬಹುದು ಯಾರೂ
ಆದರೆ ತಾಯಿಯೆಂದು ಒಪ್ಪಿಕೊಳ್ಳುವುದು
ದೇವರೆನ್ನುವುದಕ್ಕಿಂತ ಹೆಚ್ಚು!

ಆಕಾಶದಲ್ಲಿ ದೇವರನ್ನು ಕಾಣಬಹುದು ಅಂದರೆ
ಅದು ಅನಂತ!

ಹಾಗಾದರೆ ಎಲ್ಲಿ ಕಾಣಲಿ ದೇವರನ್ನು ಎನ್ನುವಾಗ
ನನ್ನ ಮೊಮ್ಮಗ ಇದಿರು ಬಂದ

ಅವನನ್ನು ಎತ್ತಿಕೊಂಡೆ
ಆತ ಮುತ್ತಿಟ್ಟ!

ಕವಿ ಕಣ

ಮೊದಲೊಂದಿಪೆ ನಿನಗೆ ಗಣನಾಥ..

◂◂ ಮೊದಲ ಪುಟದಿಂದ

ಗಜಾಸುರನಿಗೂ ಗಣಪತಿಗೂ ಘನಘೋರ ಯುದ್ಧವಾಯಿತು. ಗಜಾಸುರನನ್ನು ಮಣಿಸಿ, ಆತನ ಬೆನ್ನ ಮೇಲೆ ಗಜಾನನ ಕುಳಿತ. ಭಾರ ತಡೆಯಲಾಗದೆ ಗಜಾಸುರ ಒರಲಿದ. ನಿನ್ನ ಪಾದಗಳಡಿಯೇ ಸೇವೆ ಮಾಡಿಕೊಂಡಿರುತ್ತೇನೆಂದು ಪ್ರಾರ್ಥಿಸಿದ. ಗಣಪತಿ ಆತನನ್ನು ಮೂಷಿಕನನ್ನಾಗಿ ಪರಿವರ್ತಿಸಿ ವಾಹನವನ್ನಾಗಿಸಿಕೊಂಡ, ಮೂಷಿಕವಾಹನನಾದ.

ಗರಿಕೆ ಪ್ರಿಯ ಗಣಪತಿ: ಗಣಪತಿಗೆ ಪ್ರಿಯವೆನೆಸಿದ ದೂರ್ವೆ ಅಥವಾ ಗರಿಕೆ ಪ್ರಿಯವೆಂದು ನಿಮಗೆ ಗೊತ್ತಲ್ಲವೇ? ಈ ಕುರಿತಾದ ಪೌರಾಣಿಕ ಕತೆಯೊಂದು ಹೀಗಿದೆ. ದೇವತೆಗಳಲ್ಲೆಲ್ಲಾ ಶ್ರೀಮಂತ ಎಂದರೆ ಕುಬೇರ. ತ್ರಿಲೋಕಗಳಿಗೂ ಉಣಬಡಿಸುವಷ್ಟು ಧನ-ಧಾನ್ಯ ಸಂಪತ್ತು ತನ್ನಲ್ಲಿದೆ ಎಂಬ ಗರ್ವ ಆತನಿಗೆ. ಈ ಗರ್ವ ಹರಣ ಮಾಡಲು ಗಣಪತಿ ಒಮ್ಮೆ ಕುಬೇರನ ಮನೆಗೆ ಹೋದ. ತನಗೆ ಹಸಿವಾಗಿದ್ದು ಏನಾದರೂ ನೀಡಬೇಕೆಂದು ಅರುಹಿದ. ಕೂಡಲೇ ಕುಬೇರ ಪಂಚಭಕ್ಷ ಪರಮಾನ್ನಗಳನ್ನು ಮಾಡಿಸಿ ಗಣಪತಿಗೆ ಉಣಬಡಿಸಲು ಆಜ್ಞಾಪಿಸಿದ. ಕುಬೇರನ ಭಂಡಾರದ ಧವಸ ಧಾನ್ಯಗಳೆಲ್ಲವೂ ಉಪಯೋಗಿಸಲ್ಪಟ್ಟವು. ಆದರೂ ಗಣಪತಿಯ ಹೊಟ್ಟೆ ತುಂಬಲಿಲ್ಲ! ಕುಬೇರನಿಗೆ ತನ್ನ ಗರ್ವದ ಅರಿವಾಯಿತು. ಆಗ ಗಣಪತಿ ಕುಬೇರನೇ ಸಿರಿವಂತಿಕೆಯ ಗರ್ವ ಬೇಡ. ಅದನ್ನು ಬಿಟ್ಟು ಬಿಡು. ನೀನು ನನಗೆ ಒಂದು ಸಣ್ಣ ಗರಿಕೆಯ ಎಸಳನ್ನು ಭಕ್ತಿಯಿಂದ ಅರ್ಪಿಸಿದರೂ ನನ್ನ ಹೊಟ್ಟೆ ತುಂಬಿ ಹೋಗುತ್ತದೆ ಎಂದ. ಕುಬೇರ ಹಾಗೆಯೇ ಮಾಡಿದ ಕೂಡ. ಪ್ರೀತಿ, ಭಕ್ತಿಯಿಂದ ಒಂದು ಗರಿಕೆ ನೀಡಿದರೂ ಗಣಪ ಸಂತೃಪ್ತಗೊಳ್ಳುತ್ತಾನೆ. ತನ್ಮೂಲಕ ಭಕ್ತರ ಅಭೀಷ್ಟೆ ಪೂರೈಸುವ ಅಭಯದಾಯಕ ಆತ. ಈ ಪಾರಂಪರಿಕ ಕತೆಯ ಹಿನ್ನೆಲೆಯಲ್ಲಿ ಗಣಪತಿ ಪೂಜೆಯಲ್ಲಿ ಗರಿಕೆ ಉಪಯೋಗಿಸುವುದು ರೂಢಿಯಾಗಿದೆ.

ಏಕದಂತನಾದ ಹಿನ್ನೆಲೆ: ಗಣಪನಿಗಿರುವ ಎರಡು ದಂತಗಳಲ್ಲಿ ಒಂದು ತುಂಡಾಗಿದೆ ಅಲ್ಲವೇ? ಅದೇಕೆ ಹಾಗಾಯಿತು ಗೊತ್ತೇ? ಒಮ್ಮೆ ಪರಶುರಾಮನು ಬ್ರಹ್ಮದೇವನ ಆಜ್ಞೆಯಂತೆ ಈಶ್ವರನ ದರ್ಶನಕ್ಕೆ ಹೋದ. ಆಗ ಪಾರ್ವತಿ ಪರಮೇಶ್ವರರು ಏಕಾಂತದಲ್ಲಿದ್ದರು. ದ್ವಾರದಲ್ಲಿದ್ದ ಗಣಪತಿ ತನ್ನ ಮಾತಾಪಿತೃಗಳ ಏಕಾಂತಕ್ಕೆ ಭಂಗ ಬರದಿರಲೆಂದು ಪರಶುರಾಮನನ್ನು ಒಳಗೆ ಬಿಡಲಿಲ್ಲ. ಮೊದಲೇ ಕೋಪಿಷ್ಟನಾದ ಪರಶುರಾಮನ ಸಿಟ್ಟು ನೆತ್ತಿಗೇರಿತು. ಇಬ್ಬರಿಗೂ ಮಾತಿಗೆ ಮಾತು ಬೆಳೆದು ಯುದ್ಧವೇ ಆರಂಭವಾಯಿತು. ಗಣಪನೂ ಅಸಮಾನ್ಯ ವೀರನೇ ತಾನೇ? ಬಾಲಕನಾಗಿದ್ದರೂ ಮುಷ್ಟಿಕಟ್ಟಿ ಹೋರಾಟಕ್ಕೆ ಅನುವಾದ. ಹೋರಾಟದ ಮಧ್ಯೆ ಪರಶುರಾಮ ಮುಕ್ತ ಕವಚವನ್ನು ಅಭಿಮಂತ್ರಿಸಿ ಪ್ರಹಾರ ಮಾಡಿದ. ಆಗ ಪುಟ್ಟ ಗಣಪತಿಯ ದಂತವೂ ಮುರಿಯಿತು.

ಒಬ್ಬಟ್ಟು ಬಲು ಬಿಕ್ಕಟ್ಟು

◂◂ ಮೊದಲ ಪುಟದಿಂದ

ಇಷ್ಟು ಮಾಡಿದ ಮೇಲೆ ನಾನು ಸುಂದರವಾಗಿ ರೂಪುಗೊಳ್ಳದಿರುತ್ತೇನಾ? ಸೊಬಗಿಯಾಗಿ ಬಿಡುತ್ತೇನೆ. ಈ ಹೆಂಗಸರು ಅದೇನು ಚಂದವಾಗಿ ನನ್ನನ್ನು ಹೆಂಚಿನ ಮೇಲೆ ಓಡಾಡಿಸುತ್ತಾರೆ ಅಂತೀರಾ?! ಸ್ವಲ್ಪವೂ ಕಪ್ಪಾಗದಂತೆ, ಸ್ವಲ್ಪ ಸ್ವಲ್ಪವೇ ಸುಂದರವಾಗಿ ಕಂದು ಬಣ್ಣದ ಪುಟ್ಟ ಪುಟ್ಟ ಸರ್ಕಲ್ ನನ್ನ ಮೇಲೆ ಮೂಡುವಂತೆ, ಘಮ್ಮೆನ್ನುವ ಪರಿಮಳ ಮನೆಯೆಲ್ಲಾ ಹರಡುವಂತೆ ಹೆಂಚಿನ ಮೇಲೆ ಬೇಯಿಸುವುದು ನಿಜವಾದ ಕಲೆಯೇ ಸರಿ!

ಮನೆಯ ಗಂಡಸರು ಮೆಲ್ಲಗೆ ಅಡುಗೆ ಮನೆಯತ್ತ ಸುಳಿಯುತ್ತಾರೆ, ನನ್ನನ್ನು ಆಸೆಗಣ್ಣಿಂದ ನೋಡುತ್ತಾರೆ. ಹೆಂಗಸರು, 'ಅದೇನು ಹಾಗಾಡ್ತೀರಿ? ನೈವೇದ್ಯ ಮಾಡಬೇಡ್ವೇ?' ಎಂದು ಗದರಿದ ನಂತರವೇ ಅವರು ಒಂದೆಡೆ ಕುಕ್ಕರಿಸುವುದು.

ಮದುವೆಯಲ್ಲಿ ಒಬ್ಬಟ್ಟು ಊಟ: ಮದುವೆಗಳಲ್ಲಿ ಒಬ್ಬಟ್ಟು ಊಟ ಒಮ್ಮೆಯಾದರೂ ಇರುತ್ತದೆ. ಮನೆಗೆ ನೆಂಟರು, ಪ್ರೀತಿಪಾತ್ರರು ಬಂದರು ಎಂದರೆ ಒಬ್ಬಟ್ಟು ಗ್ಯಾರಂಟಿ. ಮಕ್ಕಳ ಮನೆಗೆ ಹೋಗಬೇಕಾದರೆ ಒಬ್ಬಟ್ಟು ಡಬ್ಬಿ ಸೇರುತ್ತದೆ.

ಯುಗಾದಿಗೆ ನಾನಿರಲೇ ಬೇಕಲ್ವಾ? ಹೊಸ ವರ್ಷದಲ್ಲೂ ನನ್ನನ್ನು ರೆಡಿ ಮಾಡುತ್ತಾರೆ! ಗೌರಮ್ಮ ಬರುತ್ತಾಳೆ ಅಂತ ನನ್ನನ್ನು ಸಿಂಗಾರವಾಗಿ ತಯಾರಿಸುತ್ತಾರೆ. ದೀಪಾವಳಿಯಲ್ಲಿ ಬಲಿ ಚಕ್ರವರ್ತಿ ವರ್ಷಕ್ಕೊಮ್ಮೆ ಬರುತ್ತಾನೆ ಅಂತ ನನ್ನನ್ನು ಕರೆಸುತ್ತಾರೆ.

ಕುವೆಂಪು ಅಂತಹಾ ಮಹಾನ್ ಕವಿವರ್ಯರೇ ದಂಪತಿಗೆ ಹೋಲಿಸಿ ನನ್ನನ್ನು ಬರೆದುಕೊಂಡಿದ್ದಾರೆಂದರೆ...

'ನಮ್ಮ ಬಾಳಿಗೆ ಸಾಕ್ಷಿ ಹೋಳಿಗೆ, ನಾನು ಕಣಕ ನೀನು ಹೂರ್ಣ, ನಿನ್ನನಪ್ಪಿ ನಾನು ಪೂರ್ಣ'..

ಈಗಲಾದರೂ ನನ್ನ ಸ್ಟೇಟಸ್ ಏನು ಅಂತ ಗೊತ್ತಾಯ್ತಲ್ವಾ?

ಆಕಾರ-ನಿರಾಕಾರ!: ಕೆಲವರಂತೂ ನನ್ನ ಆಕಾರವನ್ನು ಕೆಡಿಸಿ ಹನ್ನೆರಡಾಣೆ ಮಾಡಿ ಹಾಕುತ್ತಾರೆ. ಒಂದುಕಡೆ ಕಣಕವೇ ಇರುತ್ತದೆ, ಹೂರಣ ಹೊರಗಿರುತ್ತದೆ. ಕಣಕವನ್ನು ಹೆಂಚಿನ ಮೇಲೆ ಹಾಕಿ ಒಳಗಿನ ಹೂರಣ ಹೊರಬಂದು ಅದನ್ನೂ ಬೇಯಿಸಿ ಹೇಗೋ ಬಡಿಸಿಬಿಡುತ್ತಾರೆ. ಅನ್ನುವ ಹಾಗಿಲ್ಲ ಆಡುವ ಹಾಗಿಲ್ಲ. ಬಲಿಪಶುಗಳು ತಿಂದು ಏಳುತ್ತಾರೆ.

ಮೊನ್ನೆ ಒಬ್ಬರ ಮನೆಯಲ್ಲಿ ಆ ಹುಡುಗಿ ಗಂಡನಿಗೆ ಕಣಕ ಕಲೆಸಲು ಹೇಳಿ, ಅವರ ಮನೆಯಲ್ಲಿ ಮಿಕ್ಸಿ ರುಬ್ಬಿದರೆ ಚೆನ್ನಾಗಿ ಬರಲ್ಲ ಅಂತ, ಇನ್ನೊಬ್ಬರ ಮನೆಗೆ ಹೂರಣ ರುಬ್ಬಿಕೊಳ್ಳಲು ಬಂದಿದ್ದಳು. ಸರಿ, ಚೂರು ಹೂರಣ ತೆಳ್ಳಗಾಯಿತು. ಛೇ ಅಂದುಕೊಂಡು ಮನೆಗೆ ಹೋದಳು. ನನ್ನನ್ನು ತಯಾರಿಸಲು ನೋಡುತ್ತಾಳೆ, ಅಯ್ಯೋ ದೇವರೇ! ನನಗೆ ಅವಳನ್ನು ನೋಡಿ ಪಾಪ ಅನ್ನಿಸಿತು. ಅಂಗೈಯ್ಯಷ್ಟು ದಪ್ಪ ಮಾಡಿದರೂ ಒಂದಾದರೂ ಬರುತ್ತಿಲ್ಲ. ನಂತರ ನಾನೇ ಕಾರಣ ಹುಡುಕಿದೆ. ಆಕೆಯ ಗಂಡ, ಕಣಕವನ್ನು ರೊಟ್ಟಿಯ ಹದಕ್ಕೆ ಕಲೆಸಿಕೊಟ್ಟಿದ್ದರು. ಇವಳು ಅದನ್ನೇನೂ ಗಮನಿಸದೆ, ಮಾಡುತ್ತಾಳೇ ಮಾಡುತ್ತಾಳೆ....ಅಯ್ಯೋ ಕತೆ. ಆಕೆಯ ಮಗನಿಗೆ ನಾನೆಂದರೆ ಪಂಚಪ್ರಾಣ. ಕಡೆಗೆ ಹತ್ತಿರದ್ದ ಒಂದು ಮನೆಗೆ ತೋರಿಸಿದ್ದಕ್ಕೆ ಕಣಕವನ್ನು ಸರಿಯಾಗಿ ಕಲೆಸಿ, ನನ್ನನ್ನು ಸುಂದರವಾಗಿ ತಟ್ಟಿ, ಹದವಾಗಿ ಬೇಯಿಸಿ ಕೊಟ್ಟರು. ಅವಳ ಮಗ ಖುಷಿಯಾಗಿ ತಿಂದ..

ಕೆಲವರು ನನ್ನನ್ನು ಅಮೆರಿಕ, ಆಸ್ಟ್ರೇಲಿಯಾ ಆಕಾರಕ್ಕೂ ಮಾಡುತ್ತಾರೆ. ನಾನು ಚಂದ್ರನ ಶೇಪ್‌ಗೆ ಮಾಡಿ ಅಂತ ಮಣೆಯ ಮೇಲೆ ಸರಿಯಾಗಿ ಕೂರುತ್ತೇನೆ. ಆದರೆ ಇವರು ದಬದಬ ಅಂತ ತಟ್ಟಿ ಶೇಪ್ ಲೆಸ್ ಮಾಡಿ ಅದನ್ನೇ, ಎಲ್ಲರಿಗೂ ತೋರಿಸಿಕೊಂಡು, ಎಷ್ಟು ಚೆನ್ನಾಗಿ ಮಾಡಿದಿನಿ ಅಲ್ವಾ? ಅಂತ ಮನೆಯಲ್ಲಿ ಗಂಡ ಮಕ್ಕಳಿಗೆ ಬಲವಂತವಾಗಿ ತಿನ್ನಿಸುತ್ತಾರೆ. ಸಾಲದ್ದಕ್ಕೆ ನನ್ನನ್ನು ಕಪ್ಪಗೆ ಸೀದಿಸಿ ಬಿಟ್ಟಿರುತ್ತಾರೆ. ನನಗಂತೂ ಒಮ್ಮೊಮ್ಮೆ ಜೋರಾಗಿ ಅತ್ತುಬಿಡೋಣ ಅನಿಸುತ್ತದೆ. ಏನು ಮಾಡಲಿ? ಹೆಂಚಿನ ಮೇಲೆ ಚುಯ್ ಚುಯ್ ಅಂತ ಶಬ್ದ ಬರುತ್ತದೆ ಅಂತ ಸುಮ್ಮನಾಗುತ್ತೇನೆ.



ಈಗಂತೂ ಬೇಕಾದಷ್ಟು ಹೋಳಿಗೆ ಮನೆಗಳು! ಹಾದಿಗೊಂದು ಬೀದಿಗೊಂದು. ಅಲ್ಲದೆ ತರತರದ ಹೋಳಿಗೆ. ನನಗೆ ನನ್ನನ್ನು ಬೆಳೆಯಲ್ಲಿ ತಯಾರಿಸುವುದೇ ಇಷ್ಟ.

ಹೋಗಲಿಬಿಡಿ. ನನಗೆಷ್ಟೇ ನೋವಾದರೂ ಪರವಾಗಿಲ್ಲ, ನೀವು ನನ್ನನ್ನು ಚೆನ್ನಾಗಿ ಮಾಡಿಕೊಂಡು ತಿನ್ನಿ. ನನಗೂ ಸಾರ್ಥಕ ಭಾವ ಮೂಡಿ, ಮನಸ್ಸು ಹಗುರಾಗುತ್ತದೆ. ನಮ್ಮ ರಾಜ್ಯದವರಿಗೆ ನಾನಂದ್ರೆ ತುಂಬ ಇಷ್ಟ ಅಲ್ವಾ?

ಕೆಲ ಹೆಂಗಸರಿಗೆ ದ್ವೇಷ

ಕೆಲವು ಹೆಂಗಸರಿಗಂತೂ ನನ್ನನ್ನು ಕಂಡರೆ ಬಹಳ ದ್ವೇಷ. ಒಂಥರಾ ಉಡಾಫೆ ಮಾತಾಡುತ್ತಾರೆ. 'ಅಯ್ಯೋ ಒಬ್ಬಟ್ಟು ಮಾಡಲು ಸಮಯ ಹಿಡಿಯುತ್ತದೆ. ಪಾಯಸ ಮಾಡಿದರೆ ಸಾಕು' ಅನ್ನುತ್ತಾರೆ.

ಆದರೆ ಮನೆ ಗಂಡಸರಿಗೆ ನನ್ನನ್ನು ಕಂಡರೆ ಬಹಳ ಪ್ರೇಮ. ಅವರು, 'ಇಲ್ಲ, ಒಬ್ಬಟ್ಟೇ ಬೇಕು' ಅಂತ ಹಠ ಹಿಡಿಯುತ್ತಾರೆ. ಹೆಂಗಸರು ಬೈದುಕೊಂಡು ನನ್ನನ್ನು ರಪರಪ ಅಂತ ಬಡಿದು ಬಿಸಾಕುತ್ತಾರೆ. ನನಗಂತೂ ಅವರ ಮೇಲೆ ಕೋಪ, ಮತ್ತೆ ತಾತ್ಸಾರವಾಗಿ ಕಾಣುತ್ತಾರಲ್ಲಾ ಅಂತ ಎಷ್ಟೋಬಾರಿ ಬೇಸರವಾಗುತ್ತದೆ.

ಒಂದು ಘಟನೆ ಹೇಳಲೆಬೇಕು. ಒಂದು ದೊಡ್ಡ ಹಬ್ಬ. ದೊಡ್ಡ ಮನೆಯದು. ಮನೆ ತುಂಬ ಜನ. ಊರಿನಿಂದಲೂ ಬಂದಿದ್ದರು. ಅದೊಂದು ಸಣ್ಣ ಹಳ್ಳಿಯಲ್ಲಿ ಇವರೆಲ್ಲ ಹಬ್ಬ ಮಾಡುತ್ತಿರೋದು. ಬೇಕಾದ ದಿನಸಿ ಸರಂಜಾಮುಗಳನ್ನೆಲ್ಲ ಊರಿನಲ್ಲಿರೋ ಒಂದೇ ಒಂದು ಅಂಗಡಿಯಿಂದ ತರಿಸಿದ್ದರು. ಹೂರಣ ತಯಾರಾಯಿತು. ಕಣಕ ಕಲೆಸಲು ಮೈದಾ ಮತ್ತು ರವೆ ನೋಡುತ್ತಾರೆ ಇಲ್ಲ. ಆಗಲೇ ಸಮಯವೂ ಆಗಿ ಹೋಗಿದೆ. ಮತ್ತೆ ಅಂಗಡಿಗೆ ಕಳಿಸಲು ಆತ ಬೀಗ ಹಾಕಿಕೊಂಡು ಊರಿಗೆ ಹೋಗಿಯಾಗಿತ್ತು. ಅಕ್ಕಪಕ್ಕದಲ್ಲಿ ಒಬ್ಬಟ್ಟು ಮಾಡುವವರು ಯಾರೂ ಇಲ್ಲ. ಕಡೇಗೇನು ಮಾಡಿದರು ಗೊತ್ತೇ? ಏನೂ ತಿಳ್ಕೋಬೇಡಿ ಅಂತ ಹೂರಣವನ್ನೇ ಬಡಿಸಿ ತುಪ್ಪ ಹಾಕಿದರು. ಹಾಲು ಕೇಳಿದವರಿಗೆ ಹಾಲು ಕೊಟ್ಟರು. ಬಂದ ನೆಂಟರೂ ಕೂಡಾ ಅದೆಂಥಾ ಸಹೃದಯರು ಅಂತೀರಿ? 'ಆಹಾ! ಈ ಹೂರಣವೇ ಚೆನ್ನಾಗಿದೆ ಬಿಡಮ್ಮಾ. ಕಣಕ ಇನ್ನುಮೇಲೆ ಮಾಡಲೇಬಾರದು.' ಅಂತ ಆಸ್ವಾದಿಸಿಕೊಂಡು ತಿಂದರು. ಹೀಗೆಲ್ಲಾದರೂ ನೀವು ನೋಡಿದ್ದೀರಾ?

» ಗೊರೂರು ಶಿವೇಶ್

ನಮ್ಮೂರಿನ ಶ್ರಾವಣ ಮಾಸದ ಚಿತ್ರಗಳು

ಶ್ರಾವಣದ ಕಾಲವೆಂದರೆ ಶ್ರವಣದ ಕಾಲ. ಕಿವಿಗೆ ಹಿತವಾದದ್ದನ್ನು, ಆನಂದವಾದುದನ್ನು ಮತ್ತು ಪುಣ್ಯದಾಯಕವಾದದ್ದನ್ನು ಕೇಳಬೇಕೆಂದು ನಂಬಿಕೆ. ಇದಕ್ಕಾಗಿ ಶ್ರಾವಣ ಶನಿವಾರದಂದು ಕಥೆ ಓದಿಸುವ ಪದ್ಧತಿ. ಕಥೆ ಓದಿಸಿದರೆ ಕಷ್ಟಗಳು ಪರಿಹಾರ ಎಂಬ ಮಾತುಗಳ ಬಗ್ಗೆ ನಂಬಿಕೆ ಇರುವ ಅನೇಕರು ಆ ನಾಲ್ಕು ವಾರಗಳಲ್ಲಿ ಒಂದು ದಿನ ಮನೆಯಲ್ಲಿ ಬಂಧು-ಬಳಗಕ್ಕೆ ಊಟ ಹಾಕಿಸುವುದರ ಜೊತೆಗೆ ಹರಿಕಥೆಯನ್ನೂ ಏರ್ಪಡಿಸುತ್ತಿದ್ದರು.

ಕೀರ್ತನಾರಂಭ ಕಾಲಕ್ಕೆ.... ' ಗುರುರಾಜಲು ನಾಯ್ಡು-ಚಿತ್ರನಟ ಅರುಣ್ ಕುಮಾರ್ ಧ್ವನಿ ದಶದಿಕ್ಕುಗಳಿಗೆ ಮೊಳಗುತ್ತಿರುವಂತೆ 'ಓ ಶ್ರಾವಣ ಬಂತು ನಮ್ಮೂರಿಗೆ' ಎಂದು ಅಂದುಕೊಳ್ಳುತ್ತಿದ್ದೆವು. ಚೈತ್ರ ವೈಶಾಖದ ಬದಲು ಜನವರಿ-ಫೆಬ್ರವರಿಗಳನ್ನೇ ಮಾಸಗಳೆಂದು ನಂಬಿದ್ದ ನಮಗೆ ಆಷಾಢ ಹೋಗಿ ಶ್ರಾವಣ ಬಂತು ಸೂಚನೆ ನೀಡುತ್ತಿದ್ದುದ್ದೇ ಇಂತಹ ಧ್ವನಿಸುರುಳಿ ವಾಚಿಕೆಗಳು.

ಬಹುಶಃ ಪ್ರೌಢಶಾಲೆಯಲ್ಲಿದ್ದಾಗ ಅದೇ ಸಂದರ್ಭದಲ್ಲಿ 'ಶ್ರಾವಣ ಬಂತು ಕಾಡಿಗೆ.. ಬಂತು ನಾಡಿಗೆ, ಬಂತು ಬೀಡಿಗೆ.. ' ಪದ್ಯ ಮುಗಿಸಿರುತ್ತಿದ್ದ ಗುರುಗಳಾದ ಎಚ್.ಬಿ.ಎಂ ಕಂಠಪಾಠ ಮಾಡಿಕೊಂಡು ಬರಲು ತಿಳಿಸಿದ್ದರು. ನಮಗೆ ಪಥ್ಯವಾಗಿದ್ದ ಬೇಂದ್ರೆ ಅವರ ಕವಿತೆಯ ಕೊನೆಯ ಸಾಲನ್ನು 'ಬೀಡಿಗೆ ಬದಲು, ನಾನು ಬೀದಿಗೆ' ಎಂದು ಹೇಳಿ, ತಪ್ಪು ಮಾಡುವುದನ್ನು ಕಾಯುತ್ತಿದ್ದ ನಮ್ಮ ಕನ್ನಡ ಮಾಸ್ತರು 'ನಿಮ್ಮ ಮನೆ ಬೀದಿಗೆ ಶ್ರಾವಣ ಬಂದಿದೆ ಅಲ್ವೇನೋ?' ಎಂದು ತಲೆಯ ಮೇಲೆ ಮೊಟಕಿದಾಗ ಅಕ್ಕಪಕ್ಕದಲ್ಲಿ ಕುಳಿತಿದ್ದ ಸ್ನೇಹಿತರಲ್ಲ ನಗಾಡಿದ್ದರು.

'ಬೀಡಿಗೆ, ಬೀದಿಗೆ..' ಎಲ್ಲವೂ ಒಂದೇ ಎಂದು ಹೇಳಬೇಕೆಂದುಕೊಂಡರೂ ಹೇಳಿರಲಿಲ್ಲ. ಆದರೆ ಮಾಸ್ಟರ್ ಹೇಳಿದ ಹಾಗೆ ಶ್ರಾವಣ ನಮ್ಮ ಮನೆಯ ಬೀದಿಗೆ ಬರುವುದು ನಮ್ಮ ಅರಿವಿಗೆ ಬರುತ್ತಿದ್ದದ್ದು ಶ್ರಾವಣ ಶನಿವಾರದಂದು. ಚಟಪಟ ಹನಿಯುತ್ತಿದ್ದ ಸೋನೆ ಮಳೆಯಲಿ ಬೆಳಗ್ಗೆ ಏಳು ಗಂಟೆಗೆ ಪ್ರೊಫೆಷನಲ್, ನಾನ್ ಪ್ರೊಫೆಷನಲ್ ದಾಸಯ್ಯಗಳು ಮನೆಯ ಮುಂದೆ ನಿಂತು 'ಶ್ರೀಮನ್ನಾರಾಯಣ ಗೋವಿಂದ ..ಗೋವಿಂದ' ಎಂದು ಕೂಗುತ್ತಿದ್ದಾಗ ಕೆಲವರು ಕಚ್ಚೆ ಪಂಚೆ, ಶರ್ಟು, ಕಪ್ಪು ಕೋಟು ಜೊತೆಗೆ ಶಂಖ, ಜಾಗಟೆ ಹೆಗಲ ಮೇಲೆ ವಲ್ಲಿ ಹೀಗೆ ಕಂಪ್ಲೀಟ್ ಡ್ರೆಸ್‌ನಲ್ಲಿ ಬಂದು ಬಿಡುತ್ತಿದ್ದರೆ, ಇನ್ನು ನನ್ನ ಪ್ರಾಥಮಿಕ, ಪ್ರೌಢಶಾಲೆಯ ಸಹಪಾಠಿಗಳು, ನಾಮ ಧರಿಸಿ ಜೋಳಿಗೆ ಒಂದನ್ನು ಹಾಕಿಕೊಂಡು ದೇವರ ಪಟವನ್ನು ಹಿಡಿದು ಬರುತ್ತಿದ್ದರು. ಮನೆಯವರ ಒತ್ತಾಯಕ್ಕೆ ಬಂದಿರುತ್ತಿದ್ದ ಅವರಿಗೆ ಅದನ್ನು ಮುಗಿಸಿ ಮಾರ್ನಿಂಗ್ ಕ್ಲಾಸ್ ಎಂಟು ಗಂಟೆಗೆ ಆರಂಭವಾಗುತ್ತಿದ್ದುದರಿಂದ ಶಾಲೆಗೆ ಧಾವಿಸುವ ತವಕ.

ಪೇಟೆ ಬೀದಿಯಲ್ಲಿದ್ದ ನಮ್ಮ ಅಜ್ಜನ ಮನೆಯ ಸುತ್ತಮುತ್ತ ಹಾಗೂ ಇಡೀ ಬೀದಿಯಲ್ಲಿ ದಾಸಗೌಡರ ಪ್ರಾಬಲ್ಯ. ದಾಸ ಎಂಬ ಪದಕ್ಕೆ ಶರಣು ಹೋದವ ಎಂಬ ಅರ್ಥವೂ ಇದ್ದಿದ್ದರಿಂದಾಗಿ ಇಂತಹ ಶ್ರಾವಣ ಶನಿವಾರದಂದು ಕನಿಷ್ಠ ನಾಲ್ಕೈದು ಮನೆಗಳಲ್ಲದರೂ ಬೇಡಬೇಕೆಂದು ಸಂಪ್ರದಾಯದ ಆಚರಣೆಯ ಕಾರಣ ಮಕ್ಕಳನ್ನು ಬಲವಂತ ಮಾಡಿ ಕಳಿಸುತ್ತಿದ್ದರು. ಅದರ ಜೊತೆಗೆ ಶನಿವಾರವನ್ನು ವಾರ ಮಾಡುತ್ತಿದ್ದ ಸಂಪ್ರದಾಯದವರು ಕೂಡ ಇದನ್ನು ಅನುಸರಿಸುತ್ತಿದ್ದರು. ಪ್ರಾಥಮಿಕ ಶಾಲೆಯ ಹಂತದವರೆಗೂ ಹಾಗೂ ಹೀಗೂ ಬರುತ್ತಿದ್ದ ಅವರು, ಪ್ರೌಢಶಾಲೆಯ ನಂತರ ಮನೆಯವರ ಜೊತೆ ಜಗಳಕ್ಕಿಳಿದು ಬರುತ್ತಿರಲಿಲ್ಲ. ಇನ್ನು ಕೆಲವರು ಕುಚೋದ್ಯದ ತುಂಟತನಕ್ಕೆ ಹೆಸರಾದವರು. ನಮ್ಮಜ್ಜನ ಮನೆಯ ಪಕ್ಕದಲ್ಲಿ ಸೀಮೆಎಣ್ಣೆ ವ್ಯಾಪಾರ ಮಾಡುತ್ತಿದ್ದ ಗೋವಿಂದಣ್ಣನ ಮನೆ. ಅವರ ಮನೆಗೆ ಹೋಗುತ್ತಿದ್ದ ನಾಗ ಅಲಿಯಾಸ್ ಕಾಸು 'ಶ್ರೀಮನ್ನಾರಾಯಣ ಗೋವಿಂದ ಗೋವಿಂದ' ಎನ್ನುವ ಅದರ ಬದಲು 'ಸೀಮೆಎಣ್ಣೆ ಗೋವಿಂದಾ ಗೋವಿಂದ' ಎಂದು ಕೂಗಿ ಗೊತ್ತಿಲ್ಲದವನ ರೀತಿ ಹೋಗುತ್ತಿದ್ದ.

ಗೋವಿಂದಣ್ಣನ ಮನೆಯಲ್ಲಿದ್ದವರಿಗೆ ಮೊದಲು ಗೊತ್ತಾಗುತ್ತಿರಲಿಲ್ಲ, ಆದರೆ ಅವನು ಹಿಂದೆ ಹೋದ ಬಾಕಿಯವರು ಕೂಡ ಅವನ ಕುಚೋದ್ಯವನ್ನು ಮುಂದುವರಿಸಿ 'ಸೀಮೆಎಣ್ಣೆ ಗೋವಿಂದ...ಗೋವಿಂದ' ಎಂದಾಗ ಅವರಮ್ಮ ಹೊರಗೆ ಬಂದು 'ಯಾರ್ಲಾ ಅವ್ರು? ಇದೆಲ್ಲ ಏನ್ರಲ್ಲ ? ನಿಮ್ಮ ಅಪ್ಪ-ಅಮ್ಮ ಹೇಳ್ಕೊಟ್ಟಿರ್ರೋದಾ?' ಎಂದು ಕೂಗನ್ನು ಹಾಕಿದೊಡನೆ ಆ ಹುಡುಗರು ಅಲ್ಲಿಂದ ಮಾಯವಾಗುತ್ತಿದ್ದರು.

ಶ್ರಾವಣ ಮಾಸದಲ್ಲಿ ತಿರುಪತಿಗೆ ಹೋಗುವುದು ಪುಣ್ಯವೆಂದು ಭಾವಿಸಿದ ನಮ್ಮೂರಿನ ಸುತ್ತಮುತ್ತಲಿನ ಹಳ್ಳಿಯವರು ಸಂತೆಯ ದಿನ ಭಾನುವಾರ ಬೀದಿಯಲ್ಲಿ ವಾದ್ಯದ ಸಮೇತ ಗೋವಿಂದ ನಾಮಸ್ಮರಣೆ ಮಾಡುತ್ತಾ ಮೆರವಣಿಗೆ ರೂಪದಲ್ಲಿ ಹೋಗುತ್ತಿದ್ದರು. ಜೀವಮಾನದಲ್ಲಿ ಒಮ್ಮೆಯಾದರೂ ತಿರುಪತಿಯ ದರ್ಶನ ಮಾಡಿ ಪುನೀತರಾಗಬೇಕೆಂದು ಬಯಸುತ್ತಿದ್ದರೂ, ಆದರೆ ಹೋಗಲು ಸಾಧ್ಯವಾಗದ ಹರಕೆ ಮುಡಿಪು ಕಟ್ಟಿಕೊಂಡಿರುತ್ತಿದ್ದ ಭಕ್ತಾದಿಗಳು ಯಾತ್ರೆ ಹೊರಟವರ ಕೈಯಲ್ಲಿದ್ದ ತಟ್ಟೆ, ದಿಬ್ಬಿ ಗಡಿಗೆಗೆ ಹಣ ಹಾಕುತ್ತಿದ್ದರು.

ಶ್ರಾವಣದ ಕಾಲವೆಂದರೆ ಶ್ರವಣದ ಕಾಲ. ಕಿವಿಗೆ ಹಿತವಾದದ್ದನ್ನು, ಆನಂದವಾದುದನ್ನು ಮತ್ತು ಪುಣ್ಯದಾಯಕವಾದದ್ದನ್ನು ಕೇಳಬೇಕೆಂದು ನಂಬಿಕೆ. ಇದಕ್ಕಾಗಿ ಶ್ರಾವಣ ಶನಿವಾರದಂದು ಕಥೆ ಓದಿಸುವ ಪದ್ಧತಿ. ಕಥೆ ಓದಿಸಿದರೆ ಕಷ್ಟಗಳು ಪರಿಹಾರ ಎಂಬ ಮಾತುಗಳ ಬಗ್ಗೆ ನಂಬಿಕೆ ಇರುವ ಅನೇಕರು ಆ ನಾಲ್ಕು ವಾರಗಳಲ್ಲಿ ಒಂದು ದಿನ ಮನೆಯಲ್ಲಿ ಬಂಧು- ಬಳಗಕ್ಕೆ ಊಟ ಹಾಕಿಸುವುದರ ಜೊತೆಗೆ ಹರಿಕಥೆಯನ್ನು ಏರ್ಪಡಿಸುತ್ತಿದ್ದರು. ಕೆಲವರದ್ದು ಸಸ್ಯಹಾರಿ ಊಟವಾದರೆ ಇನ್ನು ಕೆಲವರದ್ದು ಮಾಂಸಾಹಾರಿ ಊಟ. ಅವರವರು ನಡೆಸಿಕೊಂಡು ಬಂದಂತೆ.

ಶ್ರಾವಣ ಶನಿವಾರಗಳಂದು ಕೆಲವರ ಮನೆಯಲ್ಲಿ ಬರಿ ಊಟ ಇದ್ದರೆ, ಇನ್ನು ಕೆಲವರ ಮನೆಯಲ್ಲಿ ಹರಿಕಥೆ ದಾಸರನ್ನೂ ಕರೆಸಿ ಹೇಳಿಸಿದರೆ ಇನ್ನು ಕೆಲವರ ಮನೆಯಲ್ಲಿ ಸುಮ್ಮನೆ ಕಥೆ ಹೇಳಿಸುವ ಪರಿಪಾಠವನ್ನು ಅವರವರ ಶಕ್ತ್ಯಾನುಸಾರ ನಡೆಸುತ್ತಿದ್ದರು.

ನಮ್ಮ ಎದುರುಗಡೆ ಮನೆಯ ಅಣ್ಣಿಗನಹಳ್ಳಿ ಶೆಟ್ಟರ ಮನೆ ಪಕ್ಕದಲ್ಲಿಯೇ ಬೀದಿಯ ನಲ್ಲಿನೀರು ಹಿಡಿಯುವ ವಿಷಯಕ್ಕೆ ಆಗಾಗ ಅಲ್ಲಿ ಬೀದಿ ಕಾಳಗಗಳು ನಡೆಯುತ್ತಿದ್ದವು. ಶ್ರಾವಣದ ಯಾವುದಾದರೂ ಒಂದು ಶನಿವಾರದಂದು ಅವರ ಮನೆಯಲ್ಲಿ ಕಥೆ ಓದಿಸುವ ಕಾರ್ಯಕ್ರಮ. ಅದೇ ಸಮಯಕ್ಕೆ ನಮಗೂ ಅವರಿಗೂ ಜಗಳವಾಗಿದ್ದರೆ ಅವರು ಆ ಸಮಯದಲ್ಲಿ ಊಟಕ್ಕೆ ಕರೆಯುತ್ತಿರಲಿಲ್ಲ, ಇಲ್ಲದಿದ್ದರೆ ಕರೆಯುತ್ತಿದ್ದರು. ಅಂದಿನ ಅವರ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಒಮ್ಮೊಮ್ಮೆ ಹರಿಕಥೆ ಮಾಡುವವರನ್ನೇ ಕರೆಸಿ ಪಕ್ಕವಾದ್ಯ ಸಮೇತ ಹರಿಕಥೆ, ಇಲ್ಲವಾದರೆ ಅವರ ಮಾವನವರಾಗಿದ್ದ ದುಮ್ಮಿ ಕೊಪ್ಪಲು ಶೆಟ್ಟರಿಂದ ಕಥಾ ಪ್ರಸಂಗವನ್ನು ನಿರೂಪಿಸುವ ಕಾರ್ಯಕ್ರಮ. ಆ ಕಥೆಯಾದರೂ ಶನಿಪ್ರಭಾವ, ರಾಜಾ ವಿಕ್ರಮ, ರಾಜ ಸತ್ಯವ್ರತ ಮುಂತಾಗಿ ಬೇರೆ ಬೇರೆ ಹೆಸರುಗಳಿದ್ದರೂ ಕಥೆ ಅದೇ ಆಗಿರುತ್ತಿತ್ತು. ಕೆಲವೊಮ್ಮೆ ನಳ ಮಹಾರಾಜನ ಕಥೆಯನ್ನು ಹೇಳುತ್ತಿದ್ದರು.ಆದರೆ ಕಥೆಯನ್ನು ಮೊದಲಿಗೆ ಕೇಳಲು ಕೂತವರು ಕೊನೆಯವರೆಗೂ ಕೇಳಲೇಬೇಕೆಂಬುದು ಕಡ್ಡಾಯ ಬೇರೆ ಇರುತ್ತಿತ್ತು. ಹರಿಕಥೆ ಹೇಳಲು ಬರುವವರಾದರು ಅನೇಕ ರಸಪ್ರಸಂಗಗಳನ್ನು ಸೇರಿಸಿ ಅದರ ಜೊತೆಗೆ ಸಿನಿಮಾ ಟ್ಯೂನ್‌ಗೆ ಹಾಡುಗಳನ್ನು ಇಲ್ಲವೇ ಸಿನಿಮಾ ಹಾಡುಗಳನ್ನು ಹೇಳುತ್ತಿದ್ದರು. ಚಂಗುಚೆಂಗೆಂದು ಆಡುವ ರಂಗು ರಂಗಿನ ಈ ಗೀತೆ.. ನಾನೇ ಎಂಬ ಭಾವ ನಾಶವಾಯಿತು, ಮಾನವ ಮೂಳೆ ಮಾಂಸದ ತಡಿಕೆ...ಮುಂತಾದ ಚಿತ್ರಗೀತೆಗಳನ್ನು ಹಾಡುತಿದ್ದರು. ಇನ್ನು ಕಥೆಯನ್ನು ಓದಲು ಅಷ್ಟೇ ಬರುವವರು ಅಲ್ಲಿ ಕುಳಿತಿರುವವರ ಕೈಯಲ್ಲಿ ಹಾಡಿಸುತ್ತಿದ್ದರು. ಹೆಣ್ಣುಮಕ್ಕಳಾದರೂ ಕೆಲವರು ಕಾಪಾಡು ಶ್ರೀಸತ್ಯನಾರಾಯಣ ಹಾಡಿದರೆ ಇನ್ನು ಕೆಲವರು 'ಈ ಚೆಂದದ ಮನೆಯಲ್ಲಿ ಶ್ರೀಗಂಧದ ಗುಡಿಯಲ್ಲಿ, ಆನಂದದ ಹೊಳೆ ಅನುರಾಗದ ಮಳೆ ಎಂದೆಂದೂ ಚಿಮ್ಮುತಿರಲಿ..' ಹಾಡುಗಳನ್ನು ಮಧುರವಾಗಿ ಹಾಡಿ ಮನೆಯವರಿಗೆ ಮುದವನ್ನು ನೀಡುತ್ತಿದ್ದರು .

ದುಮ್ಮಿ ಕೊಪ್ಪಲು ಶೆಟ್ರು ತಮ್ಮದೇ ಆದ ರೀತಿಯಲ್ಲಿ ತಮ್ಮ ಅನುಭವಗಳನ್ನು ಸೇರಿಸಿ ಕಥೆಯನ್ನು ಹೇಳುತ್ತಿದ್ದರು. ಹಂಸ ಪಕ್ಷಿಯು ಬಂದ ಮುತ್ತಿನ ಹಾರವನ್ನು ನುಂಗುವ ಪ್ರಸಂಗವನ್ನು ಹೇಳುವ ಸಂದರ್ಭದಲ್ಲಿ ಮನೆಯ ಎಲ್ಲ ಡೋರು, ಬಾಗಿಲುಗಳನ್ನು ಹಾಕಿ ಮೇಲೆ ಕೆಳಗಿನ ಬೋಲ್ಟ್ ಹಾಕಿರುವುದಲ್ಲದೆ ಮಧ್ಯಕ್ಕೆ ರಾಡನ್ನು ಕೂಡ ಹಾಕಿ ಬಂದೋಬಸ್ತ್ ಮಾಡಿ ಬಂದು ಮಲಗಿದ್ದರು ಎಂದು ವಿವರಿಸುತ್ತಿದ್ದಾಗ ಅವರ ಇಂಗ್ಲಿಷ್ ಪದದ ಪ್ರಯೋಗಕ್ಕೆ ಅಚ್ಚರಿಪಟ್ಟು ನೋಡಿದಾಗ ಅವರ ಮನೆಯಲ್ಲಿ ಬಾಗಿಲಿಗೆ ಹೊಸದಾಗಿ ಬೋಲ್ಟ್ ಅಲ್ಲದೆ ಬಾಗಿಲ ಮಧ್ಯಕ್ಕೆ ರಾಡನ್ನು ಅಳವಡಿಸಿರುವುದು ಗಮನಕ್ಕೆ ಬಂದಿತು .

ಯುಗಾದಿಯ ನಂತರ ಒಂದೆರಡು ದೊಡ್ಡ ಮಳೆಗಳಾದರೆ, ಕೆಲವರು ಹದ ನೋಡಿ ಆಗಲೇ ಆಲೂಗಡ್ಡೆ ಬಿತ್ತನೆ ಮಾಡುತ್ತಿದ್ದರು. ಆಲೂಗೆಡ್ಡೆಯಾದರು ಮೂರರಿಂದ ನಾಲ್ಕು ತಿಂಗಳ ಬೆಳೆ. ಅದು ಆಗಸ್ಟ್, ಸೆಪ್ಟೆಂಬರ್ ತಿಂಗಳಿಗೆ ಕಟಾವಿಗೆ ಬರುತ್ತಿತ್ತು. ಶ್ರಾವಣ ಭಾದ್ರಪದದ ಆ ದಿನಗಳಲ್ಲಿ ಎಷ್ಟು ಮೂಟೆ ಹಾಕಿ, ಎಷ್ಟು ಬೆಳೆ ತೆಗೆದರು ಎಂಬುದರ ಬಗ್ಗೆ ಚರ್ಚೆ. ಬರಿ ಹತ್ತು ಮೂಟೆ ಹಾಕಿ ಒಂದು ಲೋಡು ಆಲೂಗಡ್ಡೆ ಬೆಳೆದಿದ್ದವರೂ ಇರುತ್ತಿದ್ದರು. ಇನ್ನು ಉಳಿದಂತೆ ಇಪ್ಪತ್ತು ಇಪ್ಪತ್ತೈದು ಚೀಲ ಬೆಳೆದಿದ್ದವರು ಇರುತ್ತಿದ್ದರೆ ಕೆಲವರಿಗೆ ಬೀಜದ ದುಡ್ಡು ಬಂದಿರುತ್ತಿರಲಿಲ್ಲ. ಸ್ವಲ್ಪ ಕೈಯಲ್ಲಿ ದುಡ್ಡು ಓಡಾಡುತ್ತಿದ್ದ ಸಂದರ್ಭಗಳು, ಈ ರೀತಿಯ ಶ್ರಾವಣ ಶನಿವಾರದ ದಿನಗಳ ಮೇಲೆ ಪರಿಣಾಮ ಬೀರುತ್ತಿತ್ತು.

ಇಂಥ ಸಂದರ್ಭದಲ್ಲಿ ಅಂಗಡಿಗಳಲ್ಲಿ ವ್ಯಾಪಾರವು ಚೆನ್ನಾಗಿ ನಡೆಯುತ್ತಿತ್ತು. ಮೆಣಸಿನಕಾಯಿ ವ್ಯಾಪಾರ ಜೊತೆಗೆ ವ್ಯವಸಾಯವನ್ನು ಮಾಡಿಕೊಂಡಿದ್ದ ಅಣ್ಣನಿಗೆ ಅಣೆಕಟ್ಟು ನಿರ್ಮಾಣದ ಸಂದರ್ಭದಲ್ಲಿ ಚಿಲ್ಲರೆ ಅಂಗಡಿ ಮಾಡುವ ಉಮೇದು ಬಂದು ಅಂಗಡಿ ಜೋಡಿಸಿಬಿಟ್ಟರು. ಟೂರಿಂಗ್ ಟಾಕೀಸ್ ಸಮೀಪದ ಹೋಟೆಲ್‌ಗಳಿಗೆ ಸುತ್ತಮುತ್ತ ಹಳ್ಳಿಯವರೆಗೆ ದಿನಸಿ ಸಾಲ ಕೊಟ್ಟಿರುತ್ತಿದ್ದರು. ಎಲ್ಲರೂ ಗೆಂಡೆ ಕಿತ್ತು ಕೊಡುತ್ತೇವೆ ಎಂದು ಸಾಲ ಮಾಡಿ ಹೋಗುತ್ತಿದ್ದರು. ನಗದು ವ್ಯಾಪಾರ ಕಡಿಮೆ. ಕೊನೆಗೆ ವ್ಯಾಪಾರ ಹಾಗೂ ವ್ಯವಸಾಯದಲ್ಲಿ ಲಾಸ್ ಆದಾಗ ಅತ್ತ ತಲೆ ಹಾಕುತ್ತಿರಲಿಲ್ಲ. ಇದರ ಜೊತೆಗೆ ಈ ರೀತಿ ಅಂಗಡಿಯಲ್ಲಿ ನಿಂತಿರುತ್ತಿದ್ದ ಜನರ ಸಂಖ್ಯೆ ನಮ್ಮ ಬೀದಿಯಲ್ಲಿನ ಬೇರೆ ಅಂಗಡಿಯವರಿಗೆ ತಪ್ಪು ಸಂದೇಶವನ್ನು ನೀಡಿ ಹೊಸದಾಗಿ ಅಂಗಡಿ ಇಟ್ಟವರು ಒಳ್ಳೆ ವ್ಯಾಪಾರ ಮಾಡುತ್ತಿದ್ದಾರೆ ಎಂದು ಭಾವಿಸಿ ಅದನ್ನು ಕೆಡಿಸಲೆಂದೇ ಕೆಲವರಿಗೆ ಎಣ್ಣೆ ಹಾಕಿ ಕಳಿಸುತ್ತಿದ್ದರು. ಕುಡಿದು ಬಂದವರಾದರೂ ಅಂಗಡಿಯ ಮುಂದೆ ನಿಂತು ಜಗಳಕ್ಕೆ ಪಂಥಾಹ್ವಾನ ನೀಡುತ್ತಿದ್ದರು. ಏನು ಕುಡಿದು ಬಂದಿದ್ದೀಯಾ? ಎಂದು ಅಣ್ಣ ಪ್ರಶ್ನೆ ಮಾಡಿದರೆ ಸಾಕು, ಕುಡಿಯೋಕೆ ನೀನು ದುಡ್ಡು ಕೊಟ್ಟಿದ್ದೀಯಾ, ಇಲ್ಲ ನಿಮ್ಮಪ್ಪ ಏನಾದರೂ ಕೊಟ್ಟಿದ್ದಾನಾ? ಎಂದು ಜಗಳ ಪ್ರಾರಂಭವಾಗುತ್ತಿದ್ದದ್ದು ಮಾತಿಗೆ ಮಾತು ಬೆಸೆದು, ಒಮ್ಮೆ ಅದೆಲ್ಲಿ ಇದ್ದರೋ, ಪೊಲೀಸರು ಬಂದು ಅಣ್ಣನನ್ನು ನೂಕಿ ಕೊಂಡು ಎಳೆದೊಯ್ದರು. ಆಗ ನಮ್ಮೂರಿನಲ್ಲಿ ಇದ್ದದ್ದು ಔಟ್ ಪೋಸ್ಟ್. ಆದರೆ ನಮ್ಮ ಊರಿಗೆ ಸಾಕಷ್ಟು ಪರಿಚಿತರಾಗಿದ್ದ ಚಾಮಯ್ಯ ಮೇಷ್ಟ್ರು ಎಂದು ಪ್ರಸಿದ್ಧರಾಗಿದ್ದ ನಮ್ಮ ಚಿಕ್ಕಪ್ಪ ಸ್ಟೇಶನ್ ವರೆಗೆ ಹೋಗಲು ಬಿಡದೆ ಮಧ್ಯದಲ್ಲಿ ತಡೆದು ಪೊಲೀಸರ ಮನವೊಲಿಸಿ ತಂದು ಮನೆಗೆ ಬಿಡುತ್ತಿದ್ದರು.

ಇನ್ನು ಕೆಲವರು ಹೊರಗೆ ನಿಂತು ಯಾವುದಾದರೂ ಸಂಬಂಧವನ್ನು ಡೈರೆಕ್ಟಾಗಿ ಹೇಳುವುದನ್ನು ಮಾಡದೆ ಇಂಡೈರೆಕ್ಟ್ ಸ್ಪೀಚ್‌ನಲ್ಲಿ ಮಾತನಾಡುತ್ತಿದ್ದರು. ಹೊರಗಿನ ಜಗಲಿಯ ಮೇಲೆ ಕುಳಿತು 'ಕಿತ್ತೂರು ಹಾಳು ಮಾಡಿದ ಮಕ್ಕಳು' ಎಂದು ಯಾರನ್ನೋ ಬೈಯುತ್ತಿದ್ದರು. ಇದು ಯಾವ ಕಿತ್ತೂರು? ಅದನ್ನು ಹಾಳು ಮಾಡಿದವರು ಯಾರು? ನಮಗೆ ಚಿಕ್ಕ ವಯಸ್ಸಿನಲ್ಲಿ ಗೊತ್ತಿರಲಿಲ್ಲ. ಅದೇ ಸಮಯಕ್ಕೆ ಕಿತ್ತೂರು ಚೆನ್ನಮ್ಮ ಸಿನಿಮಾ ಬಂದಾಗ ಅದರಲ್ಲಿ ಮಲ್ಲಪ್ಪ ಶೆಟ್ಟಿ ಎಂಬಾತ ಕಿತ್ತೂರು ರಾಣಿಯ ವಿರುದ್ಧ ಬ್ರಿಟಿಷರಿಗೆ ಸಹಕರಿಸಿ ಕಿತ್ತೂರಿನ ಪತನಕ್ಕೆ ಕಾರಣವಾದ ಕಥೆ ಇದೆ. ಅಲ್ಲಿ ಬರುವ ಶೆಟ್ಟರ ಪದವನ್ನು ಸಂಶೋಧಿಸಿದ ಸಂಶೋಧನಾ ಚತುರರು ದೇವಾಂಗದವರು ಕೂಡ ತಮ್ಮ ಹೆಸರಿನ ಮುಂದೆ ಶೆಟ್ಟರು ಎಂದು ಇಟ್ಟುಕೊಳ್ಳುತ್ತಿದ್ದರಿಂದ ಇಬ್ಬರಿಗೂ ಸಂಬಂಧ ಕಲ್ಪಿಸಿ ನಿಂದಿಸುತ್ತಿದ್ದರು. ಈಗಾಗಲೇ ಇಂತ ಜಗಳದಿಂದ ಪಾಠ ಕಲಿತಿದ್ದ ಅಣ್ಣ, ಇಂಡೈರೆಕ್ಟ್ ಸ್ಪೀಚನ್ನು ಕೇಳಿಯೂ ಕೇಳಿಸದಂತೆ ವ್ಯಾಪಾರ ಮುಂದುವರಿಸುತ್ತಿದ್ದರು.

ಈಗ ಕರಾವಳಿಯ ಶೆಟ್ಟರು(ರಿಷಬ್, ರಕ್ಷಿತ್, ರಾಜ್, ಪ್ರಮೋದ್..) ಕನ್ನಡ ಚಿತ್ರರಂಗವನ್ನು ಹೊಸ ದಿಕ್ಕಿನಡೆಗೆ ಕೊಂಡೊಯ್ಯುತ್ತಿರುವುದು ಮತ್ತು ಶ್ರಾವಣ ಮಾಸದ ಸಂದರ್ಭದಲ್ಲಿ ಬಿಡುಗಡೆಯಾದ ರಾಜ್.ಬಿ. ಶೆಟ್ಟರ 'ಸು ಫ್ರಮ್ ಸೋ' ಗಳಿಕೆಯಲ್ಲಿ ಹೊಸ ದಾಖಲೆ ನಿರ್ಮಿಸುತ್ತಿರುವುದು ಕಂಡಾಗ ನಮ್ಮೂರಿನ ಶ್ರಾವಣದ ಚಿತ್ರಗಳು ಕಣ್ಣ ಮುಂದೆ ಹಾದುಹೋದವು.

ವಾಸ್ತವವಾದಿಗೆ ನಿದ್ದೆಯ ಮಹತ್ವ ಚೆನ್ನಾಗಿ ಗೊತ್ತು

ವಿಶ್ವನಾಥ ಪಾಟೀಲ, ಹುಬ್ಬಳ್ಳಿ

- **ಭಟ್ರೇ, ನಾನು ಪ್ರತಿದಿನ ಬೆಳಗ್ಗೆ ಎದ್ದಾಗ, ನನ್ನ ಕಾಫಿ ಕಪ್ ನನ್ನೊಂದಿಗೆ ರಾಜಕೀಯದ ಬಗ್ಗೆ ಚರ್ಚಿಸಲು ಪ್ರಾರಂಭಿಸುತ್ತದೆ. ನಾನು ಅದನ್ನು ಹೇಗೆ ನಿಲ್ಲಿಸುವುದು? ಈ ಕುರಿತು ನಿಮ್ಮ ನೇರ ಉತ್ತರ ಬೇಕು.**

– ವಿಶ್ವನಾಥ ಅವರೇ, ಖಂಡಿತ. ಇದು ನಿಜಕ್ಕೂ ಒಂದು ಗಂಭೀರವಾದ ಮತ್ತು ವಿಚಿತ್ರವಾದ ಸಮಸ್ಯೆ! ಪ್ರತಿದಿನ ಬೆಳಗ್ಗೆ ನಿಮ್ಮ ಕಾಫಿ ಕಪ್ ರಾಜಕೀಯದ ಬಗ್ಗೆ ಚರ್ಚೆ ಶುರುಮಾಡಿದರೆ, ಆ ದಿನದ ಆರಂಭವೇ ಬೇರೆಯಾಗಿರುತ್ತದೆ. ಚಿಂತೆ ಬಿಡಿ, ಈ ರಾಜಕೀಯ ಪ್ರೇಮಿ ಕಾಫಿ ಕಪ್ ಅನ್ನು ನಿಭಾಯಿಸಬಹುದು ಬಿಡಿ. ನಿಮ್ಮ ಕಪ್‌ನೊಂದಿಗೆ ನೇರವಾಗಿ ಮಾತನಾಡಿ. ಅದೊಂದು ಪ್ರಬುದ್ಧ ರಾಜಕೀಯ ವಿಶ್ಲೇಷಕ ಎಂದು ಭಾವಿಸಿ, ಅದರೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಿ. ''ನೋಡು ಕಪ್, ನಾವು ಬೆಳಗಿನ ಮೊದಲ ಹತ್ತು ನಿಮಿಷ ಮಾತ್ರ ರಾಜಕೀಯದ ಬಗ್ಗೆ ಮಾತನಾಡೋಣ. ಅದಾದ ಮೇಲೆ, ದಯವಿಟ್ಟು ನನ್ನ ದಿನದ ಬಗ್ಗೆ ಗಮನಹರಿಸಲು ಬಿಡು'' ಎಂದು ಹೇಳಿ. ಅಡುಗೆಮನೆಯನ್ನು 'ರಾಜಕೀಯ-ರಹಿತ ವಲಯ' ಎಂದು ಘೋಷಿಸಿ. ಒಂದು ಚಿಕ್ಕ ಬೋರ್ಡ್ ಬರೆದು ನೇತುಹಾಕಿ. ನಿಯಮ ಮುರಿದರೆ, ಆ ದಿನ ಅದಕ್ಕೆ ಕಾಫಿ ಇಲ್ಲ!

ಅದು ರಾಜಕೀಯದ ಬಗ್ಗೆ ಮಾತನಾಡಲು ಪ್ರಾರಂಭಿಸಿದ ತಕ್ಷಣ, ಬೇರೆ ವಿಷಯದ ಕಡೆಗೆ ಅದರ ಗಮನವನ್ನು ಸೆಳೆಯಿರಿ. ''ನಿನ್ನೆ ರಾತ್ರಿ ಆ ಚಮಚ ಮತ್ತು ಫೋರ್ಕ್ ನಡುವೆ ಜಗಳವಾಗಿದ್ದು ನೋಡಿದ್ಯಾ? ಪಾಪ, ಚಮಚ ತುಂಬಾ ಬೇಜಾರಲ್ಲಿತ್ತು'' ಎಂದು ಹೇಳಿ. ಅಡುಗೆಮನೆಯ ಇತರ ಪಾತ್ರೆಗಳ ಬಗೆಗಿನ ಗಾಸಿಪ್‌ನಲ್ಲಿ ಅದಕ್ಕೆ ಆಸಕ್ತಿ ಬರಬಹುದು.

''ಇವತ್ತು ಸೌತ್ ಅಮೆರಿಕದ ಹೊಸ ಕಾಫಿ ಪೌಡರ್ ತಂದಿದ್ದೇನೆ, ಅದರ ಪರಿಮಳದ ಬಗ್ಗೆ ನಿನ್ನ ಅಭಿಪ್ರಾಯವೇನು?'' ಎಂದು ಕೇಳಿ. ಆಗ ಅದು ರಾಜಕೀಯವನ್ನು ಮರೆತು ಕಾಫಿಯ ರುಚಿಯ ಬಗ್ಗೆ ಮಾತನಾಡಲು ಶುರುಮಾಡಬಹುದು.

ನಿಮ್ಮ ಕಪ್ ಬಹುಶಃ ಒಂಟಿತನದಿಂದ ಬಳಲುತ್ತಿರಬಹುದು. ಅದಕ್ಕೆ ಸ್ನೇಹಿತರ ಅವಶ್ಯಕತೆ ಇರಬಹುದು. ಅದಕ್ಕೆ ಒಂದು ಟೀ ಕಪ್ ಅಥವಾ ಜ್ಯೂಸ್ ಗ್ಲಾಸ್ ಅನ್ನು ಸ್ನೇಹಿತನನ್ನಾಗಿ ಮಾಡಿ. ''ನೋಡು, ಇವನು ನಿನ್ನ ಹೊಸ ಫ್ರೆಂಡ್. ಇವನಿಗೆ ಸಿನಿಮಾ ಅಂದರೆ ತುಂಬಾ ಇಷ್ಟ, ಇವನೊಂದಿಗೆ ಮಾತನಾಡು'' ಎಂದು ಹೇಳಿ. ಮನೆಯಲ್ಲಿರುವ ಎಲ್ಲ ಕಪ್‌ಗಳು, ತಟ್ಟೆಗಳು ಮತ್ತು ಚಮಚಗಳನ್ನು ಸೇರಿಸಿ ಒಂದು 'ಕುಟುಂಬ ಸಭೆ'ಯನ್ನು ಆಯೋಜಿಸಿ. ''ನಿನ್ನ ಈ ರಾಜಕೀಯ ಚರ್ಚೆಯಿಂದ ನಮಗೆಲ್ಲರಿಗೂ ನೆಮ್ಮದಿಯಾಗಿ ಬೆಳಗಿನ ಕಾಫಿ ಕುಡಿಯಲು ಆಗುತ್ತಿಲ್ಲ'' ಎಂದು ಎಲ್ಲರ ಪರವಾಗಿ ದೂರು ನೀಡಿ. ಬಹುಮತದ ಒತ್ತಡಕ್ಕೆ ಅದು ಮಣಿಯಬಹುದು.

ನಿಮ್ಮ ಕಪ್‌ಗೆ ಕಾಫಿ ಎಂದರೆ ಪ್ರಾಣ. ಹೀಗಾಗಿ, ಅದಕ್ಕೆ ಕಾಫಿಯನ್ನು ನಿಲ್ಲಿಸುವ ಬೆದರಿಕೆ ಹಾಕಿ. ಅದರ ಮುಂದೆ ಒಂದು ಟೀ ಬ್ಯಾಗ್ ಇಟ್ಟು, ''ನೀನು ರಾಜಕೀಯ ನಿಲ್ಲಿಸದಿದ್ದರೆ, ನಾಳೆಯಿಂದ ಚಹಾ ಕುಡಿಯುತ್ತೇನೆ'' ಎಂದು ಹೇಳಿ. ಕಾಫಿ ಪ್ರೇಮಿ ಕಪ್‌ಗೆ ಇದಕ್ಕಿಂತ ದೊಡ್ಡ ಅವಮಾನ ಬೇರೊಂದಿಲ್ಲ. ''ಇದೇ ರೀತಿ ಮುಂದುವರಿದರೆ, ಬಿಸಿಬಿಸಿ ಸೂಪ್ ಕುಡಿಯಲು ನಿನ್ನನ್ನು ಬಳಸಬೇಕಾಗುತ್ತದೆ!'' ಎಂದು ಎಚ್ಚರಿಕೆ ನೀಡಿ. ಸೂಪ್‌ನ ಬಿಸಿಗೆ ಅದರ ರಾಜಕೀಯದ ಹುಚ್ಚು ಕಡಿಮೆಯಾಗಬಹುದು.

ಈ ಯಾವ ಉಪಾಯಗಳೂ ಕೆಲಸ ಮಾಡದಿದ್ದರೆ, ಕಠಿಣ ನಿರ್ಧಾರ ತೆಗೆದುಕೊಳ್ಳಲೇಬೇಕು. ''ನಿನ್ನ ರಾಜಕೀಯ ಜ್ಞಾನ ತುಂಬಾ ಅಪಾರವಾಗಿದೆ. ನಿನ್ನನ್ನು ಹೀಗೆ ಅಡುಗೆಮನೆಯಲ್ಲಿ ಇಡುವುದು ಸರಿ ಹೊಂದುವುದಿಲ್ಲ. ನಿನ್ನನ್ನು ನಮ್ಮ ಶೋಕೇಸ್‌ನಲ್ಲಿ ಒಂದು ಪ್ರದರ್ಶನದ ವಸ್ತುವಾಗಿ ಇಡುತ್ತೇನೆ'' ಎಂದು ಹೇಳಿ. ಅಲ್ಲಿ ಅದಕ್ಕೆ ಮಾತನಾಡಲು ಯಾರೂ ಸಿಗುವುದಿಲ್ಲ. ''ನಿನ್ನನ್ನು ಇನ್ನು ಮುಂದೆ ನನ್ನ ಆಫೀಸ್ ಟೇಬಲ್ ಮೇಲೆ ಪೆನ್ ಸ್ಟ್ಯಾಂಡ್ ಆಗಿ ಬಳಸಿಕೊಳ್ಳುತ್ತೇನೆ'' ಎಂದು ಹೇಳಿ. ಇದು ಅದಕ್ಕೆ ನೀಡಬಹುದಾದ ಅಂತಿಮ ಆಘಾತ!

ಈ ಪರಿಹಾರಗಳನ್ನು ಪ್ರಯತ್ನಿಸಿ ನೋಡಿ. ಬಹುಶಃ ನಿಮ್ಮ ಕಾಫಿ ಕಪ್ ತನ್ನ ರಾಜಕೀಯ ಚರ್ಚೆಯನ್ನು ನಿಲ್ಲಿಸಿ, ಬೆಳಗಿನ ಕಾಫಿಯ ಸವಿಯನ್ನು ಆನಂದಿಸಲು ನಿಮ್ಮೊಂದಿಗೆ ಸಹಕರಿಸಬಹುದು.

ಪಿ.ಜಿ.ಶ್ರೀನಿವಾಸ, ಮೈಸೂರು

- **ಸಂಪಾದಕರೇ, ರಾತ್ರಿ ಮಲಗುವಾಗ ನಾನೇ ನನಗೆ 'ಇನ್ನು ನಾಳೆ ಬೇಗ ಎದ್ದೇ ಬಿಡಬೇಕು' ಅಂತ ಪ್ರತಿಜ್ಞೆ ಮಾಡುತ್ತೇನೆ. ಆದರೆ ಬೆಳಗ್ಗೆ ಅಲಾರಂ ಸದ್ದು ಕೇಳುತ್ತಿದ್ದಂತೆ ನಾನು 'ಯಾರಿದು ಅಷ್ಟು ಬೇಗ ಎದ್ದೇಳು ಅಂತ ಹೇಳುವ ಹುಚ್ಚ ಯಾರು?' ಅಂತ ಹೇಳಿ ಅಲಾರಂ ಅನ್ನೇ ಆಫ್ ಮಾಡಿಬಿಡುತ್ತೇನೆ. ನಾನು ಮಾಡುವುದು ಸರಿಯಾ? ನನಗೆ ನಿಮ್ಮ ಸಲಹೆ ಬೇಕು.**

– ಶ್ರೀನಿವಾಸ ಅವರೇ, ಆಹಾ! ಇದು ಪ್ರಪಂಚದಾದ್ಯಂತ ಕೋಟ್ಯಂತರ ಜನರು ಪ್ರತಿದಿನ ಎದುರಿಸುತ್ತಿರುವ ಒಂದು ಗಂಭೀರವಾದ ತಾತ್ವಿಕ ಪ್ರಶ್ನೆ. ನೀವು ಒಬ್ಬರೇ ಈ ಗೊಂದಲದಲ್ಲಿಲ್ಲ, ಧೈರ್ಯವಾಗಿರಿ! ನೀವು ಮಾಡುತ್ತಿರುವುದು ಸರಿಯೇ ತಪ್ಪೇ ಎಂದು ನಿರ್ಧರಿಸುವ ಬದಲು, ಈ ಪರಿಸ್ಥಿತಿಯನ್ನು ಒಮ್ಮೆ ವಿಶ್ಲೇಷಿಸೋಣ.

ಅಸಲಿಗೆ ನಿಮ್ಮಲ್ಲಿ ಇಬ್ಬರು ವ್ಯಕ್ತಿಗಳಿದ್ದಾರೆ.

ರಾತ್ರಿಯ 'ನಾನು': ಈ ವ್ಯಕ್ತಿ ತುಂಬಾ ಶಿಸ್ತುಬದ್ಧ, ಆದರ್ಶವಾದಿ ಮತ್ತು ಮಹತ್ವಾಕಾಂಕ್ಷಿ. ನಾಳೆಯಿಂದ ಜಗತ್ತನ್ನೇ ಬದಲಾಯಿಸುವ ಶಕ್ತಿ ತನಗಿದೆ ಎಂದು ನಂಬುತ್ತಾನೆ. ಬೇಗ ಎದ್ದು, ವ್ಯಾಯಾಮ ಮಾಡಿ, ಜ್ಞಾನ ಸಂಪಾದಿಸಿ, ದೊಡ್ಡ ಸಾಧನೆ ಮಾಡಬೇಕು ಎಂಬ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿಕೊಳ್ಳುತ್ತಾನೆ. ಈತನೇ ಆ ಪ್ರತಿಜ್ಞೆ ಮಾಡುವ ವ್ಯಕ್ತಿ.

ಬೆಳಗಿನ 'ನಾನು': ಈ ವ್ಯಕ್ತಿ ವಾಸ್ತವವಾದಿ. ಅವನಿಗೆ ಬೆಚ್ಚಗಿನ ಹಾಸಿಗೆಯ ಬೆಲೆ, ಕಂಬಳಿಯ ಪ್ರೀತಿ ಮತ್ತು ನಿದ್ದೆಯ ಮಹತ್ವ ಚೆನ್ನಾಗಿ ಗೊತ್ತು. ಅವನ ದೃಷ್ಟಿಯಲ್ಲಿ, ರಾತ್ರಿಯ 'ನಾನು' ಒಬ್ಬ ಅವಾಸ್ತವಿಕ, ಕ್ರೂರ ಸರ್ವಾಧಿಕಾರಿ. ಅವನಿಗೆ ಬೆಳಗಿನ ವಾಸ್ತವದ ಅರಿವಿಲ್ಲ. ಅಲಾರಂ ಎನ್ನುವುದು ಆ ಸರ್ವಾಧಿಕಾರಿ ಕಳುಹಿಸಿದ ಕಿರುಕುಳದ ಸಂದೇಶ.

ಹಾಗಾದರೆ, ನೀವು ಮಾಡುವುದು ಸರಿಯಾ?

ಖಂಡಿತ ಸರಿ! ಯಾರ ದೃಷ್ಟಿಯಿಂದ ನೋಡುತ್ತೀರಿ ಎನ್ನುವುದರ ಮೇಲೆ ಇದು ನಿಂತಿದೆ.

ಬೆಳಗಿನ 'ನಾನು' ಪರವಾಗಿ ವಾದ: ನಿಮ್ಮ ಬೆಳಗಿನ 'ನಾನು' ಆತ್ಮರಕ್ಷಣೆಯ ಹಕ್ಕನ್ನು ಚಲಾಯಿಸುತ್ತಿದ್ದಾನೆ. ಆರಾಮ ಮತ್ತು ಮಾನಸಿಕ ಶಾಂತಿಯನ್ನು ಕಾಪಾಡುವುದು ಅವನ ಮೂಲಭೂತ ಹಕ್ಕು. ರಾತ್ರಿಯ 'ನಾನು' ಹಾಕಿದ ಅವೈಜ್ಞಾನಿಕ ನಿಯಮಗಳನ್ನು ಪಾಲಿಸಬೇಕಾದ ಅಗತ್ಯವಿಲ್ಲ. ಹೀಗಾಗಿ, ಅಲಾರಂ ಆಫ್ ಮಾಡುವುದು ಒಂದು ಕ್ರಾಂತಿಕಾರಿ ಹೆಜ್ಜೆ! 'ಯಾರಿದು ಹುಚ್ಚ?' ಎಂದು ನೀವು ಕೇಳುತ್ತಿರುವುದು ನಿಮ್ಮೊಳಗಿನ ಜಾಗೃತ ಪ್ರಜ್ಞೆಯ ಧ್ವನಿ.

ರಾತ್ರಿಯ 'ನಾನು' ಪರವಾಗಿ ವಾದ: ಅಯ್ಯೋ, ಇದು ಸಂಪೂರ್ಣವಾಗಿ ತಪ್ಪು! ಬೆಳಗಿನ 'ನಾನು' ಒಬ್ಬ ಸೋಮಾರಿ, ಗುರಿ ಇಲ್ಲದವನು. ಅವನು ರಾತ್ರಿಯ 'ನಾನು' ಹಾಕಿದ ಅದ್ಭುತ ಯೋಜನೆಗಳನ್ನು ಹಾಳುಮಾಡುತ್ತಿದ್ದಾನೆ. ಇದು ಭರವಸೆಯ ಉಲ್ಲಂಘನೆ ಮತ್ತು ಆತ್ಮದ್ರೋಹ!

ಹಾಗಾದರೆ ಏನು ಮಾಡಬೇಕು?

ಈ ಅಂತರ್ಯುದ್ಧವನ್ನು ನಿಲ್ಲಿಸಲು, ಇಬ್ಬರ ನಡುವೆ ಒಂದು ಶಾಂತಿ ಒಪ್ಪಂದ ಮಾಡಿಸಬೇಕು. ರಾತ್ರಿಯ 'ನಾನು'ಗೆ ಹೇಳಿ, ''ಸ್ವಾಮಿ, ನಾಳೆ ಬೆಳಗ್ಗೆ ಐದು ಗಂಟೆಗೆ ಏಳುವ ಬದಲು, ಮೊದಲು 15 ನಿಮಿಷ ಬೇಗ ಏಳುವ ಗುರಿ ಇಟ್ಟುಕೊಳ್ಳೋಣ. ಅದು ಯಶಸ್ವಿಯಾದರೆ, ಮುಂದಿನ ವಾರ ಇನ್ನೊಂದು 15 ನಿಮಿಷ ಬೇಗ ಏಳೋಣ''.

ರಾತ್ರಿಯ 'ನಾನು', ಮಲಗುವ ಮುನ್ನ ಬೆಳಗಿನ 'ನಾನು'ಗೆ ಒಂದು ಆಮಿಷವನ್ನು ಸಿದ್ಧಪಡಿಸಿಡಬೇಕು. ಉದಾಹರಣೆಗೆ, ಅಲಾರಂ ಪಕ್ಕ ಒಂದು ಚಾಕೊಲೇಟ್ ಇಡುವುದು, ಅಥವಾ ಕಾಫಿ ಮೇಕರ್ ಅನ್ನು ಆಟೋ-ಆನ್ ಮಾಡಿಟ್ಟು, ಏಳುವಾಗ ಕಾಫಿಯ ಸುವಾಸನೆ ಬರುವಂತೆ ಮಾಡುವುದು. ಅಲಾರಂ ದ್ವೇಷವನ್ನು ಕಡಿಮೆ ಮಾಡಲು ಕರ್ಕಶವಾದ ಅಲಾರಂ ಸದ್ದಿನ ಬದಲು, ನಿಮಗೆ ಇಷ್ಟವಾದ ಹಾಡನ್ನು ಇಡಿ. ಆಗ ಬೆಳಗಿನ 'ನಾನು'ಗೆ ಅಲಾರಂ ಮೇಲೆ ಅಷ್ಟು ಕೋಪ ಬರುವುದಿಲ್ಲ.

ಕೊನೆಯದಾಗಿ, ಬೆಳಗ್ಗೆ ಎದ್ದಾಗ 'ಯಾರಿದು ಹುಚ್ಚ?' ಅಂತ ಅನಿಸಿದಾಗ, ನಿಮಗೆ ನೀವೇ ಹೇಳಿಕೊಳ್ಳಿ– ''ಓಹ್, ಅದು ನಾನೇ! ನಿನ್ನೆ ರಾತ್ರಿ ತುಂಬಾ ಹುಮ್ಮಸ್ಸಿನಲ್ಲಿದ್ದೆ, ಪಾಪ!'' ಎಂದು ನಿಮ್ಮನ್ನೇ ನೀವು ಕ್ಷಮಿಸಿಬಿಡಿ.

ನೀವು ಮಾಡುತ್ತಿರುವುದು ಮಾನವ ಸಹಜವಾದ ಒಂದು ಕ್ರಿಯೆ. ಇದರಲ್ಲಿ ಸರಿ-ತಪ್ಪಿನ ಪ್ರಶ್ನೆಯೇ ಇಲ್ಲ. ಇದು ನಿಮ್ಮ ಕನಸುಗಾರ 'ನಾನು' ಮತ್ತು ವಾಸ್ತವವಾದಿ 'ನಾನು' ನಡುವಿನ ನಿರಂತರ ಸಂಘರ್ಷ. ಈ ಸಂಘರ್ಷವನ್ನು ಆನಂದಿಸಿ ಮತ್ತು ಎರಡೂ 'ನಾನು'ಗಳನ್ನು ಪ್ರೀತಿಸಿ!



Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಕಾವ್ಯಾ, (ಇಮೇಲ್ ಮೂಲಕ)

- **ಭಟ್ರೇ, ನಾನು ಮೊಬೈಲ್ ಫೋನ್ ಚಾರ್ಜ್‌ಗೆ ಹಾಕಿದ ಕೂಡಲೇ, ಅದನ್ನೇ ಮತ್ತೆ ಮತ್ತೆ ಚೆಕ್ ಮಾಡುತ್ತೇನೆ– 'ಎಷ್ಟು ಪರ್ಸೆಂಟ್ ಆಯ್ತು?' ಅಂತ. ಕೆಲವೊಮ್ಮೆ ಎರಡು ನಿಮಿಷಕ್ಕೊಮ್ಮೆ ನೋಡುತ್ತೇನೆ. ಇದು ಸಹಜವಾ, ಅಸಹಜವಾ? ನನ್ನ ಗೊಂದಲವನ್ನು ಪರಿಹರಿಸಿ.**

– ಕಾವ್ಯಾ ಅವರೇ, ಖಂಡಿತ ನಿಮ್ಮ ಗೊಂದಲವನ್ನು ಪರಿಹರಿಸೋಣ ಬಿಡಿ. ಮೊದಲನೆಯದಾಗಿ, ನೀವು ಮಾಡುತ್ತಿರುವುದು ಅಸಹಜ ಖಂಡಿತ ಅಲ್ಲ. ಇದು ಇಂದಿನ ಡಿಜಿಟಲ್ ಯುಗದ ಒಂದು ಹೊಸ ಸಹಜತೆ (New Normal). ನೀವು ಈ ಸಮಸ್ಯೆಯಿಂದ ಬಳಲುತ್ತಿರುವ ಏಕೈಕ ವ್ಯಕ್ತಿಯಲ್ಲ. ಇದಕ್ಕೆ ವೈದ್ಯಕೀಯ ಲೋಕದಲ್ಲಿ (ತಮಾಷೆಯಾಗಿ ಹೇಳುವುದಾದರೆ) ಒಂದು ವಿಶೇಷ ಹೆಸರು ನೀಡಬಹುದು– 'ಬ್ಯಾಟರಿ ಪರ್ಸೆಂಟೇಜ್ ಪರಿಶೀಲನಾ ಸಿಂಡ್ರೋಮ್' ಅಂತ.

ಇದು ಒಂಥರಾ ತಾಯಿಯ ಮಮಕಾರವಿದ್ದಂತೆ. ನೀವು ಫೋನ್ ಅನ್ನು ಚಾರ್ಜ್‌ಗೆ ಹಾಕಿದಾಗ, ನೀವು ಅದರ ಮಾಲೀಕರಾಗಿರುವುದಿಲ್ಲ, ಬದಲಿಗೆ ಅದರ 'ತಾಯಿ'ಯಾಗಿ ಬದಲಾಗುತ್ತೀರಿ. ''ಅಯ್ಯೋ ಪಾಪ, ನನ್ನ ಮೊಬೈಲ್... ಹಸಿದಿದೆ, ಶಕ್ತಿ ಇಲ್ಲ... ಎಷ್ಟು ಚಾರ್ಜ್ ಆಯ್ತೋ ಏನೋ'' ಎಂಬ ಕಾಳಜಿ ನಿಮ್ಮನ್ನು ಕಾಡುತ್ತದೆ. ಎರಡು ನಿಮಿಷಕ್ಕೊಮ್ಮೆ ನೋಡುವುದು ನಿಮ್ಮ ಪ್ರೀತಿ ಮತ್ತು ಕಾಳಜಿಯ ಸಂಕೇತವಷ್ಟೇ!

ಇದು ಒಂಥರಾ ಕುದಿಯುವ ನೀರನ್ನು ನೋಡಿದಂತೆ. ನೀರು ಕುದಿಯಲು ಇಟ್ಟು, ಪ್ರತಿ ಹತ್ತು ಸೆಕೆಂಡಿಗೆ ಮುಚ್ಚಳ ತೆಗೆದು ನೋಡಿದರೆ ಅದು ಬೇಗ ಕುದಿಯುವುದಿಲ್ಲ ಎಂದು ನಮಗೆ ಗೊತ್ತು. ಆದರೂ ನಾವು ನೋಡುತ್ತೇವೆ. ಅದೇ ರೀತಿ, ಫೋನ್ ಚಾರ್ಜ್ ಆಗಲು ಸಮಯ ಬೇಕು ಎಂದು ತಿಳಿದಿದ್ದರೂ, ನಮ್ಮ ಕಾತುರ ಅದಕ್ಕೆ ಅವಕಾಶ ನೀಡುವುದಿಲ್ಲ. ನೀವು ನಿಮ್ಮ ಫೋನ್‌ಗೆ ''ಬೇಗ ಚಾರ್ಜ್ ಆಗು, ಬೇಗ!'' ಎಂದು ಮಾನಸಿಕವಾಗಿ ಒತ್ತಡ ಹೇರುತ್ತಿದ್ದೀರಿ.

ಇದು ಒಂಥರಾ ಆಧುನಿಕ ಕಾಲದ ಧ್ಯಾನವಿದ್ದಂತೆ. ಹಿಂದಿನ ಕಾಲದಲ್ಲಿ ಋಷಿಮುನಿಗಳು ಮಂತ್ರಗಳನ್ನು ಪಠಿಸುತ್ತಾ ಧ್ಯಾನ ಮಾಡುತ್ತಿದ್ದರು. ಇಂದಿನ ಕಾಲದಲ್ಲಿ ನಾವು ಚಾರ್ಜಿಂಗ್ ಕೇಬಲ್ ಹಾಕಿ, ಬ್ಯಾಟರಿ ಪರ್ಸೆಂಟೇಜ್ ಏರುವುದನ್ನೇ ನೋಡುತ್ತಾ ಧ್ಯಾನ ಮಾಡುತ್ತೇವೆ. 'ಓಂ 91%... ಓಂ 92%... ಓಂ 93%...' ಇದೇ ನಮ್ಮ ಇಂದಿನ ಮಂತ್ರ. ಇದು ಮನಸ್ಸಿಗೆ ಒಂದು ರೀತಿಯ ವಿಚಿತ್ರವಾದ ಶಾಂತಿಯನ್ನು ನೀಡುತ್ತದೆ.

ಹಾಗಾದರೆ ಇದು ಸಹಜವೋ, ಅಸಹಜವೋ?

ಇದು ಸಂಪೂರ್ಣವಾಗಿ ಸಹಜ! ಇದೊಂದು ರೀತಿ ಕ್ರಿಕೆಟ್ ಮ್ಯಾಚ್ ನೋಡಿದ ಹಾಗೆ. ಪ್ರತಿ ರನ್ ಗಳಿಸಿದಾಗಲೂ ಖುಷಿಪಡುತ್ತೇವಲ್ಲವೇ? ಹಾಗೆಯೇ, ಪ್ರತಿ ಪರ್ಸೆಂಟ್ ಚಾರ್ಜ್ ಏರಿದಾಗಲೂ ನಿಮ್ಮ ಮನಸ್ಸಿಗೆ ಸಣ್ಣ ಪುಟ್ಟ ವಿಜಯ ಸಿಕ್ಕಂತೆ ಭಾಸವಾಗುತ್ತದೆ.

ನಿಮಗಾಗಿ ಕೆಲವು (ತಮಾಷೆಯ) ಸಲಹೆಗಳನ್ನು ಹೇಳುತ್ತೇನೆ. ಮುಂದಿನ ಬಾರಿ ಫೋನ್ ನೋಡುವಾಗ, "Keep it up! You can do it!'' ಎಂದು ಅದಕ್ಕೆ ಹುರಿದುಂಬಿಸಿ. ನಿಮ್ಮ ಪ್ರೋತ್ಸಾಹದಿಂದ ಬ್ಯಾಟರಿಯ ಕಣಗಳು (battery particles) ಇನ್ನಷ್ಟು ವೇಗವಾಗಿ ಕೆಲಸ ಮಾಡಬಹುದು, ಯಾರಿಗೆ ಗೊತ್ತು? ಫೋನ್ ಅನ್ನು ನಿಮ್ಮ ಕಣ್ಣಿಗೆ ಕಾಣಿಸದ ಬೇರೆ ಕೋಣೆಯಲ್ಲಿ ಚಾರ್ಜ್‌ಗೆ ಹಾಕಿ. ಇದಕ್ಕೆ 'ಚಾರ್ಜಿಂಗ್ ವನವಾಸ' ಎಂದು ಕರೆಯಿರಿ. ನಿಮ್ಮ ಫೋನ್ ಜತೆ ಒಂದು ಡೀಲ್ ಮಾಡಿಕೊಳ್ಳಿ. ''ನೋಡು, ನಾನು ನಿನ್ನನ್ನು ಮುಂದಿನ 20 ನಿಮಿಷ ನೋಡಲ್ಲ, ನೀನು ಅದಕ್ಕೆ ಪ್ರತಿಯಾಗಿ 10% ಹೆಚ್ಚು ಚಾರ್ಜ್ ಆಗಿರಬೇಕು'' ಎಂದು ಹೇಳಿ ನೋಡಿ.

ಆದ್ದರಿಂದ, ಚಿಂತೆ ಬಿಡಿ. ನಿಮ್ಮಲ್ಲಿ ಯಾವುದೇ ದೋಷವಿಲ್ಲ. ನೀವು ಕೇವಲ ನಿಮ್ಮ ಮೊಬೈಲ್‌ನ ಆರೋಗ್ಯದ ಬಗ್ಗೆ ಅತೀವ ಕಾಳಜಿ ವಹಿಸುವ ಒಬ್ಬ ಜವಾಬ್ದಾರಿಯುತ ಮಾಲೀಕರು ಅಷ್ಟೇ!

ಕಾಂತೇಶ ಗೌಡ, ಬೆಂಗಳೂರು

- **ಭಟ್ರೇ, ನನಗೆ ಡಯಟ್ ಆರಂಭಿಸಬೇಕು ಅಂತ ಅನ್ನಿಸುತ್ತೆ. ಆದರೆ ಪ್ರತೀ ಸಲ ಡಯಟ್ ಲಿಸ್ಟ್ ಬರೆಯಲು ಕೂತರೆ ಅದರ ಕೊನೆಯಲ್ಲಿ 'ಇಷ್ಟೇ ಸಾಕು, ಇದರ ಜತೆಗೆ ಒಂದು ಪಿಜ್ಜಾ' ಅಂತಾ ಬರೆಯುತ್ತೇನೆ. ನಾನು ಮಾಡುತ್ತಿರುವುದು ಸರಿಯಾ? ಈ ವಿಷಯದಲ್ಲಿ ನನಗೆ ಗೊಂದಲವಿದೆ. ಅದನ್ನು ಪರಿಹರಿಸಿ.**

– ಕಾಂತೇಶ ಅವರೇ, ಅಯ್ಯೋ! ಇದು ಇವತ್ತಿನ ಕಾಲದ ಬಹು ದೊಡ್ಡ ಗೊಂದಲ ಮತ್ತು ರಾಷ್ಟ್ರೀಯ ಸಮಸ್ಯೆಯೇ. ನೀವು ಒಬ್ಬರೇ ಈ ರೀತಿ ಯೋಚಿಸುತ್ತಿಲ್ಲ, ನಿಮ್ಮ ಹಾಗೆ ಕೋಟ್ಯಂತರ ಜನರಿದ್ದಾರೆ. ನೀವು ಮಾಡುತ್ತಿರುವುದು ತಪ್ಪು ಅಲ್ಲ, ಅದೊಂದು ಅದ್ಭುತವಾದ ಮಾನಸಿಕ ತಂತ್ರ (Psychological Strategy)!

ಯಾಕೆ ಅಂತೀರಾ?

ಒಂದು ಕಡೆ ಪಪ್ಪಾಯಿ, ಸೌತೆಕಾಯಿ, ಮೊಳಕೆ ಕಾಳು ಎಂದು ಬರೆದು ದೇಹಕ್ಕೆ ಬೇಕಾದ ಪೋಷಕಾಂಶಗಳ ಬಗ್ಗೆ ಯೋಚಿಸುತ್ತೀರಿ. ಇನ್ನೊಂದು ಕಡೆ 'ಪಿಜ್ಜಾ' ಎಂದು ಬರೆದು ಮನಸ್ಸಿಗೆ ಬೇಕಾದ ಸಂತೋಷದ ಬಗ್ಗೆ ಯೋಚಿಸುತ್ತೀರಿ. ದೇಹ ಮತ್ತು ಮನಸ್ಸು ಎರಡನ್ನೂ ಸಮತೋಲನದಲ್ಲಿ ಇಡುವುದೇ ನಿಜವಾದ ಆರೋಗ್ಯಕರ ಜೀವನಶೈಲಿ. ಒಂದು ಕೈಯಲ್ಲಿ ಸಲಾಡ್, ಇನ್ನೊಂದು ಕೈಯಲ್ಲಿ ಪಿಜ್ಜಾ ಸ್ಲೈಸ್... ಇದಕ್ಕಿಂತ ದೊಡ್ಡ 'ಬ್ಯಾಲೆನ್ಸ್' ಇನ್ನೇನು ಬೇಕು? ನಿಮ್ಮ ಡಯಟ್ ಪಟ್ಟಿ ಒಂದು ನೀರಸವಾದ ಕಥೆಯಂತೆ ಶುರುವಾಗುತ್ತದೆ. ಬೆಳಗ್ಗೆ ಗ್ರೀನ್ ಟೀ, ಮಧ್ಯಾಹ್ನ ಎರಡು ಚಪಾತಿ... ಹೀಗೆಲ್ಲ ಬರೆಯುವಾಗ ನಿಮಗೇ ಬೇಸರವಾಗುತ್ತದೆ. ಆದರೆ, ಕೊನೆಯಲ್ಲಿ 'ಇದರ ಜತೆ ಒಂದು ಪಿಜ್ಜಾ' ಎಂದು ಬರೆದ ತಕ್ಷಣ ಆ ಕಥೆಗೆ ಒಂದು ಅದ್ಭುತವಾದ ಕ್ಲೈಮ್ಯಾಕ್ಸ್ ಸಿಕ್ಕಂತಾಗುತ್ತದೆ. ಆ ಒಂದು ವಾಕ್ಯವೇ ಇಡೀ ಡಯಟ್ ಪಟ್ಟಿಯನ್ನು ಓದಲು ಆಸಕ್ತಿದಾಯಕವಾಗಿಸುತ್ತದೆ.

ಡಯಟ್ ಮಾಡುವಾಗ ತಜ್ಞರು 'ಚೀಟ್ ಮೀಲ್' ಇರಲಿ ಎಂದು ಹೇಳುತ್ತಾರೆ. ಆದರೆ ನೀವು ಅದನ್ನೂ ಮೀರಿ ಯೋಚಿಸುತ್ತಿದ್ದೀರಿ. ನೀವು ಅದನ್ನು 'ಚೀಟ್' (ಮೋಸ) ಎಂದು ಪರಿಗಣಿಸುತ್ತಿಲ್ಲ, ಬದಲಾಗಿ ಇಡೀ ವಾರ ಕಷ್ಟಪಟ್ಟು ಡಯಟ್ ಮಾಡಿದ ನಿಮ್ಮ ಮನಸ್ಸಿಗೆ ನೀವೇ ಕೊಟ್ಟುಕೊಳ್ಳುತ್ತಿರುವ ಒಂದು 'ಟ್ರೀಟ್' (ಉಡುಗೊರೆ) ಎಂದು ಭಾವಿಸುತ್ತಿದ್ದೀರಿ. ಇದು ನಿಮ್ಮನ್ನು ನೀವೇ ಪ್ರೀತಿಸುವ ಒಂದು ಉತ್ತಮ ವಿಧಾನ!

ಬರೀ ಸಪ್ಪೆ ಆಹಾರದ ಪಟ್ಟಿಯನ್ನು ನೋಡಿದರೆ, ಡಯಟ್ ಶುರುಮಾಡುವ ಮೊದಲೇ ಅರ್ಧ ಪ್ರಾಣ ಹೋದ ಹಾಗೆ ಆಗುತ್ತದೆ. ಆದರೆ, ಆ ಲಿಸ್ಟ್‌ನ ಕೊನೆಯಲ್ಲಿ ಪಿಜ್ಜಾ ನಗುನಗುತ್ತಾ ನಿಮ್ಮನ್ನು ಕಾಯುತ್ತಿದೆ ಎಂದು ತಿಳಿದರೆ, ವಾರವಿಡೀ ಸಲಾಡ್ ತಿನ್ನಲೂ ಒಂದು ವಿಶೇಷವಾದ ಪ್ರೇರಣೆ ಸಿಗುತ್ತದೆ. ಆ ಪಿಜ್ಜಾಕ್ಕಾಗಿಯಾದರೂ ಡಯಟ್ ಪಾಲಿಸೋಣ ಎನಿಸುತ್ತದೆ.

ಹಾಗಾದರೆ, ನೀವು ಮಾಡುತ್ತಿರುವುದು ಸರಿಯೇ?

ಖಂಡಿತ ಸರಿ! ಇದರಲ್ಲಿ ಯಾವುದೇ ಗೊಂದಲ ಬೇಡ. ನೀವು ಡಯಟ್ ಅನ್ನು ಶಿಕ್ಷೆಯಾಗಿ ನೋಡುತ್ತಿಲ್ಲ, ಬದಲಿಗೆ ಅದೊಂದು ಸಂಭ್ರಮ ಎಂದು ತೋರಿಸಿಕೊಡುತ್ತಿದ್ದೀರಿ. ನೀವು 'ಸಂತೋಷದ ಡಯಟ್' (Happy Diet) ಎಂಬ ಹೊಸ ಪದ್ಧತಿಯ ಜನಕರು. ಮುಂದಿನ ಸಲ ಡಯಟ್ ಲಿಸ್ಟ್ ಬರೆಯುವಾಗ, 'ಪಿಜ್ಜಾ' ಎಂದು ಬರೆಯುವುದರ ಜತೆಗೆ, ಅದರ ಮೇಲೆ ಯಾವ 'ಟಾಪಿಂಗ್ಸ್' ಹಾಕಬೇಕು (extra cheese, olives, etc.) ಎಂಬುದನ್ನೂ ಬರೆಯಿರಿ. ಆಗ ನಿಮ್ಮ ಪ್ಲಾನ್ ಇನ್ನಷ್ಟು ಸ್ಪಷ್ಟ ಮತ್ತು ಪರಿಪೂರ್ಣವಾಗುತ್ತದೆ! ಆದ್ದರಿಂದ, ಧೈರ್ಯವಾಗಿರಿ. ನಿಮ್ಮ ಡಯಟ್ ಪ್ಲಾನ್ ಅತ್ಯುತ್ತಮವಾಗಿದೆ!

ಕಿರಣ್ ಸಾಗರ, ಬೆಂಗಳೂರು

- **ಸಂಪಾದಕರೇ, ನನ್ನ ಬೆಕ್ಕು ಇತ್ತೀಚೆಗೆ ರಾತ್ರಿ ಮಲಗುವಾಗ ನನ್ನ ತಲೆಯ ಮೇಲೆ ಕುಳಿತು, ನನ್ನ ಕನಸುಗಳನ್ನು ವಿಶ್ಲೇಷಿಸಲು ಪ್ರಯತ್ನಿಸುತ್ತಿದೆ ಎಂದು ನನಗೆ ಅನಿಸುತ್ತಿದೆ. ನಾನು ಏನು ಮಾಡಬೇಕು? ಸೀರಿಯಸ್ ಆಗಿ ನನ್ನ ಪ್ರಶ್ನೆಗೆ ಉತ್ತರಿಸಿ. ನಾನು ತಮಾಷೆ ಮಾಡುತ್ತಿಲ್ಲ.**

– ಕಿರಣ್ ಅವರೇ, ಅದೇನು ಗೊತ್ತಾ, ನಿಮ್ಮ ಬೆಕ್ಕು Certified Dream Analyst ಆಗಿ ಹೊಸ ಕರಿಯರ್ ಶುರು ಮಾಡಿರುವಂತೆ ತೋರುತ್ತಿದೆ. ಅದು ರಾತ್ರಿ ನಿಮ್ಮ ತಲೆಯ ಮೇಲೆ ಕುಳಿತುಕೊಳ್ಳುವುದು ಅಂದರೆ ನಿಮ್ಮ ಕನಸುಗಳಲ್ಲಿ ಬರುವ ಮೀನುಗಳನ್ನು ಬಿಸಿಬಿಸಿ ಸಾಂಬಾರ್ ಹಾಕಿಸಿಕೊಂಡು ತಿನ್ನಲು ಬುಕ್ಕಿಂಗ್ ಮಾಡಿಕೊಳ್ಳುತ್ತಿರಬಹುದು. ನೀವು ಕನಸಿನಲ್ಲಿ ಬೆಕ್ಕಿನ ಬದಲು ನಾಯಿಯನ್ನು ತಬ್ಬಿಕೊಳ್ಳುತ್ತೀರೋ ಏನೋ ಎಂದು Dream Surveillance ಮಾಡುತ್ತಿರಬಹುದು. Human Software Update: Version 2025.1 ಇನ್‌ಸ್ಟಾಲ್ ಆಗ್ತಿದೆಯೇ ಎಂದು ಸ್ಕ್ಯಾನ್ ಮಾಡುತ್ತಿರಬಹುದು.

ಹಾಗಾದರೆ ನೀವು ಏನು ಮಾಡಬೇಕು?

ಹಾಸಿಗೆಯ ಪಕ್ಕದಲ್ಲಿ ಒಂದು ಚಿಕ್ಕ Dream Consultation Fee ಜಾರ್ ಇಟ್ಟು, ಬೆಳಗ್ಗೆ ಅದು ಹಾಲು ಅಥವಾ ಬಿಸ್ಕಿಟ್ ಬೇಡುತ್ತಿದೆಯೇ ಎಂದು ನೋಡಿ. ಅಂದ್ರೆ, ನೀವು ಕನಸಿನಲ್ಲಿ ಏನು ನೋಡಿದ್ರೂ ಕೂಡ, ಬೆಕ್ಕಿನ ಅನುಮತಿ ಪಡೆಯದೇ ಯಾರಿಗೂ ಹೇಳಬೇಡಿ. ಅದು ನಿಮ್ಮ Dream Data Privacy Officer.

ನಿಮ್ಮ ಬೆಕ್ಕು ಬಹುಶಃ ನಿಮ್ಮ ಕನಸುಗಳ ಬಗ್ಗೆ ಆಸಕ್ತಿ ಹೊಂದಿಲ್ಲ, ಬದಲಿಗೆ ನಿಮ್ಮ ತಲೆಯ ಉಷ್ಣತೆ ಮತ್ತು ನಿಮ್ಮ ತಲೆದಿಂಬಿನ ಮೃದುತ್ವವನ್ನು ಆನಂದಿಸುತ್ತಿರಬಹುದು. ಒಂದು ವೇಳೆ ಅದು ನಿಜವಾಗಿಯೂ ನಿಮ್ಮ ಕನಸುಗಳನ್ನು ವಿಶ್ಲೇಷಿಸುತ್ತಿದ್ದರೆ, ಬಹುಶಃ ಅದು ನಿಮ್ಮನ್ನು 'ಹೆಚ್ಚು ಕ್ಯಾಟ್ ಫುಡ್ ಖರೀದಿಸಿ' ಅಥವಾ 'ನನಗೆ ಇನ್ನಷ್ಟು ನಿದ್ರೆ ಬೇಕು' ಎಂದು ಕನಸು ಕಾಣುವಂತೆ ಮಾಡಲು ಪ್ರಯತ್ನಿಸುತ್ತಿರಬಹುದು. ಪರಿಹಾರ ಸರಳವಾಗಿದೆ– ನಿಮ್ಮ ತಲೆದಿಂಬನ್ನು ಬೆಕ್ಕಿಗೆ ಬಿಟ್ಟುಕೊಡಿ ಮತ್ತು ನೀವೇ ನೆಲದ ಮೇಲೆ ಮಲಗಿ. ಅಥವಾ, ಅದಕ್ಕೆ ಒಂದು ಚಿಕ್ಕ ಡೈರಿ ಕೊಟ್ಟು, ಅದರ ಕನಸುಗಳನ್ನು ಬರೆಯಲು ಹೇಳಿ. ಬಹುಶಃ ಅದು ನಿಮ್ಮ ಕನಸುಗಳ ಬಗ್ಗೆ ಚಿಂತಿಸುವುದನ್ನು ನಿಲ್ಲಿಸಿ, ತನ್ನದೇ ಆದ ಸಾಹಿತ್ಯಿಕ ವೃತ್ತಿಜೀವನವನ್ನು ಪ್ರಾರಂಭಿಸಬಹುದು!